ವಿಶ್ವವಾಣಿ
ವಿಶ್ವಾಸವೇ ವಿಶ್ವ

ಇಂದು ಇಂಡಿಯಾ- ಆಸೀಸ್ ಮೊದಲ ಟಿ-20 ಪಂದ್ಯ

ತೀವ್ರ ಕುತೂಹಲ ಕೆರಳಿಸಿರುವ ಭಾರತ ಮತ್ತು ಆಸ್ಟ್ರೇಲಿಯಾ ತಂಡಗಳ ನಡುವಿನ ಟಿ20 ಸರಣಿ ಬುಧವಾರ ಕ್ಯಾನ್‌ಬೆರಾದಲ್ಲಿ ಪ್ರಾರಂಭವಾಗಲಿದೆ. ಇತ್ತೀಚೆಗಷ್ಟೇ ಟಿ20 ಮಾದರಿಯಲ್ಲಿ ನಡೆದಿರುವ ಏಷ್ಯಾ ಕಪ್ ಗೆದ್ದಿರುವ ಭಾರತ ತಂಡ, ಆಸ್ಟ್ರೇಲಿಯಾ ವಿರುದ್ಧದ ಟಿ20 ಸರಣಿಯಲ್ಲೂ ಗೆಲ್ಲುವ ವಿಶ್ವಾಸದಲ್ಲಿದೆ.

ಸೊಂಪಾದ ಪುಟಗಳು

ಭಟ್ ಸಾಬ್‌ಗೆ ಲಿಚ್ಚಿ ಕಳು ಹಿಸುತ್ತಿದ್ದ ಲಾಲೂ!
ಜನಪಥ
ರಾಘವ ಶರ್ಮ ನಿಡ್ಲೆ 6

ಎಸ್ಸೆಸ್ಸೆಲ್ಸಿ ಪರೀಕ್ಷೆಯ ಮಾನ ದಂಡ ವಾಗಬಾರದು
ಲೋಕಮತ
ಲೋಕೇಶ್ ಕಾಯರ್ಗ 7

ದಾರಿದೀಪೋಕ್ತಿ

ಹಣ, ಸಮಯ ಇವೆರಡರ ಮಧ್ಯೆ ಆಯ್ಕೆಯ ಪ್ರಶ್ನೆ ಬಂದಾಗ ಎರಡನೆಯದಕ್ಕೆ ಮಹತ್ವ ನೀಡಬೇಕು. ಕಾರಣ ನಿಮ್ಮ ಹತ್ತಿರ ಎಷ್ಟು ಹಣವಿದೆ ಎಂಬುದು ಗೊತ್ತಿರುತ್ತದೆ. ಆದರೆ ಎಷ್ಟು ಸಮಯವಿದೆ ಎಂಬುದು ಮಾತ್ರ ಗೊತ್ತಿರುವುದಿಲ್ಲ.

ವಕ್ರತುಂಡೋಕ್ತಿ



ಇನ್ನು ಶೇ.ಹತ್ತರಷ್ಟು ಬ್ಯಾಟರಿ ಉಳಿದಿದೆ ಎನ್ನುವುದನ್ನು ಹೇಳುವುದಕ್ಕೆ ಆಕಳಿಕೆ ಎನ್ನಬಹುದು.

ಪೊಲೀಸರಿಗೆ ಪಿ ಕ್ಯಾಪ್ ಭಾಗ್ಯ

ವರದಿ ಪುಟ → 5

ಮಧ್ಯ ಕರ್ನಾಟಕ ಭಾಗದಲ್ಲಿ ಮತ್ತೊಮ್ಮೆ ಶಕ್ತಿ ಪ್ರದರ್ಶನಕ್ಕೆ ವೇದಿಕೆ ಸಿದ್ಧ
ಪರಂ-ಮಹದೇವಪ್ಪ ರಹಸ್ಯ ಸಭೆ, ಎಸ್‌ಸಿ, ಎಸ್‌ಟಿ ಸಮಾವೇಶದ ಚರ್ಚೆ

ಸಿದ್ದು ಬಲಪ್ರದರ್ಶನಕ್ಕೆ ದಲಿತ ಸಮಾವೇಶ?

ಬೆಂಗಳೂರು: ರಾಜ್ಯ ಕಾಂಗ್ರೆಸ್‌ನಲ್ಲಿ ನಡೆಯುತ್ತಿರುವ ದಿನಕ್ಕೊಂದು ಬೆಳವಣಿಗೆಗೆ ಪೂರಕ ಎನ್ನುವಂತೆ ರಾಜ್ಯದಲ್ಲಿ ಮತ್ತೆ ದಲಿತ ಸಮಾವೇಶಕ್ಕೆ ಸಿದ್ಧತೆ ಆರಂಭವಾಗಿದ್ದು, ಈ ಮೂಲಕ ಸಿದ್ದರಾಮಯ್ಯ ಆಪ್ತರು ತಮ್ಮ ಬಲ ಪ್ರದರ್ಶನಕ್ಕೆ ವೇದಿಕೆ ಸಿದ್ಧಪಡಿಸಿಕೊಳ್ಳುತ್ತಿದ್ದಾರೆ.

ಉತ್ತರಾಧಿಕಾರಿ ಗೊಂದಲ, ಡಿಕೆ ದೆಹಲಿ ಪ್ರವಾಸದ ಬೆನ್ನಲ್ಲೇ ಮುಖ್ಯಮಂತ್ರಿ ಆಪ್ತ ಸಚಿವರು ಸಕ್ರಿಯರಾಗಿದ್ದಾರೆ. ಮಂಗಳವಾರ ಬೆಳಗ್ಗೆ ಮಹದೇವಪ್ಪ ಹಾಗೂ ಡಾ.ಜಿ. ಪರಮೇಶ್ವರ 'ಗೌಪ್ಯ' ಸಭೆ ನಡೆಸಿ ಮುಂದಿನ ಆಗುಹೋಗುಗಳ ಬಗ್ಗೆ ಚರ್ಚಿಸಿದ್ದಾರೆ. ಈ ನಡುವೆ ದಲಿತ ಸಮಾವೇಶವನ್ನು ನಡೆಸುವ ಮೂಲಕ ಸಿದ್ದರಾಮಯ್ಯ ಹಾಗೂ ದಲಿತ ಸಮುದಾಯದ ಬಲಪ್ರದರ್ಶನಕ್ಕೆ ವೇದಿಕೆ ನಿರ್ಮಿಸಲು ತೀರ್ಮಾನಿಸಿದ್ದಾರೆ.

ಅಧಿಕಾರ ಹಂಚಿಕೆಗೆ ಸಂಬಂಧಿಸಿದಂತೆ ಈವರೆಗೆ 'ಮಾಹಿತಿಯಿಲ್ಲ' ಎನ್ನುತ್ತಿದ್ದ ಸಚಿವ ಪರಮೇಶ್ವರ ಹಾಗೂ ಮಹದೇವಪ್ಪ ಅವರು, ಇದೀಗ 'ಅಧಿಕಾರ ಹಂಚಿಕೆ ಸೂತ್ರವಾಗಿದ್ದರೆ ಏನೋ ಆಗುತ್ತಿತ್ತು' ಎನ್ನುವ ಮೂಲಕ ಶಾಸಕಾಂಗ ಪಕ್ಷದ ಸಭೆಯಲ್ಲಿ ಈ ಬಗ್ಗೆ ಯಾವುದೇ ಪ್ರಸ್ತಾಪವಾಗಿಲ್ಲ ಎನ್ನುವ ಮೂಲಕ ಸಿದ್ದರಾಮಯ್ಯ ಅವರಿಗೆ ಪೂರ್ಣಾವಧಿ ಅವಕಾಶ ನೀಡಬೇಕು ಎನ್ನುವ ಪರೋಕ್ಷ ಕೂಗಿಗೆ ಬೆಂಬಲಿಸಿದ್ದಾರೆ. ಒಂದು ವೇಳೆ ಬದಲಾವಣೆ ಅನಿವಾರ್ಯ ಎನ್ನುವ ಸನ್ನಿವೇಶನದಲ್ಲಿ ದಲಿತ ಸಿಎಂ ಕೂಗನ್ನು ಹೈಕಮಾಂಡ್ ಬಳಿ ಇರಿಸುವ ಮೂಲಕ, ಡಿ.ಕೆ.ಶಿವಕುಮಾರ್‌ಗೆ ಈ ಸ್ಥಾನ ಸಿಗದಂತೆ ನೋಡಿಕೊಳ್ಳುವ ಲೆಕ್ಕಾಚಾರದಲ್ಲಿದ್ದಾರೆ ಎನ್ನುವುದು ಸ್ಪಷ್ಟ.

→ 4

2023ರಲ್ಲಿ ಅಧಿಕಾರಕ್ಕೆ ಬಂದಾಗ ಸಿದ್ದರಾಮಯ್ಯ ಅವರನ್ನು 5 ವರ್ಷಕ್ಕೆ ಸಿಎಲ್‌ಪಿ ನಾಯಕರಾಗಿ ಮಾಡಿದ್ದೇವೆ. ಆಗ ಯಾರೂ ಎರಡೂವರೆ ವರ್ಷ ಸಿಎಂ ಎಂದು ಹೇಳಿರಲಿಲ್ಲ. ಮಧ್ಯದಲ್ಲಿ ಹೈಕಮಾಂಡ್ ಏನಾದರೂ ತೀರ್ಮಾನ ಮಾಡಿದ್ದರೆ ಅವರಿಗೆ ಬಿಟ್ಟದ್ದು. ಆದರೆ ಗೊಂದಲ ನಿವಾರಿಸಲು ಹೈಕಮಾಂಡ್‌ಗೆ ಮನವಿ ಮಾಡುತ್ತೇನೆ.
- ಡಾ.ಜಿ.ಪರಮೇಶ್ವರ ಗೃಹ ಸಚಿವ

ಪವರ್ ಶೇರ್ ಮಾಡಿ ಕೊಳ್ಳುತ್ತೇವೆ ಎಂದು ಸಿಎಂ ಹೇಳಿದ್ದರಾ? ಹೈಕಮಾಂಡ್ ಹೇಳಿದರೆ ಐದು ವರ್ಷ ನಾನೇ ಇರುತ್ತೇನೆ ಎಂದಿದ್ದಾರೆ, ಇದರಲ್ಲಿ ತಪ್ಪೇನು? ಏನು ಆಗಬೇಕು ಆಗಬಾರದು ಅಂತ ವರಿಷ್ಠರು ತೀರ್ಮಾನಿಸುತ್ತಾರೆ. ಒಂದು ವೇಳೆ ಅಧಿಕಾರ ಒಪ್ಪಂದ ಆಗಿದ್ದರೆ ಯಾವತ್ತೋ ಏನೋ ಆಗಿಬಿಡೋದು.
-ಎಚ್.ಸಿ.ಮಹದೇವಪ್ಪ, ಸಚಿವ

ದಲಿತ ಸಿಎಂ ವಿಷಯ ಎನ್ನುವುದು ಪಕ್ಷದ ಹೈಕಮಾಂಡ್‌ಗೆ ಬಿಟ್ಟ ವಿಷಯ. ಆದರೆ ಸದ್ಯಕ್ಕೆ ಮುಖ್ಯಮಂತ್ರಿ ಬದಲಾವಣೆ ಬಗ್ಗೆ ಚರ್ಚೆಯಿಲ್ಲ. ಸಿದ್ದರಾಮಯ್ಯ ಅವರ ನೇತೃತ್ವದ ಅವಶ್ಯಕತೆ 2028ಕ್ಕೆ ಹಾಗೂ ಮುಂದೆಯೂ ಪಕ್ಷಕ್ಕೆ ಅಗತ್ಯವಿದೆ. ಚುನಾವಣೆಗೆ ಅವರು ನಿಲ್ಲುವುದು ಬಿಡುವುದು ಅವರಿಗೆ ಬಿಟ್ಟದ್ದು. ಅದಕ್ಕೆ ಯಾವುದೇ ನಿರ್ಬಂಧವಿಲ್ಲ.
-ಸತೀಶ್ ಜಾರಕಿಹೊಳಿ, ಸಚಿವ

ಕಳೆದ ಮೂರ್ನಾಲ್ಕು ದಿನಗಳಲ್ಲಿ ಬಹಳಷ್ಟು ರಾಜಕೀಯ ನಡೆಯುತ್ತಿದೆ. ಸಿದ್ದರಾಮಯ್ಯ ಅವರು ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ ಎಂಬುದು ಸುಳ್ಳು. 2028 ರ ಚುನಾವಣೆಯಲ್ಲಿಯೂ ಅವರು ಸ್ಪರ್ಧೆ ನಡೆಸಬೇಕೆಂಬುದು ನಮ್ಮೆಲ್ಲರ ಹಕ್ಕೊತ್ತಾಯ. ಕಾಂಗ್ರೆಸ್‌ಗೆ ಒಳ್ಳೆಯದಾಗಬೇಕಾದರೆ ಸಿದ್ದರಾಮಯ್ಯ ಅವರು ಚುನಾವಣೆಗೆ ಸ್ಪರ್ಧೆ ಮಾಡಲೇಬೇಕು.
-ಬೈರತಿ ಸುರೇಶ್, ಸಚಿವ

ಸಿದ್ದು ಪರ ಬ್ಯಾಟ್ ಬೀಸಿದ ಹಲವರು

ಈ ಬಾರಿ ಉತ್ತರಾಧಿಕಾರಿ ವಿಷಯ ಮುನ್ನೆಲೆಗೆ ಬಂದಾಗ ಹಲವು ನಾಯಕರು 'ಹೈಕಮಾಂಡ್' ತೀರ್ಮಾನಕ್ಕೆ ಬದ್ಧ ಎನ್ನುವ ಹೇಳಿಕೆ ನೀಡಿದ್ದರು. ಆದರೀಗ ಗೃಹ ಸಚಿವ ಪರಮೇಶ್ವರ, ಮಹದೇವಪ್ಪ, ಸತೀಶ್ ಜಾರಕಿಹೊಳಿ ಸೇರಿದಂತೆ ಹಲವು ನಾಯಕರು ಸಿದ್ದರಾಮಯ್ಯ ಪರವಾಗಿ ಬ್ಯಾಟ್ ಬೀಸಿದ್ದಾರೆ. ಗೃಹ ಸಚಿವ ಪರಮೇಶ್ವರ ಮಾತನಾಡಿ, ಹೈಕಮಾಂಡ್ ಏನೇ ತೀರ್ಮಾನ ಮಾಡಿದರೂ ನಾವು ಬದ್ಧರಾಗಿದ್ದೇವೆ. ಆದರೆ ಈ ಎಲ್ಲ ಗೊಂದಲವನ್ನು ಹೈಕಮಾಂಡ್ ಬಗೆಹರಿಸಬೇಕು. ಶಾಸಕಾಂಗ ಪಕ್ಷದ ಸಭೆಯಲ್ಲಿ ಅಧಿಕಾರ ಹಂಚಿಕೆಯ ಬಗ್ಗೆ ಮಾತನಾಡಿಲ್ಲ. ಆದರೆ ಹೈಕಮಾಂಡ್‌ಗೆ ಎಲ್ಲವೂ ಗೊತ್ತಿದೆ. ಸಂದರ್ಭ ಬಂದಾಗ ನಾನೂ ಹೈಕಮಾಂಡ್‌ಗೆ ಇದನ್ನು ಬಗೆಹರಿಸುವಂತೆ ಹೇಳುತ್ತೇನೆ ಎಂದಿದ್ದಾರೆ.

ಮಹೇಶ್ ಜೋಶಿಗೆ ಹಿನ್ನಡೆ, ಅಧಿಕಾರ ಸ್ವೀಕರಿಸಿದ ಗಾಯತ್ರಿ

ಕನ್ನಡ ಸಾಹಿತ್ಯ ಪರಿಷತ್ತಿಗೆ ಆಡಳಿತಾಧಿಕಾರಿ ನೇಮಕ

- ನಿಗದಿತ ಅವಧಿಯಲ್ಲಿ ವಿಚಾರಣೆಗೆ ಹಾಜರಾಗಿಲ್ಲ ಎಂಬ ಕಾರಣಕ್ಕೆ ಆಡಳಿತಾಧಿಕಾರಿ ನೇಮಕ
- ವಿಚಾರಣೆಯಲ್ಲಿರುವ 17 ಅಂಶಗಳ ಪೈಕಿ 7 ವಿಚಾರಣೆಗಳಿಗೆ ಸಂಬಂಧಿಸಿ ಭಾಗಶಃ ಮಾಹಿತಿ ಸಲ್ಲಿಕೆ
- ಮಂಡ್ಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಬಿಡುಗಡೆ ಮಾಡಿದ ಅನುದಾನದ ಬಗ್ಗೆ ಡಿಸಿಗೆ ಮಾಹಿತಿ ನೀಡಿಲ್ಲ

ಬೆಂಗಳೂರು: ಕನ್ನಡ ಸಾಹಿತ್ಯದ ಅಸ್ಮಿತೆಯಾಗಿರುವ ಕನ್ನಡ ಸಾಹಿತ್ಯ ಪರಿಷತ್ ವಿರುದ್ಧ ಭ್ರಷ್ಟಾಚಾರ ಆರೋಪ ಕೇಳಿಬಂದಿರುವ ಹಿನ್ನೆಲೆಯಲ್ಲಿ ರಾಜ್ಯ ಸರಕಾರವು ಆಡಳಿತಾಧಿಕಾರಿಯನ್ನು ನೇಮಿಸಿ ಆದೇಶ ಹೊರಡಿಸಿದೆ.

ಡಾ.ಮಹೇಶ್ ಜೋಶಿ ಅಧ್ಯಕ್ಷರಾಗಿರುವ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಹಣ ಹಾಗೂ ಅಧಿಕಾರದ ದುರ್ಬಳಕೆಯಾಗಿದೆ. ಅಲ್ಲದೆ ಮಂಡ್ಯ ಸಾಹಿತ್ಯ ಸಮ್ಮೇಳನದ ಖರ್ಚು-ವೆಚ್ಚದ ಮಾಹಿತಿ ಯನ್ನು ಜಿಲ್ಲಾಧಿಕಾರಿಗಳಿಗೆ ನೀಡಿಲ್ಲ ಎನ್ನುವ ಆರೋಪ ಕೇಳಿಬಂದಿತ್ತು. ಈ ಬಗ್ಗೆ ಹೈಕೋರ್ಟ್‌ನಲ್ಲಿ ಹಲವು ಅರ್ಜಿಗಳೂ ವಿಚಾರಣೆಯ ಹಂತದಲ್ಲಿವೆ. ಈ ಹಿನ್ನೆಲೆಯಲ್ಲಿ ಸಹಕಾರ ಇಲಾಖೆಯು ಕಳೆದ ಜುಲೈನಲ್ಲಿ ವಿಚಾರಣಾಧಿಕಾರಿಯನ್ನು ನೇಮಕ ಮಾಡಿತ್ತು. ವಿಚಾರಣೆಗೆ ಸಂಬಂಧಿಸಿದಂತೆ ಕಸಾಪದವರು ನಿಗದಿತ ಕಾಲಾವಧಿಯಲ್ಲಿ ಹಾಜರಾಗದಿರುವುದು, ಅಗತ್ಯ ದಾಖಲಾತಿಗಳನ್ನು ಒದಗಿಸದಿರುವ ಕಾರಣ ನೀಡಿ, ಆಡಳಿತಾಧಿಕಾರಿ ನೇಮಿಸುವಂತೆ ಸಹಕಾರ ಇಲಾಖೆ ಸರಕಾರಕ್ಕೆ ಶಿಫಾರಸು ಮಾಡಿತ್ತು. ಈ ಶಿಫಾರಸ್ಸಿನ ಹಿನ್ನೆಲೆಯಲ್ಲಿ ರಾಜ್ಯ ಸರಕಾರವು ಮಂಗಳವಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಕೆ.ಎಂ. ಗಾಯತ್ರಿ ಅವರನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಆಡಳಿತಾಧಿಕಾರಿಯನ್ನಾಗಿ ಮೂರು ತಿಂಗಳು ಅಥವಾ ಹೈಕೋರ್ಟ್‌ನಲ್ಲಿ ಅರ್ಜಿಗಳ ವಿಚಾರಣೆ ಮುಗಿಯುವ ತನಕ ನೇಮಿಸಲಾಗಿದೆ. ನೇಮಕದ ಬೆನ್ನಲ್ಲೇ, ಗಾಯತ್ರಿ ಅವರು ಕಸಾಪಕ್ಕೆ ತೆರಳಿ ಅಧಿಕಾರ ಸ್ವೀಕರಿಸಿದ್ದಾರೆ. ಸರಕಾರದ ಈ ತೀರ್ಮಾನದಿಂದ ಮಹೇಶ್ ಜೋಶಿ ಅವರಿಗೆ ಹಿನ್ನಡೆಯಾಗಿದೆ.

ಹಂಪನಾ ಕಾಲದಲ್ಲಿ ಆರೋಪ

ಕನ್ನಡ ಸಾಹಿತ್ಯ ಪರಿಷತ್‌ಗೆ ಈ ಹಿಂದೆ ಹಲವು ಬಾರಿ ಆಡಳಿತಾಧಿಕಾರಿಗಳ ನೇಮಕವಾಗಿದೆ. ಹಲವು ಬಾರಿ ಅಧ್ಯಕ್ಷರ ಅವಧಿ ಮುಗಿದು, ಚುನಾವಣೆ ನಡೆಯದ ಕಾರಣ ಆಡಳಿತಾಧಿಕಾರಿಯನ್ನು ನೇಮಿಸಲಾಗಿತ್ತು. ಆದರೆ ಭ್ರಷ್ಟಾಚಾರ ಆರೋಪದಲ್ಲಿ ನ್ಯಾಯಾಂಗ ತನಿಖೆ ನಡೆಸುವ ಉದ್ದೇಶದಿಂದ ಈ ಹಿಂದೆ ಡಾ.ಹಂಪ ನಾಗರಾಜಯ್ಯ ಅವರ ಕಾಲದಲ್ಲಿ ಪರಿಷತ್‌ಗೆ ಆಡಳಿತಾಧಿಕಾರಿ ನೇಮಕವಾಗಿತ್ತು. ಹಂಪನಾ ಬಳಿಕ ಅಧ್ಯಕ್ಷರಾದ ಎಚ್.ಬಿ.ಜ್ವಾಲನಯ್ಯ ಅವರು ಅಧಿಕಾರ ಸ್ವೀಕರಿಸಿದ ಬಳಿಕ ಹಿಂದಿನ ಅಧ್ಯಕ್ಷರ ವಿರುದ್ಧ ತನಿಖೆಗೆ ನಡೆಸಿ ಲೋಪಗಳಾಗಿರುವುದನ್ನು ಬಹಿರಂಗಗೊಳಿಸಿದ್ದು ಸ್ಮರಿಸಬಹುದು.

30ರವರೆಗೆ ತಾಳ್ಮೆಯಿಂದಿರಿ

ಕಸಾಪಗೆ ಆಡಳಿತಾಧಿಕಾರಿ ನೇಮಕ ಕುರಿತು ಪ್ರತಿಕ್ರಿಯಿಸಿರುವ ಕನ್ನಡ ಸಾಹಿತ್ಯ ಪರಿಷತ್‌ನ ಅಧ್ಯಕ್ಷ ಮಹೇಶ್ ಜೋಶಿ, ಕನ್ನಡ ಸಾಹಿತ್ಯ ಪರಿಷತ್‌ಗೆ ಸಂಬಂಧಿಸಿದಂತೆ ಒಟ್ಟು ನಾಲ್ಕು ಅರ್ಜಿಗಳು ಹೈಕೋರ್ಟ್ ಮುಂದಿರುವುದರಿಂದ ಈ ಎಲ್ಲವನ್ನು ಒಟ್ಟಿಗೆ ಸೇರಿಸಿ 30ರಂದು ವಿಚಾರಣೆ ನಡೆಸುವುದಾಗಿ ಹೇಳಿದೆ. ಆದ್ದರಿಂದ ಹೈಕೋರ್ಟ್ ಮುಂದೆ ಗುರುವಾರ ಅರ್ಜಿಗಳು ವಿಚಾರಣೆಗೆ ಬರಲಿವೆ. ಅರ್ಜಿಗಳ ವಿಚಾರಣೆ ಮುಗಿಯುವ ತನಕ ಎಲ್ಲರೂ ಸಮಾಧಾನವಾಗಿರಬೇಕು ಎಂದು ಮನವಿ ಮಾಡಿದ್ದಾರೆ.

ತನಿಖೆಗೆ ಕಾಗೇರಿ ಆಗ್ರಹ ಖಾದರ್ ವಿರುದ್ಧ ಭ್ರಷ್ಟಾಚಾರ ಆರೋಪ

ಬೆಂಗಳೂರು: ವಿಧಾನಸಭೆಯ ಸಭಾಧ್ಯಕ್ಷ ಯು.ಟಿ. ಖಾದರ್ ಭಾರೀ ಭ್ರಷ್ಟಾಚಾರದಲ್ಲಿ ತೊಡಗಿದ್ದು, ಇತ್ತೀಚಿಗೆ ಖರೀದಿ ಮಾಡಿರುವ ಸಾಮಗ್ರಿಗಳ ಕುರಿತು ತನಿಖೆ ನಡೆಸುವಂತೆ ರಾಜ್ಯಪಾಲರಿಗೆ ದೂರು ನೀಡಲಾಗು ವುದು ಎಂದು ಮಾಜಿ ಸ್ಪೀಕರ್, ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕರ್ನಾಟಕ ವಿಧಾನಸಭೆಗೆ ತನ್ನದೇ ಆದ ಗೌರವ ಇದೆ. ಆದರೆ ಖಾದರ್ ಅವರು ತಮ್ಮ ಪೀಠದ ಗೌರವ ಕಾಪಾಡುತ್ತಿಲ್ಲ, ಅವರು ಪಕ್ಷದ ಕೈಗೊಂಬೆಯಂತೆ ವರ್ತಿಸುತ್ತಿದ್ದಾರೆ. ಇದು ಹಲವು ಶಾಸಕರ ಅಭಿಮತವಾಗಿದೆ. ಇದಲ್ಲದೆ ಅವರ ಆಡಳಿತ ಸುಧಾರಣೆ ಹೆಸರಿನಲ್ಲಿ ಮಾಡುತ್ತಿರುವ ಕಾರ್ಯವೈಖರಿಯಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ದೂರಿದರು.

ಸ್ಪೀಕರ್ ಸ್ಥಾನದ ವಿರುದ್ಧ ಬಂದಿರುವ ಆರೋಪಗಳಿಂದ ಆ ಸ್ಥಾನವು ಮುಕ್ತವಾಗಬೇಕು. ಇದಕ್ಕಾಗಿ ಹಾಲಿ ನ್ಯಾಯಮೂರ್ತಿಗಳಿಂದ ಆರೋಪಗಳ ಕುರಿತು ತನಿಖೆ ನಡೆಸಬೇಕು ಎಂದು ಆಗ್ರಹಿಸಿದ್ದಾರೆ.

ಫನ್‌ತರಂಗ
- ರಘುಪತಿ ಶೃಂಗೇರಿ -

ಕ್ಯಾಮರೂನ್ ಚುನಾವಣೆಯಲ್ಲಿ 92 ವರ್ಷದ ವಿಶ್ವದ ಹಿರಿಯ ಅಧ್ಯಕ್ಷ ಪಾಲ್ ಬಿಯಾ ಗೆಲುವು
ಸುದ್ದಿ



ಆರ್‌ಎಸ್‌ಎಸ್: ನಿರ್ಬಂಧಕ್ಕೆ ಹೈ ತಡೆ

ಬೆಂಗಳೂರು: ಆರ್‌ಎಸ್‌ಎಸ್ ಪಥಸಂಚಲನ ಸೇರಿದಂತೆ ಸಾರ್ವಜನಿಕ ಸ್ಥಳಗಳಲ್ಲಿ ಮೆರವಣಿಗೆ ನಡೆಸದಂತೆ ನಿರ್ಬಂಧ ಹೇರಿದ್ದ ಆದೇಶಕ್ಕೆ ಹೈಕೋರ್ಟ್ ಮಧ್ಯಂತರ ತಡೆಯಾಜ್ಞೆ ನೀಡಿದ್ದು, ಸರಕಾರಕ್ಕೆ ಹಿನ್ನಡೆಯಾಗಿದ್ದರೂ ಇದಕ್ಕೆ ಮೇಲ್ಮನವಿ ಸಲ್ಲಿಸಲಾಗುವುದು ಎಂದು ಮುಖ್ಯಮಂತ್ರಿ ಹೇಳಿದ್ದಾರೆ.

ರಸ್ತೆ, ಉದ್ಯಾನ, ಆಟದ ಮೈದಾನ ಸೇರಿ ಸಾರ್ವಜನಿಕ ಸ್ಥಳಗಳಲ್ಲಿ 10ಕ್ಕೂ ಅಧಿಕ ಮಂದಿ ಗುಂಪು ಸೇರಿದರೆ ಅದನ್ನು 'ಅಕ್ರಮ ಕೂಟ'ವೆಂದು ಪರಿಗಣಿಸುವ ಸಂಬಂಧ ರಾಜ್ಯ ಸರಕಾರ 2025ರ ಅಕ್ಟೋಬರ್ 18ರಂದು ಹೊರಡಿಸಿದ್ದ ಆದೇಶ ರದ್ದು ಕೋರಿ ಹುಬ್ಬಳ್ಳಿಯ ಪುನಶ್ಚೇತನ ಸೇವಾ ಟ್ರಸ್ಟ್, ವಿ ಕೇರ್ ಫೌಂಡೇಷನ್ ಸೇರಿ ನಾಲ್ವರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರ ಧಾರವಾಡ ಪೀಠ ಮಧ್ಯಂತರ ತಡೆಯಾಜ್ಞೆ ನೀಡಿದೆ.

→ 4

ಖಾಸಗಿ ಸಂಸ್ಥೆಗಳು ಸಾರ್ವಜನಿಕ ಸ್ಥಳಗಳನ್ನು ಬಳಸಲು ಪೂರ್ವಾನುಮತಿ ಕಡ್ಡಾಯಗೊಳಿಸುವ ನಿರ್ದೇಶನವನ್ನು ತಡೆಹಿಡಿದ ಧಾರವಾಡ ಪೀಠದ ಆದೇಶದ ವಿರುದ್ಧ ರಾಜ್ಯ ಸರಕಾರ ಮೇಲ್ಮನವಿ ಸಲ್ಲಿಸಲಿದೆ.
- ಸಿದ್ದರಾಮಯ್ಯ ಮುಖ್ಯಮಂತ್ರಿ

ಟ್ರಂಪ್‌ಗೆ ನೊಬೆಲ್ ಜಪಾನ್ ಬೆಂಬಲ

ವಾಷಿಂಗ್ಟನ್: ಡೊನಾಲ್ಡ್ ಟ್ರಂಪ್ ಅವರು ಮಂಗಳವಾರದಿಂದ ಏಷ್ಯಾ ಪ್ರವಾಸ ಕೈಗೊಂಡಿದ್ದು, ಜಪಾನ್ ಪ್ರಧಾನಿ ಸನೇ ಅವರು ಟ್ರಂಪ್ ಅವರನ್ನು ಬರಮಾಡಿಕೊಂಡರು. ಈ ವೇಳೆ ನೊಬೆಲ್ ಶಾಂತಿ ಪ್ರಶಸ್ತಿಗೆ ನಾಮನಿರ್ದೇಶನ ಮಾಡುವುದಾಗಿ ಜಪಾನ್‌ನ ಪ್ರಧಾನಿ ಸನೇ ತಕೈಚಿ ಅವರು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಭರವಸೆ ನೀಡಿದ್ದಾರೆ.

ಇಂದು ರಫೇಲ್‌ನಲ್ಲಿ ಮುರ್ಮು ಹಾರಾಟ

ಚಂಡೀಗಢ: ರಾಷ್ಟ್ರಪತಿ ದ್ರೌಪದಿ ಮುರ್ಮು (67) ಬುಧವಾರ ರಫೇಲ್ ಯುದ್ಧ ವಿಮಾನದಲ್ಲಿ ಹಾರಾಟ ನಡೆಸಲಿದ್ದಾರೆ. ಮುರ್ಮು ಅವರು ಹರಿಯಾಣದ ಅಂಬಾಲಾ ಏರ್‌ಬೇಸ್‌ಗೆ ತೆರಳಿ ಅಲ್ಲಿ ರಫೇಲ್‌ನಲ್ಲಿ ಹಾರಾಟ ನಡೆಸಲಿದ್ದಾರೆ. ಈ ಮೂಲಕ ರಫೇಲ್ ಯುದ್ಧ ವಿಮಾನ ಏರಿದ ಮೊದಲ ರಾಷ್ಟ್ರಪತಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಲಿದ್ದಾರೆ.

ಪಥಸಂಚಲನ ಮೂಡದ ಒಮ್ಮತ

ಕಲಬುರಗಿ: ಚಿತ್ತಾಪುರ ಪಥ ಸಂಚಲನಕ್ಕೆ ನ.2ರಂದು ಅನುಮತಿ ಕೋರಿರುವ ಸಂಘಟನೆಗಳೊಂದಿಗೆ ಜಿಲ್ಲಾಡಳಿತ ಮಂಗಳವಾರ ನಡೆಸಿದ ಸಭೆ ಒಮ್ಮತಕ್ಕೆ ಬರುವಲ್ಲಿ ವಿಫಲವಾಗಿದೆ. ಜಿಲ್ಲಾಧಿಕಾರಿ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಪ್ರತಿ ಸಂಘಟನೆಯಿಂದ ಒಬ್ಬೊಬ್ಬರಿಗೆ ತಲಾ 5 ನಿಮಿಷ ಕಾಲಾವಕಾಶ ನಿಗದಿಪಡಿಸಿತ್ತು. ಆದರೆ, ಒಮ್ಮತದ ನಿರ್ಧಾರಕ್ಕೆ ಬರುವಲ್ಲಿ ಸಭೆ ವಿಫಲವಾಯಿತು.

8ನೇ ವೇತನ ಆಯೋಗಕ್ಕೆ ಅಸ್ತು
ಕೇಂದ್ರ ಸರಕಾರಿ ನೌಕರರಿಗೆ ಶುಭಸುದ್ದಿ

ದೆಹಲಿ: ಕೇಂದ್ರ ಸರಕಾರ ನೌಕರರ ವೇತನ ಹಾಗೂ ಪಿಂಚಣಿದಾರ ಭತ್ಯೆಗಳ ಪರಿಷ್ಕರಣೆಗೆ 8ನೇ ವೇತನ ಆಯೋಗ ರಚನೆಗೆ ಕೇಂದ್ರ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದ್ದು, 2026ರ ಜನವರಿ 1ರಿಂದ ಜಾರಿಗೆ ಬರುವ ನಿರೀಕ್ಷೆಯಿದೆ. ಇದರಿಂದಾಗಿ 50 ಲಕ್ಷ ಕೇಂದ್ರ ಸರಕಾರಿ ನೌಕರರು ಮತ್ತು 69 ಲಕ್ಷ ಪಿಂಚಣಿದಾರರಿಗೆ ಅನುಕೂಲವಾಗಲಿದೆ.

ಸುಪ್ರೀಂಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ರಂಜನ್ ಪ್ರಕಾಶ್ ದೇಸಾಯಿ ಅವರ ನೇತೃತ್ವದ ಸಮಿತಿ ಇದಾಗಿದೆ. ಇದರಲ್ಲಿ ಒಬ್ಬರು ಕಾರ್ಯದರ್ಶಿ ಹಾಗೂ ಒಬ್ಬರು ಅರೆಕಾಲಿಕ ಸದಸ್ಯ ಇರುತ್ತಾರೆ. ಆಯೋಗ ರಚನೆಯಾದ ದಿನಾಂಕದಿಂದ 18 ತಿಂಗಳೊಳಗೆ ಈ ಸಮಿತಿಯು ತನ್ನ ಶಿಫಾರಸುಗಳನ್ನು ಮಾಡಲಿದೆ. ಸಮಿತಿ ನೀಡುವ ಮಧ್ಯಂತರ ವರದಿ ಕೈಸೇರಿದ ನಂತರ 8ನೇ ವೇತನ ಆಯೋಗ ಜಾರಿಯ ನಿಖರ ದಿನಾಂಕವನ್ನು ಘೋಷಿಸಲಾಗುವುದು. ಸದ್ಯದ ಪರಿಸ್ಥಿತಿಯಲ್ಲಿ 2026ರ ಜ.1ಕ್ಕೆ ಜಾರಿಯಾಗುವ ನಿರೀಕ್ಷೆ ಇದೆ ಎಂದು ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.

ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಆಂಧ್ರ, ಒಡಿಶಾ ಸಿಎಂ

ಮೊಂಥಾ ಎದುರಿಸಲು ಸಜ್ಜು

ಅಮರಾವತಿ/ಭುವನೇಶ್ವರ: ಮೊಂಥಾ ಚಂಡಮಾರುತವು ತೀವ್ರ ಸ್ವರೂಪ ಪಡೆದುಕೊಂಡಿದ್ದು, ಮಂಗಳವಾರ ರಾತ್ರಿ ಹೊತ್ತಿಗೆ ಆಂಧ್ರ ಪ್ರದೇಶದ ಮಚಲಿಪಟ್ಟಣ ಮತ್ತು ಕಾಕಿನಾಡ ನಡುವೆ ಅಪ್ಪಳಿಸಬಹುದು ಎಂದು ಅಂದಾಜಿಸಲಾಗಿದೆ. ಗಾಳಿಯ ವೇಗವು ಗಂಟೆಗೆ 110 ಕಿ.ಮೀನಷ್ಟು ಇರಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಹೇಳಿದೆ.

ಆಂಧ್ರ ಪ್ರದೇಶ ಮತ್ತು ಒಡಿಶಾದ ಮೇಲೆಯೇ ಚಂಡಮಾರುತವು ಹೆಚ್ಚು ಪರಿಣಾಮ ಬೀರಲಿದೆ. ಆದ್ದರಿಂದ, ಎರಡೂ ರಾಜ್ಯಗಳ ಮುಖ್ಯಮಂತ್ರಿಗಳು ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಮುನ್ನೆಚ್ಚರಿಕಾ ಕ್ರಮಗಳ ಪರಿಶೀಲನೆ ನಡೆಸಿದರು. ಯಾವುದೇ ಸಾವು ನೋವು ಸಂಭವಿಸದಂತೆ ನೋಡಿಕೊಳ್ಳುವುದೇ ಸರಕಾರದ ಗುರಿ ಎಂದು ಒಡಿಶಾ ಮುಖ್ಯಮಂತ್ರಿ ಮೋಹನ್ ಚರಣ್ ಮಾಂಝಿ ಹೇಳಿದರು.

ತೀವ್ರ ಮಳೆಯಾಗುವ ಪ್ರದೇಶಗಳು ಮತ್ತು ತಗ್ಗು ಪ್ರದೇಶಗಳ ಜನರನ್ನು ಸ್ಥಳಾಂತರಿಸುವ ಕಾರ್ಯವನ್ನು ಈ ರಾಜ್ಯಗಳಲ್ಲಿ ನಡೆಸಲಾಗುತ್ತಿದೆ. ಶಾಲೆಗಳು, ಅಂಗನವಾಡಿಗಳಿಗೆ ಅ.30ರವರೆಗೆ ರಜೆ ಘೋಷಿಸಲಾಗಿದೆ. ನೂರಾರು ಶಾಲೆಗಳನ್ನು ನಿರಾಶ್ರಿತ ಶಿಬಿರಗಳನ್ನಾಗಿ ಪರಿವರ್ತಿಸಲಾಗಿದೆ.

ಆಂಧ್ರದ ನೆಲ್ಲೂರು ಜಿಲ್ಲೆಯ ಸುತ್ತಮುತ್ತಲ ಜಿಲ್ಲೆಗಳಲ್ಲಿ ಮಂಗಳವಾರ ಬೆಳಗ್ಗೆಯಿಂದಲೇ ಮಳೆ ಸುರಿದಿದೆ. ಒಡಿಶಾದ ಎಂಟು ಜಿಲ್ಲೆಗಳಲ್ಲಿ ಭಾರಿ ಮಳೆಯಾಗಿದೆ. ಮೊಂಥಾ ಪರಿಣಾಮವು ರಾಜಸ್ಥಾನದವರೆಗೂ ಹಬ್ಬಿಕೊಂಡಿದ್ದು, ಬೂಂದಿ ಜಿಲ್ಲೆಯಲ್ಲಿ 13 ಸೆಂ.ಮೀ ಮಳೆ ಸುರಿದಿದೆ. ಅ.13ರಂದು ಪಶ್ಚಿಮ ಬಂಗಾಳದ ಹಲವು ಜಿಲ್ಲೆಗಳಲ್ಲಿ ಭಾರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಮೊಂಥಾ ಚಂಡಮಾರುತ ಹಿನ್ನೆಲೆಯಲ್ಲಿ ಒಡಿಶಾದ ಪುರಿಯ ಕಡಲತೀರದಲ್ಲಿ ಮೀನುಗಾರಿಕೆ ದೋಣಿಗಳು ದಡ ಸೇರಿರುವುದು.

ಜಾರ್ಖಂಡ್‌ನಲ್ಲೂ ಮಳೆ

ಬಂಗಾಳಕೊಲ್ಲಿಯಲ್ಲಿ ಎದ್ದಿರುವ ಚಂಡಮಾರುತದಿಂದ ಜಾರ್ಖಂಡ್‌ನಲ್ಲೂ ಅ.31ರವರೆಗೆ ಮಳೆಯಾಗುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ನೆಚ್ಚರಿಕೆ ನೀಡಿದೆ. ಸಿಮ್ಡೆಗಾ, ಪಶ್ಚಿಮ ಸಿಂಗ್ಭುಮ್, ಖುಂತಿ, ಗುಮ್ಲಾದಲ್ಲಿ ಅ.28ರವರೆಗೆ, ಛಾತ್ರಾ, ಗರ್ವಾ, ಲಟೆಹರ್, ಪಲಾಮುನಲ್ಲಿ ಅ. 29ರವರೆಗೆ ಹಾಗೂ ಅ.30ರಿಂದ 31ರವರೆಗೆ ಮೊಂಥಾ ಚಂಡಮಾರುತವು ಆಂಧ್ರ ತೀರದ ಕಾಕಿನಾಡ ಮೂಲಕ ಪ್ರತಿ ಗಂಟೆಗೆ 100ರಿಂದ 110 ಕಿ.ಮೀ. ವೇಗದಲ್ಲಿ ಸಾಗಲಿದೆ ಎಂದು ಅಂದಾಜಿಸಲಾಗಿದೆ.

ರೈಲು, ವಿಮಾನ ಹಾರಾಟ ರದ್ದು

ಚಂಡಮಾರುತದ ಎಚ್ಚರಿಕೆ ಇರುವುದರಿಂದ ಒಡಿಶಾದಲ್ಲಿ 32 ರೈಲುಗಳ ಸಂಚಾರವನ್ನು ರದ್ದುಗೊಳಿಸಲಾಗಿದೆ. ಆಂಧ್ರಪ್ರದೇಶದ ಗನ್ನಾವರಮ್ ವಿಮಾನ ನಿಲ್ದಾಣದಿಂದ ಮಂಗಳವಾರ ಹಾರಾಟ ನಡಸಬೇಕಿದ್ದ 30 ವಿಮಾನಗಳನ್ನು ರದ್ದುಗೊಳಿಸಲಾಗಿದೆ ಎಂದು ವರದಿಯಾಗಿದೆ.

ಮಾದಕದ್ರವ್ಯ ವಿರೋಧಿ ಕಾರ್ಯಪಡೆಗೆ ಸಿಎಂ ಚಾಲನೆ

ಡ್ರಗ್ಸ್ ಮುಕ್ತ ಕರ್ನಾಟಕ ನನ್ನ ಗುರಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಡ್ರಗ್ಸ್ ಮುಕ್ತ ಕರ್ನಾಟಕ ನನ್ನ ಗುರಿ. ಪೊಲೀಸರ ಗುರಿಯೂ ಇದೇ ಆಗಿರಬೇಕು ಎಂದು ಸಿಎಂ ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.

ರಾಜ್ಯದಲ್ಲಿ ಹೆಚ್ಚುತ್ತಿರುವ ಮಾದಕವಸ್ತುಗಳ ಹಾವಳಿಯನ್ನು ನಿಗ್ರಹಿಸಲು ರಚಿಸಲಾದ ಮಾದಕದ್ರವ್ಯ ವಿರೋಧಿ ಕಾರ್ಯಪಡೆಗೆ ಚಾಲನೆ ನೀಡಿ ಮಾತನಾಡಿದ ಅವರು, ನಮ್ಮ ಯುವ ಶಕ್ತಿ, ವಿದ್ಯಾರ್ಥಿ, ಯುವಜನರ ಚೈತನ್ಯ ಮತ್ತು ಸಾಮರ್ಥ್ಯ ಮಾದಕ ವಸ್ತುಗಳಿಂದ ಬಲಿ ಆಗಬಾರದು. ಇದಕ್ಕೆ ಪೊಲೀಸ್ ಇಲಾಖೆ ನಿಲುವು ತೆಗೆದುಕೊಳ್ಳಬೇಕು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೋಮು ಘರ್ಷಣೆ, ಅನೈತಿಕ ಪೊಲೀಸ್‌ಗಿರಿ ಹೆಚ್ಚಾಗಿತ್ತು. ಹಿಂದಿದ್ದ ಅಧಿಕಾರಿಗಳು ನಿಯಂತ್ರಣ ಮಾಡಲಿಲ್ಲ. ಇಬ್ಬರು ಅಧಿಕಾರಿಗಳನ್ನು ಬದಲಾಯಿಸಿ ಆದೇಶ ಹೊರಡಿಸಿದೆ. ಈಗ ದಕ್ಷಿಣ ಕನ್ನಡ ಜಿಲ್ಲೆ ನಿಯಂತ್ರಣದಲ್ಲಿದೆ. ಈ ಸಾಧನೆ ಮಾಡಿದ್ದೂ ನಮ್ಮದೇ ಅಧಿಕಾರಿಗಳು ಮತ್ತು ಸಿಬ್ಬಂದಿ. ಇವರೇನು ಬೇರೆ ಗ್ರಹದಿಂದ ಬಂದವರಲ್ಲ. ನಿಮ್ಮವರೇ, ನಮ್ಮವರೇ ಆಗಿದ್ದಾರೆ. ಆದ್ದರಿಂದ ನೀವು ಮನಸ್ಸು ಮಾಡಿದರೆ ಎಲ್ಲವೂ ಸಾಧ್ಯವಿದೆ. ಸಾಧಿಸಿ ತೋರಿಸಿ ಎಂದರು.

ಇದೇ ರೀತಿ ಇಡೀ ರಾಜ್ಯದಲ್ಲಿ ಮಾದಕ ವಸ್ತು ಹಾವಳಿ ತಪ್ಪಿಸಲು ನಿಮ್ಮಿಂದ ಸಾಧ್ಯವಿದೆ. ನೀವು ಸಾಧ್ಯ ಮಾಡಿದರೆ ಕರ್ನಾಟಕ ಪೊಲೀಸ್ ಘನತೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚಾಗುತ್ತದೆ. ಕೆಲವು ಪೊಲೀಸರು ರಿಯಲ್ ಎಸ್ಟೇಟ್ ಮಾಡುವವರ ಜತೆ, ಡ್ರಗ್ಸ್ ಜಾಲದ ಜತೆ ಶಾಮೀಲಾಗಿರುತ್ತಾರೆ. ರೌಡಿಗಳನ್ನು ಮೊಳಕೆಯಲ್ಲೇ ಚಿವುಟಿ ಹಾಕುವುದು ನಿಮ್ಮಿಂದ ಸಾಧ್ಯ. ಪೊಲೀಸರ ಬಗ್ಗೆ ಅಪರಾಧ ಜಗತ್ತಿಗೆ ಭಯ ಕಡಿಮೆಯಾಗಿದೆ. ಯಾಕೆ ಹೀಗಾಯ್ತು ಎಂದು ನಿಮ್ಮನ್ನು ನೀವೇ ಪ್ರಶ್ನಿಸಿಕೊಂಡರೆ ಉತ್ತರ ನಿಮಗೇ ಗೊತ್ತಿರುತ್ತದೆ ಎಂದು ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯ ಆತ್ಮಸಾಕ್ಷಿಯನ್ನು ಕೆದಕಿದರು.

ಕಳೆದ 2 ವರ್ಷಗಳಿಂದಲೂ ರಾಜ್ಯದಲ್ಲಿ 250 ರಿಂದ 300 ಕೋಟಿ ರು. ಮೌಲ್ಯದ ಮಾದಕ ಪದಾರ್ಥಗಳನ್ನು ವಶಪಡಿಸಿಕೊಂಡು ನಾಶಪಡಿಸಲಾಗಿದೆ. ಅದಾಗ್ಯೂ ಸಹ ವಿವಿಧ ಮಾರ್ಗಗಳ ಮೂಲಕ ಮಾದಕ ವಸ್ತುಗಳು ರಾಜ್ಯವನ್ನು ತಲುಪುತ್ತಿವೆ. ಹೀಗಾಗಿ ಮುಖ್ಯಮಂತ್ರಿಗಳು ಸದನದಲ್ಲಿ ಘೋಷಿಸಿದಂತೆ ಕರ್ನಾಟಕ ರಾಜ್ಯವನ್ನು ಮಾದಕ ಪದಾರ್ಥಗಳಿಂದ ಮುಕ್ತವಾಗಿಸುವ ಉದ್ದೇಶದಿಂದ ಹೊಸ ಕಾರ್ಯಪಡೆ ರಚಿಸಲಾಗಿದೆ. 'ಸನ್ಮಿತ್ರ' ಹೆಸರಿನಲ್ಲಿ ಆ ಕಾರ್ಯಕ್ರಮವನ್ನೂ ಜಾರಿಗೆ ತರಲಾಗಿದೆ.
-ಡಾ ಜಿ.ಪರಮೇಶ್ವರ್ ಗೃಹ ಸಚಿವ

ವಿಶೇಷ ಕಾರ್ಯಪಡೆ ರಚನೆ ಹೇಗೆ?

ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಶ್ರೇಣಿಯ ಅಧಿಕಾರಿಯೊಬ್ಬರು ಈ ಘಟಕದ ಮುಖ್ಯಸ್ಥರಾಗಿರುತ್ತಾರೆ. ಮತ್ತು ಮಾದಕ ಪದಾರ್ಥಗಳ ಹಾವಳಿ ತಡೆಗಾಗಿ ದೈನಂದಿನ ಕಾರ್ಯಾಚರಣೆಗಳು, ಕ್ರಮಗಳ ಕುರಿತು ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ಅವರಿಗೆ ನೇರವಾಗಿ ವರದಿ ಮಾಡಲಿದೆ ಎಂದು ಆಗಸ್ಟ್ 1ರಂದು ಹೊರಡಿಸಲಾದ ಸರಕಾರಿ ಆದೇಶದಲ್ಲಿ ತಿಳಿಸಲಾಗಿದೆ. ಇದಕ್ಕಾಗಿ 10 ಹೊಸ ಹುದ್ದೆ ರಚಿಸಲಾಗಿದೆ ಹಾಗೂ ನಕ್ಸಲ್ ನಿಗ್ರಹಪಡೆಯಲ್ಲಿದ್ದ 56 ಸಿಬ್ಬಂದಿಯನ್ನು ಸೇರ್ಪಡೆಗೊಳಿಸಿಕೊಳ್ಳಲಾಗಿದೆ. ಹೊಸದಾಗಿ ರಚಿಸಲಾದ ಹುದ್ದೆಗಳಲ್ಲಿ ಇಬ್ಬರು ಹೆಚ್ಚುವರಿ ಪೊಲೀಸ್ ಸೂಪರಿಂಟೆಂಡೆಂಟ್‌ಗಳು, ಇಬ್ಬರು ಉಪ ಪೊಲೀಸ್ ಸೂಪರಿಂಟೆಂಡೆಂಟ್‌ಗಳು, ಓರ್ವ ಸಹಾಯಕ ಆಡಳಿತ ಅಧಿಕಾರಿ, ಓರ್ವ ಸೆಕ್ಷನ್ ಸೂಪರಿಂಟೆಂಡೆಂಟ್, ಓರ್ವ ಕಿರಿಯ ಸಹಾಯಕ, ಓರ್ವ ಪ್ರಥಮ ದರ್ಜೆ ಸಹಾಯಕ, ಓರ್ವ ಸ್ಟೆನೋಗ್ರಾಫರ್ ಮತ್ತು ದಳಾಯತ್ ಇರಲಿದ್ದಾರೆ. ನಕ್ಸಲ್ ನಿಗ್ರಹ ಪಡೆಯಿಂದ ಸೇರ್ಪಡೆಗೊಳಿಸಲಾಗುವ 56 ಸಿಬ್ಬಂದಿಯಲ್ಲಿ ಇಬ್ಬರು ಪೊಲೀಸ್ ಇನ್ಸ್‌ಪೆಕ್ಟರ್‌ಗಳು ಮತ್ತು ನಾಲ್ವರು ಪೊಲೀಸ್ ಸಬ್-ಇನ್ಸ್‌ಪೆಕ್ಟರ್‌ಗಳು, 20 ಹೆಡ್ ಕಾನ್ಸ್‌ಟೆಬಲ್‌ಗಳು ಮತ್ತು 30 ಕಾನ್ಸ್‌ಟೆಬಲ್‌ಗಳು ಇರಲಿದ್ದಾರೆ.

OLA ELECTRIC

ಓಲಾ ಎಲೆಕ್ಟ್ರಿಕ್ ಮೊಬಿಲಿಟಿ ಲಿಮಿಟೆಡ್

(ಹಿಂದೆ ಓಲಾ ಎಲೆಕ್ಟ್ರಿಕ್ ಮೊಬಿಲಿಟಿ ಪ್ರೈವೇಟ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)

ಸಿಐಎನ್: L74999KA2017PLC099619

ನೋಂದಾಯಿತ ಕಚೇರಿ: ವಿಂಗ್ ಸಿ, ಪ್ರೆಸ್ಟೀಜ್ ಆರ್‌ಎಂಝುಡ್ ಸ್ಟಾರ್ಟೆಕ್, ಹೊಸೂರು ರಸ್ತೆ, ಮುನಿಸಿಪಲ್ ವಾರ್ಡ್ ನಂ. 67, ಮುನಿಸಿಪಲ್ ನಂ. 140 ಕೋರಮಂಗಲ VI ಬ್ಲಾಕ್, ಬೆಂಗಳೂರು-560095, ಕರ್ನಾಟಕ, ಭಾರತ.

ದೂರವಾಣಿ: 080-35440050, **ಇಮೇಲ್ ಐಡಿ:** companysecretary@olaelectric.com

ಅಂಚೆ ಮತಪತ್ರ ಸೂಚನೆ

ಓಲಾ ಎಲೆಕ್ಟ್ರಿಕ್ ಮೊಬಿಲಿಟಿ ಲಿಮಿಟೆಡ್ (**"ಕಂಪನಿ"**) ಸದಸ್ಯರಿಗೆ ಈ ಮೂಲಕ ತಿಳಿಸುವುದೇನೆಂದರೆ, ಕಂಪನಿ ಕಾಯಿದೆ, 2013 ರ (**"ಕಾಯಿದೆ"**) ಕಲಂಗಳು 108, 110 ಮತ್ತು ಅನ್ವಯವಾಗುವ ಇತರ ನಿಬಂಧನೆಗಳ ಪ್ರಕಾರ ಹಾಗೂ ಅದಕ್ಕೆ ತಿದ್ದುಪಡಿ ಮಾಡಿದಂತೆ, ಕಂಪನಿಗಳು (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014 ರ ನಿಯಮ 20 ಮತ್ತು ನಿಯಮ 22 (**"ನಿಯಮಗಳು"**), ತಿದ್ದುಪಡಿ ಮಾಡಿದಂತೆ, ಇನ್‌ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರಿಸ್ ಆಫ್ ಇಂಡಿಯಾ (**"ಎಸ್‌ಎಸ್-2"**) ಹೊರಡಿಸಿದ ಸಾಮಾನ್ಯ ಸಭೆಗಳ ಮೇಲಿನ ಸೆಕ್ರೆಟರಿಯಲ್ ಸ್ಟ್ಯಾಂಡರ್ಡ್, ಸೆಕ್ಯೂರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (ಲಿಸ್ಟಿಂಗ್ ಜವಾಬ್ದಾರಿಗಳು ಮತ್ತು ಬಹಿರಂಗಪಡಿಸುವಿಕೆ ಅವಶ್ಯಕತೆಗಳು) ನಿಯಮಗಳು, 2015 (**"ಸೆಬಿ ಎಲ್‌ಒಡಿಆರ್ ನಿಯಮಗಳು"**) ರ ನಿಯಮ 44, ಯಾವುದೇ ಶಾಸನಬದ್ಧ ಮಾರ್ಪಾಡುಗಳು, ಬದಲಾವಣೆಗಳು ಅಥವಾ ಪುನರಾವರ್ತನೆಗಳನ್ನು ಒಳಗೊಂಡಂತೆ ಪ್ರಸ್ತುತ ಜಾರಿಯಲ್ಲಿರುವ ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ (**"ಎಮ್‌ಸಿಎ"**) ಹೊರಡಿಸಿದ ಸೆಪ್ಟೆಂಬರ್ 22, 2022 ರ ಸಾಮಾನ್ಯ ಸುತ್ತೋಲೆ, ಈ ಸಂಬಂಧದಲ್ಲಿ ಕಾಲಕಾಲಕ್ಕೆ ಹೊರಡಿಸಿದ ಇತರ ಸಂಬಂಧಿತ ಸುತ್ತೋಲೆಗಳೊಂದಿಗೆ (**"ಎಮ್‌ಸಿಎ ಸುತ್ತೋಲೆಗಳು"**) ಮತ್ತು ಯಾವುದೇ ಇತರ ಅನ್ವಯವಾಗುವ ಕಾನೂನು, ನಿಯಮಗಳು ಮತ್ತು ನಿಬಂಧನೆಗಳೊಂದಿಗೆ, ಕಂಪನಿಯ ಸದಸ್ಯರ ಅನುಮೋದನೆಯನ್ನು ಅಕ್ಟೋಬರ್ 25, 2025 ರ ಅಂಚೆ ಮತಪತ್ರ ಸೂಚನೆಯಲ್ಲಿ (**"ಸೂಚನೆ"**) ವಿವರಿಸಿದ ಒಂದು ವಿಶೇಷ ನಿರ್ಣಯದ ಮೂಲಕ ವಿಶೇಷ ವ್ಯವಹಾರಕ್ಕಾಗಿ, ವಿವರಣಾತ್ಮಕ ಹೇಳಿಕೆಯೊಂದಿಗೆ, ಎಲೆಕ್ಟ್ರಾನಿಕ್ ವಿಧಾನಗಳ ಮೂಲಕ (ಅಂದರೆ ರಿಮೋಟ್ ಇ-ವೋಟಿಂಗ್) ಮಾತ್ರ ಕೋರಿದೆ.

ಮೇಲೆ ತಿಳಿಸಿದ ನಿಬಂಧನೆಗಳಿಗೆ ಅನುಸಾರವಾಗಿ, ಅಕ್ಟೋಬರ್ 24, 2025 ರ ಶುಕ್ರವಾರದ ವ್ಯವಹಾರದ ಸಮಯದ ಅಂತ್ಯಕ್ಕೆ (**"ಕಟ್-ಆಫ್ ದಿನಾಂಕ"**) ನ್ಯಾಷನಲ್ ಸೆಕ್ಯೂರಿಟೀಸ್ ಡೆಪಾಸಿಟರಿ ಲಿಮಿಟೆಡ್ (**"ಎನ್‌ಎಸ್‌ಡಿಎಲ್"**) ಮತ್ತು ಸೆಂಟ್ರಲ್ ಡೆಪಾಸಿಟರಿ ಸರ್ವಿಸಸ್ (ಇಂಡಿಯಾ) ಲಿಮಿಟೆಡ್ (**"ಸಿಡಿಎಸ್‌ಎಲ್"**) ನಿಂದ ಸ್ವೀಕರಿಸಿದ ಸದಸ್ಯರ ನೋಂದಣಿ/ಲಾಭದಾಯಕ ಮಾಲೀಕರ ಪಟ್ಟಿಯಲ್ಲಿ ಹೆಸರುಗಳು ಕಾಣಿಸಿಕೊಂಡಿರುವ ಮತ್ತು ಇ-ಮೇಲ್ ಐಡಿಗಳು ಕಂಪನಿ/ಡೆಪಾಸಿಟರಿಗಳೊಂದಿಗೆ ನೋಂದಾಯಿಸಲ್ಪಟ್ಟಿರುವ ಸದಸ್ಯರಿಗೆ ಅಂಚೆ ಮತಪತ್ರ ಸೂಚನೆಯ ("ಸೂಚನೆ") ಎಲೆಕ್ಟ್ರಾನಿಕ್ ಪ್ರತಿಗಳನ್ನು ವಿವರಣಾತ್ಮಕ ಹೇಳಿಕೆಯೊಂದಿಗೆ ಅಕ್ಟೋಬರ್ 28, 2025 ರಂದು ಕಳುಹಿಸಲಾಗಿದೆ. ಎಮ್‌ಸಿಎ ಸುತ್ತೋಲೆಗಳಲ್ಲಿ ಒದಗಿಸಲಾದ ವಿನಾಯಿತಿಗೆ ಅನುಗುಣವಾಗಿ ಈ ಅಂಚೆ ಮತಪತ್ರಕ್ಕಾಗಿ ಅಂಚೆ ಮತಪತ್ರ ನಮೂನೆಗಳು ಮತ್ತು ಮೊದಲೇ ಪಾವತಿ ಮಾಡಿದ ವ್ಯಾಪಾರ ಪ್ರತಿಕ್ರಿಯೆ ಲಕೋಟೆಗಳೊಂದಿಗೆ ಅಂಚೆ ಮತಪತ್ರದ ಸೂಚನೆಯ ಮುದ್ರಿತ ಪ್ರತಿಗಳನ್ನು ಸದಸ್ಯರಿಗೆ ಕಳುಹಿಸಲಾಗುತ್ತಿಲ್ಲ.

ಸೂಚನೆಯು ಕಂಪನಿಯ ವೆಬ್‌ಸೈಟ್ www.olaelectric.com ಮತ್ತು ಸ್ಟಾಕ್ ಎಕ್ಸ್‌ಚೇಂಜ್‌ಗಳಾದ ಬಿಎಸ್‌ಇ ಲಿಮಿಟೆಡ್ ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್‌ನ ವೆಬ್‌ಸೈಟ್‌ಗಳಾದ www.bseindia.com ಮತ್ತು www.nseindia.com ನಲ್ಲಿ ಮತ್ತು ಎನ್‌ಎಸ್‌ಡಿಎಲ್‌ನ ವೆಬ್‌ಸೈಟ್ www.evoting.nsdl.com ನಲ್ಲಿ ಲಭ್ಯವಿದೆ.

ಕಾಯಿದೆಯ ಕಲಂಗಳು 108, 110 ರ ನಿಬಂಧನೆಗಳಿಗೆ, ತಿದ್ದುಪಡಿ ಮಾಡಿದ ನಿಯಮಗಳೊಂದಿಗೆ ಮತ್ತು ಲಿಸ್ಟಿಂಗ್ ನಿಯಮಗಳು 44 ಕ್ಕೆ ಅನುಸಾರವಾಗಿ, ಕಂಪನಿಯು ಸದಸ್ಯರಿಗೆ ಎನ್‌ಎಸ್‌ಡಿಎಲ್ ಒದಗಿಸಿದ ರಿಮೋಟ್ ಇ-ವೋಟಿಂಗ್ ಪ್ಲಾಟ್‌ಫಾರ್ಮ್ ಮೂಲಕ ಇ-ವೋಟಿಂಗ್ ಮೂಲಕ ಮಾತ್ರ ತಮ್ಮ ಮತಗಳನ್ನು ಚಲಾಯಿಸಲು ಸೌಲಭ್ಯವನ್ನು ಒದಗಿಸಿದೆ. ರಿಮೋಟ್ ಇ-ವೋಟಿಂಗ್ ಮೂಲಕ ಮತಗಳನ್ನು ಚಲಾಯಿಸಲು ಲಾಗಿನ್ ರುಜುವಾತುಗಳನ್ನು ಸೂಚನೆಯ ಟಿಪ್ಪಣಿಗಳ ಭಾಗದಲ್ಲಿ ಉಲ್ಲೇಖಿಸಲಾಗಿದೆ, ಅದನ್ನು ಸದಸ್ಯರಿಗೆ ಕಳುಹಿಸಲಾಗಿದೆ. ರಿಮೋಟ್ ಇ-ವೋಟಿಂಗ್ ಮೂಲಕ ಮತಗಳನ್ನು ಚಲಾಯಿಸಲು ವಿವರವಾದ ವಿಧಾನವನ್ನು ಸೂಚನೆಯಲ್ಲಿ ಒದಗಿಸಲಾಗಿದೆ.

ಶುಕ್ರವಾರ, ಅಕ್ಟೋಬರ್ 24, 2025 ರ ಕಟ್-ಆಫ್ ದಿನಾಂಕದಂದು ಸದಸ್ಯರ ನೋಂದಣಿ/ಫಲಾನುಭವಿ ಮಾಲೀಕರ ಪಟ್ಟಿಯಲ್ಲಿ ಹೆಸರುಗಳು ಕಾಣಿಸಿಕೊಂಡಿರುವ ಸದಸ್ಯರು ಮಾತ್ರ ರಿಮೋಟ್ ಇ-ವೋಟಿಂಗ್ ಮೂಲಕ ಸೂಚನೆಯಲ್ಲಿ ವಿವರಿಸಿದ ನಿರ್ಣಯಗಳ ಮೇಲೆ ಮತ ಚಲಾಯಿಸಲು ಅರ್ಹರಾಗಿರುತ್ತಾರೆ. ಆ ದಿನಾಂಕದಂದು ಸದಸ್ಯರ ಹೆಸರಿನಲ್ಲಿ ನೋಂದಾಯಿಸಲ್ಪಟ್ಟ ಪಾವತಿಸಿದ ಇಕ್ವಿಟಿ ಷೇರುಗಳ ಮೇಲೆ ಮತದಾನದ ಹಕ್ಕುಗಳನ್ನು ಎಣಿಕೆ ಮಾಡಲಾಗುತ್ತದೆ. ಸದಸ್ಯರು ರಿಮೋಟ್ ಇ-ವೋಟಿಂಗ್ ಮೂಲಕ ಮಾತ್ರ ತಮ್ಮ ಒಪ್ಪಿಗೆಯನ್ನು (ಪರ) ಅಥವಾ ಭಿನ್ನಾಭಿಪ್ರಾಯವನ್ನು (ವಿರುದ್ಧ) ನೀಡಲು ವಿನಂತಿಸಲಾಗಿದೆ.

ಇ-ವೋಟಿಂಗ್ ಸೌಲಭ್ಯವು ಈ ಕೆಳಗಿನ ಅವಧಿಯಲ್ಲಿ ಮಾತ್ರ ಲಭ್ಯವಿರುತ್ತದೆ:

ಇ-ವೋಟಿಂಗ್ ಪ್ರಾರಂಭವಾಗುವ ದಿನ, ದಿನಾಂಕ ಮತ್ತು ಸಮಯ	ಬುಧವಾರ, ಅಕ್ಟೋಬರ್ 29, 2025 ರಂದು ಬೆಳಿಗ್ಗೆ 9.00 ರಿಂದ (ಭಾರತೀಯ ಕಾಲಮಾನ)
ಇ-ವೋಟಿಂಗ್ ಮುಕ್ತಾಯಗೊಳ್ಳುವ ದಿನ, ದಿನಾಂಕ ಮತ್ತು ಸಮಯ	ಗುರುವಾರ, ನವೆಂಬರ್ 27, 2025 ರಂದು ಸಂಜೆ 5.00 ರವರೆಗೆ (ಭಾರತೀಯ ಕಾಲಮಾನ)

ಕಂಪನಿಯ ನಿರ್ದೇಶಕರ ಮಂಡಳಿಯು ಶ್ರೀ ಪ್ರಮೋದ್ ಎಸ್‌ಎಂ (ಎಫ್‌ಸಿಎಸ್ ಸಂಖ್ಯೆ: 7834 ಸಿಪಿ ಸಂಖ್ಯೆ: 13784) ಅಥವಾ ಅವರ ಅನುಪಸ್ಥಿತಿಯಲ್ಲಿ ಶ್ರೀ ಬಿಸ್ವಜಿತ್ ಘೋಷ್ (ಎಫ್‌ಸಿಎಸ್: 8750, ಸಿಪಿ ಸಂಖ್ಯೆ: 8239), ಎಮ್/ಎಸ್. ಬಿಎಂಪಿ & ಕೋ. ಎಲ್‌ಎಲ್‌ಪಿ, ಒಂದು ಅಭ್ಯಾಸ ಮಾಡುವ ಕಂಪನಿ ಸೆಕ್ರೆಟರಿಸ್ ಸಂಸ್ಥೆ, ಬೆಂಗಳೂರು ಅವರನ್ನು ರಿಮೋಟ್ ಇ-ವೋಟಿಂಗ್ ಪ್ರಕ್ರಿಯೆಯ ಮೂಲಕ ಅಂಚೆ ಮತಪತ್ರವನ್ನು ನ್ಯಾಯಸಮ್ಮತವಾಗಿ ಮತ್ತು ಪಾರದರ್ಶಕವಾಗಿ ನಡೆಸಲು ತಪಾಸಕರನ್ನಾಗಿ ನೇಮಿಸಿದೆ.

ಅಂಚೆ ಮತಪತ್ರದ ಫಲಿತಾಂಶವನ್ನು ನವೆಂಬರ್ 30, 2025 ರಂದು ಅಥವಾ ಅದಕ್ಕೂ ಮೊದಲು ಘೋಷಿಸಲಾಗುವುದು ಮತ್ತು ಕಂಪನಿಯ ವೆಬ್‌ಸೈಟ್ www.olaelectric.com, ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್‌ಗಳಾದ ಬಿಎಸ್‌ಇ ಲಿಮಿಟೆಡ್ ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ www.bseindia.com ಮತ್ತು www.nseindia.com ನಲ್ಲಿ ತಪಾಸಕರ ವರದಿಯೊಂದಿಗೆ ಪ್ರಕಟಿಸಲಾಗುವುದು.

ಸದಸ್ಯರು ಸೂಚನೆಯಲ್ಲಿ ವಿವರಿಸಿದ ಎಲ್ಲಾ ಟಿಪ್ಪಣಿಗಳನ್ನು ಮತ್ತು ವಿಶೇಷವಾಗಿ ರಿಮೋಟ್ ಇ-ವೋಟಿಂಗ್ ಮೂಲಕ ಮತ ಚಲಾಯಿಸುವ ವಿಧಾನವನ್ನು ಗಮನವಿಟ್ಟು ಓದುವಂತೆ ವಿನಂತಿಸಲಾಗಿದೆ. ಸದಸ್ಯರು ಸೂಚನೆಯಲ್ಲಿ ಒದಗಿಸಿದ ಇ-ವೋಟಿಂಗ್‌ಗೆ ಸಂಬಂಧಿಸಿದ ಸೂಚನೆಗಳನ್ನು ಎಚ್ಚರಿಕೆಯಿಂದ ಓದಲು ವಿನಂತಿಸಲಾಗಿದೆ. ಯಾವುದೇ ಪ್ರಶ್ನೆಗಳಿದ್ದಲ್ಲಿ, ನೀವು ಷೇರುದಾರರಿಗಾಗಿ ಪದೇ ಪದೇ ಕೇಳಲಾಗುವ ಪ್ರಶ್ನೆಗಳನ್ನು ಮತ್ತು ಇ-ವೋಟಿಂಗ್ ಬಳಕೆದಾರರ ಕೈಪಿಡಿಯನ್ನು ಉಲ್ಲೇಖಿಸಬಹುದು.

ಮುದ್ರಿತ ರೂಪದಲ್ಲಿ ಷೇರುಗಳನ್ನು ಹೊಂದಿರುವ ಮತ್ತು ಕಂಪನಿಯೊಂದಿಗೆ ತಮ್ಮ ಇ-ಮೇಲ್ ಐಡಿಯನ್ನು ಇನ್ನೂ ನೋಂದಾಯಿಸದ / ನವೀಕರಿಸದ ಮುದ್ರಿತ ರೂಪದಲ್ಲಿ ಷೇರುಗಳನ್ನು ಹೊಂದಿರುವ ಮತ್ತು ಕಂಪನಿಯೊಂದಿಗೆ ತಮ್ಮ ಇ-ಮೇಲ್ ಐಡಿಯನ್ನು ಇನ್ನೂ ನೋಂದಾಯಿಸದ / ನವೀಕರಿಸದ ಸದಸ್ಯರು ತಮ್ಮ ಇ-ಮೇಲ್ ಐಡಿಯನ್ನು ರಿಜಿಸ್ಟ್ರಾರ್ ಮತ್ತು ಟ್ರಾನ್ಸ್‌ಫರ್ ಏಜೆಂಟ್ ಆಗಿರುವ ಎಂಯುಎಫ್‌ಜಿ ಇಂಟೈಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನಲ್ಲಿ enotices@in.mpms.mufg.com ಗೆ ವಿನಂತಿಗಳನ್ನು ಕಳುಹಿಸುವ ಮೂಲಕ ನೋಂದಾಯಿಸಲು / ನವೀಕರಿಸಲು ವಿನಂತಿಸಲಾಗಿದೆ, ಫೋಲಿಯೋ ಸಂಖ್ಯೆಯ ವಿವರಗಳನ್ನು ನೀಡಿ ಮತ್ತು ಪ್ಯಾನ್ ಕಾರ್ಡ್‌ನ ಸ್ವಯಂ-ದೃಢೀಕೃತ ನಕಲು ಮತ್ತು ಯಾವುದೇ ಇತರ ದಾಖಲೆಯ (ಉದಾ. ಚಾಲನಾ ಪರವಾನಗಿ, ಪಾಸ್‌ಪೋರ್ಟ್, ಆಧಾರ್ ಕಾರ್ಡ್ ಇತ್ಯಾದಿ) ಸ್ವಯಂ-ದೃಢೀಕೃತ ನಕಲನ್ನು ಲಗತ್ತಿಸಿ. ಡೀಮ್ಯಾಟ್ ಮೋಡ್‌ನಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು ತಮ್ಮ ಇ-ಮೇಲ್ ಐಡಿಯನ್ನು ತಮ್ಮ ಸಂಬಂಧಿತ ಡೆಪಾಸಿಟರಿ ಪಾರ್ಟಿಸಿಪೆಂಟ್(ಗಳ) ಬಳಿ ನೋಂದಾಯಿಸಲು / ನವೀಕರಿಸಲು ವಿನಂತಿಸಲಾಗಿದೆ.

ಈ ಅವಧಿಯಲ್ಲಿ, ಕಂಪನಿಯ ಸದಸ್ಯರು ಅಕ್ಟೋಬರ್ 24, 2025 ರ ಶುಕ್ರವಾರದ ಕಟ್-ಆಫ್ ದಿನಾಂಕದಂದು ಮುದ್ರಿತ ರೂಪದಲ್ಲಿ ಅಥವಾ ಡಿಮ್ಯಾಟ್ ರೂಪದಲ್ಲಿ ಷೇರುಗಳನ್ನು ಹೊಂದಿರುವವರು ರಿಮೋಟ್ ಇ-ವೋಟಿಂಗ್ ಮೂಲಕ ತಮ್ಮ ಮತವನ್ನು ಚಲಾಯಿಸಬಹುದು.ಇ-ವೋಟಿಂಗ್‌ನ ಕೊನೆಯ ದಿನಾಂಕದ ನಂತರ ಸದಸ್ಯರು ಮತ ಚಲಾಯಿಸಲು ಸಾಧ್ಯವಾಗುವುದಿಲ್ಲ. ನಿರ್ಣಯದ ಮೇಲೆ ಮತ ಚಲಾಯಿಸಿದ ನಂತರ, ಸದಸ್ಯರಿಗೆ ಅದನ್ನು ನಂತರ ಬದಲಾಯಿಸಲು ಅಥವಾ ಮತ್ತೆ ಮತ ಚಲಾಯಿಸಲು ಅವಕಾಶವಿರುವುದಿಲ್ಲ. ಸದಸ್ಯರ ಮತದಾನದ ಹಕ್ಕುಗಳು ಕಟ್-ಆಫ್ ದಿನಾಂಕ ಅಂದರೆ ಅಕ್ಟೋಬರ್ 24, 2025 ರ ಶುಕ್ರವಾರದಂದು ಕಂಪನಿಯ ಪಾವತಿಸಿದ ಇಕ್ವಿಟಿ ಷೇರು ಬಂಡವಾಳದ ಅವರ ಪಾಲಿಗೆ ಅನುಗುಣವಾಗಿರುತ್ತವೆ. ಕಟ್-ಆಫ್ ದಿನಾಂಕದಂದು ಸದಸ್ಯರಲ್ಲದ ವ್ಯಕ್ತಿಯು ಈ ಸೂಚನೆಯನ್ನು ಮಾಹಿತಿ ಉದ್ದೇಶಕ್ಕಾಗಿ ಮಾತ್ರ ಎಂದು ಪರಿಗಣಿಸಬೇಕು.

ಓಲಾ ಎಲೆಕ್ಟ್ರಿಕ್ ಮೊಬಿಲಿಟಿ ಲಿಮಿಟೆಡ್ ಪರವಾಗಿ
ಸಹಿ/-
ಅಭಿಷೇಕ್ ಜೈನ್
ಕಂಪನಿ ಕಾರ್ಯದರ್ಶಿ ಮತ್ತು ಅನುಸರಣೆ ಅಧಿಕಾರಿ
ಸದಸ್ಯತ್ವ ಸಂಖ್ಯೆ A62027

ಸ್ಥಳ: ಬೆಂಗಳೂರು
ದಿನಾಂಕ: ಅಕ್ಟೋಬರ್ 29, 2025

CONCEPT

बैंक ऑफ़ बड़ौदा Bank of Baroda

ಗಂಗಾನಗರ ಶಾಖೆ
ನಂ.19/10, 1ನೇ ಮುಖ್ಯರಸ್ತೆ, ಗಂಗಾನಗರ, ಬೆಂಗಳೂರು–560032

ದೂರವಾಣಿ: 08023639339/23330882 ಇ–ಮೇಲ್: vjgang@bankofbaroda.co.in

ಲಾಕರ್ ಬ್ರೇಕ್ ಓಪನ್ ನೋಟಿಸ್

ಈ ಕೆಳಗಿನ **ಬ್ಯಾಂಕ್ ಆಫ್ ಬರೋಡಾ, ಗಂಗಾನಗರ ಶಾಖೆ, ಬೆಂಗಳೂರಿನಲ್ಲಿ** ಬಾಡಿಗೆಗೆ ಲಾಕರ್‌ಗಳನ್ನು ತೆಗೆದುಕೊಂಡಿರುವ ಮತ್ತು ಒಪ್ಪಂದದ ಉಲ್ಲಂಘನೆ ಮಾಡಿದ ನಮ್ಮ ಮೌಲ್ಯಯುತ ಗ್ರಾಹಕರ ಗಮನಕ್ಕೆ ಈ ಪ್ರಕಟಣೆ ನೀಡಲಾಗಿದೆ. ಆರ್‌ಬಿಐ/ಬ್ಯಾಂಕ್‌ನ ಮಾರ್ಗಸೂಚಿಗಳ ಪ್ರಕಾರ ಲಾಕರ್ ಬಾಡಿಗೆ ಪಡೆದಿರುವವರ ದಾಖಲಾದ ವಿಳಾಸಗಳಲ್ಲಿ ಕಳುಹಿಸಲಾದ ನೋಟೀಸ್‌ಗಳನ್ನು ನಮೂದಿಸಿದ ವ್ಯಕ್ತಿ/ವ್ಯಕ್ತಿಗಳ ವಿಳಾಸಗಳು ಕಂಡುಬಂದಿಲ್ಲ ಅಥವಾ ಕೈಬಿಡಲಾಗಿದೆ ಎಂದು ತಲುಪದೇ ಹಿಂದಿರುಗಿದೆ. ಲಾಕರ್ ಹೋಲ್ಡರ್‌ಗಳನ್ನು ಅವರು ಪ್ರಸ್ತುತ ಇರುವಲ್ಲಿ ಖುದ್ದಾಗಿ ಸಂಪರ್ಕಿಸಲು ಪ್ರಯತ್ನಿಸಿದರೂ ಸಿಕ್ಕಿರುವುದಿಲ್ಲ. ಹೀಗಾಗಿ ಯಾವುದೇ ಪರ್ಯಾಯವಿಲ್ಲದೆ, ಶಾಖೆಯನ್ನು ಸಂಪರ್ಕಿಸಲು ಮತ್ತು 3 ತಿಂಗಳ ಅವಧಿಯಲ್ಲಿ ಬ್ಯಾಂಕ್‌ನ ಬಾಕಿಗಳನ್ನು ಪಾವತಿಸಲು ಕೆಳಗೆ ಹೆಸರಿಸಲಾದ ವ್ಯಕ್ತಿಗೆ ಸೂಚನೆಯನ್ನು ನೀಡಲಾಗುತ್ತಿದೆ. ವಿಫಲವಾದರೆ ಬಾಡಿಗೆ ಪಡೆದವರ ವೆಚ್ಚದಲ್ಲೇ, ಜಾಗ್ರತೆ ಮತ್ತು ಜವಾಬ್ದಾರಿಯಿಂದ ಲಾಕರ್ ಅನ್ನು ಮುರಿಯಲು ಬ್ಯಾಂಕ್ ಮುಂದುವರಿಯುತ್ತದೆ ಹಾಗೂ ಬಾಕಿ ಉಳಿದಿರುವ ಬಾಡಿಗೆ ವೆಚ್ಚ ಮತ್ತು ಇತರ ಶುಲ್ಕಗಳ ಮರುಪಡೆಯುವಿಕೆಗೆ ಬ್ಯಾಂಕ್ ತನ್ನ ಹಕ್ಕನ್ನು ಚಲಾಯಿಸುತ್ತದೆ.

ಶಾಖೆ: ಗಂಗಾನಗರ

ಕ್ರ.ಸಂ	ಗ್ರಾಹಕರ ಹೆಸರು	ಲಾಕರ್ ಸಂಖ್ಯೆ	ದಂಡದೊಂದಿಗೆ ಬಾಕಿಯಿರುವ ಮೊತ್ತ	ಬ್ರೇಕ್ ಓಪನ್ ದಿನಾಂಕ ಮತ್ತು ಸಮಯ
1	**ಶುಭಾ ಎಂ,** 253, 5ನೇ ಮುಖ್ಯರಸ್ತೆ 10ನೇ ಅಡ್ಡರಸ್ತೆ, ಗಂಗಾನಗರ, ಬೆಂಗಳೂರು–560032.	7375AX0196 (OLD no: 223)	ರೂ. 15,694.00	29.01.2026 ಮಧ್ಯಾಹ್ನ 3.00
2	**ರಹಮತ್ ನವಾಜ್** ಬಿನ್ ಆರ್.ಅಬ್ದುಲ್ ಸತ್ತಾರ್, ನಂ.2, 6ನೇ ಕ್ರಾಸ್, ನಂದಿದುರ್ಗ ಎಕ್ಸ್‌ಟೆನ್ಷನ್, ಬೆಂಗಳೂರು–560046.	7375AX0128 (OLD no: 146)	ರೂ. 20,414.00	29.01.2026 ಮಧ್ಯಾಹ್ನ 3.00
3	**ಸೈ ಇನ್ಫೋಟೆಕ್,** #13, 1ನೇ ಮಹಡಿ, 5ನೇ ಮೇನ್, ಗಂಗಾನಗರ, ಬೆಂಗಳೂರು–560032.	7375AX0304 (OLD no: 46)	ರೂ. 14,986.00	29.01.2026 ಮಧ್ಯಾಹ್ನ 3.00

ದಿನಾಂಕ: 27.10.2025
ಸ್ಥಳ: ಬೆಂಗಳೂರು

ಸಹಿ/– ಅಧಿಕೃತ ಅಧಿಕಾರಿ
ಬ್ಯಾಂಕ್ ಆಫ್ ಬರೋಡ

ಮಾನ್ಯ ಗೌರವಾನ್ವಿತ 2ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕನಕಪುರ
ಸಿ.ಮಿಸ್.ನಂ. 600/2025

ಅರ್ಜಿದಾರರು: ಶ್ರೀಮತಿ ವೆಂಕಟಮ್ಮ ಕೋಂ ಲೇಟ್ ಮರಿಯಪ್ಪ ವಯಸ್ಸು 72 ವರ್ಷ ವಾಸ: ದೊಂಬರದೊಡ್ಡಿ ಗ್ರಾಮ, ಕಲ್ಲಹಳ್ಳಿ ಅಂಚೆ, ಕಸಬಾ ಹೋಬಳಿ, ಕನಕಪುರ ತಾಲ್ಲೂಕು ಬೆಂಗಳೂರು ದಕ್ಷಿಣ ಜಿಲ್ಲೆ ಮತ್ತು ಇತರರು.

ವಿರುದ್ಧ

ಪ್ರತಿ ಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ ತಾಲ್ಲೂಕು, 2. ಗ್ರಾಮ ಲೆಕ್ಕಾಧಿಕಾರಿಗಳು, ಕಲ್ಲಹಳ್ಳಿ ವೃತ್ತ ಕಸಬಾ ಹೋಬಳಿ, ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1ನೇ ಅರ್ಜಿದಾರರ ಗಂಡ, 2 ರಿಂಧ 3ನೇ ಅರ್ಜಿದಾರರ ತಂದೆ, 4ನೇ ಅರ್ಜಿದಾರರ ಮಾವನವರಾದ ಶ್ರೀ ಮರಿಯಪ್ಪ ಬಿನ್ ಲೇಟ್ ಪುಟ್ಟಯ್ಯ ರವರು, ಬೆಂಗಳೂರು ದಕ್ಷಿಣ ಜಿಲ್ಲೆ, ಕನಕಪುರ ತಾಲ್ಲೂಕು, ಕಸಬಾ ಹೋಬಳಿ, ದೊಂಬರದೊಡ್ಡಿ ಗ್ರಾಮದಲ್ಲಿ ದಿನಾಂಕ 10.01.1995 ರಂದು ಮರಣ ಹೊಂದಿದ್ದು, ಅವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ ದಿನಾಂಕ 20–11–2025ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು. 2025ರ ಅಕ್ಟೋಬರ್ 28ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ. ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು
ವಿ. ವೆಂಕಟೇಶ್
ವಕೀಲರು, ಕನಕಪುರ ಟೌನ್
ಸ್ಥಳ : ಕನಕಪುರ
ದಿನಾಂಕ: 28/10/2025

ಗೌರವಾನ್ವಿತ 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಮ್.ಎಸ್.ಸಿ ನ್ಯಾಯಾಲಯ ಕನಕಪುರ
ಸಿ ಮಿಸ್ ಸಂಖ್ಯೆ 549/25

ವಾದಿ: ಡಿ.ಪುಟ್ಟಸ್ವಾಮಿ ಬಿನ್ ಲೇಟ್ ದಾಳಯ್ಯ ವಯಸ್ಸು 83 ವರ್ಷ ಗಂಗನಹಳ್ಳಿ ಗ್ರಾಮ, ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ, (ಹಾಲಿ ವಾಸ) ಮನೆ ನಂ.152, 12ನೇ ಕ್ರಾಸ್, 3ನೇ ಮುಖ್ಯರಸ್ತೆ, ಆಲನಹಳ್ಳಿ ಬಡಾವಣೆ, ಮೈಸೂರು – 11.

ವಿರುದ್ಧ

ಪ್ರತಿವಾದಿ: ತಹಶೀಲ್ದಾರ್ ಕನಕಪುರ ಮಾನ್ಯ ಜನನ ಮತ್ತು ಮರಣ ನೊಂದಾಣಾಧಿಕಾರಿಗಳು ಕನಕಪುರ ಹಾಗೂ ಇನ್ನೊಬ್ಬರು.

ಸಾರ್ವಜನಿಕ ಪ್ರಕಟಣೆ

ವಾದಿ ಶಿರೋನಾಮೆಯಲ್ಲಿ ನಮೂದಿಸಿರುವ ವಿಳಾಸದಲ್ಲಿ ವಾಸವಾಗಿರುತ್ತಾರೆ. ವಾದಿಯ ತಂದೆ ಲೇಟ್ ದಾಳಯ್ಯ ಬಿನ್ ಲೇಟ್ ದಾಳಯ್ಯ ರವರು ದಿ: 13/11/1949 ರಲ್ಲಿ ಗಂಗನಹಳ್ಳಿ ಗ್ರಾಮ, ಕೋಡಿಹಳ್ಳಿ ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆಯಲ್ಲಿ ಮರಣ ಹೊಂದಿದ್ದು, ಈ ಸಂಬಂಧದ ಬಗ್ಗೆ ವಾದಿ, ಪ್ರತಿ ವಾದಿಗೆ ಅರ್ಜಿ ಸಲ್ಲಿಸಲಾಗಿ ಸದರಿ ಮರಣದ ದಿನಾಂಕದ ಬಗ್ಗೆ ಜನನ ಮತ್ತು ಮರಣದ ರಿಜಿಸ್ಟರ್ ನಲ್ಲಿ ನಮೂದಾಗದೇ ಇರುವ ಕಾರಣ, ಸದರಿ ವಾದಿಯು 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಮ್.ಎಸ್.ಸಿ ನ್ಯಾಯಾಲಯ ಕನಕಪುರದಲ್ಲಿ ಪ್ರಕರಣ ದಾಖಲಿಸಿದ್ದು, ಮೇಲ್ಕಂಡ ಪ್ರಕರಣದಲ್ಲಿ ದಿನಾಂಕ: 19.12.2025 ರಂದು ಬೆಳಿಗ್ಗೆ 11:00 ಗಂಟೆಗೆ ಹಾಜರಾಗಿ, ಯಾವುದಾದರೂ ತಕರಾರು ಇದ್ದಲಿ ಘನ ನ್ಯಾಯಾಲಯಕ್ಕೆ ಹಾಜರಾಗಿ, ತಕರಾರು ಸಲ್ಲಿಸಬಹುದೆಂದು ತಪ್ಪಿದಲ್ಲಿ ಏಕಪಕ್ಷೀಯವಾಗಿ ಪ್ರಕರಣವನ್ನು ತೀರ್ಮಾನ ಮಾಡಲಾಗಿದ್ದು, ಸಾರ್ವಜನಿಕರಿಗೆ ತಿಳಿಸಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಅರ್ಜಿದಾರರ ಪರ ವಕೀಲರು
ಸಿ.ಆರ್.ಸತ್ಯಪ್ರಕಾಶ್ ಎಂ.ಎ., ಎಲ್.ಎಲ್.ಬಿ
652, 2ನೇ ಕ್ರಾಸ್, 2ನೇ ಮೇನ್,
ಕನಕದಾಸ ನಗರ, ಮೈಸೂರು
ದಿನಾಂಕ : 19/09/2025
ಸ್ಥಳ : ಕನಕಪುರ

ಸಿಸಿ ಕ್ಯಾಮೆರಾದಲ್ಲಿ ಕೃತ್ಯ ಸೆರೆ | ಡೆಲಿವರಿ ಬಾಯ್ ಬಂಧನ

ಬ್ರೆಜಿಲ್ ಮೂಲದ ಮಹಿಳೆಗೆ ಕಿರುಕುಳ

ಬೆಂಗಳೂರು: ಆನ್‌ಲೈನ್ ಮೂಲಕ ದಿನಸಿ ವಸ್ತುಗಳನ್ನು ಆರ್ಡರ್ ಮಾಡಿದ್ದ ಬ್ರೆಜಿಲ್ ಮೂಲದ ಮಹಿಳೆಗೆ ಲೈಂಗಿಕ ಕಿರುಕುಳ ನೀಡಿದ ಆರೋಪದಡಿ ಡೆಲಿವರಿ ಬಾಯ್ ಒಬ್ಬನನ್ನು ಆರ್.ಟಿ.ನಗರ ಪೊಲೀಸರು ಬಂಧಿಸಿದ್ದಾರೆ.

ಕಿರುಕುಳಕ್ಕೆ ಒಳಗಾದ ವಿದೇಶಿ ಮಹಿಳೆಯು ತಾನು ಕೆಲಸ ಮಾಡುತ್ತಿದ್ದ ಕಂಪನಿಯ ಸಹದ್ಯೋಗಿ ಕಾರ್ತಿಕ್ ಎಂಬುವರು ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡ ಪೊಲೀಸರು ಆರೋಪಿ ಕುಮಾರ್ (22) ಎಂಬಾತನನ್ನು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಮಾಡೆಲಿಂಗ್ ವೃತ್ತಿ ಮಾಡುತ್ತಿದ್ದ ಸಂತ್ರಸ್ತೆ ಎರಡು ತಿಂಗಳ ಹಿಂದೆ ಉದ್ಯೋಗ ವೀಸಾದಡಿ ನಗರಕ್ಕೆ ಬಂದಿದ್ದರು. ಕಂಪನಿಯೊಂದರ ಮಾಡೆಲಿಂಗ್ ಮಾಡುವ ಸಂತ್ರಸ್ತೆ ಜತೆ ಇನ್ನಿಬ್ಬರು ವಿದೇಶಿ ಮಹಿಳೆಯರು ಆರ್. ಟಿ. ನಗರದ ಅಪಾರ್ಟ್‌ಮೆಂಟ್‌ನಲ್ಲಿ ಒಟ್ಟಿಗೆ ವಾಸವಾಗಿದ್ದರು.

ಅ.17ರಂದು ಸಂತ್ರಸ್ತೆ ತಮ್ಮ ಮೊಬೈಲ್‌ನಲ್ಲಿ ಆ್ಯಪ್‌ವೊಂದರ ಮುಖಾಂತರ ಆಹಾರ ಪದಾರ್ಥ ಆರ್ಡರ್ ಮಾಡಿದ್ದರು. ಅದೇ ದಿನ ಸಂಜೆ ಬುಕ್ ಮಾಡಲಾಗಿದ್ದ ದಿನಸಿ ವಸ್ತುವನ್ನು ತಂದ ಆರೋಪಿ ಡೆಲಿವರಿಗಾಗಿ ಮನೆಯ ಬಾಗಿಲಿಗೆ ಬಂದಿದ್ದ. ಡೆಲಿವರಿ ನೀಡುವಾಗ ಮಹಿಳೆಯೊಂದಿಗೆ ಅನುಚಿತವಾಗಿ ವರ್ತಿಸಿ ದೇಹದ ಭಾಗಗಳನ್ನ ಸ್ಪರ್ಶಿಸಿ, ಲೈಂಗಿಕ ಕಿರುಕುಳ ನೀಡಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಘಟನೆ ನಡೆದ ಕೆಲ ದಿನಗಳವರೆಗೂ ಮಹಿಳೆ ಈ ಕಹಿ ಅನುಭವದ ಬಗ್ಗೆ ಯಾರೊಂದಿಗೂ ಹೇಳಿಕೊಂಡಿರಲಿಲ್ಲ. ಆದರೆ ಇತ್ತೀಚೆಗೆ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಸಹದ್ಯೋಗಿ ಬಳಿ ಅಳಲು ತೋಡಿಕೊಂಡಿದ್ದರು. ಈ ಸಂಬಂಧ ದೂರು ನೀಡಿದ ಮೇರೆಗೆ ಆರೋಪಿ ಬಂಧಿಸಲಾಗಿದೆ. ಆರೋಪಿ ಕೃತ್ಯವೆಸಗಿರುವುದು ಸಿಸಿಟಿವಿಯಲ್ಲಿ ಸೆರೆಯಾಗಿದ್ದು, ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ನೀಡಲಾಗಿದೆ.

ಮಾನ್ಯ ಪ್ರಧಾನ II ನೆ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕನಕಪುರ
ಸಿ.ಮಿಸ್ ನಂ.: 597/2025

ಅರ್ಜಿದಾರರು: ಶ್ರೀಮತಿ ರಾಜಲಕ್ಷ್ಮಿ D/o ಲೇಟ್ ಪುಟ್ಟತಾಯಮ್ಮ, W/o ಶ್ರೀನಿವಾಸ್ ವಯಸ್ಸು 54 ವರ್ಷ, ವಾಸ ನಂ 38 ಐದನೇ ಮುಖ್ಯರಸ್ತೆ, ಜಲಗೇರಮ್ಮ ದೇವಸ್ಥಾನದ ಹತ್ತಿರ ಶ್ರೀನಗರ್, ಬೆಂಗಳೂರು ದಕ್ಷಿಣ ಬೆಂಗಳೂರು 560050 ಮತ್ತು ಮತ್ತಿತರು.

ವಿರುದ್ಧ

ಪ್ರತಿ ಅರ್ಜಿದಾರರು: ಜನನ ಮತ್ತು ಮರಣ ನೋಂದಣಾಧಿಕಾರಿ ಹಾರೋಹಳ್ಳಿ ತಾಲೂಕು ರಾಮನಗರ ಜಿಲ್ಲೆ. 562117. ಇನ್ನೊಬ್ಬರು.

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಮೇಲ್ಕಂಡ ಅರ್ಜಿದಾರರ ತಂದೆ ಲೇಟ್ ವೆಂಕಟ್ ಶೆಟ್ಟಿ ಬಿನ್ ಲೇಟ್ ಚಿಕ್ಕಸಿದ್ದಯ್ಯ, ರವರು ದಿನಾಂಕ : 06–03–1993 ರಂದು ಸಿಂಗಸಂದ್ರ, ಗ್ರಾಮ, ಹಾರೋಹಳ್ಳಿ ತಾಲೂಕು, ರಾಮನಗರ ಜಿಲ್ಲೆ, 562112. ಇಲ್ಲಿ ನಿಧನರಾಗಿರುತ್ತಾರೆ. ಇವರ ಮರಣದ ಬಗ್ಗೆ ಯಾವುದೇ ಅಧಿಕೃತ ದಾಖಲೆಗಳು ಇಲ್ಲದ ಸಲುವಾಗಿ ಮೇಲ್ಕಂಡ ಅರ್ಜಿಯನ್ನು ಜನನ ಮತ್ತು ಮರಣ ನೋಂದಣಿ ಕಾಯ್ದೆ 1969 ರಂತೆ ದೃಢೀಕರಣ ಪತ್ರವನ್ನು ಪಡೆಯಲು ಮಾನ್ಯ ಪ್ರಧಾನ ಖಖ ನೆ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ಕನಕಪುರ ಇಲ್ಲಿ ಅರ್ಜಿಯನ್ನು ಸಲ್ಲಿಸಿದ್ದು, ಇದಕ್ಕೆ ಸಂಬಂಧಪಟ್ಟಂತೆ ಯಾರಾದರೂ ಇದ್ದಲ್ಲಿ ಖುದ್ದಾಗಿ ಆಗಲಿ ಅಥವಾ ತಮ್ಮ ವಕೀಲರ ಮುಖಾಂತರವಾಗಲಿ ದಿನಾಂಕ 29/11/2025 ರಂದು 11:00 ಬೆಳಿಗ್ಗೆ ಮೇಲ್ಕಂಡ ನ್ಯಾಯಾಲಯದಲ್ಲಿ ಹಾಜರಾಗತಕ್ಕದ್ದು. ಇಲ್ಲವಾದಲ್ಲಿ ಅರ್ಜಿಯನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು. ನ್ಯಾಯಾಲಯದ ಮೊಹರಿನೊಂದಿಗೆ ನೊಂದಣಿಗೆ ಹಾಗೂ ನನ್ನ ಸಹಿಯೊಡನೆ ದಿನಾಂಕ 28/10/2025 ರಂದು ನೀಡಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು.
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ ನ್ಯಾಯಾಲಯ ಕನಕಪುರ

ಅರ್ಜಿದಾರರ ಪರ ವಕೀಲರು
ಅಭಿಷೇಕ್ ಗೌಡ ಜಿ.ಎಸ್
ವಕೀಲರು, ಕನಕಪುರ
ಕನಕಪುರ
ದಿನಾಂಕ 28–10–25

ಮಾನ್ಯ ಪ್ರಧಾನ II ನೆ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕನಕಪುರ
ಸಿ.ಮಿಸ್ ನಂ.: 598/2025

ಅರ್ಜಿದಾರರು: ಶ್ರೀಮತಿ ರಾಜಲಕ್ಷ್ಮಿ D/o ಲೇಟ್ ಪುಟ್ಟತಾಯಮ್ಮ, W/o ಶ್ರೀನಿವಾಸ್ ವಯಸ್ಸು 54 ವರ್ಷ, ವಾಸ ನಂ 38 ಐದನೇ ಮುಖ್ಯರಸ್ತೆ, ಜಲಗೇರಮ್ಮ ದೇವಸ್ಥಾನದ ಹತ್ತಿರ ಶ್ರೀನಗರ್, ಬೆಂಗಳೂರು ದಕ್ಷಿಣ ಬೆಂಗಳೂರು 560050 ಮತ್ತು ಮತ್ತಿತರು.

ವಿರುದ್ಧ

ಪ್ರತಿ ಅರ್ಜಿದಾರರು: ಜನನ ಮತ್ತು ಮರಣ ನೋಂದಣಾಧಿಕಾರಿ ಹಾರೋಹಳ್ಳಿ ತಾಲೂಕು ರಾಮನಗರ ಜಿಲ್ಲೆ. 562117. ಇನ್ನೊಬ್ಬರು.

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಮೇಲ್ಕಂಡ ಅರ್ಜಿದಾರರ ತಾಯಿ ಲೇಟ್ ಪುಟ್ಟತಾಯಮ್ಮ ಕೋ. ಲೇಟ್ ವೆಂಕಟಶೆಟ್ಟಿ, ರವರು ದಿನಾಂಕ : 19–09–2020 ರಂದು ಸಿಂಗಸಂದ್ರ, ಗ್ರಾಮ, ಹಾರೋಹಳ್ಳಿ ತಾಲೂಕು, ರಾಮನಗರ ಜಿಲ್ಲೆ, 562112. ಇಲ್ಲಿ ನಿಧನರಾಗಿರುತ್ತಾರೆ. ಇವರ ಮರಣದ ಬಗ್ಗೆ ಯಾವುದೇ ಅಧಿಕೃತ ದಾಖಲೆಗಳು ಇಲ್ಲದ ಸಲುವಾಗಿ ಮೇಲ್ಕಂಡ ಅರ್ಜಿಯನ್ನು ಜನನ ಮತ್ತು ಮರಣ ನೋಂದಣಿ ಕಾಯ್ದೆ 1969 ರಂತೆ ದೃಢೀಕರಣ ಪತ್ರವನ್ನು ಪಡೆಯಲು ಮಾನ್ಯ ಪ್ರಧಾನ II ನೆ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ಕನಕಪುರ ಇಲ್ಲಿ ಅರ್ಜಿಯನ್ನು ಸಲ್ಲಿಸಿದ್ದು, ಇದಕ್ಕೆ ಸಂಬಂಧಪಟ್ಟಂತೆ ಯಾರಾದರೂ ಇದ್ದಲ್ಲಿ ಖುದ್ದಾಗಿ ಆಗಲಿ ಅಥವಾ ತಮ್ಮ ವಕೀಲರ ಮುಖಾಂತರವಾಗಲಿ ದಿನಾಂಕ 29/11/2025 ರಂದು 11:00 ಬೆಳಿಗ್ಗೆ ಮೇಲ್ಕಂಡ ನ್ಯಾಯಾಲಯದಲ್ಲಿ ಹಾಜರಾಗತಕ್ಕದ್ದು. ಇಲ್ಲವಾದಲ್ಲಿ ಅರ್ಜಿಯನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು. ನ್ಯಾಯಾಲಯದ ಮೊಹರಿನೊಂದಿಗೆ ನೊಂದಣಿಗೆ ಹಾಗೂ ನನ್ನ ಸಹಿಯೊಡನೆ ದಿನಾಂಕ 28/10/2025 ರಂದು ನೀಡಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು.
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ ನ್ಯಾಯಾಲಯ ಕನಕಪುರ

ಅರ್ಜಿದಾರರ ಪರ ವಕೀಲರು
ಅಭಿಷೇಕ್ ಗೌಡ ಜಿ.ಎಸ್
ವಕೀಲರು, ಕನಕಪುರ
ಕನಕಪುರ
ದಿನಾಂಕ 28–10–25

ಪಲ್ಲಂಗದಾಟಕ್ಕೆ ಅಡ್ಡಿ ಎಂದು ಮಗಳ ಹತ್ಯೆ

ಬೆಂಗಳೂರು: ಪಲ್ಲಂಗದಾಟಕ್ಕೆ ಅಡ್ಡಿಯಾಗುತ್ತಿದ್ದಾಳೆಂದು ಮಗಳನ್ನೇ ಕೊಲೆ ಮಾಡಿದ ಮಲತಂದೆಯನ್ನು ಪೊಲೀಸರು ಬಂಧಿಸಿದ್ದಾರೆ.

ದರ್ಶನ್ ಕೊಲೆ ಮಾಡಿದ ಆರೋಪಿ. ಶುಕ್ರವಾರ (ಅ.24) ಸಂಜೆ ಕುಂಬಳಗೋಡಿನ ರಾಮಸಂದ್ರದಲ್ಲಿ ಈ ಘಟನೆ ನಡೆದಿತ್ತು. ಸದ್ಯ ಆರೋಪಿಯ ಜಾಡು ಹಿಡಿದು ಬಂಧಿಸಿರುವ ಪೊಲೀಸರಿಗೆ ಕೊಲೆಯ ಸ್ಫೋಟಕ ವಿಚಾರಗಳು ಗೊತ್ತಾಗಿದೆ. ಇನ್‌ಸ್ಟಾಗ್ರಾಂನಲ್ಲಿ ಪರಿಚಯವಾಗಿದ್ದ ಬಾಲಕಿ ಸಿರಿಯ ತಾಯಿ ಶಿಲ್ಪಾಳನ್ನು ದರ್ಶನ್ ಎರಡನೇ ಮದುವೆಯಾಗಿದ್ದ. ಬಳಿಕ ದರ್ಶನ್ ತನ್ನ ಖಾಸಗಿತನದ ಬಗ್ಗೆ ತಲೆಕೆಡಿಸಿಕೊಂಡಿದ್ದ. ಹೀಗಾಗಿ ಆರೋಪಿಯು ಬಾಲಕಿಯ ಅಜ್ಜಿ ಇರುವ ತನಕ ಯಾವುದೇ ಕಿರಿಕ್ ಮಾಡುತ್ತಿರಲಿಲ್ಲ. ಆದರೆ ಆಕೆಯ ಅಜ್ಜಿ ಇತ್ತೀಚೆಗೆ ಮೃತಪಟ್ಟಿದ್ದರು. ಬಳಿಕ ತನ್ನ ಬುದ್ಧಿ ತೋರಿಸಲು ಶುರು ಮಾಡಿದ ದರ್ಶನ್, ಬಾಲಕಿಗೆ ಹೊಡೆದು ಬಡಿದು ಚಿತ್ರಹಿಂಸೆ ಕೊಡುತ್ತಿದ್ದ. ನಾಲ್ಕು ದಿನಗಳ ಹಿಂದೆ ಮನೆಗೆ ಬಂದಾಗ ಆರೋಪಿ ಬಾಲಕಿಯನ್ನು ಕೊಲೆ ಮಾಡಿದ್ದ. ಬಾಲಕಿಯನ್ನು ಕೊಲೆ ಮಾಡಿದ್ದಲ್ಲದೆ ಸಾಕ್ಷ್ಯ ನಾಶಕ್ಕೂ ಯತ್ನಿಸಿದ್ದ. ಆದರೆ ಅದೇ ವೇಳೆ ಶಿಲ್ಪಾ ಮನೆಗೆ ಬಂದಿದ್ದರಿಂದ ಗಾಬರಿಯಾದ ದರ್ಶನ್, ಆಕೆಯನ್ನು ರೂಮಿನಲ್ಲಿ ಕೂಡಿ ಹಾಕಿ ಪರಾರಿಯಾಗಿದ್ದ. ಪೊಲೀಸರು ಆತನ ಬೆನ್ನು ಬಿದ್ದು, ನೆಲಮಂಗಲ ಬಳಿ ಆರೋಪಿಯನ್ನು ಹೆಡೆಮುರಿ ಕಟ್ಟಿದ್ದಾರೆ.

ಸ್ವಾಧೀನತೆಯ ಪ್ರಕಟಣೆ
(ಸ್ಥಿರಾಸ್ತಿಗಳಿಗೆ)

ಕೆಳಸಹಿದಾರರು ಸಿಎಫ್‌ಎಮ್ ಅಸೆಟ್ ರಿಕನ್‌ಸ್ಟ್ರಕ್ಷನ್ ಪ್ರೈವೇಟ್ ಲಿಮಿಟೆಡ್ (ಸಿಎಫ್‌ಎಮ್‌ಎಆರ್‌ಸಿ) **(CIN:U67100GJ2015PTC083994)** (ಇದರ ಅಧಿಕೃತ ಅಧಿಕಾರಿಯಾಗಿದ್ದು, ಸೆಕ್ಯುರಿಟೈಜೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಮತ್ತು ಎನ್‌ಪೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಕಾಯಿದೆ 2002, ನಿಯಮ 13(12) ರ ನಿಯಮ 3 ನ್ನು ಓದಿಕೊಂಡಂತೆ ಭದ್ರತಾ ಹಿತಾಸಕ್ತಿ (ಅನುಷ್ಠಾನ) ನಿಯಮಗಳು 2002 (ನಿಯಮಗಳು)ರ ಅನ್ವಯ ಈ ಕೆಳಗಿನಂತೆ ತಗಾದೆ ಸೂಚನೆಯನ್ನು ನೀಡಿರುತ್ತಾರೆ.

ಕೆಳಸಹಿದಾರರು, ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್ (ಮೊದಲು ಇಂಡಿಯಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ಎಂದಿತ್ತು) (ಈಗ ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್ ಎನ್ನಲಾಗುತ್ತಿದೆ) ಇದರ ಅಧಿಕೃತ ಅಧಿಕಾರಿಯಾಗಿದ್ದು, ಸೆಕ್ಯುರಿಟೈಜೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಮತ್ತು ಎನ್‌ಪೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಕಾಯಿದೆ 2002, ನಿಯಮ 13(12) ರ ನಿಯಮ 3 ನ್ನು ಓದಿಕೊಂಡಂತೆ ಭದ್ರತಾ ಹಿತಾಸಕ್ತಿ (ಅನುಷ್ಠಾನ) ನಿಯಮಗಳು 2002 (ನಿಯಮಗಳು)ರ ಅನ್ವಯ 09.03.2020 ರಂದು ಸಾಲಗಾರರಾದ ಅಶ್ವಿನ್ ಬಿ ವಿ ಮತ್ತು ದೀಪ್ತಿ ಡಿ ಆರ್ ಇವರಿಗೆ ತಗಾದೆ ಸೂಚನೆಯನ್ನು ನೀಡಿದ್ದು, ಸೂಚನೆಯಲ್ಲಿ ತಿಳಿಸಿದಂತೆ 06.03.2020 ರಂತೆ ಸಾಲದ ಖಾತಾ ಸಂ. HHLBAN00261966 ರಲ್ಲಿ ರೂ.29,04,007/– (ಇಪ್ಪತ್ತೊಂಭತ್ತು ಲಕ್ಷ ನಾಲ್ಕು ಸಾವಿರದ ಏಳು ರೂಪಾಯಿಗಳು ಮಾತ್ರ) ವನ್ನು ಜೊತೆಗೆ ಬಡ್ಡಿ ಹಾಗೂ ಇತರೆ ದರಗಳನ್ನು ಈ ನೋಟೀಸ್ ನೀಡಿದ 60 ದಿನಗಳಲ್ಲಿ ಪಾವತಿಸುವಂತೆ ಸೂಚನೆ ನೀಡಲಾಗಿತ್ತು.

ಐಹೆಚ್‌ಎಫ್‌ಎಲ್ ಗೆ ಸರ್ಫೇಸಿ ಕಾಯಿದೆಯ ನಿಬಂಧನೆಗಳ ಅಡಿಯಲ್ಲಿ, ಮೇಲೆ ತಿಳಿಸಲಾದ ಸಾಲಗಾರರ ಸಾಲವನ್ನು ಸಿಎಫ್‌ಎಂಎಆರ್‌ಸಿ ಟ್ರಸ್ಟ್–1 ರ ಟ್ರಸ್ಟಿಯಾಗಿ ಕಾರ್ಯನಿರ್ವಹಿಸುವ ಮೂಲಕ ಐಹೆಚ್‌ಎಫ್‌ಎಲ್ ವಹಿಸಿದೆ. ದಿನಾಂಕ 05.10.2020 ರ ನಿಯೋಜನೆ ಒಪ್ಪಂದದ ಪ್ರಕಾರ, ಸಿಎಫ್‌ಎಂಎಆರ್‌ಸಿ ಮೇಲಿನ ಸಾಲ ಖಾತೆಗೆ ಸಂಬಂಧಿಸಿದಂತೆ ಸುರಕ್ಷಿತ ಸಾಲಗಾರನಾಗಿ ಮಧ್ಯಪ್ರವೇಶಿಸಿದೆ. ಇದನ್ನು ಸಿಎಫ್‌ಎಂಎಆರ್‌ಸಿ ಪುಸ್ತಕಗಳಲ್ಲಿ ಸಾಲ ಖಾತೆ ಸಂಖ್ಯೆ CFMARC261966 ಎಂದು ಮರುಸಂಖ್ಯೆ ಮಾಡಲಾಗಿದೆ.

ಮೇಲೆ ತಿಳಿಸಿದಂತೆ ಸಾಲಗಾರರು ಹಣವನ್ನು ಮರುಪಾವತಿ ಮಾಡಲು ವಿಫಲರಾಗಿದ್ದು, ಸಾಲಗಾರರು ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ಕೆಳಸಹಿದಾರರು ಈ ಕೆಳಗೆ ವಿವರಿಸಿರುವ ಸ್ಥಿರಾಸ್ತಿಗಳನ್ನು ಸೆಕ್ಷನ್ 13 ರ ಸಬ್ ಸೆಕ್ಷನ್(4)ರ ಕಾಯಿದೆಯಂತೆ ನಿಯಮ 8 ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು 2002ರ ಅನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ 24.10.2025 ರಂದು ಸ್ವಾಧೀನ ಪಡಿಸಿಕೊಂಡಿರುತ್ತಾರೆ.

ನಿರ್ದಿಷ್ಟವಾಗಿ ಸಾಲಗಾರರು ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ಈ ಸ್ವತ್ತುಗಳ ಬಗ್ಗೆ ಯಾರೂ ವ್ಯವಹರಿಸಕೂಡದು, ಒಂದು ವೇಳೆ ವ್ಯವಹರಿಸಿದ್ದೇ ಆದಲ್ಲಿ ಸಿಎಫ್‌ಎಮ್‌ಎಆರ್‌ಸಿ ಗೆ ಬರಬೇಕಾದ ಬಾಕಿ ಹಣ 06.03.2020 ರವರೆಗೆ ಬಾಕಿ ಮೊತ್ತ ರರೂ.29,04,007/– (ಇಪ್ಪತ್ತೊಂಭತ್ತು ಲಕ್ಷ ನಾಲ್ಕು ಸಾವಿರದ ಏಳು ರೂಪಾಯಿಗಳು ಮಾತ್ರ) ವನ್ನು ಹಾಗೂ ನಂತರದ ಬಡ್ಡಿಯನ್ನು ಪಾವತಿಸಬೇಕಾಗುವುದು.

ಸೆಕ್ಷನ್ 13(8) ರ ಸರ್ಫೇಸಿ ಕಾಯಿದೆ ಹಾಗೂ ನಿಯಮಾನುಸಾರ ಭದ್ರತಾ ಆಸ್ತಿಗಳನ್ನು ನೀವು ಮರುಪಡೆಯಲು ಅವಕಾಶವಿದೆ ಎಂಬುದನ್ನು ಸಾಲಗಾರರ ಗಮನಕ್ಕೆ ತರುತ್ತಿದ್ದೇವೆ.

ಸ್ಥಿರ ಆಸ್ತಿಯ ವಿವರ

ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ, ಫ್ಲ್ಯಾಟ್ ನಂ. ಸಿ, ಬ್ಲಾಕ್ –102–ಎ, ವಿಸ್ತೀರ್ಣ : 1089 ಚದರ ಅಡಿಗಳ ಸುಪರ್ ಬಿಲ್ಟಪ್ ಪ್ರದೇಶ, ನೆಲ ಮಹಡಿಯಲ್ಲಿದ್ದು, ಅಪಾರ್ಟ್‌ಮೆಂಟ್‌ನ್ನು "ಗಾರ್ಡನ್ ರೆಸಿಡೆನ್ಸಿ" ಎಂದು ಕರೆಯಲಾಗುತ್ತಿದ್ದು, ಅಪಾರ್ಟ್ಂಟ್‌ನ್ನು ಭೂಮಿಯ ಸರ್ವೆ ಸರ್ವೆ ನಂ. 108/2, ವಿಸ್ತೀರ್ಣ 2 ಎಕರೆ 08 ಗುಂಟೆಗಳಲ್ಲಿ ನಿರ್ಮಾಣ ಮಾಡಲಾಗಿದ್ದು, (ವಾಸಯೋಗ್ಯವಾಗಿ ಪರಿವರ್ತಿತವಾದ ಆದೇಶ ಸಂ. ಬಿಡಿಎಸ್/ಎಎಲ್‌ಎನ್:ಎಸ್‌ಆರ್(ಎ):103/88–89 ದಿನಾಂಕ11.11.1992 ವಿಶೇಷ ಸಹಾಯಕ ಆಯುಕ್ತರು, ಇವರಿಂದ ನೀಡಲ್ಪಟ್ಟಿದ್ದು, ಕಚನಾಯಕನಹಳ್ಳಿ ಗ್ರಾಮ, ಜಿಗಣಿ ಹೋಬಳಿ, ಆನೇಕಲ್ ತಾಲೂಕು, ಬೆಂಗಳೂರು ಜಿಲ್ಲೆ ಇಲ್ಲಿದ್ದು, ಒಟ್ಟಾಗಿ ಎಲ್ಲಾ ಹಕ್ಕುಗಳು, ಅಪ್ಪುರ್ಟೆನ್ಸ್‌ಗಳು ಭೂಮಿಯ ಮೇಲ್ಮೈ ಹಾಗೂ ಒಳಭಾಗದಲ್ಲಿರುವುದೆಲ್ಲವನ್ನು ಒಳಗೊಂಡಂತೆ ಮತ್ತು ಒಟ್ಟು 95830 ಚದರ ಅಡಿಗಳಲ್ಲಿ 270 ಚದರ ಅಡಿಗಳ ಭಾಗ ಮಾಡಲಾಗದ ಪಾಲು, ಹಕ್ಕು, ಟೈಟಲ್ ಮತ್ತು ಹಿತಾಸಕ್ತಿಗಳು ಇದ್ದು, ಚಕ್ಕುಬಂಧಿ : ಪೂರ್ವಕ್ಕೆ : ಭೂಮಿಯ ಸರ್ವೆ ನಂ. 108/2 ರ ಉಳಿದ ಭಾಗ, ಪಶ್ಚಿಮಕ್ಕೆ ; ರಸ್ತೆ, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ : ಟ್ಯಾಂಕ್ ಬೆಡ್.

ದಿನಾಂಕ: 24.10.2025
ಸ್ಥಳ: ಬೆಂಗಳೂರು

ಸಹಿ/–ಅಧಿಕೃತ ಅಧಿಕಾರಿ
ಸಿಎಫ್‌ಎಮ್ ಅಸೆಟ್ ರಿಕನ್‌ಸ್ಟ್ರಕ್ಷನ್ ಪ್ರೈವೇಟ್ ಲಿಮಿಟೆಡ್
ಆಕ್ಟಿಂಗ್ ಇನ್‌ಕೆಪಾಸಿಟಿ ಆಸ್ ಟ್ರಸ್ಟೀ ಆಫ್ ಸಿಎಫ್‌ಎಮ್‌ಎಆರ್‌ಸಿ ಟ್ರಸ್ಟ್–1 ಐಹೆಚ್‌ಎಫ್‌ಎಲ್

बैंक ऑफ़ बड़ौदा Bank of Baroda

ಬ್ಯಾಂಕ್ ಆಫ್ ಬರೋಡ
ಹೆಚ್‌ಬಿಆರ್ ಲೇಔಟ್ ಶಾಖೆ

(ಬೆಂಗಳೂರು ಉತ್ತರ) 805, 2ನೇ ಕ್ರಾಸ್, 1ನೇ ಬ್ಲಾಕ್, ಹೆಚ್‌ಆರ್‌ಬಿಆರ್ ಲೇಔಟ್, ಕಲ್ಯಾಣ್ ನಗರ, ಬೆಂಗಳೂರು–560043. ದೂ.: 080–25428232, 080–25454238, ಇ–ಮೇಲ್: vjhbrl@bankofbaroda.com

ಲಾಕರ್ ಬ್ರೇಕ್ ಓಪನ್ ನೋಟಿಸ್

ಈ ಕೆಳಗಿನ **ಬ್ಯಾಂಕ್ ಆಫ್ ಬರೋಡಾ, ಹೆಚ್‌ಬಿಆರ್ ಲೇಔಟ್ ಶಾಖೆ, ಬೆಂಗಳೂರಿನಲ್ಲಿ** ಬಾಡಿಗೆಗೆ ಲಾಕರ್‌ಗಳನ್ನು ತೆಗೆದುಕೊಂಡಿರುವ ಮತ್ತು ಒಪ್ಪಂದದ ಉಲ್ಲಂಘನೆ ಮಾಡಿದ ನಮ್ಮ ಮೌಲ್ಯಯುತ ಗ್ರಾಹಕರ ಗಮನಕ್ಕೆ ಈ ಪ್ರಕಟಣೆ ನೀಡಲಾಗಿದೆ. ಆರ್‌ಬಿಐ/ಬ್ಯಾಂಕ್‌ನ ಮಾರ್ಗಸೂಚಿಗಳ ಪ್ರಕಾರ ಲಾಕರ್ ಬಾಡಿಗೆ ಪಡೆದಿರುವವರ ದಾಖಲಾದ ವಿಳಾಸಗಳಲ್ಲಿ ಕಳುಹಿಸಲಾದ ನೋಟೀಸ್‌ಗಳನ್ನು ನಮೂದಿಸಿದ ವ್ಯಕ್ತಿ/ವ್ಯಕ್ತಿ/ಗಳ ವಿಳಾಸಗಳು ಕಂಡುಬಂದಿಲ್ಲ ಅಥವಾ ಕೈಬಿಡಲಾಗಿದೆ ಎಂದು ತಲುಪದೇ ಹಿಂದಿರುಗಿದೆ. ಲಾಕರ್ ಹೋಲ್ಡರ್‌ಗಳನ್ನು ಅವರು ಪ್ರಸ್ತುತ ಇರುವಲ್ಲಿ ಖುದ್ದಾಗಿ ಸಂಪರ್ಕಿಸಲು ಪ್ರಯತ್ನಿಸಿದರೂ ಸಿಕ್ಕಿರುವುದಿಲ್ಲ. ಹೀಗಾಗಿ ಯಾವುದೇ ಪರ್ಯಾಯವಿಲ್ಲದೆ, ಶಾಖೆಯನ್ನು ಸಂಪರ್ಕಿಸಲು ಮತ್ತು 15 ದಿನಗಳ ಅವಧಿಯಲ್ಲಿ ಬ್ಯಾಂಕ್‌ನ ಬಾಕಿಗಳನ್ನು ಪಾವತಿಸಲು ಕೆಳಗೆ ಹೆಸರಿಸಲಾದ ವ್ಯಕ್ತಿಗೆ ಸೂಚನೆಯನ್ನು ನೀಡಲಾಗುತ್ತಿದೆ. ವಿಫಲವಾದರೆ ಬಾಡಿಗೆ ಪಡೆದವರ ವೆಚ್ಚದಲ್ಲೇ, ಜಾಗ್ರತೆ ಮತ್ತು ಜವಾಬ್ದಾರಿಯಿಂದ ಲಾಕರ್ ಅನ್ನು ಮುರಿಯಲು ಬ್ಯಾಂಕ್ ಮುಂದುವರಿಯುತ್ತದೆ ಹಾಗೂ ಬಾಕಿ ಉಳಿದಿರುವ ಬಾಡಿಗೆ ವೆಚ್ಚ ಮತ್ತು ಇತರ ಶುಲ್ಕಗಳ ಮರುಪಡೆಯುವಿಕೆಗೆ ಬ್ಯಾಂಕ್ ತನ್ನ ಹಕ್ಕನ್ನು ಚಲಾಯಿಸುತ್ತದೆ.

ಶಾಖೆ: ಹೆಚ್‌ಬಿಆರ್ ಲೇಔಟ್ ಶಾಖೆ

ಕ್ರ. ಸಂ.	ಸಾಲಗಾರರ ಹೆಸರು	ಲಾಕರ್ ವಿಧ	ಲಾಕರ್ ಸಂಖ್ಯೆ	ದಂಡದೊಂದಿಗೆ ಬಾಕಿ ಉಳಿದಿರುವ ಮೊತ್ತ	ಬ್ರೇಕ್ ಓಪನ್ ದಿನಾಂಕ ಮತ್ತು ಸಮಯ
1	**ಮೊಹಮ್ಮದ್ ಅಬ್ದುಲ್ ಸುಭಾನ್,** # 2, 1ನೇ ಮಹಡಿ, 8ನೇ ಮುಖ್ಯರಸ್ತೆ, 1ನೇ ಹಂತ, 2ನೇ ಬ್ಲಾಕ್, ಹೆಚ್‌ಬಿಆರ್ ಲೇಔಟ್, ಕಲ್ಯಾಣ್ ನಗರ, ಅಂಚೆ ಕಚೇರಿ 43, ಬೆಂಗಳೂರು–560051.	A	8959AX0267 (Old No.330)	ರೂ. 11,771/–	03.02.2026 ಮಧ್ಯಾಹ್ನ 3.00
2	**ಜಿಯಾವುಲ್ಲಾ ಎಸ್,** ನಂ.645, 4ನೇ ಮೇನ್, 17ನೇ ಎ ಕ್ರಾಸ್ 2ನೇ ಹಂತ, ಇಂದಿರಾನಗರ ಬೆಂಗಳೂರು–560038.	A	8959AX0277 (Old No.340)	ರೂ. 12,213/–	03.02.2026 ಮಧ್ಯಾಹ್ನ 3.00
3	**ಸ್ನೇಹ ಟೆಕ್ನಾಲಜೀಸ್,** ನಂ.210, 1ನೇ ಕ್ರಾಸ್, ಕಣಜನ ಹಳ್ಳಿ, 80 ಅಡಿ ರಸ್ತೆ, ಹೆಚ್‌ಬಿಆರ್ ಲೇಔಟ್, 3ನೇ ಬ್ಲಾಕ್, ಬೆಂಗಳೂರು–560043.	A	8959AX0054 (Old No.60)	ರೂ. 14,573/–	03.02.2026 ಮಧ್ಯಾಹ್ನ 3.00
4	**ಸೂರ್ಯನಾರಾಯಣ ರೆಡ್ಡಿ & ಜಿ ಭಾಗ್ಯಮ್ಮ,** ಕಿಂ ಚಿಕ್ಕಸಂದರ ಆರ್.ಪ್ರಿನ್ಸೆಸ್ ಎಂಟರ್ ಪ್ರೈಸಸ್, ಬೆಂಗಳೂರು–560043.	A	8959AX0042 (Old No.48)	ರೂ. 14,986/–	03.02.2026 ಮಧ್ಯಾಹ್ನ 3.00
5	**ಗೌರವ್ ಪ್ರಸಾದ್,** 3/939, ನೈಜಾಬಾದ್, ಎಫ್-12 ರಸ್ತೆ, ಕಲ್ಯಾಣ್ ನಗರ, ಹೆಚ್‌ಬಿಆರ್ ಲೇಔಟ್ ದೆಹಲಿ–110005.	A	8959AX0262 (Old No.325)	ರೂ. 12,544/–	03.02.2026 ಮಧ್ಯಾಹ್ನ 3.00

ದಿನಾಂಕ: 28.10.2025
ಸ್ಥಳ: ಬೆಂಗಳೂರು

ಸಹಿ/– ಅಧಿಕೃತ ಅಧಿಕಾರಿ
ಬ್ಯಾಂಕ್ ಆಫ್ ಬರೋಡ

IN THE COURT OF THE HON'BLE PRL. JUNIOR CIVIL JUDGE AT: GODAVARIKHANI
O.S No. 131 OF 2022

BETWEEN: Ms. Gayathri Marketers Represented by Mr. Salkam Ranjith Kumar. Registered business address at 19-3-23/2, 1st Floor, Markandeya Colony, Godavarikhani, Telangana, Pin Code - 505209

Petitioner/ Plaintiff
AND

3S Touch Service Solutions Private Limited Having business offices located at No.53, "Gajendra" 1st A Cross, Cambridge Layout, Shirdi Sai Baba Mandir Road, Halasuru, Bengaluru-560 008, Karnataka, India. And another

...Defendant No 1

NOTICE

Whereas the Petitioner/Plaintiff has instituted as suit against you for SUIT FOR RECOVERY OF MONEY, you are hereby summoned to appear in this court in person or by pleader duly instructed and able to answer all material questions relating to the suit or who shall be accompanied by some person able to answer all such questions **on the 12th day of November of 2025 at 10:30 O Clocks.**

In the forenoon to answer the claim. If you fail to appear before the court on 12day of November 2025, at 05:30 pm the matter will be decided in your absence.

(BY ORDER OF THE COURT)
SURESH KADARI ADVOCATE (COUNSEL FOR PLAINTIFF)
Ph. No: 9849666657

SURESH KADARI
Advocate

THIS IS A PUBLIC ANNOUNCEMENT FOR INFORMATION PURPOSES ONLY. THIS IS NOT A PROSPECTUS ANNOUNCEMENT AND DOES NOT CONSTITUTE AN INVITATION OR OFFER TO ACQUIRE, PURCHASE OR SUBSCRIBE TO SECURITIES. NOT FOR RELEASE, PUBLICATION OR DISTRIBUTION DIRECTLY OR INDIRECTLY OUTSIDE INDIA.

Initial Public Offer of equity shares on the main board of BSE Limited (**"BSE"**) and National Stock Exchange of India Limited (**"NSE"**, and together with BSE, the **"Stock Exchanges"**) in compliance with Chapter II of the Securities and Exchange Board of India. (Issue of Capital and Disclosure Requirements) Regulations, 2018, as amended (**"SEBI ICDR REGULATIONS"**).

(Please scan this QR code to view the RHP)

Orkla INDIA

ORKLA INDIA LIMITED

(Formerly known as MTR Foods Private Limited)

Our Company was originally incorporated as "MTR Foods Limited" as a public company under the Companies Act, 1956, pursuant to a certificate of incorporation dated August 21, 1996, issued by the Registrar of Companies, Karnataka at Bengaluru **("RoC")**. Upon conversion of our Company from a public limited company to a private limited company, pursuant to a resolution passed by the Board of Directors dated June 27, 2008, and a special resolution passed by our Shareholders on August 12, 2008, our name was changed to "MTR Foods Private Limited" and a fresh certificate of incorporation dated November 4, 2008 was issued by the RoC. Thereafter, pursuant to the resolution passed by the Board of Directors dated December 5, 2023 and the Shareholders resolution dated December 12, 2023, our name was changed to "Orkla India Private Limited" and a certificate of incorporation dated January 4, 2024 was issued by the RoC. Upon the conversion of our Company into a public limited company, pursuant to a resolution passed by the Board of Directors dated February 26, 2025, and a Shareholders' resolution dated March 13, 2025, the name of our Company was changed to "Orkla India Limited", and a fresh certificate of incorporation dated April 25, 2025 was issued by the Registrar of Companies, Central Processing Centre. For details of changes in the name and the registered office of our Company, see *"History and Certain Corporate Matters"* on page 223 of the red herring prospectus dated October 23, 2025 (**"RHP"** or **"Red Herring Prospectus"**) filed with the RoC.

Registered Office: No.1. 2nd and 3rd Floor, 100 Feet Inner Ring Road, Ejipura, Ashwini Layout, Vivek Nagar, Bengaluru - 560 047, Karnataka, India
Contact Person: Kaushik Seshadri, Company Secretary and Compliance Officer; **Tel:** +91 80 4081 2100, **E-mail:** investors@orklaindia.com; **Website:** www.orklaindia.com;
Corporate Identity Number: U15136KA1996PLC021007

OUR PROMOTERS: ORKLA ASA, ORKLA ASIA HOLDING AS AND ORKLA ASIA PACIFIC PTE. LTD.

INITIAL PUBLIC OFFER OF UP TO 22,843,004 EQUITY SHARES BEARING FACE VALUE OF ₹1 EACH ("EQUITY SHARES") OF ORKLA INDIA LIMITED ("OUR COMPANY" OR THE "ISSUER") FOR CASH AT A PRICE OF ₹[●] PER EQUITY SHARE (INCLUDING A PREMIUM OF ₹[●] PER EQUITY SHARE) ("OFFER PRICE") AGGREGATING TO ₹[●] MILLION THROUGH AN OFFER FOR SALE (THE "OFFER" OR "OFFER FOR SALE") OF UP TO 20,560,768 EQUITY SHARES BEARING FACE VALUE OF ₹1 EACH AGGREGATING TO ₹[●] MILLION BY ORKLA ASIA PACIFIC PTE. LTD. ("PROMOTER SELLING SHAREHOLDER"), UP TO 1,141,118 EQUITY SHARES BEARING FACE VALUE OF ₹1 EACH AGGREGATING TO ₹[●] MILLION BY NAVAS MEERAN AND UP TO 1,141,118 EQUITY SHARES BEARING FACE VALUE OF ₹1 EACH AGGREGATING TO ₹[●] MILLION BY FEROZ MEERAN (TOGETHER REFERRED TO AS "OTHER SELLING SHAREHOLDERS" AND TOGETHER WITH PROMOTER SELLING SHAREHOLDER REFERRED TO AS THE "SELLING SHAREHOLDERS" AND SUCH EQUITY SHARES OFFERED BY THE SELLING SHAREHOLDERS, THE "OFFERED SHARES"). THE OFFER SHALL CONSTITUTE [●]% OF THE POST-OFFER PAID-UP EQUITY SHARE CAPITAL OF OUR COMPANY.

THE OFFER INCLUDES A RESERVATION OF UP TO 30,000 EQUITY SHARES OF FACE VALUE OF ₹1 EACH, AGGREGATING TO ₹[●] MILLION (CONSTITUTING UP TO [●]% OF THE POST-OFFER PAID-UP EQUITY SHARE CAPITAL), FOR SUBSCRIPTION BY ELIGIBLE EMPLOYEES ("EMPLOYEE RESERVATION PORTION"). THE OFFER LESS THE EMPLOYEE RESERVATION PORTION IS HEREINAFTER REFERRED TO AS THE "NET OFFER". THE OFFER AND THE NET OFFER SHALL CONSTITUTE [●]% AND [●]% OF THE POST-OFFER PAID-UP EQUITY SHARE CAPITAL OF OUR COMPANY, RESPECTIVELY.

Notice to Investors: Addendum to the Red Herring Prospectus dated October 23, 2025 ("Addendum")

This Addendum is in reference to the Red Herring Prospectus dated October 23, 2025 **("RHP")** filed with the RoC, SEBI and the Stock Exchanges in relation to the Offer. In this regard, potential Bidders should note the following:

1. Post the filing of the RHP, our Company has received a notice dated October 23, 2025 from the Office of the District Registrar, Belgaum, Registration and Stamps Department, Government of Karnataka **("District Registrar")**, which was received on October 27, 2025 **("Notice")** alleging a deficiency in payment of stamp duty amounting to ₹132.3 million in relation to the merger of Eastern Condiments with our Company pursuant to the Eastern Condiments Scheme of Amalgamation. Our Company, *vide* its reply dated October 28, 2025 (**"Reply to Notice")**, has denied the allegations. The matter is currently pending.

This Addendum supplements the information in the RHP and this Addendum should be read in conjunction with the RHP. This Addendum does not reflect all the changes that have occurred between the date of the RHP and the date hereof. The information included in the RHP will be suitably updated, including to the extent stated in this Addendum, as may be applicable, in the Prospectus, as and when filed with the RoC, SEBI and the Stock Exchanges.

Capitalized terms used in this Addendum shall, unless the context otherwise requires, have the meaning ascribed to them in the RHP.

BOOK RUNNING LEAD MANAGERS				REGISTRAR TO THE OFFER
ICICI Securities	citi	J.P.Morgan	kotak Investment Banking	KFINTECH
ICICI Securities Limited ICICI Venture House, Appasaheb Marathe Marg, Prabhadevi, Mumbai - 400025, Maharashtra, India **Tel:** +91 22 6807 7100 **E-mail:** orkla.ipo@icicisecurities.com **Investor grievance e-mail:** customercare@icicisecurities.com **Website:** www.icicisecurities.com **Contact person:** Tanya Tiwari / Ashik Joisar **SEBI registration no.:** INM000011179	**Citigroup Global Markets India Private Limited** 1202, 12th Floor, First International Financial Centre, G-Block, C 54 & 55, Bandra Kurla Complex, Bandra (East), Mumbai - 400 098, Maharashtra India **Tel:** + 91 22 6175 9999 **E-mail:** orklaindia.ipo@citi.com **Website:**https://www.citigroup.com/global/about-us/global-presence/india/disclaimer **Investor grievance e-mail:** investors.cgmib@citi.com **Contact person:** Karishma Asrani/ Adarsh Agarwal **SEBI registration no.:** INM000010718	**J.P. Morgan India Private Limited** J.P. Morgan Tower, Off C.S.T Road, Kalina, Santacruz (East), Mumbai - 400 098, Maharashtra, India **Tel.:** +91 22 6157 3000 **E-mail:** orkla_india_ipo@jpmorgan.com **Website:** www.jpmipl.com **Investor grievance e-mail:** investorsmb.jpmipl@jpmorgan.com **Contact person:** Himanshi Arora/ Rishank Chheda **SEBI registration no.:** INM000002970	**Kotak Mahindra Capital Company Limited** 27 BKC, 1st Floor, Plot No. C - 27, "G" Block, Bandra Kurla Complex, Bandra (East), Mumbai - 400 051, Maharashtra, India **Tel:** +91 22 4336 0000 **E-mail:** orklaindia.ipo@kotak.com **Investor grievance e-mail:** kmccredressal@kotak.com **Website:** https://investmentbank.kotak.com **Contact person:** Ganesh Rane **SEBI registration no.:** INM000008704	**KFin Technologies Limited** 301, The Centrium, 3rd Floor, 57, Lal Bahadur Shastri Road, Nav Pada, Kurla (West), Kurla, Mumbai, Maharashtra, India, 400 070. **Tel:** + 91 40 6716 2222/ 1800 309 4001 **E-mail:** orklaindia.ipo@kfintech.com; **Website:** www.kfintech.com **Investor grievance e-mail:** einward.ris@kfintech.com **Contact person:** M. Murali Krishna; **SEBI registration no.:** INR000000221

COMPANY SECRETARY AND COMPLIANCE OFFICER

Kaushik Seshadri
No.1, 2nd and 3rd Floor, 100 Feet Inner Ring Road, Ejipura, Ashwini Layout, Vivek Nagar, Bengaluru - 560 047, Karnataka, India
Tel: +91 80 4081 2100
E-mail: investors@orklaindia.com

Bidders can contact our Company Secretary and Compliance Officer, the Book Running Lead Managers or the Registrar to the Offer in case of any pre-Offer or post-Offer related problems, such as non-receipt of letters of Allotment, non-credit of Allotted Equity Shares in the respective beneficiary account, non-receipt of refund orders or non-receipt of funds by electronic mode, etc. For all Offer-related queries and for redressal of complaints, investors may also write to the Book Running Lead Managers.

For ORKLA INDIA LIMITED
(Formerly known as MTR Foods Private Limited)
On behalf of the Board of Directors
Sd/-
Kaushik Seshadri
Company Secretary and Compliance Officer

Place: Bengaluru
Date: October 28, 2025

ORKLA INDIA LIMITED *(Formerly known as MTR Foods Private Limited)* is proposing, subject to applicable statutory and regulatory requirements, receipt of requisite approvals, market conditions and other considerations, to make an initial public offering of its Equity Shares and has filed the red herring prospectus dated October 23, 2025, with RoC **("RHP")**. The RHP shall be available on the website of SEBI at www.sebi.gov.in, as well as on the websites of the Stock Exchanges i.e. BSE and NSE at www.bseindia.com and www.nseindia.com, respectively, on the website of the Company at www.orklaindia.com and on the websites of the BRLMs, i.e. ICICI Securities Limited, Citigroup Global Markets India Private Limited, J.P. Morgan India Private Limited and Kotak Mahindra Capital Company Limited at www.icicisecurities.com, https://www.citigroup.com/global/about-us/global-presence/india/disclaimer, www.jpmipl.com and https://investmentbank.kotak.com, respectively. Any potential investors should note that investment in Equity Shares involves a high degree of risk and for details relating to such risk, see the section titled *"Risk Factors"* on page 36 of the RHP. Potential Bidders should not rely on the draft red herring prospectus dated June 10, 2025 filed with SEBI and the Stock Exchanges for making any investment decision and should instead rely on the RHP, for making investment decision.

The Equity Shares have not been and will not be registered under the United States Securities Act of 1933, as amended (the **"U.S. Securities Act"**) or any other applicable law of the United States and, unless so registered, may not be offered or sold within the United States except pursuant to an exemption from, or in a transaction not subject to, the registration requirements of the U.S. Securities Act and applicable U.S. state securities laws. Accordingly, the Equity Shares are being offered and sold (a) in the United States to persons reasonably believed to be "qualified institutional buyers" (as defined in Rule 144A under the U.S. Securities Act and referred to in the Red Herring Prospectus as **"U.S. QIBs"**), in transactions exempt from, or not subject to, the registration requirements of the U.S. Securities Act, and (b) outside of the United States in offshore transactions as defined in and in compliance with Regulation S and the applicable laws of the jurisdiction where those offers and sales occur. There will be no public offering in the United States.

ಸಮಾಚಾರ ಸಣ್ಣದಲ್ಲ

ರಾಜಶೇಖರ್‌ಗೆ ಪಿಎಚ್.ಡಿ ಪ್ರದಾನ

ಬೆಂಗಳೂರು: ಕರ್ನಾಟಕ ಸಂಸ್ಕೃತ ವಿವಿಯಲ್ಲಿ ಯೋಜನಾ ಸಹಾಯಕರಾಗಿ ಕಾರ್ಯ ನಿರ್ವಹಿಸುತ್ತಿರುವ ರಾಜಶೇಖರ ಕೆ.ಕೆ ಅವರು ಸಂಸ್ಕೃತ ಭಾಷೆ ಮತ್ತು ಸಾಹಿತ್ಯ ವಿಭಾಗದ ಪ್ರಾಧ್ಯಾಪಕ ಪ್ರೊ.ಸಿ ಪಾಲಯ್ಯ ಮಾರ್ಗದರ್ಶನದಲ್ಲಿ ಮಂಡಿಸಿದ 'ಶ್ರೀ ಸಂಸ್ಕೃತ ಸಾಹಿತ್ಯ ಕ್ಷೇತ್ರೇ ವಿದುಷಃ ಬೊಮ್ಮಲಾಪುರ ವೆಂಕಟರಾಮಭಟ್ಟಸ್ಯ ಯೋಗದಾನಮ್-ಏಕ ಮಧ್ಯಯನಮ್' ವಿಷಯದ ಮಹಾಪ್ರಬಂಧಕ್ಕೆ ಕರ್ನಾಟಕ ಸಂಸ್ಕೃತ ವಿವಿಯು ವಿದ್ಯಾವಾರಿಧಿ (ಪಿಎಚ್.ಡಿ) ಪದವಿ ಪ್ರದಾನ ಮಾಡಿದೆ.

ಬಿಟಿಎಂ ಬಡಾವಣೇಲಿ 12.25 ಕೋಟಿ ಆಸ್ತಿ ವಶ

ಬೆಂಗಳೂರು: ಬಿಡಿಎಯು ಬಿಟಿಎಂ 1ನೇ ಹಂತದಲ್ಲಿ ಕಾರ್ಯಾಚರಣೆ ನಡೆಸಿ 12.25 ಕೋಟಿ ರು. ಮೌಲ್ಯದ ಆಸ್ತಿಯನ್ನು ವಶಪಡಿಸಿಕೊಂಡಿದೆ. ಬೆಂಗಳೂರು ದಕ್ಷಿಣ ತಾಲೂಕು ಬೇಗೂರು ಹೋಬಳಿ ತಾವರೆಕೆರೆ ಗ್ರಾಮದ 6629 ಚದರ ಅಡಿಯ ಪ್ರದೇಶದಲ್ಲಿ ಅನಧಿಕೃತವಾಗಿ ನಿರ್ಮಿಸಲಾಗಿದ್ದ ಶೆಡ್ ಹಾಗೂ ಕಾಂಪೌಂಡ್‌ನ್ನು ತೆರವುಗೊಳಿಸಿ ವಶಪಡಿಸಿಕೊಂಡಿತು. ಈ ಕಾರ್ಯಾಚರಣೆ ಬಿಡಿಎ ಕಾರ್ಯನಿರತ ಪಡೆಯ ಆರಕ್ಷಕ ಅಧೀಕ್ಷಕರು, ಕಾರ್ಯಪಾಲಕ ಅಭಿಯಂತರರು, ದಕ್ಷಿಣ ವಿಭಾಗ, ಸಹಾಯಕ ಕಾರ್ಯಪಾಲಕ ಅಭಿಯಂತರರು ಒಳಗೊಂಡಂತೆ ಸ್ಥಳೀಯ ಪೊಲೀಸ್ ಇಲಾಖೆಯ ಸಹಕಾರದೊಂದಿಗೆ ನೆರವೇರಿಸಲಾಯಿತು.

ಎನ್‌ಆರ್‌ಐ ಫೋರಂಗೆ ಅಶ್ವಿನ್ ನೇಮಕ?

ಬೆಂಗಳೂರು: ಅನಿವಾಸಿ ಭಾರತೀಯರು ಹಾಗೂ ರಾಜ್ಯ ಸರಕಾರದ ನಡುವೆ ಸೇತುವೆಯಾಗಿರುವ ಎನ್‌ಆರ್‌ಐ ಫೋರಂ ಉಪಾಧ್ಯಕ್ಷರಾಗಿ ಅಶ್ವಿನ್ ಕುಮಾರ್ ನೇಮಕಗೊಳ್ಳುವುದು ಬಹುತೇಕ ಖಚಿತ ಎನ್ನಲಾಗಿದೆ. ವಿಧಾನಪರಿಷತ್ ಸದಸ್ಯರಾಗಿ ನಾಮ ನಿರ್ದೇಶನಗೊಂಡ ಆರತಿ ಕೃಷ್ಣ ಅವರ ರಾಜೀನಾಮೆಯಿಂದ ತೆರವಾಗಿರುವ ಈ ಸ್ಥಾನಕ್ಕೆ ಇದೀಗ ಅಶ್ವಿನ್ ಅವರನ್ನು ನೇಮಿಸಲು ಸರಕಾರ ತೀರ್ಮಾನಿಸಿದ್ದು, ಶೀಘ್ರವೇ ಅಧಿಕೃತ ಆದೇಶ ಹೊರಬೀಳುವ ಸಾಧ್ಯತೆಯಿದೆ ಎಂದು ತಿಳಿದು ಬಂದಿದೆ. ಅಶ್ವಿನ್ ಅವರು ಲಂಡನ್ ನಿವಾಸಿಯಾಗಿದ್ದು, ಲಂಡನ್‌ನಲ್ಲಿ ಕನ್ನಡ ಭಾಷೆ, ಸಂಸ್ಕೃತಿಗೆ ಸಂಬಂಧಿಸಿದಂತೆ ಹಲವು ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ಆರತಿ ಕೃಷ್ಣ ಅವರ ಸ್ಥಾನಕ್ಕೆ ಅಶ್ವಿನ್ ಅವರ ನೇಮಕವಾಗಲಿದೆ ಎನ್ನಲಾಗಿದೆ.

ಪ್ರೊ. ರಮೇಶ್ ಅಧಿಕಾರ ಸ್ವೀಕಾರ

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ನೂತನ ಮೌಲ್ಯಮಾಪನ ಕುಲಸಚಿವರಾಗಿ ಬಿಸಿಯು ಗಣಿತಶಾಸ್ತ್ರ ವಿಭಾಗದ ಹಿರಿಯ ಪ್ರಾಧ್ಯಾಪಕ ಪ್ರೊ.ರಮೇಶ್ ಬಿ ಕುಡೇನಟ್ಟಿಯವರು ಮಂಗಳವಾರ ಅಧಿಕಾರ ವಹಿಸಿಕೊಂಡರು. ಪ್ರಭಾರ ಮೌಲ್ಯಮಾಪನ ಕುಲಸಚಿವರಾಗಿದ್ದ ಪ್ರೊ. ಕೆ. ಆರ್.ಜಲಜಾರವರು ಪ್ರೊ.ರಮೇಶ್.ಬಿ. ಕುಡೇನಟ್ಟಿಯವರಿಗೆ ಅಧಿಕಾರ ಹಸ್ತಾಂತರಿಸಿದರು.

ಸುರಂಗ ಮಾರ್ಗಕ್ಕೆ ಚರ್ಚೆ: ಸಿಗದ ಪರಿಹಾರ

ಡಿಸಿಎಂ ಡಿ.ಕೆ.ಶಿವಕುಮಾರ್‌ನ ಭೇಟಿ ಮಾಡಿದ ಸಂಸದ ತೇಜಸ್ವಿ ಸೂರ್ಯ | ಟನಲ್ ರಸ್ತೆ ಪರ್ಯಾಯಕ್ಕೆ ಹಲವು ಸಲಹೆ

ಬೆಂಗಳೂರು: ನಗರದಲ್ಲಿ ನಿರ್ಮಾಣ ಮಾಡಲು ಉದ್ದೇಶಿಸಿರುವ ಸುರಂಗ ಮಾರ್ಗ ಸಂಬಂಧ ಡಿಸಿಎಂ ಡಿ.ಕೆ.ಶಿವಕುಮಾರ್ ಹಾಗೂ ಸಂಸದ ತೇಜಸ್ವಿ ಸೂರ್ಯ ನಡುವೆ ಬಿರುಸಿನ ಚರ್ಚೆ ನಡೆದಿದೆ. ಈ ಸಂಬಂಧ ಮಂಗಳವಾರ ಡಿಸಿಎಂ ಅವರನ್ನು ಭೇಟಿ ಮಾಡಿರುವ ತೇಜಸ್ವಿ ಸೂರ್ಯ ಯೋಜನೆಗೆ ವಿರೋಧ ವ್ಯಕ್ತಪಡಿಸಿ ಹಲವು ಸಲಹೆ ನೀಡಿದ್ದಾರೆ. ಆದರೆ, ತೇಜಸ್ವಿ ಸೂರ್ಯ ಅವರ ಸಲಹೆಗಳಲ್ಲಿ ಪರ್ಯಾಯ ಪರಿಹಾರಗಳು ಕಾಣಲಿಲ್ಲ ಎಂದು ಡಿಸಿಎಂ ಹೇಳಿದ್ದಾರೆ.

ಬೆಂಗಳೂರಿನ ಸದಾಶಿವನಗರದ ನಿವಾಸದಲ್ಲಿ ಡಿಸಿಎಂ ಡಿ.ಕೆ. ಶಿವಕುಮಾರ್‌ರನ್ನು ಸಂಸದ ತೇಜಸ್ವಿ ಸೂರ್ಯ ಭೇಟಿಯಾಗಿ ಮಾತುಕತೆ ನಡೆಸಿದ್ದಾರೆ. ಸುರಂಗ (ಟನಲ್) ರಸ್ತೆ ನಿರ್ಮಾಣ ಮಾಡುವುದಕ್ಕೆ ವಿರೋಧ ವ್ಯಕ್ತಪಡಿಸಿ, ಸಂಸದ ತೇಜಸ್ವಿ ಸೂರ್ಯ ವಾದ ಮಾಡಿ ಮಾತುಕತೆ ನಡೆಸಿದ್ದಾರೆ. ಟನಲ್ ರಸ್ತೆಯ ಬದಲು ಬೇರೆ ಯಾವ ರೀತಿಯ ಕ್ರಮಗಳಿಂದ ಬೆಂಗಳೂರಿನಲ್ಲಿ ಟ್ರಾಫಿಕ್ ಜಾಮ್ ಕಡಿಮೆ ಮಾಡಬಹುದು ಎಂಬ ಬಗ್ಗೆ ತೇಜಸ್ವಿ ಸೂರ್ಯ, ಡಿಸಿಎಂ ಡಿ.ಕೆ.ಶಿವಕುಮಾರ್‌ಗೆ ವಿವರಿಸಿದ್ದಾರೆ.

ಭೇಟಿಯ ಬಳಿಕ ಸೂರ್ಯ ಸುದ್ದಿಗಾರರೊಂದಿಗೆ ಮಾತನಾಡಿ, ಬೆಂಗಳೂರು ಟ್ರಾಫಿಕ್, ಗುಂಡಿ ಸಮಸ್ಯೆ ಬಗ್ಗೆ ವಿಸ್ತೃತವಾದ ಸೌಹಾರ್ದಯುತ ಚರ್ಚೆ ನಡೆದಿದೆ. ನಾನು ಕೊಟ್ಟ ಪ್ರೆಸೆಂಟೇಶನ್ ಡಿಸಿಎಂ ಆಲಿಸಿದ್ದಾರೆ. ಸಾಕಷ್ಟು ವಿಚಾರಗಳ ಬಗ್ಗೆ ಚರ್ಚೆ ನಡೆದಿದ್ದು, ವಿಶೇಷವಾಗಿ ಟನಲ್ ರೋಡ್ ಕುರಿತು ಚರ್ಚೆ ಮಾಡಿದೆ. ನಮ್ಮ ರಸ್ತೆಗಳಲ್ಲಿರುವ ವಾಹನಗಳ ಸಂಖ್ಯೆ ಕಡಿಮೆಯಾಗಬೇಕು. ಶೇ.70 ರಷ್ಟು ಜನ ಸಾರ್ವಜನಿಕ ಸಾರಿಗೆ ಉಪಯೋಗ ಮಾಡುವಂತೆ ಮಾಡಬೇಕು. 300 ಕಿ.ಮೀ ಮೆಟ್ರೋ ಸಂಪರ್ಕ ಮಾಡಿಕೊಡಬೇಕು. 3 ನಿಮಿಷಕ್ಕೊಂದು ಮೆಟ್ರೋ ಸಿಗುವಂತೆ ಮಾಡಬೇಕು. ಜನ ಇರುವ ಜಾಗದಿಂದ 5 ನಿಮಿಷ ನಡೆದುಕೊಂಡು ಹೋದರೇ ಮೆಟ್ರೋ ಸ್ಟೇಷನ್ ಸಿಗಬೇಕು. ಮಾಸ್ಟರ್ ಪ್ಲ್ಯಾನ್‌ನಲ್ಲಿರುವಂತೆ 300 ಕಿ.ಮೀ ಸಬ್ ಅರ್ಬನ್ ರೈಲು ಕೂಡ ಬೆಂಗಳೂರಿಗೆ ಅವಶ್ಯಕತೆ ಇದೆ. ಸಬ್ ಅರ್ಬನ್ ರೈಲು ಮತ್ತು ಮೆಟ್ರೋ ಎರಡು ಸಂಪೂರ್ಣವಾದರೆ 600 ಕಿ.ಮೀ ಸಾರ್ವಜನಿಕ ಸಾರಿಗೆ ಸಿಗುತ್ತೆ. ಇದರಿಂದ ಟ್ರಾಫಿಕ್ ಕಡಿಮೆ ಆಗುತ್ತೆ ಅನ್ನೋ ಸಲಹೆ ಕೊಟ್ಟಿದ್ದೇನೆ ಎಂದರು.

ಡಿಸಿಎಂ ಡಿಕೆ ಶಿವಕುಮಾರ್ ಅವರನ್ನು ಸಂಸದ ತೇಜಸ್ವಿ ಸೂರ್ಯ ಭೇಟಿ ಮಾಡಿದರು.

> ಒಂದು ಕಡೆ ನಿಮ್ಮನ್ನು ಭೇಟಿ ಮಾಡುತ್ತಾರೆ, ಮತ್ತೊಂದೆಡೆ ಪಿಐಎಲ್ ಸಲ್ಲಿಸಿದ್ದಾರೆ. ಬೇಕಿದ್ದರೆ ನ್ಯಾಯಾಲಯವೇ ಸಮಿತಿ ರಚಿಸಿ ಎಲ್ಲಾ ಸ್ಥಳಗಳನ್ನು ಪರಿಶೀಲಿಸಲಿ. ನಾನು ಅಥವಾ ನಮ್ಮ ಅಧಿಕಾರಿಗಳು ಏನಾದರೂ ತಪ್ಪು ಮಾಡಿದ್ದರೆ ತಿಳಿಸಲಿ. ಅದನ್ನು ಸರಿಪಡಿಸಿಕೊಳ್ಳಲು ಸಿದ್ಧರಿದ್ದೇವೆ.
>
> **- ಡಿ.ಕೆ.ಶಿವಕುಮಾರ್** ಡಿಸಿಎಂ

ಆರು ಎಕರೆ ಸ್ವಾಧೀನವಿಲ್ಲ

ಲಾಲ್‌ಬಾಗ್ ನಲ್ಲಿ ಆರು ಎಕರೆ ಭೂಮಿ ಬಳಸಿಕೊಳ್ಳುವುದಿಲ್ಲ. ಲಾಲ್‌ಬಾಗ್‌ನ ಮೂಲೆಯಲ್ಲಿ ಟನಲ್ ರಸ್ತೆ ಪ್ರವೇಶ ಹಾಗೂ ನಿರ್ಗಮನಕ್ಕೆ ಅವಕಾಶ ನೀಡಲಾಗುವುದು. ಇಲ್ಲಿ ಬೇಡ ಎಂದರೆ, ಬೇರೆ ಎಲ್ಲಿ ಇದಕ್ಕೆ ಅವಕಾಶ ಕಲ್ಪಿಸಬಹುದು, ನೀವೇ ಸಲಹೆ ನೀಡಿ ಎಂದು ಕೇಳಿದೆ. ಅದಕ್ಕೆ ಅವರು ಎಲ್ಲಾ ದೇಶಗಳಲ್ಲೂ ಟನಲ್ ರಸ್ತೆ ಬೇಡ ಎನ್ನುತ್ತಿದ್ದಾರೆ ಎಂದರು. ಅದಕ್ಕೆ ನಾನು, ನೀವು ಒಬ್ಬರು ಹೇಳಿದಂತೆ ಕೇಳಲು ಆಗುವುದಿಲ್ಲ ಎಂದು ತೇಜಸ್ವಿ ಸೂರ್ಯಗೆ ಹೇಳಿದೆ ಎಂದು ಡಿಸಿಎಂ ಡಿಕೆಶಿ ಹೇಳಿದರು. ಒಆರ್‌ಆರ್‌ನಲ್ಲಿ ಶೇ.70 ಸಾರ್ವಜನಿಕ ಸಾರಿಗೆ, ಬಿಟಿಆರ್‌ಎಸ್ ಮಾಡಬೇಕು ಎಂದು ಹೇಳಿದರು. ಸಬ್ ಅರ್ಬನ್ ರೈಲುಗಳ ಸಂಖ್ಯೆ ಹೆಚ್ಚಿಸಬೇಕು ಎಂದು ಹೇಳಿದರು. ಅದಕ್ಕೆ ಸರಿ, ಕೇಂದ್ರ ಸರಕಾರದ ಬಳಿ ಹೋಗಿ ಹಣ ಕೇಳೋಣ. ಸೋಮಣ್ಣ ಅವರ ಜತೆ ಚರ್ಚೆ ಮಾಡೋಣ. ಹಣ ಕೊಟ್ಟರೆ ಮಾಡೋಣ. ಇದುವರೆಗೂ ಕೇಂದ್ರ ಸರಕಾರ ಹಣ ನೀಡದ ಕಾರಣ, ಒಂದು ರೈಲನ್ನೂ ಸೇರಿಸಿಲ್ಲ. ಎಲ್ಲಕ್ಕೂ ನಮ್ಮ ಮೇಲೆ ಅವಲಂಬಿತವಾದರೆ ಹೇಗೆ? ಕೇವಲ ಸಲಹೆ ಮಾತ್ರವಲ್ಲ, ಇದಕ್ಕೆ ಪೂರಕವಾಗಿ ಹಣವನ್ನು ತನ್ನಿ ಎಂದು ಹೇಳಿದ್ದೇನೆ ಎಂದರು.

ನನ್ನೊಡನೆ ಬಂದು ಪ್ರಧಾನಿ ಬಳಿ ಹಣ ಕೇಳಲಿ: ಡಿಸಿಎಂ

ಬೆಂಗಳೂರಿನ ಅಭಿವೃದ್ಧಿಗೆ ಕೇಂದ್ರ ಸರಕಾರದಿಂದ ಎಷ್ಟು ಅನುದಾನ ಕೊಡಿಸುತ್ತೀರಿ ಎಂದು ತೇಜಸ್ವಿ ಸೂರ್ಯನನ್ನು ಕೇಳಿದೆ. ನಿಮ್ಮ ಸಂಸದರೆಲ್ಲ ಬನ್ನಿ, ನಾನು ಕೂಡ ಬರುತ್ತೇನೆ. ಪ್ರಧಾನಮಂತ್ರಿಗಳನ್ನು ಭೇಟಿ ಮಾಡಿ ಅನುದಾನಕ್ಕೆ ಒತ್ತಾಯ ಮಾಡೋಣ ಎಂದು ಹೇಳಿದೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.

ಕೆಪಿಸಿಸಿ ಕಚೇರಿಯ ಭಾರತ ಜೋಡೋ ಸಭಾಂಗಣದ ಬಳಿ ಸುದ್ದಿಗಾರರೊಂದಿಗೆ ಮಾತನಾಡಿ, ಬೆಂಗಳೂರಿನ ಸಂಚಾರ ದಟ್ಟಣೆ ನಿವಾರಣೆಗೆ ಸಂಸದ ತೇಜಸ್ವಿ ಸೂರ್ಯ ಅವರು ಕೊಟ್ಟ ಸಲಹೆಗಳಲ್ಲಿ ಪರ್ಯಾಯ ಪರಿಹಾರಗಳು ಕಾಣಲಿಲ್ಲ. ಆದರೂ ಸಲಹೆಗಳನ್ನು ಗೌರವಿಸುತ್ತೇನೆ. ಅವುಗಳನ್ನು ಪರಿಶೀಲಿಸಲು ಅಧಿಕಾರಿಗಳಿಗೆ ಸೂಚಿಸುತ್ತೇನೆ ಎಂದರು.

ತೇಜಸ್ವಿ ಸೂರ್ಯ ಅವರು ಕೆಲವು ಸಲಹೆ ನೀಡಿದ್ದಾರೆ. ಟನಲ್ ರಸ್ತೆಯಲ್ಲಿ ಕೇವಲ ಕಾರುಗಳಿಗೆ ಅನುಕೂಲವಾಗುತ್ತದೆ. ಮೆಟ್ರೋ ಮಾರ್ಗ ಕೂಡ ವಿಸ್ತರಿಸಬೇಕು ಎಂದು ಹೇಳುತ್ತಿದ್ದಾರೆ. ಇಲ್ಲಿ ಮೆಟ್ರೋ ಸೇರಿಸಲು ನಮ್ಮ ತಕರಾರು ಇಲ್ಲ. ಇದರ ಜೊತೆಗೆ ಅವರು ನೀಡಿರುವ ಇತರೆ ಸಲಹೆಗಳನ್ನು ಅಧಿಕಾರಿಗಳ ಜತೆ ಚರ್ಚೆ ಮಾಡುತ್ತೇನೆ. ಇನ್ನು ಬೆಂಗಳೂರಿನಲ್ಲಿ ಖಾಸಗಿ ಬಸ್ ಗಳು, ಸಣ್ಣ ಬಸ್ ಗಳಿಗೆ ಅವಕಾಶ ನೀಡಿ ಎಂದು ಹೇಳುತ್ತಿದ್ದಾರೆ. ಈಗಾಗಲೇ ಬೆಂಗಳೂರು ರಸ್ತೆಗಳಲ್ಲಿ ವಾಹನಗಳ ಸಂಖ್ಯೆ ಹೆಚ್ಚಾಗಿದೆ. ಹೀಗಾಗಿ ಖಾಸಗಿ ಬಸ್ ಗಳಿಗೆ ಅವಕಾಶ ನೀಡಿದರೆ ಏನು ಉಪಯೋಗ ಎಂದು ಚರ್ಚೆ ಮಾಡಬೇಕಿದೆ ಎಂದರು.

ರಮಣಶ್ರೀ ಶರಣ ಪ್ರಶಸ್ತಿ-2025 ಘೋಷಣೆ

ನ.17ರಂದು ಬೆಂಗಳೂರಿನ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ

ಡಾ.ಜಯಾ ರಾಜಶೇಖರ | ಡಾ.ವಿಜಯಶ್ರೀ ಸಬರದ | ಡಾ. ಉಷಾದೇವಿ ಉ. ಹಿರೇಮಠ | ಪ್ರೊ.ಹೆಚ್. ಲಿಂಗಪ್ಪ | ಎಂ.ಬಿ. ಸಂತೋಷ್ | ಡಾ.ಜಯದೇವಿ ಜಂಗಮಶೆಟ್ಟಿ | ರಾಜು ಎಮ್ಮಿಗನೂರು | ಪಿನಾಕಪಾಣಿ | ಶರಣ ಬಸವ ಅಂಗಡಿ | ಪ್ರಿಯಾಂಕಾ ಪ್ರವೀಣ

ಬೆಂಗಳೂರು: ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಮತ್ತು ರಮಣಶ್ರೀ ಪ್ರತಿಷ್ಠಾನದ ವತಿಯಿಂದ ನೀಡಲಾಗುತ್ತಿರುವ ರಮಣ ಶ್ರೀ ಶರಣ ಪ್ರಶಸ್ತಿಯನ್ನು ಘೋಷಿಸಲಾಗಿದೆ.

ರಮಣಶ್ರೀ ಜೀವಮಾನ ಸಾಧನೆಯ ಪ್ರಶಸ್ತಿಗೆ ಡಾ. ಜಯಾ ರಾಜಶೇಖರ, ಹಿರಿಯ ಶ್ರೇಣಿ ಪ್ರಶಸ್ತಿಯಾದ ಶರಣ ಸಾಹಿತ್ಯ ಸಂಶೋಧನೆಗೆ ಡಾ. ವಿಜಯಶ್ರೀ ಸಬರದ, ವಚನ ರಚನೆ ಪ್ರೊ.ಎಚ್.ಲಿಂಗಪ್ಪ, ವಚನ ಸಂಗೀತ ಡಾ. ಜಯದೇವಿ ಜಂಗಮಶೆಟ್ಟಿ, ಶರಣ ಸಂಸ್ಕೃತಿ ಪ್ರಸಾರ ವಚನಜ್ಯೋತಿ ಬಳಗ ಆಯ್ಕೆಯಾಗಿದ್ದು, ಉತ್ತೇಜನ ಪ್ರಶಸ್ತಿಗೆ ಡಾ. ಉಷಾದೇವಿ ಉ ಹಿರೇಮಠ, ಎಂ.ಬಿ ಸಂತೋಷ್, ರಾಜು ಎಮ್ಮಿಗನೂರು, ಸರಗನಾಡು ಪ್ರಕಾಶನರನ್ನು ಆಯ್ಕೆ ಮಾಡಲಾಗಿದೆ. ವಚನ ಸಂಗೀತ ಕ್ಷೇತ್ರದ ಉತ್ತೇಜನ ವಿಶೇಷ ಪುರಸ್ಕಾರಕ್ಕೆ ಪ್ರಿಯಾಂಕಾ ಪ್ರವೀಣ ಹಾವೇರಿಯವರನ್ನು ಆಯ್ಕೆ ಮಾಡಲಾಗಿದೆ.

ಪ್ರಶಸ್ತಿ ಪ್ರದಾನ ಸಮಾರಂಭವು ನ.17ರಂದು ಸೋಮವಾರ ಬೆಳಗ್ಗೆ 11 ಗಂಟೆಗೆ ರಿಚ್‌ಮಂಡ್ ಸರ್ಕಲ್ ಬಳಿಯ ಹೋಟೆಲ್ ರಮಣಶ್ರೀ ರಿಚ್‌ಮಂಡ್ ಸಭಾಂಗಣದಲ್ಲಿ ನಡೆಯಲಿದ್ದು, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ. ಸಿ. ಸೋಮಶೇಖರ, ರಮಣಶ್ರೀ ಪ್ರತಿಷ್ಠಾನದ ಅಧ್ಯಕ್ಷರಾದ ನಾಡೋಜ ಎಸ್. ಷಡಕ್ಷರಿ, ಗೊ.ರು. ಚನ್ನಬಸಪ್ಪ, ಡಾ. ಮನು ಬಳಿಗಾರ, 'ವಿಶ್ವವಾಣಿ' ಪತ್ರಿಕೆ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಮತ್ತು 'ಕನ್ನಡ ಪ್ರಭ' ಪತ್ರಿಕೆ ಪ್ರಧಾನ ಸಂಪಾದಕ ರವಿ ಹೆಗಡೆಯವರನ್ನೊಳಗೊಂಡ ಆಯ್ಕೆ ಸಮಿತಿಯು ಈ ಆಯ್ಕೆಯನ್ನು ಅಂತಿಮಗೊಳಿಸಿದೆ ಎಂದು ಪ್ರಕಟಣೆ ತಿಳಿಸಿದೆ.

ದತ್ತಿ ಪ್ರಶಸ್ತಿಗೆ ಪತ್ರಕರ್ತರಿಂದ ಲೇಖನ ಆಹ್ವಾನ

ಬೆಂಗಳೂರು: ಕರ್ನಾಟಕ ಮಾಧ್ಯಮ ಅಕಾಡೆಮಿ 2025ನೇ ಸಾಲಿನ ವಿವಿಧ ದತ್ತಿನಿಧಿ ಪ್ರಶಸ್ತಿಗಳಿಗಾಗಿ ಪತ್ರಕರ್ತರಿಂದ ಲೇಖನಗಳನ್ನು ಆಹ್ವಾನಿಸಿದೆ.

ವಿವಿಧ ಮಾಧ್ಯಮ ಸಂಸ್ಥೆಗಳು ದತ್ತಿನಿದಿ ಪ್ರಶಸ್ತಿಗಳನ್ನು ಸ್ಥಾಪಿಸಿದ್ದು, ಬೆಂಗಳೂರಿನ ಅಭಿಮಾನಿ ಪ್ರಕಾಶನ ಸಂಸ್ಥೆಯು ರಾಜ್ಯ ಮತ್ತು ಜಿಲ್ಲಾಮಟ್ಟದ ಕನ್ನಡ ಪತ್ರಿಕೆಗಳಲ್ಲಿ ಸಾಮಾಜಿಕ ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ಪ್ರತಿಬಿಂಬಿಸುವ ಲೇಖನ-ವರದಿಗಳಿಗೆ ಅಭಿಮಾನಿ ಪ್ರಶಸ್ತಿ, ಮೈಸೂರಿನ ಮೈಸೂರು ದಿಗಂತ ಪತ್ರಿಕಾ ಸಂಸ್ಥೆಯು ಮಾನವೀಯ ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ಪ್ರತಿಬಿಂಬಿಸುವ ಲೇಖನ-ವರದಿಗಳಿಗೆ ಮೈಸೂರು ದಿಗಂತ ಪ್ರಶಸ್ತಿ, ಬೆಂಗಳೂರಿನ ಅಭಿಮನ್ಯು ಪತ್ರಿಕೆ ಸಂಸ್ಥೆಯು ದಮನಿತ ಸಮುದಾಯಗಳ ಪರ ದನಿಯಾದ ಅತ್ಯುತ್ತಮ ಲೇಖನ/ಅಂಕಣ/ಸಂಪಾದಕೀಯ/ಪರಿಣಾಮಕಾರಿ ವರದಿಗೆ ಅಭಿಮನ್ಯು ಪ್ರಶಸ್ತಿ, ಬೆಂಗಳೂರಿನ ಪ್ರಜಾ ಸಂದೇಶ ಪತ್ರಿಕಾ ಸಂಸ್ಥೆಯು ಶೋಷಣೆಯನ್ನು ಪರಿಣಾಮಕಾರಿಯಾಗಿ ಬಿಂಬಿಸುವ ಲೇಖನಕ್ಕೆ ಪ್ರಜಾ ಸಂದೇಶ ದತ್ತಿ ಪ್ರಶಸ್ತಿಗಳನ್ನು ಸ್ಥಾಪಿಸಿವೆ. ಈ ದತ್ತಿ ಪ್ರಶಸ್ತಿಗಳು ತಲಾ 10,000 ರು. ನಗದು ಬಹುಮಾನ ಒಳಗೊಂಡಿವೆ.

ಆಸಕ್ತ ಪತ್ರಕರ್ತರು 2025ರ ಜನವರಿ 1 ರಿಂದ 2025ರ ಅ.25ರ ವರೆಗೆ ಪ್ರಕಟವಾಗಿರುವ ತಮ್ಮ ಒಂದು ಲೇಖನ - ವರದಿಯನ್ನು ಕಳುಹಿಸಬಹುದು. ಕನ್ನಡ ದೈನಿಕ- ಟಿವಿ-ವಾಹಿನಿ, ವಾರ ಪತ್ರಿಕೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪತ್ರಕರ್ತರು ಹೆಸರು (ಬೈಲೈನ್) ಬರೆದಿರುವ ವರದಿ ಲೇಖನಗಳಿಗೆ ಮಾತ್ರ ಅವಕಾಶ. ಲೇಖನ-ವರದಿಗಳಲ್ಲಿ ಹೆಸರು (ಬೈಲೈನ್) ಪ್ರಕಟವಾಗದಿದ್ದಲ್ಲಿ ಸಂಬಂಧಿಸಿದ ಪತ್ರಿಕೆಯ ಸಂಪಾದಕರಿಂದ ದೃಢೀಕರಣ ಪತ್ರವನ್ನು ಪಡೆದು ಕಳುಹಿಸಬೇಕು. ಲೇಖನ ವರದಿಗಳ ಲಕೋಟೆಯಲ್ಲಿ ಯಾವ ಪ್ರಶಸ್ತಿಗಾಗಿ ಅರ್ಜಿ ಸಲ್ಲಿಸುತ್ತಿರುವುದು ಎಂಬುದನ್ನು ಅಭಿಮಾನಿ ಪ್ರಶಸ್ತಿ- 2025, 'ಮೈಸೂರು ದಿಗಂತ ಪ್ರಶಸ್ತಿ-2025', ಅಭಿಮನ್ಯು ಪ್ರಶಸ್ತಿ-2025 ಹಾಗೂ 'ಪ್ರಜಾ ಸಂದೇಶ ದತ್ತಿ ಪ್ರಶಸ್ತಿ-2025 ಎಂದು ಸ್ಪಷ್ಟವಾಗಿ ಬರೆದು ಲೇಖನಗಳನ್ನು ನ.12ರ ಒಳಗಾಗಿ ಕಾರ್ಯದರ್ಶಿ, ಕರ್ನಾಟಕ ಮಾಧ್ಯಮ ಅಕಾಡೆಮಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಕೇಂದ್ರ, ಡಾ. ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು-560001 ಇವರಿಗೆ ಅಂಚೆ ಮೂಲಕ ಅಥವಾ ಖುದ್ದಾಗಿ ತಲುಪಿಸಬಹುದು.

ವಿದ್ಯುತ್ ಮೀಟರ್‌ನ ಹೊಸ ಸಾಧನ ಪರಿಚಯ

ಬೆಂಗಳೂರು: ಇಂಧನ ಇಲಾಖೆಯು ಹಸ್ತಚಾಲಿತ ಮೀಟರ್ ಓದುವ ಸಾಧನಗಳಿಂದ ಆಪ್ಟಿಕಲ್ ಪೋರ್ಟ್ ಪ್ರೋಬ್ ಸಾಧನಗಳಿಗೆ ಬದಲಾಯಿಸಲು ಮುಂದಾಗಿದ್ದು, ಗ್ರಾಹಕರು ಸುಲಭವಾಗಿ ಲಭ್ಯವಾಗುವ ಸ್ಥಳಗಳಲ್ಲಿ ಮೀಟರ್‌ಗಳನ್ನು 5 ಅಡಿ ಎತ್ತರದಲ್ಲಿ ಸ್ಥಾಪಿಸಲು ಸೂಚನೆ ನೀಡಿದೆ.

ಈ ಕುರಿತು ಹಿರಿಯ ಅಧಿಕಾರಿಯೊಬ್ಬರು ಮಾತನಾಡಿ, ಆಗಸ್ಟ್-ಸೆಪ್ಟೆಂಬರ್‌ನಲ್ಲಿ ಹೊಸ ಸಾಧನ ಪರಿಚಯಿಸಲಾಗಿದ್ದು, ಇವುಗಳನ್ನು ಕೇಬಲ್ ಬಳಸಿ ಸ್ಪಾಟ್ ಬಿಲ್ಲಿಂಗ್ ಮೀಟರ್‌ಗಳಿಗೆ ಸಂಪರ್ಕಿಸಲಾಗುತ್ತದೆ. ನಂತರ ಮೀಟರ್ ರೀಡರ್ ಮೀಟರ್‌ನ ಆರ್‌ಆರ್ ಸಂಖ್ಯೆಯನ್ನು ನಮೂದಿಸುತ್ತಾರೆ. ವಿದ್ಯುತ್ ಬಳಕೆಯ ಎಲ್ಲಾ ವಿವರಗಳು ಸ್ವಯಂಚಾಲಿತವಾಗಿ ಉತ್ಪತ್ತಿಯಾಗುತ್ತವೆ.

ಈ ಹೊಸ ಮೀಟರ್ ಪರಿಚಯಿಸಿದ ಬಳಿಕ ಅನೇಕ ಗ್ರಾಹಕರು ತಮ್ಮ ಮೀಟರ್‌ಗಳು ಎತ್ತರದಲ್ಲಿ ಅಥವಾ ಪ್ರವೇಶಿಸುವಿಕೆ ಕಷ್ಟಕರವಾದ ಸ್ಥಳಗಳಲ್ಲಿ ಮತ್ತು ಕೇಬಲ್‌ಗಳನ್ನು ರೀಡರ್‌ಗೆ ಸಂಪರ್ಕಿಸಲು ಸಾಧ್ಯವಾಗದ ಸ್ಥಳಗಳಲ್ಲಿ ಅಥವಾ ಮೀಟರ್‌ಗಳು ತುಂಬಾ ದೂರದಲ್ಲಿವೆ ಎಂದು ದೂರುಗಳನ್ನು ಹೇಳಿದ್ದರು. ಆದ್ದರಿಂದ ನಿಖರವಾದ ನಿರ್ದಿಷ್ಟ ಎತ್ತರ ಮತ್ತು ಸ್ಥಳಗಳನ್ನು ವಿವರಿಸಲಾಗಿದೆ ಎಂದು ಹೇಳಿದರು.

ಈ ಹಿಂದಿನ ಮೀಟರ್ ರೀಡಿಂಗ್ ಸಾಧನಗಳೊಂದಿಗೆ, ಸಿಬ್ಬಂದಿ 10 ಮೀಟರ್ ಓದಲು ಅರ್ಧ ಗಂಟೆ ಬೇಕಿತ್ತು. ಆದರೀಗ ಅದೇ ಸಂಖ್ಯೆಯನ್ನು 10 ನಿಮಿಷಗಳಲ್ಲಿ ಓದಬಹುದು ಮತ್ತು ಬಿಲ್‌ಗಳನ್ನು ನೀಡಬಹುದು. ಗ್ರಾಹಕರು ಮೀಟರ್ ಸ್ಥಳವನ್ನು ಬದಲಾಯಿಸುವ ವೆಚ್ಚವನ್ನು ಭರಿಸಬೇಕಾಗುತ್ತದೆ. ಇಲಾಖೆಯು ಸ್ಥಳವನ್ನು ಆಯ್ಕೆ ಮಾಡುವಲ್ಲಿ ಮತ್ತು ಅನುಸ್ಥಾಪನೆಯ ಸಮಯದಲ್ಲಿ ಯಾವುದೇ ದೋಷಗಳಿಲ್ಲ ಎಂದು ಖಚಿತಪಡಿಸಿಕೊಳ್ಳಲು ಮಾತ್ರ ಸಹಾಯ ಮಾಡುತ್ತದೆ. ಹೊಸ ಮೀಟರ್ ವ್ಯವಸ್ಥೆಯಿಂದ ಬಿಲ್ ಗಳಲ್ಲಿ ಯಾವುದೇ ದೋಷಗಳು ಬರುವುದಿಲ್ಲ. ಹಸ್ತಚಾಲಿತ ಮೀಟರ್‌ಗಳನ್ನು ಡಿಜಿಟಲ್ ಮೀಟರ್‌ಗಳಿಗೆ ಬದಲಾಯಿಸುವ ಕೆಲಸವೂ ನಡೆಯುತ್ತಿದೆ. ಸಂಖ್ಯೆ ಕಡಿಮೆ, ಆದರೆ ಅವು ಕಾರ್ಯನಿರ್ವಹಿಸುತ್ತಲೇ ಇರುತ್ತವೆ ಎಂದು ಅಧಿಕಾರಿಗಳು ಹೇಳುತ್ತಾರೆ.

ಮಕ್ಕಳಲ್ಲಿ ನೋವು ನಿರ್ವಹಣೆ ಬಗ್ಗೆ ಸಂಶೋಧಕರು ಮಾಹಿತಿ

ಇಂದಿರಾಗಾಂಧಿ ಆಸ್ಪತ್ರೆಯಲ್ಲಿ ಕಾರ್ಯಾಗಾರ

ಬೆಂಗಳೂರು: ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯ ವತಿಯಿಂದ 'ಚಿಕಿತ್ಸೆಯಲ್ಲಿ ಮಕ್ಕಳ ನೋವು ನಿರ್ವಹಣೆ' ಕುರಿತು ಆಸ್ಪತ್ರೆಯ ಸಭಾಂಗಣದಲ್ಲಿ ಕಾರ್ಯಾಗಾರ ನಡೆಯಿತು.

ಈ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ತಜ್ಞರು, ವೈದ್ಯರು ಮತ್ತು ಸಂಶೋಧಕರುಭಾಗವಹಿಸಿದ್ದರು. ಮಕ್ಕಳ ಆರೋಗ್ಯದ ಬಗ್ಗೆ ಕಾಳಜಿ ಇರುವ ಅಂಶಗಳನ್ನು ಚರ್ಚಿಸಲಾಯಿತು. ರೋಗ ಪೀಡಿತ ಮಕ್ಕಳಿಗೆ ನಿರ್ಣಾಯಕ ಅಂಶಗಳಲ್ಲಿ ಒಂದಾದ ಮಕ್ಕಳಲ್ಲಿ ನೋವಿನ ನಿರ್ವಹಣೆ ಕುರಿತು ಮಾಹಿತಿ ಹಂಚಿಕೊಳ್ಳಲಾಯಿತು.

ಈ ಕಾರ್ಯಕ್ರಮವು ಹೆಚ್ಚು ಸಂವಾದಾತ್ಮಕ ವೈಜ್ಞಾನಿಕ ವಿಷಯಗಳು, ತಜ್ಞರ ಉಪನ್ಯಾಸಗಳು, ಪ್ರಾಯೋಗಿಕ ವ್ಯವಸ್ಥೆ ಆಧಾರಿತ ಚರ್ಚೆಗಳು ಮತ್ತು ನೈಜ-ಪ್ರಪಂಚದ ಕ್ಲಿನಿಕಲ್ ಸವಾಲುಗಳ ಮೇಲೆ ಕೇಂದ್ರೀಕರಿಸುವ ಫಲಕ ಸಂವಹನಗಳನ್ನು ಒಳಗೊಂಡಿತ್ತು. ಈ ಅವಧಿಗಳು ಅರಿವಳಿಕೆ, ಮಲ್ಟಿಮೋಡಲ್ ನೋವು ನಿವಾರಕ, ಪ್ರಾದೇಶಿಕ ವ್ಯವಸ್ಥೆ, ಔಷಧೇತರ ಮಧ್ಯಸ್ಥಿಕೆಗಳು ಮತ್ತು ಮಕ್ಕಳಲ್ಲಿ ನೋವು ನಿರ್ವಹಣೆಯ ಮಾನಸಿಕ, ಸಾಮಾಜಿಕ ಆಯಾಮಗಳಿಗೆ ಸಮಕಾಲೀನ ವಿಧಾನಗಳನ್ನು ಕುರಿತು ಅವಲೋಕಿಸಲಾಯಿತು. ಭಾಗವಹಿಸಿದ್ದ ಪ್ರತಿನಿಧಿಗಳು ಮಕ್ಕಳ ನೋವು ಔಷಧದಲ್ಲಿ ವಿಶ್ವಪ್ರಸಿದ್ಧ ಪ್ರವರ್ತಕರೊಂದಿಗೆ ನೇರವಾಗಿ ತೊಡಗಿಸಿಕೊಳ್ಳಲು ಅನನ್ಯ ಅವಕಾಶವನ್ನು ಹೊಂದಿದ್ದರು. ಈ ಸಂವಾದಗಳು ಅಂತಾರಾಷ್ಟ್ರೀಯ ಅತ್ಯುತ್ತಮ ಅಭ್ಯಾಸಗಳು, ಅತ್ಯಾಧುನಿಕ ಸಂಶೋಧನೆ ಮತ್ತು ನೋವು ನಿರ್ವಹಣೆಯನ್ನು ದೈನಂದಿನ ಮಕ್ಕಳ ಆರೈಕೆಯಲ್ಲಿ ಸಂಯೋಜಿಸುವ ನವೀನ ತಂತ್ರಗಳ ಬಗ್ಗೆ ಅಪರೂಪದ ಒಳನೋಟಗಳನ್ನು ನೀಡಿತು.

ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ ವತಿಯಿಂದ ನಡೆದ ಕಾರ್ಯಾಗಾರದಲ್ಲಿ ಸಂಸ್ಥೆಯ ನಿರ್ದೇಶಕ ಡಾ.ಸಂಜಯ್ ಸೇರಿದಂತೆ ಮಕ್ಕಳ ತಜ್ಞರು ಭಾಗಹಿಸಿದ್ದರು.

ಮಕ್ಕಳ ಆರೈಕೆಗೆ ಆಸ್ಪತ್ರೆ ಮುಂಚೂಣಿ

ಶಿಕ್ಷಣ, ನಾವೀನ್ಯತೆ ಮತ್ತು ಸಹಯೋಗದ ಮೂಲಕ ಮಕ್ಕಳ ಅರಿವಳಿಕೆ ಮತ್ತು ನೋವು ನಿರ್ವಹಣೆಯನ್ನು ಮುಂದುವರಿಸಲು ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ ಮುಂಚೂಣಿಯಲ್ಲಿರುವ ಬಗ್ಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು. ಕರ್ನಾಟಕದ ಪ್ರಮುಖ ತೃತೀಯ ಆರೈಕೆ ಮಕ್ಕಳ ಸಂಸ್ಥೆಯಾಗಿ, ಆಸ್ಪತ್ರೆ ಆರೋಗ್ಯ ಸೇವೆಯ ಎಲ್ಲಾ ಅಂಶಗಳಲ್ಲಿ ಮಕ್ಕಳ ಸೌಕರ್ಯ, ಸುರಕ್ಷತೆ ಮತ್ತು ಚಿಕಿತ್ಸೆ ವ್ಯವಸ್ಥೆ ವಿಸ್ತರಿಸುವಲ್ಲಿ ಬದ್ಧವಾಗಿದೆ.

ಸ್ವೀಕರಿಸಿದ ಅಹವಾಲುಗಳಿಗೆ ತಕ್ಷಣ ಪರಿಹಾರ ಕೊಡಿ

ಪಶ್ಚಿಮ ನಗರ ಪಾಲಿಕೆ ಆಯುಕ್ತ ಡಾ.ರಾಜೇಂದ್ರ ಕೆ.ವಿ. ಅಧಿಕಾರಿಗಳಿಗೆ ಸೂಚನೆ

ಬೆಂಗಳೂರು: ಬೆಂಗಳೂರ ನಡಿಗೆ ಕಾರ್ಯಕ್ರಮದಲ್ಲಿ ಸ್ವೀಕರಿಸಲಾದ ಸಾರ್ವಜನಿಕರ ಅಹವಾಲುಗಳನ್ನು ತಕ್ಷಣವೇ ಪರಿಹರಿಸಲು ಬೆಂಗಳೂರು ಪಶ್ಚಿಮ ನಗರ ಪಾಲಿಕೆ ಆಯುಕ್ತ ಡಾ.ರಾಜೇಂದ್ರ ಕೆ.ವಿ. ರವರು ಅಧಿಕಾರಿಗಳಿಗೆ ಸೂಚಿಸಿದರು.

ಮಂಗಳವಾರ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿ, ಅ.25ರಂದು ಹೇರೋಹಳ್ಳಿಯ ಗಾಂಧಿ ಉದ್ಯಾನವನದಲ್ಲಿ ನಡೆದ ಬೆಂಗಳೂರ ನಡಿಗೆ ಕಾರ್ಯಕ್ರಮದಲ್ಲಿ ಸ್ವೀಕರಿಸಲಾದ ಅಹವಾಲುಗಳ ಪೈಕಿ ಬಹುತೇಕವನ್ನು ಸ್ಥಳದಲ್ಲೇ ಪರಿಹರಿಸಲಾಗಿದ್ದು, ಉಳಿದ ಅಹವಾಲುಗಳನ್ನು ತಕ್ಷಣ ಕ್ರಮ ಕೈಗೊಂಡು ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಕಂದಾಯ, ಆರೋಗ್ಯ, ಕಾಮಗಾರಿ, ಕಲ್ಯಾಣ, ಜಾಹಿರಾತು, ಲೆಕ್ಕಪತ್ರ, ಆಡಳಿತ, ನಗರ ಯೋಜನೆ,ಆಸ್ತಿ ಹಾಗೂ ಕಾನೂನು ಸೇರಿದಂತೆ ಅಗತ್ಯ ಇಲಾಖೆಗಳ ಕಚೇರಿಗಳನ್ನು ಸ್ಥಾಪಿಸಿ, ವ್ಯವಸ್ಥಿತ ಆಡಳಿತ ವ್ಯವಸ್ಥೆ ರೂಪಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಪಾಲಿಕೆಯ ಮಿತಿಗೆ ಒಳಪಟ್ಟ ಕಡತಗಳನ್ನು ಕೂಡಲೇ ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳಿಗೆ ಹಸ್ತಾಂತರಿಸುವಂತೆ, ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದರು.

ಪಶ್ಚಿಮ ನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಇ-ಆಫೀಸ್ ಸ್ಥಾಪಿಸಿ, ಕಾಗದದ ದಾಖಲೆಗಳನ್ನು ಡಿಜಿಟಲೀಕರಿಸಿ, ಪಾರದರ್ಶಕತೆಯನ್ನು ಪ್ರೋತ್ಸಾಹಿಸಬೇಕು ಹಾಗೂ ನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಅಭಿಲೇಖಾಲಯ ಸ್ಥಾಪನೆಗೆ ಸೂಕ್ತ ಜಾಗವನ್ನು ಗುರುತಿಸಿ, ದಾಖಲೆಗಳ ಸ್ಕ್ಯಾನಿಂಗ್ ವ್ಯವಸ್ಥೆ ರೂಪಿಸಿ, ದಾಖಲೆಗಳ ಸ್ಕ್ಯಾನಿಂಗ್ ಕಾರ್ಯವನ್ನು ತ್ವರಿತವಾಗಿ ನಡೆಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದರು. ನಗರ ಪಾಲಿಕೆಯ ಮಟ್ಟದಲ್ಲಿ ಅಧಿಕಾರಿಗಳಿಗೆ ಸಮರ್ಪಕವಾಗಿ ಕಾರ್ಯವನ್ನು ಹಂಚಿಕೆ ಮಾಡುವುದರೊಂದಿಗೆ, ಸೂಕ್ತ ರೀತಿಯಲ್ಲಿ ಕಾರ್ಯ ನಿರ್ವಹಿಸಬೇಕು. ಅಲ್ಲದೇ, ಪರಿಣಾಮಕಾರಿಯಾಗಿ ತೆರಿಗೆ ಸಂಗ್ರಹ ಕಾರ್ಯವನ್ನು ನಡೆಸಿ, ಜಿಬಿಎ ನೀಡಲಾದ ತೆರಿಗೆ ಸಂಗ್ರಹದ ಗುರಿಯನ್ನು ತಲುಪುವಂತೆ ನೋಡಿಕೊಳ್ಳಲು ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ಅಪರ ಆಯುಕ್ತರಾದ ದಿಗ್ವಿಜಯ್ ಬೋಡ್ಕೆ, ಅಪರ ಆಯುಕ್ತರು (ಕಂದಾಯ) ಮಂಜುನಾಥ್ ಸ್ವಾಮಿ ಜಿ ಎನ್, ಜಂಟಿ ಆಯುಕ್ತರಾದ ಆರತಿ ಆನಂದ್ ಹಾಗೂ ಸಂಗಪ್ಪ, ಮುಖ್ಯ ಅಭಿಯಂತರರು, ಹಾಗೂ ಎಲ್ಲಾ ಇಲಾಖೆ ಮುಖ್ಯಸ್ಥರುಗಳು ಇದ್ದರು.

ಪಶ್ಚಿಮ ನಗರ ಪಾಲಿಕೆ ಆಯುಕ್ತ ಡಾ.ರಾಜೇಂದ್ರ ಕೆ.ವಿ. ಅವರು ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆ ನಡೆಸಿದರು.

ತ್ವರಿತವಾಗಿ ರಸ್ತೆ ಗುಂಡಿ ಮುಚ್ಚಿ

ನಗರ ಪಾಲಿಕೆಯ ವ್ಯಾಪ್ತಿಯಲ್ಲಿನ ರಸ್ತೆ ಗುಂಡಿಗಳನ್ನು ತ್ವರಿತವಾಗಿ ಮುಚ್ಚಿ, ನಾಗರಿಕರಿಗೆ ಅನುಕೂಲವಾಗುವಂತಹ ರಸ್ತೆ ಮಾರ್ಗ ನಿರ್ಮಿಸಬೇಕು. ಜತೆಗೆ ಜಂಕ್ಷನ್‌ಗಳ ಅಭಿವೃದ್ಧಿ ಕುರಿತಂತೆ ಅಧಿಕಾರಿಗಳೊಂದಿಗೆ ಚರ್ಚಿಸಿ, ಜಂಕ್ಷನ್ ಗಳ ಅಭಿವೃದ್ಧಿಗೆ ಸೂಕ್ತ ಕ್ರಮ ಕೈಗೊಳ್ಳಬೇಕು. ನಗರ ಪಾಲಿಕೆ ವ್ಯಾಪ್ತಿಯಲ್ಲಿ ನಗರ ನೈರ್ಮಲ್ಯಕ್ಕೆ ಆದ್ಯತೆ ನೀಡಲಾಗಿದ್ದು, ಶಾಶ್ವತವಾಗಿ ಬ್ಲ್ಯಾಕ್ ಸ್ಪಾಟ್‌ಗಳನ್ನು ತೆರವು ಗೊಳಿಸಿ, ಬ್ಲ್ಯಾಕ್ ಸ್ಪಾಟ್ ಗಳು ಮತ್ತೆ ಮರುಕಳಿಸದಂತೆ ಖಚಿತ ಪಡಿಸಿ ಕೊಳ್ಳಬೇಕು. ಅನಧಿಕೃತವಾಗಿ ಅಳವಡಿಸಲ್ಪಟ್ಟ ಜಾಹೀರಾತು ಫಲಕ, ಫ್ಲೆಕ್ಸ್, ಬ್ಯಾನರ್‌ಗಳನ್ನು ತ್ವರಿತವಾಗಿ ತೆರವುಗೊಳಿಸಲು ಸೂಚಿಸಿದರು.

ಪದಾಧಿಕಾರಿಗಳ ನೇಮಕಮಾಡಿ ವಿಜಯೇಂದ್ರ ಆದೇಶ

ಪರಿಷತ್ ಚುನಾವಣೆಗೆ ಬಿಜೆಪಿ ತಯಾರಿ

ಬೆಂಗಳೂರು: ವಿಧಾನ ಪರಿಷತ್ ನಾಲ್ಕು ಸ್ಥಾನಗಳ ಚುನಾವಣೆಗೆ ಬಿಜೆಪಿ ಸಿದ್ಧತೆ ಆರಂಭಿಸಿದ್ದು, ವಿವಿಧ ಕ್ಷೇತ್ರಗಳಿಗೆ ಸಂಚಾಲಕರನ್ನು ನೇಮಿಸಲಾಗಿದೆ.

ಆಗ್ನೇಯ ಪದವೀಧರ ಕ್ಷೇತ್ರಕ್ಕೆ ಹೊಸ ಅಭ್ಯರ್ಥಿಯ ಹುಡುಕಾಟದಲ್ಲಿದ್ದು, ವಸಂತಕುಮಾರ್ ಮತ್ತು ವೈ.ಎ. ನಾರಾಯಣಸ್ವಾಮಿ ಹೆಸರು ಚರ್ಚೆಯಲ್ಲಿದೆ. ಬೆಂಗಳೂರು ಶಿಕ್ಷಕರ ಕ್ಷೇತ್ರವನ್ನು ಜೆಡಿಎಸ್‌ಗೆ ಬಿಟ್ಟುಕೊಡುವ ಸಾಧ್ಯತೆ ಇದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ವಿಧಾನ ಪರಿಷತ್‌ನ 4 ಸ್ಥಾನಗಳ ಚುನಾವಣೆ ಸಂಬಂಧ ಸಂಚಾಲಕರು, ಸಹ ಸಂಚಾಲಕರನ್ನು ನೇಮಿಸಿ ಆದೇಶಿಸಲಾಗಿದೆ. ಈಶಾನ್ಯ ಶಿಕ್ಷಕರ ಕ್ಷೇತ್ರ-ಸಂಚಾಲಕರಾಗಿ ಅಮರನಾಥ್ ಪಾಟೀಲ್, ಸಹ ಸಂಚಾಲಕರಾಗಿ ನವೀನ್ ಗುಳಗಣ್ಣನವರ್ ನೇಮಕವಾಗಿದ್ದಾರೆ. ಪಶ್ಚಿಮ ಪದವೀಧರ ಕ್ಷೇತ್ರ-ಸಂಚಾಲಕರಾಗಿ ಅರುಣ್ ಶಹಾಪುರ, ಸಹ ಸಂಚಾಲಕರಾಗಿ ಸಂತೋಷ್ ದೇವರೆಡ್ಡಿ ಆಯ್ಕೆಯಾಗಿದ್ದಾರೆ. ಆಗ್ನೇಯ ಪದವೀಧರ ಕ್ಷೇತ್ರ-ಸಂಚಾಲಕರಾಗಿ ವೈ.ಎ.ನಾರಾಯಣಸ್ವಾಮಿ, ಸಹ ಸಂಚಾಲಕರಾಗಿ ಚಿದಾನಂದ ಎಂ.ಗೌಡ ಗೆ ಜವಾಬ್ದಾರಿ ನೀಡಲಾಗಿದೆ. ಬೆಂಗಳೂರು ಶಿಕ್ಷಕರ ಕ್ಷೇತ್ರ-ಸಂಚಾಲಕರಾಗಿ ಕೇಶವ ಪ್ರಸಾದ್ ಮತ್ತು ಸಹ ಸಂಚಾಲಕರಾಗಿ ಎಸ್.ಎನ್.ರಾಜಣ್ಣ ನೇಮಿಸಿ ರಾಜ್ಯ ಬಿಜೆಪಿ ಅಧ್ಯಕ್ಷ ವಿಜಯೇಂದ್ರ ಆದೇಶಿಸಿದ್ದಾರೆ.

ಬೆಂಗಳೂರು ಶಿಕ್ಷಕರ ಕ್ಷೇತ್ರ ಜೆಡಿಎಸ್‌ಗೆ ?

ಅಭ್ಯರ್ಥಿಗಳ ಆಯ್ಕೆ ಸಂಬಂಧ ಈಗಾಗಲೇ ಬಿಜೆಪಿ ತಯಾರಿ ನಡೆಸಿ ಸಭೆ ನಡೆಸಿದ್ದು, 2 ಕ್ಷೇತ್ರಗಳಲ್ಲಿ ಈಗಾಗಲೇ ಆರ್.ಅಶೋಕ್ ನೇತೃತ್ವದಲ್ಲಿ ಸಭೆ ನಡೆದಿದೆ. ಪಶ್ಚಿಮ ಪದವೀಧರ ಕ್ಷೇತ್ರದಲ್ಲಿ ಹಾಲಿ ಎಂಎಲ್‌ಸಿ ಶಶೀಲ್ ನಮೋಶಿಗೆ ಮತ್ತೊಂದು ಬಾರಿಗೆ ಟಿಕೆಟ್ ನೀಡಲು ನಿರ್ಧರಿಸಲಾಗಿದ್ದು, ಈಶಾನ್ಯ ಶಿಕ್ಷಕರ ಕ್ಷೇತ್ರದಲ್ಲಿಯೂ ಹಾಲಿ ಎಂಎಲ್‌ಸಿ ಎಸ್ .ವಿ.ಸಂಕನೂರ್ ಗೆ ಟಿಕೆಟ್ ಸಾಧ್ಯತೆ ಇದೆ. ಆದರೆ ಆಗ್ನೇಯ ಪದವೀಧರ ಕ್ಷೇತ್ರದಲ್ಲಿ ಹೊಸ ಅಭ್ಯರ್ಥಿ ಕಣಕ್ಕಿಳಿಸಲು ಬಿಜೆಪಿ ಮುಂದಾಗಿದೆ. ಬೆಂಗಳೂರು ಶಿಕ್ಷಕರ ಕ್ಷೇತ್ರವನ್ನ ಜೆಡಿಎಸ್‌ಗೆ ಬಿಟ್ಟುಕೊಡುವ ಸಾಧ್ಯತೆ ಇದೆ ಎನ್ನಲಾಗಿದೆ.

ಟಿಜೆಎಸ್‌ಬಿ 160ನೇ ಶಾಖೆ ಉದ್ಘಾಟನೆ

ಬೆಂಗಳೂರು: ಪ್ರಮುಖ ಬಹುರಾಜ್ಯ ಸಹಕಾರಿ ಬ್ಯಾಂಕ್‌ಗಳಲ್ಲಿ ಒಂದಾದ ಟಿಜೆಎಸ್‌ಬಿ ಸಹಕಾರಿ ಬ್ಯಾಂಕ್ ಲಿಮಿಟೆಡ್‌ನ ಯಲಹಂಕ ನ್ಯೂ ಟೌನ್‌ನಲ್ಲಿ ತನ್ನ 160ನೇ ಶಾಖೆಯನ್ನು ಉದ್ಘಾಟಿಸಿದೆ.

ಈ ಹೊಸ ಶಾಖೆ ಮೂಲಕ ಬ್ಯಾಂಕ್ ತನ್ನ ದಕ್ಷಿಣ ಭಾರತದ ಹಾಜರಾತಿಯನ್ನು ಮತ್ತಷ್ಟು ಬಲಪಡಿಸಿದೆ. ಇದು ಬೆಂಗಳೂರಿನ ನಾಲ್ಕನೇ ಶಾಖೆಯಾಗಿದ್ದು, ಕರ್ನಾಟಕ ರಾಜ್ಯದ ಏಳನೇ ಶಾಖೆಯಾಗಿದೆ. ಬ್ಯಾಂಕ್‌ನ ಇತರ ಶಾಖೆಗಳು ಜಯನಗರ (ಬೆಂಗಳೂರು ಶಾಖೆ), ಇಂದಿರಾನಗರ, ರಾಜಾಜಿನಗರ, ಬೆಳಗಾವಿ, ಹುಬ್ಬಳ್ಳಿ ಮತ್ತು ಕಾರವಾರದಲ್ಲಿ ಸ್ಥಾಪಿತವಾಗಿವೆ. 1972ರಲ್ಲಿ ಥಾಣೆ (ಮಹಾರಾಷ್ಟ್ರ)ಯಲ್ಲಿ ಒಂದು ಶಾಖೆಯಿಂದ ಪ್ರಾರಂಭವಾದ ಟಿಜೆಎಸ್‌ಬಿ ಸಹಕಾರಿ ಬ್ಯಾಂಕ್, ಇಂದಿಗೆ ಮಹಾರಾಷ್ಟ್ರ, ಗೋವಾ, ಕರ್ನಾಟಕ, ಗುಜರಾತ್ ಮತ್ತು ಮಧ್ಯಪ್ರದೇಶ ರಾಜ್ಯಗಳಲ್ಲಿ ವ್ಯಾಪಕವಾಗಿ ಸೇವೆ ನೀಡುತ್ತಿರುವ ಬಲಿಷ್ಠ ಹಣಕಾಸು ಸಂಸ್ಥೆಯಾಗಿದೆ. ದಶಕಗಳಿಂದಲೂ ಬ್ಯಾಂಕ್ ಸಹಕಾರಿ ಮೌಲ್ಯಗಳನ್ನು ಆಧುನಿಕ ಡಿಜಿಟಲ್ ಮೂಲಸೌಕರ್ಯಗಳೊಂದಿಗೆ ಸಂಯೋಜಿಸಿ ಗ್ರಾಹಕಕೇಂದ್ರಿತ ಮತ್ತು ವಿಶ್ವಾಸಾರ್ಹ ಬ್ಯಾಂಕಿಂಗ್ ಸೇವೆಗಳನ್ನು ನೀಡುತ್ತಿದೆ.

ಸಮಾಚಾರ ಸಣ್ಣದಲ್ಲ

ಕಾಂಗ್ರೆಸ್‌ನಿಂದ ರೈತರಿಗೆ ಮೋಸ: ವಿಜಯೇಂದ್ರ

ಬೆಂಗಳೂರು: ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರಕಾರವು ರಾಜ್ಯದಲ್ಲಿ ರೈತರಿಗೆ ಪರಿಹಾರ ಕೊಡದೆ ಮೋಸ ಮಾಡಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿ, ರೈತರು ತೀವ್ರ ಸಂಕಷ್ಟದಲ್ಲಿದ್ದಾರೆ. ಪರಿಹಾರ ಕೊಡಿ ಎಂದರೆ ಕೇಂದ್ರ ಸರಕಾರದ ಕಡೆ ಬೆಟ್ಟು ಮಾಡಿ ಕೂತಿದ್ದಾರೆಯೇ ವಿನಾ ರಾಜ್ಯ ಸರಕಾರದಿಂದ ಈ ನಾಡಿನ ರೈತರಿಗೆ ಪರಿಹಾರ, ಅನುಕೂಲ ಸಿಗುತ್ತಿಲ್ಲ ಎಂದು ಟೀಕಿಸಿದರು. ರಾಜ್ಯ ಸರಕಾರ, ಮುಖ್ಯಮಂತ್ರಿಗಳಿಗೆ ರೈತರ ಸಂಕಷ್ಟಕ್ಕೆ ಸ್ಪಂದಿಸಲು ಸಾಧ್ಯವಾಗದೇ ಇದ್ದರೆ, ಈ ಸರಕಾರ ರೈತರ ಪಾಲಿಗೆ ಬದುಕಿದ್ದೂ ಸತ್ತಂತೆ. ಅಭಿವೃದ್ಧಿ ಕೆಲಸಗಳು ಆಗುತ್ತಿಲ್ಲ. ಶಾಸಕರು ಪರದಾಡುತ್ತಿದ್ದಾರೆ. ಆಡಳಿತ ಪಕ್ಷದ ಶಾಸಕರು, ಸಚಿವರು ನವೆಂಬರ್ ಕ್ರಾಂತಿಯ ಹೇಳಿಕೆ ಕೊಡುತ್ತಿದ್ದಾರೆ. ರೈತರ ಸಮಸ್ಯೆಗೆ ಪರಿಹಾರ ಕೊಡಿ ಎಂದರೆ ಇವತ್ತು ಸಿಎಂ ಬದಲಾವಣೆ ಚರ್ಚೆ ನಡೆದಿದೆ. ಕಾಂಗ್ರೆಸ್ ಸರಕಾರದ ಕಚ್ಚಾಟದಿಂದ ರಾಜ್ಯದ ಜನತೆ ಸರಕಾರದ ಮೇಲಿನ ವಿಶ್ವಾಸ ಕಳಕೊಂಡಿದ್ದಾರೆ. ನಾನೇ 5 ವರ್ಷ ಸಿಎಂ ಎಂದು ಮುಖ್ಯಮಂತ್ರಿಹೇಳುವ ಪರಿಸ್ಥಿತಿ ಬಂದು ತಲುಪಿದೆ ಎಂದರೆ, ಆಡಳಿತ ಪಕ್ಷದಲ್ಲಿ ಮುಖ್ಯಮಂತ್ರಿಗಳ ಬಗ್ಗೆ ವಿಶ್ವಾಸ ಹೊರಟುಹೋಗಿದೆ ಎಂದರು. ರಾಜ್ಯದಲ್ಲಿ ಆಡಳಿತ ಸಂಪೂರ್ಣ ಕುಸಿದಿದೆ. ಹೇಳಿಕೆಗಳನ್ನು ನಿಲ್ಲಿಸದೇ ಹೋದರೆ ಇದರ ಪರಿಣಾಮ ಆಡಳಿತದ ಮೇಲೆ ಬೀಳಲಿದೆ ಎಂದು ಗೃಹ ಸಚಿವ ಪರಮೇಶ್ವರ್ ಒಪ್ಪಿಕೊಂಡಿದ್ದಾರೆ. ರಾಜ್ಯದ ಜನರಿಗೆ ಸಿಎಂ ಯಾರಾಗುತ್ತಾರೆ? ಬದಲಾಗುತ್ತಾರಾ ಎಂಬ ಬಗ್ಗೆ ಆಸಕ್ತಿ ಇಲ್ಲ. ಜನರು ಈ ಸರಕಾರದ ಬಗ್ಗೆ ಸಂಪೂರ್ಣ ವಿಶ್ವಾಸ ಕಳಕೊಂಡಿದ್ದಾರೆ. ಅವರ ಒಳಜಗಳದಿಂದ ಕೆಪಿಸಿಸಿಗೆ ಬೀಗ ಹಾಕುವುದು ಇರಲಿ. ರಾಜ್ಯದ ಖಜಾನೆಗೆ ಬೀಗ ಹಾಕಿ ಕೂತಿದ್ದಾರೆ. ಸರಕಾರಿ ನೌಕರರಿಗೆ ವೇತನ ಸಿಗುತ್ತಿಲ್ಲ. ರಾಜ್ಯವನ್ನು ಆರ್ಥಿಕ ಸಂಕಷ್ಟಕ್ಕೆ ನೂಕುವ ಕೆಲಸವನ್ನು ಮುಖ್ಯಮಂತ್ರಿ ಮಾಡುತ್ತಿದ್ದಾರೆ ಎಂದು ಟೀಕಿಸಿದರು.

ಹಾಲಿ ವಿರುದ್ಧ ಮಾಜಿ ಸ್ಪೀಕರ್ ಆರೋಪ

ಸ್ಪೀಕರ್ ಯು.ಟಿ.ಖಾದರ್ ಮೇಲಿನ ಆರೋಪಗಳ ಬಗ್ಗೆ ನ್ಯಾಯಾಂಗ ತನಿಖೆಯಾಗಲಿ: ವಿಶ್ವೇಶ್ವರ ಹೆಗಡೆ ಕಾಗೇರಿ

ಬೆಂಗಳೂರು: ವಿಧಾನಸಭೆಯ ಸಭಾಧ್ಯಕ್ಷ ಯು.ಟಿ.ಖಾದರ್ ಭಾರೀ ಭ್ರಷ್ಟಾಚಾರದಲ್ಲಿ ತೊಡಗಿದ್ದು, ಇತ್ತೀಚೆಗೆ ಖರೀದಿ ಮಾಡಿರುವ ಸಾಮಗ್ರಿಗಳ ಕುರಿತು ತನಿಖೆ ನಡೆಸುವಂತೆ ರಾಜ್ಯಪಾಲರಿಗೆ ದೂರು ನೀಡಲಾಗುವುದು ಎಂದು ಮಾಜಿ ಸ್ಪೀಕರ್, ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದ್ದಾರೆ.

ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕರ್ನಾಟಕ ವಿಧಾನಸಭೆಗೆ ತನ್ನದೇ ಆದ ಗೌರವ ಇದೆ. ಆದರೆ ಖಾದರ್ ಅವರು ತಮ್ಮ ಪೀಠದ ಗೌರವ ಕಾಪಾಡುತ್ತಿಲ್ಲ, ಅವರು ಪಕ್ಷದ ಕೈಗೊಂಬೆಯಂತೆ ವರ್ತಿಸುತ್ತಿದ್ದಾರೆ. ಇದು ಹಲವು ಶಾಸಕರ ಅಭಿಮತವಾಗಿದೆ. ಇದಲ್ಲದೆ ಅವರ ಆಡಳಿತ ಸುಧಾರಣೆ ಹೆಸರಿನಲ್ಲಿ ಮಾಡುತ್ತಿರುವ ಕಾರ್ಯವೈಖರಿಯಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ದೂರಿದರು.

ವಿಧಾನಸೌಧದ ಸಭಾಂಗಣದ ಬಾಗಿಲಿಗೆ ರೋಸ್‌ವುಡ್ ಹಾಕಿದ್ದು, ಹೊಸ ಟಿವಿ ಖರೀದಿ, ಶಾಸಕರ ಮಸಾಜ್ ಕುರ್ಚಿ, ಗಂಡಬೇರುಂಢ ಗಡಿಯಾರ, ಊಟ ಉಪಹಾರ.. ಹೀಗೆ ಹಲವು ವಿಚಾರಗಳು ಭ್ರಷ್ಟಾಚಾರದ ಆರೋಪಕ್ಕೆ ಪುಷ್ಟಿ ನೀಡಿವೆ. ಸ್ವಜನ ಪಕ್ಷಪಾತದ ಆರೋಪ ಅವರ ಮೇಲಿದೆ. ಅವರು ಏನೇ ಮಾಡಿದರೂ ಅದರೊಳಗೆ ಇನ್ನೇನೋ ಇದೆ ಎಂಬ ಅನುಮಾನ ಬರುವಂತೆ ಮಾಡಿದೆ. ಶಾಸಕರ ಭವನದ ಶಾಸಕ ಕೊಠಡಿಗೆ ಹಾಕಿದ ಸ್ಮಾರ್ಟ್ ಡೋರ್ ಲಾಕ್, ಸೇಫ್ಟಿಲಾಕ್ ಅಳವಡಿಕೆಗೆ ಮಾಡಿರುವ ವೆಚ್ಚವೂ ಅನುಮಾನಾಸ್ಪದವೇ ಎಂದರು.

7-8 ಸಾವಿರ ರು.ಗಳಿಗೆ ಸಿಗುವ ಸಾಮಾಗ್ರಿಗಳನ್ನು 30-40 ಸಾವಿರ ಬಿಲ್ ಮಾಡಿಸಿದ್ದಾರೆ. ಇವೆಲ್ಲವೂ ಸ್ಪೀಕರ್ ಮೇಲಿನ ಭ್ರಷ್ಟಾಚಾರಕ್ಕೆ ಸಾಕ್ಷಿಗಳಾಗಿವೆ. ಸ್ಪೀಕರ್ ವಿದೇಶಿ ಅಧ್ಯಯನ ಪ್ರವಾಸದ ಖರ್ಚು ಬಹಿರಂಗವಾಗಬೇಕು. ವಿಧಾನಸೌಧಕ್ಕೆ, ಅವರ ಕಚೇರಿಗೆ ಮಾಡಿದ ಪೀಠೋಪಕರಣ, ಸಿಬ್ಬಂದಿ ನೇಮಕ ವಿಚಾರದಲ್ಲೂ ಅಕ್ರಮದ ನಡೆದಿದೆ ಎಂದು ಅನುಮಾನ ವ್ಯಕ್ತಪಡಿಸಿದರು.

> ಎಲ್ಲ ಕೆಲಸಗಳಿಗೂ 4ಜಿ ವಿನಾಯಿತಿ ತೆಗೆದುಕೊಂಡಿದ್ದಾರೆ. ಅಂತಹ ತುರ್ತಿನ ಕಾರ್ಯ ಇಲ್ಲೇನಿದೆ? ರಾಜ್ಯ ಸಂಕಷ್ಟದಲ್ಲಿ ಇರುವಾಗ ಈ ಬದಲಾವಣೆ ಸೌಲಭ್ಯ ಒದಗಿಸುವ ಅವಶ್ಯಕತೆ ಇದೆಯೇ?. ಸ್ಪೀಕರ್ ಸ್ಥಾನವನ್ನ ಮಾಹಿತಿ ಹಕ್ಕು ಕಾಯ್ದೆ(ಆರ್‌ಟಿಐ) ವ್ಯಾಪ್ತಿಗೆ ತರಬೇಕು.ಆ ಮೂಲಕ ಈ ವ್ಯವಸ್ಥೆಯು ಪಾರದರ್ಶಕತೆ ಕಾಣುವಂತಾಗಲಿ.
>
> – ವಿಶ್ವೇಶ್ವರ ಹೆಗಡೆ ಕಾಗೇರಿ ಸಂಸದ

ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಮಾತನಾಡಿದರು.

ಕಾಗೇರಿ ಆರೋಪಗಳೇನು?

- ವಿಧಾನಸೌಧ ಸಭಾಂಗಣದ ಬಾಗಿಲು, ಸ್ಪೀಕರ್ ಕಚೇರಿ ವಿನ್ಯಾಸದಲ್ಲಿ ಭ್ರಷ್ಟಾಚಾರ
- 7-8 ಸಾವಿರ ರು ಸಾಮಾಗ್ರಿಗಳಿಗೆ 30-40 ಸಾವಿರ ಕೊಟ್ಟು ಖರೀದಿಸಿರುವ ಬಿಲ್
- ವಿಧಾನಸೌಧದ ಸಿಬ್ಬಂದಿ ನೇಮಕ ವಿಚಾರದಲ್ಲೂ ಭಾರೀ ಅಕ್ರಮ
- ಸ್ಪೀಕರ್ ಖಾದರ್ ವಿದೇಶಿ ಅಧ್ಯಯನ ಪ್ರವಾಸದ ಖರ್ಚು ಬಹಿರಂಗವಾಗಲಿ

ಗೌರವಕ್ಕೆ ತಕ್ಕಂತೆ ಇಲ್ಲ

ರಾಜ್ಯದಲ್ಲಿ ವಿಧಾನಸಭಾಧ್ಯಕ್ಷರಾಗಿ ರಾಜಕೀಯ, ಸಾರ್ವಜನಿಕ ಜೀವನದ ಸಾಕಷ್ಟು ಅನುಭವ ಇರುವ ಯು.ಟಿ.ಖಾದರ್ ಅವರು ಇದ್ದು, ಸ್ಪೀಕರ್ ಹುದ್ದೆಯ ಘನತೆ, ಗೌರವಕ್ಕೆ ತಕ್ಕಂತೆ ನಡೆದುಕೊಳ್ಳುತ್ತಿಲ್ಲ. ಪಕ್ಷಪಾತಿಯಾಗಿದ್ದಾರೆ. ಆಡಳಿತ ಸುಧಾರಣೆ ಹೆಸರಿನಲ್ಲಿ ಅನೇಕ ಭ್ರಷ್ಟಾಚಾರಗಳು ನಡೆಯುತ್ತಿವೆ. ಪೀಠಕ್ಕೆ ಇಂಥ ಆರೋಪಗಳು ಬರುತ್ತಿವೆ. 10 ಜನ ಬಿಜೆಪಿ ಶಾಸಕರನ್ನು ಹೊರಗೆ ಹಾಕಿದ್ದಾಗಲೇ ಪಕ್ಷದ ಸೂಚನೆಯಂತೆ ಯು.ಟಿ. ಖಾದರ್ ನಡೆದುಕೊಳ್ಳುತ್ತಿದ್ದಾರೆ ಎಂಬ ಆರೋಪ ಅವರ ಮೇಲೆ ಬಂದಿತ್ತು. ನಂತರ 18 ಜನ ಶಾಸಕರನ್ನು ಹೊರಗೆ ಹಾಕಿದ ಮೇಲಂತೂ ಸ್ಪೀಕರ್ ಪಕ್ಷದ ಕೈಗೊಂಬೆ ಆಗಿದ್ದಾರೇನೋ, ಆಡಳಿತದಲ್ಲಿ ಇರುವವರು ಇವರನ್ನು ಹಾಗೆ ಬಳಸಿಕೊಳ್ಳುತ್ತಿದ್ದಾರೇನೋ ಎಂಬ ಆರೋಪ ಬರುವುದಕ್ಕೆ ಆರಂಭವಾಯಿತು. ಸದನದಲ್ಲಿ ಭಾಗವಹಿಸುವಾಗ, ಚರ್ಚೆಯ ವೇಳೆ ಸ್ಪೀಕರ್ ಅವರು ಪ್ರತಿಪಕ್ಷ ಬಿಜೆಪಿಯವರಿಗೆ ಅವಕಾಶ ಎಷ್ಟು ಕೊಡುತ್ತಾರೆ, ಕೊಡುತ್ತಿಲ್ಲ ಎಂಬ ವಿಚಾರ ಚರ್ಚೆ ಶುರುವಾಯಿತು ಎಂದರು.

ಪುಸ್ತಕ ಮೇಳಕ್ಕೆ 4.5 ಕೋಟಿ ಖರ್ಚು

4-5 ದಿನಗಳ ಪುಸ್ತಕ ಮೇಳಕ್ಕೆ 4.5 ಕೋಟಿ ಖರ್ಚು ಮಾಡಿದ್ದಾರೆ. ಪುಸ್ತಕ ಕೊಂಡು ಹಂಚಿದರೂ ಇಷ್ಟಾಗುತ್ತಿತ್ತೋ ಗೊತ್ತಿಲ್ಲ. ಇವರು ಸ್ಟಾಲ್ ಹಾಕುವುದು ಬಿಟ್ಟು ಬೇರೇನೂ ಇಲ್ಲ. ಲೈಟಿಂಗ್ ಮಾಡಿದ್ದಾರೆ. ಶಾಸಕರ ಭವನಕ್ಕೆ ಮಂಚ, ಟೇಬಲ್ ಹಾಕಿಸಿದ್ದಾರೆ. ನೇಮಕಾತಿಗೆ ಕೋರ್ಟಿನಲ್ಲಿ ತಡೆಯಾಜ್ಞೆ ವಿಧಿಸಲಾಗಿದೆ. ಇದರ ವಿಷಯದಲ್ಲಿ ಮೊಗಸಾಲೆಯ ಸುದ್ದಿಗಳೇನು? ಇದೆಲ್ಲ ಆ ಸ್ಥಾನಕ್ಕೆ ಕುಂದು ಬರುವಂತಿದೆ. ಯು.ಟಿ. ಖಾದರ್ ಈಗಲೂ ವಿದೇಶದಲ್ಲೇ ಇದ್ದಾರೆ. ಅವರು ಎಷ್ಟು ದೇಶಗಳಿಗೆ ಹೋಗಿದ್ದಾರೆ. ಅವರೆಷ್ಟು ಖರ್ಚು ಹಾಕಿ ಸರಕಾರ ಎಷ್ಟು ಹಣ ಕೊಟ್ಟಿದೆ. ನಾನೂ ಸ್ಪೀಕರ್ ಆಗಿ ವಿದೇಶಗಳಿಗೆ ಹೋಗಿದ್ದೇನೆ. ನಮಗಿರೋ ಅವಕಾಶ ಮೀರಿ, ಎಷ್ಟು ಪ್ರವಾಸ ಮಾಡಿದ್ದಾರೆ. ಯಾರ್ಯಾರ ಜತೆ ಪ್ರವಾಸ ಮಾಡಿದ್ದಾರೆ? ಇವೆಲ್ಲವೂ ಬಹಿರಂಗಗೊಳ್ಳಬೇಕಿದೆ. ವಿದೇಶಗಳ ಅಧ್ಯಯನದ ಹೆಸರಿನಲ್ಲಿ ನಡೆದ ಪ್ರವಾಸದ ವಿವರ ಬಹಿರಂಗಗೊಳಿಸಿ ಎಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಆಗ್ರಹಿಸಿದರು.

ಸ್ಪೀಕರ್ ಸ್ಥಾನದ ವಿರುದ್ಧ ಬಂದಿರುವ ಆರೋಪಗಳಿಂದ ಆ ಸ್ಥಾನವು ಮುಕ್ತವಾಗಬೇಕು. ಇದಕ್ಕಾಗಿ ಹಾಲಿ ನ್ಯಾಯಮೂರ್ತಿಗಳಿಂದ ಆರೋಪಗಳ ಕುರಿತು ತನಿಖೆ ನಡೆಸಬೇಕು. ಸ್ಪೀಕರ್ ಕಾರ್ಯಾಲಯದ ಟೆಂಡರ್ ಮಂಗಳೂರು ಮೂಲದವರಿಗೇ ಯಾಕೆ ಸಿಗುತ್ತಿದೆ. ವಿಧಾನಸಭಾಕ್ಷರ ಸಚಿವಾಲಯದ ಅಧಿಕಾರಿಗಳ ಅಭಿಪ್ರಾಯ ಏನಿತ್ತು? ನನಗೆ ಗೊತ್ತಿರುವ ಪ್ರಕಾರ ಹಣಕಾಸು ಇಲಾಖೆ ಖರೀದಿಗಳನ್ನು ತಿರಸ್ಕರಿಸಿದೆ. ಬಳಿಕ ಹಣಕಾಸು ಇಲಾಖೆ ಹೊಣೆ ಹೊತ್ತ ಮುಖ್ಯಮಂತ್ರಿಗಳೇ ಒಪ್ಪಿಗೆ ಕೊಡಿಸಿದ ಆರೋಪವಿದೆ. ಯು.ಟಿ.ಖಾದರರಿಗೆ ಸ್ವತಃ ಸಿಎಂ ಅವರೇ ಬೆಂಬಲ ಕೊಟ್ಟ ಆಕ್ಷೇಪವಿದೆ. ಖರೀದಿ ತುರ್ತಾಗಿ ಮಾಡಬೇಕಾದ ಕೆಲಸ ಏನಿತ್ತು? ಎಂದು ಕೇಳಿದರು.

ಬಸವಣ್ಣನವರು ಲಿಂಗಾಯತ ಪದ ಬಳಸಿಲ್ಲ

ಶ್ರೀಶೈಲ ಜಗದ್ಗುರು ಡಾ. ಚನ್ನಸಿದ್ದರಾಮ ಪಂಡಿತಾರಾಧ್ಯ ಭಗತ್ಪಾದರ ಹೇಳಿಕೆ

ಬೆಳಗಾವಿ: ಲಿಂಗಾಯತ ಬೇರೆ, ವೀರಶೈವ ಬೇರೆ ಎಂದು ಕೆಲವು ಪ್ರತ್ಯೇಕತಾವಾದಿಗಳು ವೀರಶೈವ ಲಿಂಗಾಯತ ಧರ್ಮದಲ್ಲಿ ಒಡಕು ಸೃಷ್ಟಿಸುತ್ತಿದ್ದಾರೆ. ಬಸವಣ್ಣನವರು ತಮ್ಮ ಕೆಲವು ವಚನಗಳಲ್ಲಿ ವೀರಶೈವ ಪದ ಬಳಕೆ ಮಾಡಿದ್ದಾರೆ. ಲಿಂಗಾಯತ ಪದ ಬಳಕೆ ಮಾಡಿಲ್ಲ ಎಂದು ಪರಮಪೂಜ್ಯ 1008 ಶ್ರೀಶೈಲ ಜಗದ್ಗುರು ಡಾ. ಚನ್ನಸಿದ್ದರಾಮ ಪಂಡಿತಾರಾಧ್ಯ ಭಗತ್ಪಾದರು ಹೇಳಿದರು.

ಬೆಳಗಾವಿ ಜಿಲ್ಲೆ ರಾಮದುರ್ಗ ತಾಲೂಕಿನ ಮುದಕವಿ ಗ್ರಾಮದ ಶ್ರೀವೀರಭದ್ರೇಶ್ವರ ಹಾಗೂ ಆಂಜನೇಯ ಸ್ವಾಮಿ ರಥೋತ್ಸವ ಹಾಗೂ ಜಾತ್ರಾ ಮಹೋತ್ಸವದವ ಪ್ರಯುಕ್ತ ಏರ್ಪಡಿಸಿದ ಸಾಮೂಹಿಕ ವಿವಾಹ ಮತ್ತು ಧರ್ಮ ಸಭೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ವೀರಶೈವಕ್ಕೂ ಲಿಂಗಾಯತಕ್ಕೂ ಸಂಬಂಧವಿಲ್ಲ. ಎರಡು ಬೇರೆ ಬೇರೆ ಎನ್ನುವ ಅರ್ಥಹೀನ ಪ್ರಚಾರ ಮಾಡುತ್ತಿರುವುದು ಸತ್ಯಕ್ಕೆ ದೂರವಾದ ಸಂಗತಿ. ವೀರಶೈಲ ಲಿಂಗಾಯತ ಎರಡು ಒಂದೇ, ಕೆಲವು ಮಠಾಧೀಶರು ಮಾತ್ರ ಪ್ರತ್ಯೇಕತಾ ಗುಂಪಿನಲ್ಲಿದ್ದಾರೆ. ಲಿಂಗಾಯತ ಧರ್ಮ ಬೇರೆ ಎಂಬುದು ಸುಮಾರು 20 ವರ್ಷಗಳಿಂದ ಹುಟ್ಟಿಕೊಂಡಿರುವ ಕೂಸು. ಅದಕ್ಕೆ ಭವಿಷ್ಯವಿಲ್ಲ. ಪತ್ಯೇಕ ಎನ್ನುವವರ ಹಿಂದಿನ ಇತಿಹಾಸ ಗಮನಿಸಿದರೆ ಅವರ ಹಿಂದಿನ ದಾಖಲೆಗಳೇ ವೀರಶೈವ ಲಿಂಗಾಯತ ಎಂದು ಇವೆ. ಅದನ್ನು ಮೊದಲು ಅರ್ಥ ಮಾಡಿಕೊಳ್ಳಬೇಕು. ಬಸವಾದಿ ಶರಣರ ಸಮಗ್ರ ವಚನಗಳನ್ನು ಅಧ್ಯಯನ ಮಾಡಬೇಕು. ಅವರ ವಚನಗಳಲ್ಲಿಯೂ ವೀರಶೈವ ಪದ ಬಳಕೆ ಇದೆ ಎಂದು ಪ್ರತ್ಯೇಕತಾವಾದಿಗಳಿಗೆ ತಿರುಗೇಟು ನೀಡಿದರು.

ಸಚಿವ ಸ್ಥಾನದಿಂದ ಮಾತ್ರ ಸಮಾಜದ ಉದ್ಧಾರ ಆಗಲ್ಲ

ಬಸವಜಯ ಮೃತ್ಯುಂಜಯ ಸ್ವಾಮೀಜಿ ಹೇಳಿಕೆ

ಬಾಗಲಕೋಟೆ: ಪಂಚಮಸಾಲಿ ಸಮುದಾಯದ ಶಾಸಕರಿಗೆ ಸಚಿವ ಸ್ಥಾನ ನೀಡುವುದರಿಂದ ಸಮಾಜಕ್ಕೆ ನ್ಯಾಯ ಸಿಗುವುದು ಕಷ್ಟ. ಮೀಸಲಾತಿಯಿಂದ ಮಾತ್ರ ಸಮಾಜಕ್ಕೆ ನ್ಯಾಯ ಸಿಗಲು ಸಾಧ್ಯ ಎಂದು ಕೂಡಲಸಂಗಮದ ಲಿಂಗಾಯತ ಪಂಚಮಸಾಲಿ ಪೀಠದ ಪ್ರಥಮ ಜಗದ್ಗುರು ಬಸವಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಚಿವ ಸ್ಥಾನ ನೀಡುವುದರಿಂದ ಸಮಾಜದ ಉದ್ಧಾರ ಆಗಲ್ಲ. ಸಚಿವ ಸ್ಥಾನ ನೀಡಿದ ಮೇಲೆ ಏನೇನು ಆಗಿದೆ ಎಲ್ಲರಿಗೂ ಗೊತ್ತಿದೆ. ಸಚಿವ ಸ್ಥಾನಕ್ಕಿಂತ ಮೀಸಲಾತಿ ಮುಖ್ಯ ಎಂದರು. ಶಾಸಕರಾದವು ಹಾಗೂ ಸಚಿವರಾದವರು ಎಷ್ಟರ ಮಟ್ಟಿಗೆ ಹೋರಾಟ ಮಾಡಿದ್ದಾರೆ ಎಲ್ಲವೂ ಗೊತ್ತಿದೆ. ಹಾಗಾಗಿ ಮೀಸಲಾತಿಯಿಂದಲೇ ನ್ಯಾಯ ಸಿಗುತ್ತದೆ ಅದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ. ಮೀಸಲಾತಿ ನೀಡುವುದು ಸಿಎಂ ಹಾಗೂ ಸರಕಾರದ ವಿವೇಚನೆಗೆ ಬಿಟ್ಟಿದ್ದು. ಯಾರಿಗೆ ಸಚಿವ ಸ್ಥಾನ ಕೊಡುತ್ತಾರೋ ಕೊಡಲಿ, ಸಚಿವ ಸ್ಥಾನದಿಂದ ಯಾವುದೇ ಸಮಾಜ ಉದ್ಧಾರ ಆಗೋಕೆ ಸಾಧ್ಯವಿಲ್ಲ ಎಂದರು.

ರಾಜಕಾರಣಿಗಳು ತುಚ್ಛವಾಗಿ ಮಾತನಾಡಬಾರದು

ಸಚಿವ ಪ್ರಿಯಾಂಕ್ ಖರ್ಗೆ ಆರ್‌ಎಸ್‌ಎಸ್‌ನ್ನು ಭಯೋತ್ಪಾದನಾ ಸಂಘಟನೆಗೆ ಹೋಲಿಸಿದ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ದೇಶದಲ್ಲಿ ರಾಷ್ಟ್ರ ಪ್ರೇಮದ ಅನೇಕ ಸಂಘಟನೆಗಳಿವೆ. ಅಂತಹ ರಾಷ್ಟ್ರ ಪ್ರೇಮಿ ಸಂಘಟನೆ ಬಗ್ಗೆ ಯಾವುದೇ ರಾಜಕಾರಣಿಗಳು ತುಚ್ಛವಾಗಿ ಮಾತನಾಡಬಾರದು. ಆಯಾ ಸಂಘಟನೆಗಳ ಬಗ್ಗೆ ಅವರವರ ಭಾವನಾತ್ಮಕ ಸಂಬಂಧ ಇದೆ. ಅಂಥವರ ಮನಸ್ಸಿಗೆ ನೋವಾಗುವ ರೀತಿಯಲ್ಲಿ ರಾಜಕಾರಣಿಗಳು ಮಾತನಾಡಬಾರದು ಎಂದು ಬಸವಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದರು.

ಸಿದ್ದು ಬಲಪ್ರದರ್ಶನಕ್ಕೆ ದಲಿತ ಸಮಾವೇಶ?

← ಮೊದಲಪುಟದಿಂದ

ದಲಿತ ಸಮಾವೇಶಕ್ಕೆ ವೇದಿಕೆ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಉತ್ತರಾಧಿಕಾರಿ ಚರ್ಚೆ ಹಾಗೂ ದಲಿತ ಮುಖ್ಯಮಂತ್ರಿ ಕೂಗು ಜೋರಾಗುತ್ತಿರುವ ಬೆನ್ನಲ್ಲೇ ಇದೀಗ ರಾಷ್ಟ್ರೀಯ ಮಟ್ಟದ ಸಮಾವೇಶಕ್ಕೆ ಸಿದ್ಧತೆ ನಡೆಸಿಕೊಂಡಿದ್ದು, ಸಚಿವರಾದ ಪರಮೇಶ್ವರ ಹಾಗೂ ಮಹದೇವಪ್ಪ ಅವರು ಇದೇ ವಿಷಯಕ್ಕೆ ಸಂಬಂಧಿಸಿದಂತೆ ಚರ್ಚಿಸಿದ್ದಾರೆ. ಶೀಘ್ರದಲ್ಲಿಯೇ ಸತೀಶ್ ಜಾರಕಿಹೊಳಿ ಅವರೊಂದಿಗೆ ಈ ಬಗ್ಗೆ ಚರ್ಚಿಸಿ ಅಂತಿಮ ತೀರ್ಮಾನ ಕೈಗೊಳ್ಳಲಿದ್ದಾರೆ ಎನ್ನಲಾಗಿದೆ. ಈ ಹಿಂದೆ ದಲಿತ ಸಮಾವೇಶಕ್ಕೆ ಮುಂದಾಗಿ ಬಳಿಕ ವಿರೋಧದ ಬಳಿಕ ಕೈಬಿಡಲಾಗಿತ್ತು. ಆದರೆ ಈ ಬಾರಿ ಚಿತ್ರದುರ್ಗ ಅಥವಾ ದಾವಣ ಗೆರೆಯಲ್ಲಿ ಸಮಾವೇಶ ನಡೆಸಿ ಕಾಂಗ್ರೆಸ್ ನೀಡಿರುವ ಕೊಡುಗೆಗಳ ಬಗ್ಗೆ ತಿಳಿಸುವ ಜತೆಗೆ ಪಕ್ಷದ ಜತೆಗೆ ಇರುವ ದಲಿತ ಶಕ್ತಿ ಕುರಿತು ಹೈಕಮಾಂಡ್‌ಗೆ ಸಂದೇಶ ರವಾನಿಸಲು ಚಿಂತನೆ ನಡೆಸಿದ್ದಾರೆ ಎನ್ನಲಾಗಿದೆ. ಈ ಬಗ್ಗೆ ಮಾತನಾಡಿರುವ ಗೃಹ ಸಚಿವ ಪರಮೇಶ್ವರ, ದಲಿತ ಸಮಾವೇಶ ಮಾಡಿದರೆ ಸಮಸ್ಯೆ ಏನಿದೆ? ಈ ಹಿಂದೆ ಹೈಕಮಾಂಡ್‌ನವರು ಬೇರೆ ಕಾರಣಕ್ಕಾಗಿ ಸಮಾವೇಶ ಸ್ಥಗಿತ ಮಾಡುವಂತೆ ಹೇಳಿದ್ದರು. ಅದಕ್ಕೆ ಒಪ್ಪಿಕೊಂಡಿದ್ದೆವು. ಆದರೀಗ ಪಕ್ಷದ ಹಿತದೃಷ್ಟಿಯಿಂದ, ದಲಿತ ಸಮಾವೇಶದ ಮೂಲಕ ಸಮುದಾಯದಿಂದ ಏನು ಕೇಳುತ್ತಾರೆ, ಮುಂದಿನ ಭರವಸೆಗಳನ್ನು ಕೊಡಬೇಕಾಗುತ್ತದೆ ಎಂದರು.

ಬಾವಿಗೆ ಬಿದ್ದಿದ್ದ ಮಗು ರಕ್ಷಿಸಿದ ಯುವಕರು

ಉಳ್ಳಾಲ (ದಕ್ಷಿಣ ಕನ್ನಡ): ಮನೆ ಆವರಣದಲ್ಲಿ ಆಟವಾಡುತ್ತಿದ್ದ ಎರಡೂವರೆ ವರ್ಷದ ಮಗುವೊಂದು 15 ಅಡಿ ಬಾವಿಗೆ ಬಿದ್ದಿತ್ತು. ಆ ಮಗುವನ್ನು ಸ್ಥಳೀಯ ಯುವಕ ಜೀವದ ಹಂಗು ತೊರೆದು ರಕ್ಷಿಸಿ ಮಾನವೀಯತೆ ಮೆರೆದಿರುವ ಘಟನೆ ದೇರಳಕಟ್ಟೆ ಬೆಳ್ಮ ಗ್ರಾಮದ ಮಾರಿಯಮ್ಮಗೋಳಿ ದೈವಸ್ಥಾನದ ಸಮೀಪ ಭಾನುವಾರ ಸಂಜೆ ವೇಳೆ ನಡೆದಿದೆ. ಗುರುಪ್ರಸಾದ್ ಎಂಬವರ ಮಗಳಾದ ಎರಡೂವರೆ ವರ್ಷ ವಯಸ್ಸಿನ ಹಿಮಾನಿಯನ್ನು ರಕ್ಷಿಸಲಾಗಿದೆ. ಮನೆಮಂದಿ ಅಂಗಳದಲ್ಲಿ ಕುಳಿತಿದ್ದ ಸಂದರ್ಭದಲ್ಲಿ ಮಗು ಆಟವಾಡುತ್ತಾ ಮನೆ ಆವರಣದಲ್ಲಿನ ತೆರೆದ ಬಾವಿಯೊಳಗೆ ಬಿದ್ದಿತ್ತು. 15 ಅಡಿ ಆಳದ ನೀರಿದ್ದ ಬಾವಿಯೊಳಗೆ ಬಿದ್ದ ಮಗುವನ್ನು ತಕ್ಷಣ ಚಿಕ್ಕಪ್ಪ ಜೀವನ್ ಅವರು ಹಗ್ಗ ಹಾಕಿ ರಕ್ಷಿಸಲು ಬಾವಿಗೆ ಇಳಿದಿದ್ದರು. ಆದರೆ, ಅವರಿಗೆ ಈಜು ಬಾರದೇ ಇದ್ದಿದ್ದರಿಂದಾಗಿ ಹಗ್ಗದ ಸಹಾಯದಲ್ಲಿ ನಿಂತು ಮಗುವಿನ ಕೈಯನ್ನು ಹಿಡಿದುಕೊಂಡು ಮೇಲೆ ಬರಲು ಸಾಧ್ಯವಾಗದೇ ಅಲ್ಲೇ ಉಳಿದಿದ್ದರು. ಅದಾಗಲೇ ಒಂದು ಬಾರಿ ನೀರಿನೊಳಗೆ ಹೋಗಿ ಮಗು ಮೇಲೆ ಬಂದಿತ್ತು. ಭಾನುವಾರದ ದಿನವಾಗಿದ್ದರಿಂದಾಗಿ ಟೀಂ ಪೆಲತ್ತಡಿ ಫ್ರೆಂಡ್ಸ್‌ನ ಯುವಕರು ಆಟವಾಡಲು ಗದ್ದೆಗೆ ಹೋಗುವ ಸಂದರ್ಭ ಮಗು ಬಾವಿಗೆ ಬಿದ್ದಿರುವುದನ್ನು ಗಮನಿಸಿದ್ದರು. ಮನೆಮಂದಿಯ ರೋಧನೆ ಕಂಡು ತಕ್ಷಣ ಸ್ಥಳಕ್ಕೆ ಧಾವಿಸಿದ ಯುವಕರ ಪೈಕಿ ವಿವೇಕ್ ಎಂಬುವರು ಅದೇ ಹಗ್ಗದ ಮೂಲಕ ಕೆಳಗಿಳಿದು ಬಾವಿಯ ನೀರಿಗೆ ಧುಮುಕಿದ್ದರು. ಇವರಿಗೆ ಸ್ನೇಹಿತ ಧನಂಜಯ್ ಸೇರಿದಂತೆ ಸ್ಥಳೀಯ ಯುವಕರು ಹಗ್ಗವನ್ನು ಹಿಡಿಯುವುದರ ಜತೆಗೆ ಧೈರ್ಯ ತುಂಬಿದ್ದರು. ಬಳಿಕ ಮಗುವನ್ನು ಮೇಲಕ್ಕೆತ್ತಿ ರಕ್ಷಿಸಿದ್ದಾರೆ.

ಕೆರೆಯಲ್ಲಿ ಮುಳುಗಿ ಬಾಲಕರು ಸಾವು

ಕುಷ್ಟಗಿ: ತಾಲೂಕಿನ ಹೊಮ್ಮಿನಾಳ ಗ್ರಾಮದ ಸಮೀಪದ ಕೆರೆಯಲ್ಲಿ ಈಜಲು ಹೋಗಿದ್ದ ಇಬ್ಬರು ಬಾಲಕರು ದಾರುಣವಾಗಿ ಮಂಗಳವಾರ ಮೃತಪಟ್ಟಿದ್ದಾರೆ. ಕುಷ್ಟಗಿ ತಾಲೂಕಿನ ಹೊಮ್ಮಿನಾಳ ಗ್ರಾಮದಲ್ಲಿ 6ನೇ ತರಗತಿ ಹನುಮೇಶ ಹಾಗೂ 8ನೇ ತರಗತಿ ಯಮನೂರಪ್ಪ ಮೃತರು. ಶಾಲೆ ಬಿಟ್ಟ ಮೇಲೆ ಸಂಜೆ ಹೊಲಕ್ಕೆ ತೆಳಿದ್ದ ಬಾಲಕರು ಪಕ್ಕದ ಕೆರೆಯಲ್ಲಿ ಈಜಲು ಹೋಗಿದ್ದಾರೆ. ಮುಳುಗುತ್ತಿದ್ದ ಹನುಮೇಶನ ರಕ್ಷಣೆಗೆ ಧಾವಿಸಿದ ಯಮನೂರ ಪ್ಪನೂ ನೀರಲ್ಲಿ ಮುಳುಗಿ ಅಸುನೀಗಿದ್ದಾನೆ ಎನ್ನಲಾಗಿದೆ. ಇಬ್ಬರ ಬಾಲಕರ ಕುಟುಂಬದ ಆಕ್ರಂದನ ಮುಗಿಲು ಮುಟ್ಟಿತ್ತು. ತಾವರಗೇರಾ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಆರ್‌ಎಸ್‌ಎಸ್: ನಿರ್ಬಂಧಕ್ಕೆ ಹೈ ತಡೆ

← ಮೊದಲಪುಟದಿಂದ

ಅಲ್ಲದೆ, ರಾಜ್ಯ ಸರಕಾರದ ಮುಖ್ಯ ಕಾರ್ಯದರ್ಶಿ, ಗೃಹ ಇಲಾಖೆಯ ಅಧೀನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಪ್ರಧಾನ ಕಾರ್ಯದರ್ಶಿ, ರಾಜ್ಯ ಪೊಲೀಸ್ ಮಹಾನಿರ್ದೇಶಕರು, ಧಾರವಾಡ ನಗರ ಪೊಲೀಸ್ ಆಯುಕ್ತರು, ಧಾರವಾಡ ಉಪ ಆಯುಕ್ತರು, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ ಕಾರ್ಯದರ್ಶಿ ಹಾಗೂ ಹುಬ್ಬಳ್ಳಿ-ಧಾರವಾಡ ಪಾಲಿಕೆ ಆಯುಕ್ತರಿಗೆ ನೋಟಿಸ್ ಜಾರಿಗೊಳಿಸಿದ ಪೀಠ, ಆಕ್ಷೇಪಣೆ ಸಲ್ಲಿಸುವಂತೆ ಸೂಚಿಸಿ ವಿಚಾರಣೆ ನ.17ಕ್ಕೆ ಮುಂದೂಡಿತು.

ಸಾರ್ವಜನಿಕ ಸ್ಥಳಗಳಲ್ಲಿ ಹತ್ತಕ್ಕೂ ಅಧಿಕ ಮಂದಿ ಗುಂಪು ಸೇರುವುದನ್ನು ನಿರ್ಬಂಧಿಸಿ ಸರಕಾರ ಹೊರಡಿಸಿರುವ ಆದೇಶವು ಮೇಲ್ನೋಟಕ್ಕೆ ಸಂವಿಧಾನದ ಪರಿಚ್ಛೇದ 19(1)(ಎ) (ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ) ಹಾಗೂ 19(1)(ಬಿ) (ಶಸ್ತ್ರಾಸ್ತ್ರರಹಿತವಾಗಿ, ಶಾಂತಿಯುತವಾಗಿ ಒಟ್ಟುಗೂಡುವ) ಅಡಿಯಲ್ಲಿ ಸಾರ್ವಜನಿಕರಿಗೆ ದೊರೆತಿರುವ ಹಕ್ಕುಗಳನ್ನು ಕಸಿದುಕೊಳ್ಳುವಂತಿದೆ.

ಒಂದು ವೇಳೆ ಸರಕಾರದ ಆದೇಶವನ್ನು ಹೀಗೇ ಬಿಟ್ಟರೆ, ಸಾರ್ವಜನಿಕರ ಮೂಲಭೂತ ಹಕ್ಕುಗಳನ್ನು ಕಸಿದುಕೊಂಡಂತಾಗಲಿದೆ. ಈ ಹಿನ್ನೆಲೆಯಲ್ಲಿ ಸರಕಾರದ ಆದೇಶ ಜಾರಿ ಮಾಡುವುದಕ್ಕೆ ಅವಕಾಶವಿರುವುದಿಲ್ಲ. ಅಲ್ಲದೆ, ಸರಕಾರದ ಆದೇಶವು ಸಂವಿಧಾನದ ಪರಿಚ್ಛೇದ 13(2) (ಸಂವಿಧಾನದಲ್ಲಿ ಖಾತ್ರಿಪಡಿಸಿದ ಮೂಲಭೂತ ಹಕ್ಕುಗಳನ್ನು ಕಸಿದುಕೊಳ್ಳುವ ಅಥವಾ ಸಂಕ್ಷೇಪಿಸುವ ಯಾವುದೇ ಕಾನೂನನ್ನು ರಾಜ್ಯ ರಚಿಸಬಾರದು) ಅನ್ನು ಉಲ್ಲಂಘಿಸುವ ಹಿನ್ನೆಲೆಯಲ್ಲಿ, ಅ.18ರ ಸರಕಾರದ ಆದೇಶ ಹಾಗೂ ಆ ನಂತರದ ಎಲ್ಲ ಆದೇಶಗಳಿಗೆ ಮುಂದಿನ ವಿಚಾರಣೆಯವರೆಗೆ ತಡೆಯಾಜ್ಞೆ ನೀಡಲಾಗಿದೆ ಎಂದು ಹೈಕೋರ್ಟ್ ಆದೇಶದಲ್ಲಿ ಪೀಠ ವಿವರಿಸಿದೆ.

ಸರಕಾರದ ಆದೇಶದಲ್ಲಿ ಏನಿದೆ?

ರಾಜ್ಯದಲ್ಲಿ ಹಲವು ಖಾಸಗಿ ಸಂಸ್ಥೆಗಳು-ಸಂಘಗಳು ತಮ್ಮ ಚಟುವಟಿಕೆಗಳು, ಪ್ರಚಾರ, ತರಬೇತಿ, ಉತ್ಸವ ಹಾಗೂ ಸದಸ್ಯರು ಮತ್ತು ಬೆಂಬಲಿಗರ ಸಭೆ ನಡೆಸುವ ಉದ್ದೇಶದಿಂದ ಸಾರ್ವಜನಿಕ ಸ್ಥಳಗಳು, ಸರಕಾರದ ಆಸ್ತಿ, ಜಮೀನು, ಆಟದ ಮೈದಾನ, ಸಾರ್ವಜನಿಕ ರಸ್ತೆ ಇತ್ಯಾದಿಗಳನ್ನು ಸರಕಾರದ ಅಥವಾ ಸಂಬಂಧಿತ ಇಲಾಖೆಯಿಂದ ಮುಂಚಿತವಾಗಿ ಅನುಮತಿ ಪಡೆಯದೆ, ಅನೇಕ ಸಂದರ್ಭಗಳಲ್ಲಿ ಮಾಹಿತಿ ನೀಡದೆ ಬಳಸಿಕೊಳ್ಳುತ್ತಿರುವುದು ಕಂಡುಬಂದಿದೆ. ಇಂತಹ ಕ್ರಿಯೆಗಳು ಅಕ್ರಮ ಪ್ರವೇಶ ಎಂದು ಪರಿಗಣಿಸಲ್ಪಡುತ್ತವೆ ಮತ್ತು ಸಾರ್ವಜನಿಕ ಸುರಕ್ಷತೆಗೆ ಗಂಭೀರ ಬೆದರಿಕೆ ಉಂಟು ಮಾಡುತ್ತವೆ. ಈ ಕಾರಣದಿಂದ ಸರಕಾರದ ಯಾವುದೇ ಆಸ್ತಿ, ಸ್ಥಳದ ಬಳಕೆಯನ್ನು ಸಾರ್ವಜನಿಕ ಹಿತದೃಷ್ಟಿಯಿಂದ ನಿಯಂತ್ರಿಸುವುದಕ್ಕಾಗಿ ಯಾವುದೇ ಸಂಘಟನೆ, ಸಂಸ್ಥೆ, ಸಂಘವು ಆಯಾ ಸಾರ್ವಜನಿಕ ಆಸ್ತಿ, ಸ್ಥಳದ ಮಾಲೀಕತ್ವದ ಹೊಂದಿದ ಸಕ್ಷಮ ಪ್ರಾಧಿಕಾರಗಳಿಂದ ಪೂರ್ವಾನುಮತಿ ಪಡೆದು ಬಳಸಿಕೊಳ್ಳಲು ಅನುಮತಿ ನೀಡುವುದು ಕಡ್ಡಾಯವಾಗಿರುತ್ತದೆ ಎಂದು ಸರಕಾರದ ಆದೇಶದಲ್ಲಿ ಹೇಳಲಾಗಿದೆ.

ಹೈಕೋರ್ಟಿನ ತೀರ್ಪಿನಿಂದ ಸರಕಾರಕ್ಕೆ ಹಿನ್ನಡೆ ಆಗಿದೆ. ಅವರ ಕುತಂತ್ರ, ಷಡ್ಯಂತ್ರಕ್ಕೆ ತಡೆ ಕೊಟ್ಟಂತಾಗಿದೆ.

-ಬಿ.ವೈ ವಿಜಯೇಂದ್ರ
ಬಿಜೆಪಿ ರಾಜ್ಯಾಧ್ಯಕ್ಷ



ತಡೆಯಾಜ್ಞೆ ತೆರವಿಗೆ ಮುಂದಾಗಲಿ. ಯಾರು ಬೇಡ ಎಂದಿದ್ದಾರೆ. ಅವರೇನೇ ಮಾಡಿದರೂ ದೇಶದ ಕಾನೂನು ಎಲ್ಲರಿಗೂ ಒಂದೇ, ಅದು ಎಲ್ಲರನ್ನೂ ರಕ್ಷಿಸುತ್ತದೆ.

-ಛಲವಾದಿ ನಾರಾಯಣಸ್ವಾಮಿ
ಪರಿಷತ್ ವಿಪಕ್ಷ ನಾಯ

ಕಾಂಗ್ರೆಸ್‌ಗೆ ಎಚ್ಚರಿಕೆಯ ಪಾಠ: ಬಿಜೆಪಿ

ಸಾರ್ವಜನಿಕ ಸ್ಥಳಗಳಲ್ಲಿ ಸಂಘ ಸಂಸ್ಥೆಗಳ ಚಟುವಟಿಕೆಗಳನ್ನು ನಿರ್ಬಂಧಿಸುವ ಆದೇಶವನ್ನು ರದ್ದು ಮಾಡಿದ ಹೈಕೋರ್ಟ್ ತೀರ್ಪನ್ನು ಬಿಜೆಪಿ ಸ್ವಾಗತಿಸಿದ್ದು, ಇದು ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರಕ್ಕೆ ಎಚ್ಚರಿಕೆಯ ಸಂದೇಶ ಎಂದು ಹೇಳಿದೆ. ಟ್ವಿಟರ್‌ನಲ್ಲಿ ಹಂಚಿಕೊಂಡಿರುವ ಬಿಜೆಪಿ ನಾಯಕ, ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ, ಕಾಂಗ್ರೆಸ್ ಸರಕಾರಕ್ಕೆ ಇದು ಎಚ್ಚರಿಕೆಯ ಪಾಠ. ಸಂವಿಧಾನದ ಮೂಲ ಆಶಯಗಳನ್ನು ಗೌರವಿಸುವುದನ್ನು ಸರಕಾರ ಪಾಲಿಸಲಿ. ಸರಕಾರಿ ಆವರಣದಲ್ಲಿ ಕಾರ್ಯಕ್ರಮಗಳನ್ನು ನಡೆಸಲು ಖಾಸಗಿ ಸಂಸ್ಥೆಗಳು ಪೂರ್ವಾನುಮತಿ ಪಡೆಯುವುದನ್ನು ಕಡ್ಡಾಯಗೊಳಿಸುವ ರಾಜ್ಯ ಸರಕಾರದ ಆದೇಶಕ್ಕೆ ಹೈಕೋರ್ಟ್ ಧಾರವಾಡ ಪೀಠವು ತಡೆ ನೀಡಿದೆ ಎಂದು ಬರೆದುಕೊಂಡಿದ್ದಾರೆ.

ಕರ್ನಾಟಕ ಸರ್ಕಾರದ ಸ್ವಾಯುತ್ತ ಸಂಸ್ಥೆ
ಕೆ ಎಚ್ ಪಾಟೀಲ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ
ಹಿಂದಿನ ಹೆಸರು ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ
ಮುಳಗುಂದ ರಸ್ತೆ, ಮಲ್ಲಸಮುದ್ರ, ಗದಗ-582103
ದೂರವಾಣಿ ಸಂಖ್ಯೆ: 08372-200601 E-mail ID: gimsgadag@gmail.com
Web: www.gimsgadag.karnataka.gov.in
ಸಂ.ಕೆ.ಎಚ್.ಪಿ.ವೈ.ವಿ.ಸಂ/ಟೆಂಡರ್/ಮಾ.ಸಂ/09/2025-26 ದಿನಾಂಕ :27.10.2025
ಇ-ಟೆಂಡರ್ ಪ್ರಕಟಣೆ
ಕೆ.ಎಚ್.ಪಾಟೀಲ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಭೋಧಕ ಆಸ್ಪತ್ರೆ ಹಾಗೂ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆ ಗದಗ ಇಲ್ಲಿಗೆ ಬೇಕಾಗುವ ಮಾನವ ಸಂಪನ್ಮೂಲ ಒದಗಿಸಲು ಆಸಕ್ತಿಯುಳ್ಳ ಅಧಿಕೃತ ಸಂಸ್ಥೆಗಳಿಂದ ದ್ವಿ-ಲಕೋಟೆ ಪದ್ಧತಿಯಲ್ಲಿ ಇ-ಪ್ರೋಕ್ಯೂರ್‌ಮೆಂಟ್ ಮೂಲಕ ದಿನಾಂಕ: 29.10.2025 ರಿಂದ ದಿನಾಂಕ: 28.11.2025 ರ ಸಾಯಂಕಾಲ 4:00 ಗಂಟೆವರೆಗೆ ಇ-ಪೋರ್ಟಲ್ ಸಂಖ್ಯೆ: DME/2025-26/SE0585 https://kppp.karnataka.gov.in) ನಲ್ಲಿ ಟೆಂಡರ್ ಅಪ್‌ಲೋಡ್ ಮಾಡಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ ಟೆಂಡರ್ ವಿಭಾಗವನ್ನು ಸಂಪರ್ಕಿಸಬಹುದು.
ಸಹಿ/- ನಿರ್ದೇಶಕರು
ಕೆ.ಎಚ್.ಪಾಟೀಲ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ
ವಾ.ಸಾ.ಇ/ಗದಗ/348/ದೇಶಪಾಂಡೆಪಬ್ಲಿಸಿಟಿ/2025-26

ಮಹಾನಗರ ಪಾಲಿಕೆ ಕಾರ್ಯಾಲಯ, ದಾವಣಗೆರೆ.
ನಂ:ದಾಮಪಾ:ಕಾಅ2.ಇ.ಟೆಂಡರ್:34:2025-26 ದಿನಾಂಕ:24-10-2025
ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕೆಪಿಪಿಪಿ ಪೋರ್ಟಲ್ ಮುಖಾಂತರ)
2024-25 ನೇ ಸಾಲಿನ ಸಮುದಾಯ ಸಂಬಂಧಿತ ಸೌಲಭ್ಯಗಳಡಿ ಎಸ್.ಎಫ್.ಸಿ ನಿಧಿ ಉಳಿಕೆ.-01 ಕಾಮಗಾರಿಗಳು, 2025-26 ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿ.:-03 ಕಾಮಗಾರಿಗಳು, 2025-26 ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿ (2ನೇ ಕರೆ)-01 ಕಾಮಗಾರಿಗಳು, ದರ ಪಟ್ಟಿ ಆಹ್ವಾನ (2ನೇ ಕರೆ) -01 ಕಾಮಗಾರಿಗಳು, ಒಟ್ಟು 06 ಕಾಮಗಾರಿಗಳಿಗೆ ಕೆಪಿಪಿಪಿ ಪೋರ್ಟಲ್ ಮುಖಾಂತರ ಸಿಂಗಲ್/ಡಬಲ್ ಕವರ್ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದ್ದು, ಅರ್ಹ ಗುತ್ತಿಗೆದಾರರು/ಏಜನ್ಸಿದಾರರು/ಸರಬರಾಜುದಾರರು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ವೆಬ್ ಸೈಟ್ https://kppp.karnataka.gov.in ನಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು ಹೆಚ್ಚಿನ ವಿವರಗಳನ್ನು ಮಹಾನಗರ ಪಾಲಿಕೆಯ ಕಛೇರಿಯ ವೆಬ್ ಸೈಟ್ www.davanagerecity.mrc.gov.in ರಲ್ಲಿ ಹಾಗೂ ಕೆಪಿಪಿಪಿ ಸಹಾಯಕ ದೂರವಾಣಿ ಸಂಖ್ಯೆ: +91-8046010000 +91-8068948777 ರಿಂದ ಮಾಹಿತಿ ಪಡೆಯಬಹುದು. ಅಂದಾಜು ಮೊತ್ತ, ಟೆಂಡರ್‌ಗಿಟ್ಟ ಮೊತ್ತ, ಇ.ಎಂ.ಡಿ. ಮೊತ್ತ ಮತ್ತು ಟೆಂಡರ್ ದಿನಾಂಕಗಳಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಗಮನಿಸುವುದು ಹಾಗೂ ಯಾವುದೇ ಪತ್ರಿಕಾ ಪ್ರಕಟಣೆಗಳನ್ನು ಹೊರಡಿಸಲಾಗುವುದಿಲ್ಲ.
ಕ್ರಮ ಸಂ 01 ರಿಂದ 06 ಕಾಮಗಾರಿಗಳಿಗೆ : ಕೆ.ಪಿ.ಪಿ.ಪಿ.ಯಲ್ಲಿ ಟೆಂಡರ್ ದಾಖಲೆಗಳನ್ನು ಪಡೆಯಬಹುದಾದ ದಿನಾಂಕ: 29-10-2025 ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ & ವೇಳೆ : 12-11-2025 ಸಮಯ : 16.00 ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ : 12-11-2025 ಸಮಯ : 17.00
ಟೆಂಡರ್/ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 14-11-2025 ಸಮಯ : 11.00
ವಾಸಾಇ/ದಾವಣಗೆರೆ/439/ಕೆಎಸ್‌ಎಂಸಿಎ/2025-26
ಸಹಿ/-ಕಾರ್ಯಪಾಲಕ ಅಭಿಯಂತರರು, ಮಹಾನಗರ ಪಾಲಿಕೆ, ದಾವಣಗೆರೆ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮೈಸೂರು
ದೂ: 0821-2443347, ಇ-ಮೇಲ್: eemidmysore@yahoo.co.in
ಸಂಖ್ಯೆ: ಟೆಂಡರ್-20/2025-26 ದಿನಾಂಕ: 28.10.2025
ಟೆಂಡರ್ ಪ್ರಕಟಣೆ
ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ನಜರ್‌ಬಾದ್, ಮೈಸೂರು-570010 ರವರು ಕೆ.ಡಬ್ಲ್ಯು-4 ಮತ್ತು 2ರ ರೀತ್ಯ ಒಟ್ಟು 06 ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದ್ದು, ಇವುಗಳಲ್ಲಿ ಟೆಂಡರ್‌ಗಿಟ್ಟ ಕನಿಷ್ಠ ಮೊತ್ತ ರೂ 24.60 ಲಕ್ಷಗಳು, ಮತ್ತು ಗರಿಷ್ಠ ಮೊತ್ತ ರೂ 164.00 ಲಕ್ಷಗಳು, ಇ.ಎಂ.ಡಿ ಕನಿಷ್ಠ ಮೊತ್ತ ರೂ. 0.37 ಲಕ್ಷಗಳು ಮತ್ತು ಗರಿಷ್ಠ ಮೊತ್ತ ರೂ 2.46 ಲಕ್ಷಗಳಾಗಿರುತ್ತದೆ. (ಜಿಎಸ್‌ಟಿ ಹೊರತುಪಡಿಸಿ) ಈ ಕಾಮಗಾರಿಗಳನ್ನು ಕೈಗೊಳ್ಳುವ ಸಲುವಾಗಿ ಟೆಂಡರನ್ನು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ನಲ್ಲಿನ ಷರತ್ತುಗಳಿಗನುಗುಣವಾಗಿ ಕರೆಯಲಾಗಿದ್ದು, ಕೆ.ಪಿ.ಪಿ. ಪೋರ್ಟಲ್ ಮೂಲಕ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಬಿಡ್ಡನ್ನು ಆಹ್ವಾನಿಸಲಾಗಿದೆ. ಸದರಿ ಟೆಂಡರ್‌ಗೆ ಸಂಬಂಧಿಸಿದ ಮಾಹಿತಿಗಳು ಈ ಕೆಳಕಂಡಂತಿರುತ್ತವೆ.
ಟೆಂಡರ್‌ಗೆ ಸಂಬಂಧಿಸಿದ ಮಾಹಿತಿಗಳನ್ನು ಕಛೇರಿಯ ವೇಳೆಯಲ್ಲಿ ದಿನಾಂಕ: 28.10.2025, ಸಂಜೆ 5.30ರೊಳಗೆ ಪಡೆಯಬಹುದಾಗಿರುತ್ತದೆ. ಭರ್ತಿಮಾಡಿದ ಟೆಂಡರ್ ದಾಖಲೆಗಳು ಮತ್ತು ಬಿಡ್‌ನ್ನು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಸಲ್ಲಿಸಲು ಕಡೆಯ ದಿನಾಂಕ: 05.11.2025 ಸಂಜೆ 5.30 ಗಂಟೆಗೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 07.11.2025ರ ಬೆಳಿಗ್ಗೆ 11.00 ಗಂಟೆಯ ನಂತರ. ಆರ್ಥಿಕ ಬಿಡ್ ತೆರೆಯುವ ದಿನಾಂಕ: 10.11.2025ರ ಬೆಳಿಗ್ಗೆ 11.00 ಗಂಟೆಯ ನಂತರ. ಟೆಂಡರ್ ದಾಖಲಾತಿಗಳನ್ನು ವೆಬ್‌ಸೈಟ್ https://kppp.karnataka.gov.in ರಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು.
ವಿ.ಸೂ: ಸದರಿ ಕಾಮಗಾರಿಯ ಟೆಂಡರ್ ಅನ್ನು ಮುಂದೂಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಹಾಗೂ ಯಾವುದೇ ಬಿಡ್‌ನ್ನು ತಿರಸ್ಕರಿಸುವ ಹಕ್ಕನ್ನು ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮೈಸೂರು ಇವರಿಗೆ ಕಾಯ್ದಿರಿಸಲಾಗಿದೆ. ಹಾಗೂ ಈ ಪ್ರಕಟಣೆಗೆ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿಗಳನ್ನು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.
ಸಹಿ/- ಕಾರ್ಯಪಾಲಕ ಇಂಜಿನಿಯರ್
ಸನೀ ಮತ್ತು ಅಂ.ಅ.ವಿಭಾಗ, ಮೈಸೂರು
DIPR/MYS/1136/SA/2025-26

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
(www.kpwd.gov.in)
ಕಾರ್ಯಪಾಲಕ ಅಭಿಯಂತರವರ ಕಛೇರಿ, ಲೋ.ಇ ವಿಶೇಷ ವಿಭಾಗ, ಶಿವಮೊಗ್ಗ
ದೂರವಾಣಿ ಸಂಖ್ಯೆ: 08182-222943 Email ID: spdivision@gmail.com
ಆಸಕ್ತಿ ವ್ಯಕ್ತಪಡಿಸುವಿಕೆ ಆಹ್ವಾನಕ್ಕಾಗಿ
ಟೆಂಡರ್ ಅಧಿಸೂಚನೆ (ಇ ಒ ಐ)
ಐಎಫ್‌ಟಿ ಸಂಖ್ಯೆ. 20/2025-26 ದಿನಾಂಕ : 24.10.2025
ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಇವರು ಕರ್ನಾಟಕ ರಾಜ್ಯಪಾಲರ ಪರವಾಗಿ ಹರಿಹರ - ಶಿವಮೊಗ್ಗ ರಾಜ್ಯ ಹೆ- 25 ರ ಸಿ ಎಚ್ 104.36 ರಿಂದ 191.00 ರ ವರೆಗಿನ (ಹರಿಹರ-ಹೊನ್ನಾಳಿ -ಶಿವಮೊಗ್ಗ ಮೂಲಕ) ರಸ್ತೆಯನ್ನು ವಿನ್ಯಾಸ, ನಿರ್ಮಾಣ, ಕಾರ್ಯಾಚರಣೆ, ಹಣಕಾಸು ಮತ್ತು ವರ್ಗಾವಣೆ ಮಾದರಿಯಡಿಯಲ್ಲಿ (ಡಿಬಿಒಎಫ್‌ಟಿ) ಸುಧಾರಣೆ ಮತ್ತು ಅಭಿವೃದ್ಧಿಗೊಳಿಸಲು ನಿರ್ಮಾಣ ಕಂಪನಿ / ಸಂಸ್ಥೆ / ಗುತ್ತಿಗೆದಾರರನ್ನು ಆಯ್ಕೆ ಮಾಡಲು ಪ್ರಸ್ತಾವನೆಗಳಿಗಾಗಿ ವಿನಂತಿಯನ್ನು (ಆರ್‌ಎಫ್‌ಪಿ) ಕಾರ್ಯಗತಗೊಳಿಸಲು ಟೆಂಡರ್ ಆಹ್ವಾನಿಸಿದೆ. PWD/2025-26/PREQUAL_TENDER_NUMBER_28.
ಇ ಒ ಐ ಸಲ್ಲಿಸಲು ನಿಗಧಿಪಡಿಸಿದ ದಿನಾಂಕ ಮತ್ತು ಸಮಯ : 24.10.2025 ರಿಂದ 25.11.2025, ಸಂಜೆ 5.30 ಗಂಟೆವರೆಗೆ. ಪೂರ್ವಭಾವಿ ಸಭೆಯು ದಿನಾಂಕ 10.11.2025 ರ ಬೆಳಿಗ್ಗೆ 11.30 ಗಂಟೆಗೆ ಮುಖ್ಯ ಅಭಿಯಂತರರ ಕಚೇರಿ, ಲೋಕೋಪಯೋಗಿ ಇಲಾಖೆ, ಸಿ ಅಂಡ್ ಬಿ (ಸೆಂಟ್ರಲ್), ಶಿವಮೊಗ್ಗ ಇಲ್ಲಿ ನಡೆಯಲಿರುವುದು. ಅಲ್ಲದೆ, ಅರ್ಜಿದಾರರು ರಾಷ್ಟ್ರೀಕೃತ/ ಶೆಡ್ಯೂಲ್ಡ್ ಬ್ಯಾಂಕಿನಿಂದ ಮರುಪಾವತಿಸಲಾಗದ ರೂ 50,000/- ಗಳ ಡಿಡಿಯನ್ನು ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ವಿಶೇಷ ವಿಭಾಗ, ಶಿವಮೊಗ್ಗ ಇವರ ಹೆಸರಿನಲ್ಲಿ EOI ಪ್ರಕ್ರಿಯೆ ಶುಲ್ಕಗಳಿಗಾಗಿ ಸಲ್ಲಿಸಬೇಕು. ವಿವರವಾದ ನಿಯಮಗಳು ಮತ್ತು ಷರತ್ತುಗಳು EOI ಬಿಡ್ ದಾಖಲೆಯಲ್ಲಿ ಲಭ್ಯವಿದೆ. ಹೆಚ್ಚಿನ ವಿವರಗಳನ್ನು ಕೆಳಗೆ ಸಹಿ ಮಾಡಿರುವವರ ಕಚೇರಿಯಲ್ಲಿ ಕಚೇರಿ ಸಮಯದಲ್ಲಿ ಪಡೆದುಕೊಳ್ಳಬಹುದು. ಟೆಂಡರ್ ಅಧಿಸೂಚನೆಯಲ್ಲಿ ಯಾವುದೇ ತಿದ್ದುಪಡಿ / ಬದಲಾವಣೆಗಳಿದ್ದಲ್ಲಿ ಅದನ್ನು ಕೆ ಪಿ ಪಿ ಪಿ ಯಲ್ಲಿ ಪ್ರಕಟಿಸಲಾಗುವುದು (https://kppp.karnataka.gov.in).
ಸಹಿ/-
ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಶಿವಮೊಗ್ಗ
DIPR/SMG/No-120-10/zenkar/2025-26

ಸಮಾಚಾರ ಸಣ್ಣದಲ್ಲ

ಸಚಿವ ಮುನಿಯಪ್ಪಗೆ ಮಹಿಳೆಯರು ತರಾಟೆ

ದೇವನಹಳ್ಳಿ: ಚನ್ನರಾಯಪಟ್ಟಣ ಹೋಬಳಿ ಯಲಿಯೂರು ಗ್ರಾಮ ಪಂಚಾಯತಿಯಲ್ಲಿ ನಂದಿನಿ ಭವನ ಉದ್ಘಾಟನೆಗೆ ಬಂದಿದ್ದ ಸಚಿವ ಕೆ.ಎಚ್.ಮುನಿಯಪ್ಪ ಅವರಿಗೆ ಗ್ರಾಮದ ಮಹಿಳೆಯರು ತರಾಟೆಗೆ ತೆಗೆದುಕೊಂಡಿದ್ದಾರೆ. ಯಲಿಯೂರು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಮೂಲಸೌಕರ್ಯ ಮರೀಚಿಕೆಯಾಗಿದೆ. ಕುಡಿಯುವ ನೀರು, ಸುಸಜ್ಜಿತ ರಸ್ತೆ, ಚರಂಡಿ ವ್ಯವಸ್ಥೆ ಮಾಡುವಂತೆ ಸಚಿವರಿಗೆ ಮಹಿಳೆಯರು ಅರ್ಜಿ ನೀಡಿ ಆಗ್ರಹಿಸಿದರು. ಬಡವರ ನಿವೇಶನಗಳನ್ನು ಉಳ್ಳವರಿಗೆ ಮಂಜೂರಿ ಮಾಡಲಾಗುತ್ತಿದೆ. ದೀನ ದಲಿತರಿಗೆ ಏಳಿಗೆಗೆ ತುಸುವಾದರೂ ಕೆಲಸ ಮಾಡಿ ಎಂದು ಮಹಿಳೆಯರು ಸಚಿವರನ್ನು ತರಾಟೆಗೆ ತೆಗೆದುಕೊಂಡರು.

ವಾಹನ ಹರಿದು ಸವಾರರಿಬ್ಬರು ಸಾವು

ದೊಡ್ಡಬಳ್ಳಾಪುರ: ಕೆಲಸಕ್ಕೆ ಎಂದು ಹೊರಟ ಯುವಕರು ಹಿಟ್ ಅಂಡ್ ರನ್‌ಗೆ ಬಲಿಯಾಗಿರುವ ಘಟನೆ ದೊಡ್ಡಬಳ್ಳಾಪುರ ತಾಲೂಕಿನ ರಾಮಯ್ಯನ ಪಾಳ್ಯದ ಬಳಿ ಮಂಗಳವಾರ ಬೆಳಗ್ಗೆ ಸುಮಾರು 6 ಗಂಟೆಗೆ ಸಂಭವಿಸಿದೆ. ದೊಡ್ಡಬಳ್ಳಾಪುರ ತಾಲೂಕಿನ ತೂಬಗೆರೆ ಮೂಲದ ನಂದನ್ (22) ಮತ್ತು ರವಿಕುಮಾರ್(24) ಮೃತಪಟ್ಟವರು. ಮೃತ ಯುವಕರು ಎಲ್‌ಆಂಡ್‌ಟಿ ಫ್ಯಾಕ್ಟರಿಯ ಕೆಲಸಗಾರರಾಗಿದ್ದು, ಬೆಳಗ್ಗೆ ಕೆಲಸಕ್ಕೆ ಎಂದು ಬೈಕಿನಲ್ಲಿ ಇಬ್ಬರು ತೂಬಗೆರೆ ಕಡೆಯಿಂದ ದೊಡ್ಡಬಳ್ಳಾಪುರದ ಕಡೆಗೆ ಬರುವಾಗ ರಾಮಯ್ಯನ ಪಾಳ್ಯದಲ್ಲಿ ವಾಕಿಂಗ್ ಮಾಡುವ ವ್ಯಕ್ತಿಯೊಬ್ಬರು ಬೈಕಿಗೆ ಅಡ್ಡಬಂದಿದ್ದರು. ಆ ವ್ಯಕ್ತಿಯನ್ನು ಪಾರು ಮಾಡಲು ಹೋಗಿ ಸ್ಕಿಡ್ ಆಗಿ ಬಿದ್ದಿದ್ದಾರೆ. ಆಗ ಅಪರಿಚಿತ ವಾಹನವು ಬೈಕ್ ಸವಾರರ ತಲೆ ಮೇಲೆ ಹರಿದಿದೆ. ತೀವ್ರ ರಕ್ತ ಸ್ರಾವದಿಂದ ಬೈಕ್ ಸವಾರರು ಸಾವನ್ನಪ್ಪಿದ್ದಾರೆಂದು ಸ್ಥಳೀಯರು ತಿಳಿಸಿದ್ದಾರೆ. ಅಪಘಾತದ ಬಳಿಕ ಚಾಲಕ ವಾಹನ ನಿಲ್ಲಿಸದೇ ಪರಾರಿಯಾಗಿದ್ದಾನೆ. ಸ್ಥಳಕ್ಕೆ ದೊಡ್ಡಬಳ್ಳಾಪುರ ಗ್ರಾಮಾಂತರ ಪೊಲೀಸರು ದೌಡಾಯಿಸಿ ಪರಿಶೀಲನೆ ನಡೆಸಿದ್ದಾರೆ. ಈ ಕುರಿತು ದೊಡ್ಡಬಳ್ಳಾಪುರ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ನಶೆಯಲ್ಲಿ ಫೈರಿಂಗ್ ಮಾಡಿಕೊಂಡ ವ್ಯಕ್ತಿ

ಕೊಪ್ಪಳ: ಕುಕನೂರು ತಾಲೂಕಿನ ಚಿಕ್ಕಬಿಡನಾಳ ಗ್ರಾಮದಲ್ಲಿ ಮದ್ಯ ಕುಡಿದ ಅಮಲಿನಲ್ಲಿ ವ್ಯಕ್ತಿಯೊಬ್ಬ ತನ್ನ ಎದೆಗೆ ನಾಡ ಬಂದೂಕಿನಿಂದ ಫೈರಿಂಗ್ ಮಾಡಿಕೊಂಡಿದ್ದು, ಕೊಪ್ಪಳ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. 29 ವರ್ಷದ ಆನಂದ ಪೊಲೀಸ್ ಪಾಟೀಲ್ ಫೈರಿಂಗ್ ಮಾಡಿಕೊಂಡವರು. ಆನಂದ ತನ್ನ ಪತ್ನಿ, ತಾಯಿ ಮತ್ತು ತಂದೆಯಿಂದ ದೂರವಾಗಿ ಹೊಲದ ತಗಡಿನ ಮನೆಯಲ್ಲಿ ವಾಸವಾಗಿದ್ದನು. ಹೊಲದ ಮನೆಯಲ್ಲಿ ಇರುವ ವೇಳೆ ಫೈರಿಂಗ್ ಮಾಡಿಕೊಂಡಿದ್ದು, ಅಕ್ರಮವಾಗಿ ಶಸ್ತ್ರಾಸ್ತ್ರ ಹೊಂದಿದ್ದರಿಂದ ಕುಕನೂರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ವೈಟಿಪಿಎಸ್ ಘಟಕದಲ್ಲಿ ಬೆಂಕಿ: ತಪ್ಪಿದ ಅನಾಹುತ

ರಾಯಚೂರು: ನಗರದ ಹೊರವಲಯದ ಯರಮರಸ್ ಶಾಖೋತ್ಪನ್ನ ವಿದ್ಯುತ್ ಕೇಂದ್ರ (ವೈಟಿಪಿಎಸ್)ನ ಘಟಕದಲ್ಲಿ ಮಂಗಳವಾರ ಬೆಳಗಿನ ಜಾವ ಬೆಂಕಿ ಅವಘಡ ಸಂಭವಿಸಿ, ಲಕ್ಷಾಂತರ ರೂಪಾಯಿ ನಷ್ಟ ಉಂಟಾಗಿದೆ. ಹೊತ್ತಿ ಉರಿದ ಬೆಂಕಿಯಿಂದ ಆತಂಕ ಗೊಂಡ ಅಧಿಕಾರಿಗಳು ಅಗ್ನಿ ಶಾಮಕ ದಳ ಸಿಬ್ಬಂದಿಗೆ ಮಾಹಿತಿ ನೀಡಿದ್ದು, ಸ್ಥಳಕ್ಕೆ ಆಗಮಿಸಿದ ಅಗ್ನಿ ಶಾಮಕದ ಸಿಬ್ಬಂದಿ ಬೆಂಕಿ ನಂದಿಸಿದ್ದಾರೆ. ವೈಟಿಪಿಎಸ್ ಘಟಕದ ಕಲ್ಲಿದ್ದಲು ಸಾಗಣೆ ಬೆಲ್ಟ್ -ಕೋಲ್ ಕನ್ವೆಯರ್ ಬೆಲ್ಟ್ ಕಿತ್ತಿರುವುದರಿಂದ ಬೆಂಕಿ ಕಾಣಿಸಿಕೊಂಡಿದೆ ಎಂದು ಹೇಳ ಲಾಗುತ್ತದೆ. ಸದ್ಯಕ್ಕೆ ಯಾವುದೇ ಪ್ರಾಣಾಪಾಯವಾಗಿಲ್ಲವೆಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ವಿಶ್ವವಾಣಿ ಕ್ಲಬ್ ಹೌಸ್
29.10.2025
ಸಂಜೆ: 06.55 ರಿಂದ 08.05 ರವರೆಗೆ
ಬುಧವಾರದ ಅತಿಥಿ

ಡಾ.ರಾಘವೇಂದ್ರ
ವಿಷಯ
ಕ್ಯಾನ್ಸರ್ ಜ್ಞಾನ ವಿಜ್ಞಾನ ಸುಜ್ಞಾನ
vishwavani.news

ಬಹುದಿನಗಳ ಕನಸು ನನಸಾಗಿಸಿದ ಸಿಎಂ, ಡಿಸಿಎಂ | ಕಾನ್‌ಸ್ಟೆಬಲ್‌ಗಳಿಗೂ ಇನ್‌ಸ್ಪೆಕ್ಟರ್ ಮಾದರಿಯ ಪಿ ಕ್ಯಾಪ್

ರಾಜ್ಯದ ಪೊಲೀಸರಿಗೆ ಪಿ ಕ್ಯಾಪ್ ಭಾಗ್ಯ!

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯದ ಪೊಲೀಸ್ ಕಾನ್‌ಸ್ಟೆಬಲ್ ಹಾಗೂ ಹೆಡ್ ಕಾನ್‌ಸ್ಟೆಬಲ್‌ಗಳು ಧರಿಸುತ್ತಿದ್ದ ಸ್ಲೋಚ್ ಹ್ಯಾಟ್ ಬದಲಿಗೆ 'ಪಿ-ಕ್ಯಾಪ್' ಹೊಸ ಟೋಪಿಗಳು ಮಂಗಳವಾರ ಪೊಲೀಸರ ಕೈಸೇರಿವೆ.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಗೃಹ ಸಚಿವ ಜಿ.ಪರಮೇಶ್ವರ ಅವರು ಹೊಸ ಕ್ಯಾಪ್‌ಗಳನ್ನು ವಿತರಣೆ ಮಾಡಿದರು.

56 ವರ್ಷಗಳ ಬಳಿಕ ಪೊಲೀಸ್ ಸಿಬ್ಬಂದಿಗೆ ಹೊಸದಾಗಿ ನೀಡಲಾಗುತ್ತಿರುವ ಪಿ ಕ್ಯಾಪ್‌ನಲ್ಲಿ ಬದಲಾವಣೆ ಅಷ್ಟೇ ಅಲ್ಲದೆ ದಕ್ಷತೆ ಮೆರೆಯುವ ಮೂಲಕ ವೃತ್ತಿಯಲ್ಲಿ ಬದಲಾವಣೆಯಾಗಬೇಕು. ಹಲವು ವರ್ಷಗಳಿಂದ ಕಾನ್‌ಸ್ಟೆಬಲ್ ಧರಿಸುತ್ತಿದ್ದ ಸ್ಲೋಚ್ ಕ್ಯಾಪ್ ಬದಲು ಪಿ ಕ್ಯಾಪ್ ಆಯ್ಕೆ ಮಾಡಿದ್ದು ನಾನೇ. ದಕ್ಷತೆಯಿಂದ ಕೆಲಸ ಮಾಡುವ ಮೂಲಕ ಸರಕಾರಕ್ಕೆ ಒಳ್ಳೆಯ ಹೆಸರು ತನ್ನಿ. ಕ್ಯಾಪ್ ಬದಲಾವಣೆಯಷ್ಟೇ ಅಲ್ಲದೆ, ವೃತ್ತಿಯಲ್ಲಿಯೂ ದಕ್ಷತೆಯಿಂದ ಕಾರ್ಯನಿರ್ವಹಿಸುವ ರೀತಿಯಲ್ಲಿ ಬದಲಾವಣೆ ಕಾಣಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪೊಲೀಸರಿಗೆ ಕಿವಿಮಾತು ಹೇಳಿದರು.

ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರು ಮಾತನಾಡಿ, ಪೊಲೀಸ್ ಇಲಾಖೆಯಲ್ಲಿ ಹೊಸ ಹೆಜ್ಜೆ ಇಟ್ಟಿದ್ದೇವೆ. ಇಂದು ಸುವರ್ಣಾಕ್ಷರಗಳಲ್ಲಿ ಬರೆದ ದಿನವಾಗಲಿದೆ. ಬ್ರಿಟಿಷ್ ಕಾಲದಲ್ಲಿ ನಮ್ಮ ಪೊಲೀಸರಿಗೆ ನೀಡಲಾಗುತ್ತಿದ್ದ ಹಾಗೂ ಸ್ವಾತಂತ್ರ್ಯ ನಂತರ ಧರಿಸಿಕೊಳ್ಳುತ್ತಿದ್ದ ಪೊಲೀಸ್ ಕ್ಯಾಪ್‌ನಲ್ಲಿ ಬದಲಾವಣೆ ಮಾಡಿದ್ದೇವೆ. 1973ರಲ್ಲಿ ಕರ್ನಾಟಕದಲ್ಲಿ ದಿ.ದೇವರಾಜ ಅರಸು ಸಿಎಂ ಆಗಿದ್ದಾಗ ಸ್ಲೋಚ್ ಕ್ಯಾಪ್ ನೀಡಲಾಗಿತ್ತು. ಈ ಕ್ಯಾಪ್ ಬದಲಾವಣೆ ಮಾಡುವಂತೆ ಈ ಹಿಂದೆ ಸರಕಾರಕ್ಕೆ ಪ್ರಸ್ತಾವನೆ ಬಂದಿದ್ದವು. 2015ರಲ್ಲಿ ಕ್ಯಾಪ್ ಬದಲಾವಣೆ ಮಾಡುವ ಚಿಂತನೆಯಿತ್ತು. ಅದರೆ, ಕೈಗೂಡಲಿಲ್ಲ. ಈ ಬಾರಿ ಕ್ಯಾಪ್ ಬದಲಾವಣೆಗೆ ಬೇಡಿಕೆ ಸಂಬಂಧ ಈ ಬಗ್ಗೆ ಅನ್ಯ ರಾಜ್ಯಗಳ ಪೊಲೀಸರು ಧರಿಸುವ ಕ್ಯಾಪ್ ಬಗ್ಗೆ ಅಧ್ಯಯನ ಮಾಡಲಾಗಿದೆ. ಅಂತಿಮವಾಗಿ ಸಿದ್ದರಾಮಯ್ಯ ಅವರು ಪಿ ಕ್ಯಾಪ್ ಅನ್ನು ಆಯ್ಕೆ ಮಾಡಿದ್ದಾರೆ ಎಂದು ಹರ್ಷ ವ್ಯಕ್ತಪಡಿಸಿದರು.

ಆಧುನಿಕ ವಿನ್ಯಾಸದಿಂದ ಕೂಡಿರುವ ಪಿ ಕ್ಯಾಪ್: ಹಳೆಯ ಸ್ಲೋಚ್ ಕ್ಯಾಪ್ ಅನ್ನು ದಶಕಗಳಿಂದ ಭಾರತೀಯ ಪೊಲೀಸರು ಧರಿಸುತ್ತಿದ್ದರು. ಆದರೆ, ಕಾಲಕ್ಕೆ ತಕ್ಕಂತೆ ಸಮಗ್ರ ಪೊಲೀಸ್ ಸಮೂಹದಲ್ಲಿ ಆಧುನಿಕ ಬದಲಾವಣೆ ತರುವ ಅಗತ್ಯವನ್ನು ಸರಕಾರ ಮನಗಂಡಿತು. ಹೊಸ ಪಿ ಕ್ಯಾಪ್ ಅದರ ಆಧುನಿಕ ವಿನ್ಯಾಸ, ಹಗುರವಾದ ತೂಕ ಮತ್ತು ಅತ್ಯಾಧುನಿಕ ಕಪ್ಪು ಬಣ್ಣದಿಂದ ಕೂಡಿದೆ. ಇದು ಪೊಲೀಸ್ ಸಿಬ್ಬಂದಿಗಳಿಗೆ ಹೆಚ್ಚು ಆರಾಮದಾಯಕವಾಗಿದ್ದು, ಅವರ ನೋಟಕ್ಕೆ ಹೆಚ್ಚು ಶಿಸ್ತುಬದ್ಧ ಮತ್ತು ಪ್ರಭಾವಶಾಲಿ ರೂಪ ನೀಡುತ್ತದೆ. ತೆಲಂಗಾಣದಲ್ಲಿ ಯಶಸ್ವಿಯಾಗಿ ಜಾರಿಗೊಳಿಸಲಾಗಿರುವ ಈ ಮಾದರಿಯೇ ಕರ್ನಾಟಕಕ್ಕೂ ಆಯ್ಕೆಯಾಗಿದೆ.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ಪೊಲೀಸ್ ಸಿಬ್ಬಂದಿಗೆ 'ಪಿ-ಕ್ಯಾಪ್' ನೂತನ ಟೋಪಿಗಳನ್ನು ವಿತರಿಸಿದರು.

ಕರ್ತವ್ಯ ನಿಷ್ಠೆಯಲ್ಲಿ ರಾಜಿಯಾಗಬೇಡಿ: ಡಿಸಿಎಂ

ಯಾವುದೇ ಸರಕಾರ ಬಂದರೂ ನಿಮ್ಮ ಆತ್ಮವಿಶ್ವಾಸ ಹಾಗೂ ಕರ್ತವ್ಯ ನಿಷ್ಠೆಯಲ್ಲಿ ರಾಜಿಯಾಗಬಾರದು. ಒಂದು ವೇಳೆ ರಾಜಿ ಮಾಡಿಕೊಂಡರೆ ಸಂಪೂರ್ಣವಾಗಿ ವ್ಯವಸ್ಥೆ ಕುಸಿಯಲಿದೆ. ಸಮಾಜ ಹಾಗೂ ಸರಕಾರ ಪೊಲೀಸರ ಮೇಲೆ ಬಹಳ ವಿಶ್ವಾಸ ಇಟ್ಟಿರುತ್ತದೆ. ನೀವೇ ಸಮಾಜ ರಕ್ಷಕರು. ನಾವು ಅಧಿಕಾರಕ್ಕೆ ಬಂದು ಪ್ರಮಾಣವಚನ ಸ್ವೀಕಾರ ಮಾಡುವ ವೇಳೆ ನಾನು ಸ್ವಲ್ಪ ಖಾರವಾಗಿಯೇ ಮಾತನಾಡಿದ್ದೆ. ಕಳೆದ ಸರಕಾರದ ಅವಧಿಯಲ್ಲಿ ಆಯುಧ ಪೂಜೆಯ ಸಂದರ್ಭ ಕೆಲವರು ವಿಜಯಪುರ ಹಾಗೂ ಉಡುಪಿಯಲ್ಲಿ ಸಮವಸ್ತ್ರ ತೆಗೆದು ಕೇಸರಿ ವಸ್ತ್ರ ಧರಿಸಿದ್ದರು. ರಾಜ ಕೀಯ ಒತ್ತಡ ಅಥವಾ ಬೇರೆಯವರನ್ನು ಮೆಚ್ಚಿಸಲು ಈ ರೀತಿ ಮಾಡಿದರೆ ನಿಮ್ಮನ್ನು ನೀವು ಮಾರಿಕೊಂಡಂತೆ. ನೀವುಗಳು ರಾಜಕೀಯ ಹಿಂಬಾಲಕರಾಗುತ್ತೀರಿ. ಆಗ ನಿಮ್ಮನ್ನು ಯಾರು ನಂಬುತ್ತಾರೆ? ನೀವು ಯಾವುದೇ ಕಾರಣಕ್ಕೂ ಅವಕಾಶ ಮಾಡಿ ಕೊಡಬೇಡಿ ಎಂದು ಡಿಕೆಶಿ ಕಿವಿಮಾತು ಹೇಳಿದರು.

ಪಿ-ಕ್ಯಾಪ್ ನೂತನ ಟೋಪಿಗಳನ್ನು ಧರಿಸಿ ವಿಧಾನಸೌಧದ ಮೆಟ್ಟಿಲುಗಳ ಮೇಲೆ ನಿಂತು ಪೊಲೀಸ್ ಸಿಬ್ಬಂದಿ ಸೆಲ್ಫಿ ತೆಗೆದುಕೊಂಡು ಸಂತಸಗೊಂಡರು.

> ಇಂಡಿಯಾ ಜಸ್ಟೀಸ್ ವರದಿಯಂತೆ ನ್ಯಾಯ ವ್ಯವಸ್ಥೆಯಲ್ಲಿ ದೇಶದ ಇತರೆ ರಾಜ್ಯಗಳಿಗಿಂತ ಕರ್ನಾಟಕ ಮೊದಲ ಸ್ಥಾನದಲ್ಲಿದೆ. ಪೊಲೀಸರು ಅಪರಾಧಿಗಳು ಹಾಗೂ ಕ್ರಿಮಿನಲ್‌ಗಳೊಂದಿಗೆ ಸಂಬಂಧ ಇಟ್ಟುಕೊಳ್ಳಬಾರದು. ದಿನೇ ದಿನೇ ಪೊಲೀಸರೆಂದರೆ ಕ್ರಿಮಿನಲ್‌ಗಳಿಗೆ ಭಯ ಕಡಿಮೆಯಾಗುತ್ತಿದೆ. ಯಾಕೆ ಕಡಿಮೆಯಾಗಿದೆ ಎಂಬುದನ್ನು ಆತ್ಮಾವಲೋಕನ ಮಾಡಿಕೊಳ್ಳಿ.
> **-ಸಿದ್ದರಾಮಯ್ಯ**, ಮುಖ್ಯಮಂತ್ರಿ

ಪಿ ಕ್ಯಾಪ್ ವಿಶೇಷತೆ

- ಆಧುನಿಕ ವಿನ್ಯಾಸ, ಹಗುರವಾದ ತೂಕ
- ಸುರಕ್ಷಿತವಾದ ಅತ್ಯಾಧುನಿಕ ಕಪ್ಪು ಬಣ್ಣ
- ಪೊಲೀಸ್ ಸಿಬ್ಬಂದಿ ತಲೆಗೆ ಹೆಚ್ಚು ಆರಾಮದಾಯಕ
- ಓಡುವ ವೇಳೆ ನೆಲಕ್ಕೆ ಬೀಳದಂತೆ ತಲೆಗೆ ಹೊಂದಿಕೆ
- ಪೊಲೀಸ್ ಸಿಬ್ಬಂದಿ ಖಾಕಿ ಧಿರಿಸಿಗೆ ಇನ್ನಷ್ಟು ಮೆರುಗು
- ಪೊಲೀಸರಿಗೆ ಶಿಸ್ತು ಬದ್ಧ ನೋಟ, ಪ್ರಭಾವಶಾಲಿ ರೂಪ

ಆಂತರಿಕ ಕಲಹ ಸರಕಾರ ಪತನ: ಜಗದೀಶ್ ಶೆಟ್ಟರ್

ಚಾಮರಾಜನಗರ: ಪಕ್ಷದಲ್ಲಿ ಆಂತರಿಕ ಕಲಹ ಮುಂದುವರಿದರೆ ಸರಕಾರ ಇರುವುದಿಲ್ಲ, 5 ವರ್ಷ ಸಿಎಂ ಆಗಿ ಸಿದ್ದರಾಮಯ್ಯ ಕೂಡ ಇರಲ್ಲ, ಸರಕಾರನೂ ಇರಲ್ಲ ಎಂದು ಮಾಜಿ ಸಿಎಂ, ಸಂಸದ ಜಗದೀಶ್ ಶೆಟ್ಟರ್ ಹೇಳಿದರು. ಚಾಮರಾಜನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್ ನಡುವೆ ಆಂತರಿಕ ಫೈಟ್ ಜೋರಿದೆ. 2.5 ವರ್ಷ ಅಧಿಕಾರ ಹಂಚಿಕೆಗೆ ಸಿದ್ದರಾಮಯ್ಯ ಒಪ್ಪಿಗೆ ಕೊಟ್ಟೇ ಬಂದಿದ್ದಾರೆ. ಆದರೀಗ ತಾನು 5 ವರ್ಷ ಸಿಎಂ ಆಗ್ತಿನಿ. ಬದಲಾವಣೆ ಆದರೆ ತಾನು ಹೇಳಿದವರು ಆಗಬೇಕು. ಡಿಕೆಶಿ ಸಿಎಂ ಆಗಬಾರದೆಂದು ಇದೆಲ್ಲಾ ತಂತ್ರ ನಡೀತಿದೆ. ಸಿದ್ದರಾಮಯ್ಯನವರ ತಂತ್ರ-ಪ್ರತಿತಂತ್ರದ ನಡುವೆ ಆಡಳಿತ ಹಾಳಾಗಿದೆ. ಇವರ ಹೈಡ್ರಾಮಾದಿಂದ ಆಡಳಿತ ಕುಸಿಯುತ್ತಿದೆ. ಇದೇ ರೀತಿ ಮುಂದುವರಿದರೆ ಸರಕಾರ ಬೀಳತ್ತದೆ ಎಂದರು.

ಹೀಗ್ಯಾಕೆ ಕಾನೂನು ಸುವ್ಯವಸ್ಥೆಗೆ ಧಕ್ಕೆ?

ಆರ್‌ಎಸ್‌ಎಸ್ ವಿರುದ್ಧ ಟೀಕೆ ಮುಂದುವರಿಸಿದರೆ ರಾಜ್ಯದಲ್ಲಿ ಕಾಂಗ್ರೆಸ್ ಸರಕಾರಕ್ಕೆ ಅಂತ್ಯಕಾಲ ಸಮೀಪಿಸುತ್ತಿದೆ ಎಂದರ್ಥ. ಜನರ ಮನಸ್ಸನ್ನು ಡೈವರ್ಟ್ ಮಾಡಲು ಅವರೇ ಒಂದೊಂದು ವಿಚಾರ ಹೊರಬಿಡುತ್ತಿದ್ದಾರೆ. ಈ ಹಿಂದೆ ಸಿದ್ದರಾಮಯ್ಯ ಸಿಎಂ ಆಗಿದ್ದಾಗ ಆರ್‌ಎಸ್‌ಎಸ್ ಬಗ್ಗೆ ಮಾತನಾಡಿಲ್ಲ, ಈ ಎರಡೂವರೆ ವರ್ಷ ಮಾತನಾಡಲಿಲ್ಲ, ಈಗ ಚಿತ್ತಾಪುರದಲ್ಲಿ ಲಾ ಅಂಡ್ ಪ್ರಾಬ್ಲಂ ಆಗಿದ್ಯಾ ಎಂದು ಸಂಸದ ಜಗದೀಶ್ ಶೆಟ್ಟರ್ ಪ್ರಶ್ನಿಸಿದರು.

ಹೈಕಮಾಂಡ್ ತೀರ್ಮಾನವೇ ಅಂತಿಮ: ರಾಜಣ್ಣ

ತುಮಕೂರು: ರಾಷ್ಟ್ರೀಯ ಪಕ್ಷದಲ್ಲಿ ಎಲ್ಲವು ಹೈಕಮಾಂಡ್ ತೀರ್ಮಾನವೇ ಅಂತಿಮ ಆಗಿರುತ್ತದೆ. ನಾವೇನೇ ಅನ್ನುಕೊಳ್ಳಬಹುದು, ಅದು ಇವರಿರಲಿ ಅಥವಾ ಅವರಿರಲಿ ಎಂದು ಮಾಜಿ ಸಚಿವ ಕೆ.ಎನ್.ರಾಜಣ್ಣ ಹೇಳಿದರು.

ಕಾಂಗ್ರೆಸ್ ಪಕ್ಷದಲ್ಲಿ ಯಾವ ರೀತಿ ತೀರ್ಮಾನ ಆಗಲಿದೆ ಎಂಬುದನ್ನು ಊಹೆ ಮಾಡಲು ಸಾಧ್ಯವಿಲ್ಲ. ಅದು ಕಾಂಗ್ರೆಸ್ ಅಥವಾ ಬಿಜೆಪಿ ಇರಬಹುದು. ಹೈಕಮಾಂಡ್‌ನದ್ದೇ ಅಂತಿಮ ತೀರ್ಮಾನ. ಮುಖ್ಯಮಂತ್ರಿ ಮುಂದುವರೆಯಬೇಕೆಂಬುದು ನಮ್ಮ ಆಸೆ, ಅದರಲ್ಲಿ ತಪ್ಪೇನಿದೆ. ಆಸೆ ಇದ್ದರೂ ಹೈಕಮಾಂಡ್ ತೀರ್ಮಾನವೇ ಅಂತಿಮ. ಅದು ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಇರಬಹುದು, ಎಲ್ಲವೂ ಅಷ್ಟೇ ಎಂದರು.

ವೀರಪ್ಪ ಮೊಯ್ಲಿ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿಯೂ ಇದೇ ರೀತಿ ಪರಿಸ್ಥಿತಿ ಇತ್ತು. ಕಾಂಗ್ರೆಸ್ ಹೈಕಮಾಂಡ್ ತೀರ್ಮಾನದಂತೆಯೇ ರಾಜ್ಯದಲ್ಲಿ ಬೆಳವಣಿಗೆ ಆದವು ಎಂದರು.

ಸರಕಾರಕ್ಕೆ ಹಿನ್ನಡೆ ಎನ್ನಲಾಗುವುದಿಲ್ಲ

ಸರಕಾರಿ ಸ್ಥಳಗಳಲ್ಲಿ ಆರ್‌ಆರ್‌ಎಸ್ ಚಟುವಟಿಕೆ ನಿರ್ಬಂಧ ಕುರಿತ ಸರಕಾರದ ಆದೇಶಕ್ಕೆ ಹೈಕೋರ್ಟ್ ಪೀಠ ತಡೆ ನೀಡಿರುವ ಬಗ್ಗೆ ಮಾತನಾಡಿ, ಹೈಕೋರ್ಟ್‌ನಲ್ಲಿ ತೀರ್ಮಾನ ಆದ ಮೇಲೆ ಪ್ರಶ್ನೆ ಮಾಡುವ ಹಕ್ಕು ಇಲ್ಲ. ಸಾರ್ವಜನಿಕವಾಗಿ ಟೀಕೆ ಮಾಡಲು ಸಾಧ್ಯವಿಲ್ಲ. ಸರಕಾರ ಈ ಸಂಬಂಧ ಹೈಯರ್ ಅಪೀಲು ಸಲ್ಲಿಸ ಬಹುದು. ರಾಜ್ಯ ಸರಕಾರದ ತೀರ್ಮಾನಗಳಿಗೂ ಕೆಲವೊಂದು ಬಾರಿ ಈ ರೀತಿ ಆಗಲಿದೆ. ಇದು ಸರಕಾರಕ್ಕೆ ಹಿನ್ನಡೆಯಲ್ಲ ಎಂದರು.

ನದಿಗಳ ಒಡಲಿಗೆ ಕೈಗಾರಿಕೆಗಳ ತ್ಯಾಜ್ಯ, ಒಳಚರಂಡಿ ನೀರು

ಕಾವೇರಿಯೂ ಕಲುಷಿತ: ನರೇಂದ್ರಸ್ವಾಮಿ

ಮಂಡ್ಯ/ಹಾಸನ: ಕಾವೇರಿ ನದಿ ಪರಿಶುದ್ಧವಾಗಿ ಉಳಿದಿಲ್ಲ ಎಂದು ಕೇಂದ್ರ ಮತ್ತು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗಳ ವರದಿಗಳು ಹೇಳುತ್ತಿವೆ ಎಂದು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಪಿ.ಎಂ. ನರೇಂದ್ರಸ್ವಾಮಿ ಅಭಿಪ್ರಾಯ ಪಟ್ಟರು.

ಮಂಡ್ಯ ಮತ್ತು ಹಾಸನ ಜಿಲ್ಲೆಗಳಲ್ಲಿ ನಡೆದ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಸುವರ್ಣ ಮಹೋತ್ಸವ ಕಾರ್ಯಕ್ರಮದ ಉದ್ದೇಶಿಸಿ ಮಾತನಾಡಿದ ಅವರು, ಕಾವೇರಿಯೂ ಸೇರಿದಂತೆ ಎಲ್ಲಾ ನದಿಗಳಿಗೂ ಕೈಗಾರಿಕೆಗಳ ತ್ಯಾಜ್ಯ ಹಾಗೂ ಒಳಚರಂಡಿ ನೀರು ಸೇರಿ ಕಲುಷಿತಗೊಳಿಸಲಾಗುತ್ತಿದೆ. ಇದನ್ನು ಗಂಭೀರವಾಗಿ ಪರಿಗಣಿಸಿ ನದಿಗಳನ್ನು ಉಳಿಸಿಕೊಳ್ಳುವುದು ಅತ್ಯಂತ ಅಗತ್ಯವಾಗಿ ಆಗಿರಬೇಕಾದ ಕೆಲಸ. ನದಿಗಳನ್ನು ಉಳಿಸಿಕೊಳ್ಳಲು ಇವತ್ತೇ ಪಣ ತೊಡಬೇಕು. ನದಿಗಳನ್ನು ಉಳಿಸಿಕೊಳ್ಳುವುದು ನಮ್ಮ ನಿಮ್ಮೆಲ್ಲರ ಆದ್ಯ ಕರ್ತವ್ಯ ಎಂದರು.

ಪ್ರತಿ ತಿಂಗಳು ಮಾಲಿನ್ಯ ನಿಯಂತ್ರಣ ಮಂಡಳಿ ವತಿಯಿಂದ ನದಿಗಳ ನೀರಿನ ಗುಣಮಟ್ಟವನ್ನು ಮಾಪನ ಮಾಡಲಾಗುತ್ತಿದ್ದು, ನದಿಗಳು ಕಲುಷಿತಗೊಳ್ಳುತ್ತಿರುವ ವರದಿ ಬರುತ್ತಿದೆ. ಜಲ ಮಾಲಿನ್ಯ ತುಂಬಾ ಭಯಂಕರವಾದುದು. ಇದರ ಬಗ್ಗೆ ದೇಶದಲ್ಲಿ ಮೊದಲ ಬಾರಿಗೆ ಗಮನ ಹರಿಸಿದವರು ಮಾಜಿ ಪ್ರಧಾನಿ ದಿವಂಗತ ಇಂದಿರಾ ಗಾಂಧಿ. ಅವರು 1974ರಲ್ಲಿ ಜಲ ಮಾಲಿನ್ಯ ನಿಯಂತ್ರಣ ಕಾಯ್ದೆಯನ್ನು ಜಾರಿಗೆ ತಂದರು. ಇದಕ್ಕೂ ಮೊದಲು ಎಲ್ಲಾ ಬಗೆಯ ಮಾಲಿನ್ಯವನ್ನು ತಡೆಯಬೇಕು ಎಂದು 1972ರಲ್ಲಿ ಇಂದಿರಾ ಗಾಂಧಿ ಅವರು ಕೇಂದ್ರ ಮತ್ತು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ಸ್ಥಾಪಿಸಿದರು. ಈಗ ಮಂಡಳಿ 50 ವರ್ಷ ಪೂರೈಸಿದ್ದು ಸುವರ್ಣ ಮಹೋತ್ಸವ ಆಚರಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಪರಿಸರ ಸಂರಕ್ಷಣೆ ಮತ್ತು ಮಾಲಿನ್ಯ ನಿಯಂತ್ರಣದ ಬಗ್ಗೆ ದೊಡ್ಡ ಮಟ್ಟದಲ್ಲಿ ಅರಿವು ಮೂಡಿಸಲಾಗುತ್ತಿದೆ ಎಂದು ಹೇಳಿದರು.

ಸಚಿವ ಚಲುವರಾಯಸ್ವಾಮಿ, ವಿಧಾನ ಪರಿಷತ್ ಸದಸ್ಯರಾದ ದಿನೇಶ್ ಗೂಳೀಗೌಡ, ಮಧು ಮಾದೇಗೌಡ, ಶಾಸಕರಾದ ರವಿ ಗಣಿಗ, ರಾಜೇಶ್ ಗೌಡ ಮತ್ತಿರರಿದ್ದರು. ಹೆಣ್ಣು ಮಕ್ಕಳಿಗೆ ಸ್ಯಾನಿಟರಿ ಪ್ಯಾಡ್ ಬದಲಿಗೆ ಮುಟ್ಟಿನ ಕಪ್ ವಿತರಣೆ ಮಾಡಲಾಯಿತು.

> **ಕೊಡಗಿನಿಂದ ತಮಿಳುನಾಡು ಸೇರುವ ಬಿಳಿಗುಂಡ್ಲುವರೆಗೆ ಹಲವು ಕಡೆಗಳಲ್ಲಿ ಕಾವೇರಿ ನದಿಗೆ ಕಲುಷಿತ ನೀರು ಸೇರುತ್ತಿದೆ. ಕಾರ್ಖಾನೆಗಳಿಂದ ಹೊರಬರುತ್ತಿರುವ ಕಲುಷಿತ ನೀರು, ಗೃಹಬಳಕೆಯ ತ್ಯಾಜ್ಯಗಳು ಸಂಸ್ಕರಿಸದೆ ನದಿಗಳನ್ನು ಸೇರುತ್ತಿವೆ. ಇದರಿಂದ ದೊಡ್ಡ ಮಟ್ಟದ ಜಲ ಮಾಲಿನ್ಯವಾಗುತ್ತಿದೆ.**
> **-ಪಿಎಂ ನರೇಂದ್ರಸ್ವಾಮಿ,** ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ

ರಾಜ್ಯಕ್ಕೆ ಸಿದ್ದರಾಮಯ್ಯ ಅನಿವಾರ್ಯ

ಮೈಸೂರು: ರಾಜ್ಯಕ್ಕೆ ಸಿದ್ದರಾಮಯ್ಯ ಸಿಎಂ ಆಗಿರುವುದು ಅನಿವಾರ್ಯ ಎಂದು ಎಂಎಲ್‌ಸಿ ಡಾ.ಯತೀಂದ್ರ ಸಿದ್ದರಾಮಯ್ಯ ಪ್ರತಿಪಾದಿಸಿದರು.

ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್‌ನ ಬಹುತೇಕ ಶಾಸಕರು, ಸಚಿವರು ಕೂಡ ಸಿದ್ದರಾಮಯ್ಯ ಅವರೇ ಸಿಎಂ ಆಗಿರಬೇಕು ಎಂದಿದ್ದಾರೆ ಎನ್ನುವ ಮೂಲಕ ಮಾಜಿ ಸಚಿವ ರಾಜಣ್ಣ ಹೇಳಿಕೆಯನ್ನು ಒತ್ತಿ ಹೇಳಿದರು.

ರಾಜ್ಯದಲ್ಲಿ ಸಿಎಂ ಬದಲಾವಣೆ ಕುರಿತು ಚರ್ಚೆ ಆಗಿಲ್ಲ, ಪಕ್ಷದಲ್ಲಿ ಈ ಕುರಿತು ಯಾವುದೇ ಚರ್ಚೆಯೂ ನಡೆಸಿಲ್ಲ. ಹೀಗಾಗಿ ಸಿಎಂ ಬದಲಾವಣೆ ವಿಚಾರ ನನಗಾಗಲಿ, ತಂದೆಯವರಿಗಾಗಲಿ ಗೊತ್ತೇ ಇಲ್ಲ. ಯಾರೇ ಸಿಎಂ ಆಗಬೇಕಾದರೂ ಹೈಕಮಾಂಡ್ ಒಪ್ಪಿಗೆ ಬೇಕಿದ್ದು, ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿ ಆಗಿ ಮುಂದುವರಿಯಬೇಕಾದರೂ ಒಪ್ಪಿಗೆ ಅನಿವಾರ್ಯವಾಗಿದೆ. ಹೀಗಾಗಿ ಇದೇ ಮಾತನ್ನು ನಮ್ಮ ತಂದೆಯವರು ಹೇಳಿದ್ದಾರೆ ಎಂದರು. ರಾಜ್ಯದಲ್ಲಿ ಮುನಿಯಪ್ಪ ಸಿಎಂ ಆಗುವ ವಿಚಾರದ ಬಗ್ಗೆ ಪ್ರತಿಕ್ರಿಯೆ ನೀಡಿದ ಅವರು, ಕಾಂಗ್ರೆಸ್ ಪಕ್ಷದಲ್ಲಿ ಸಾಕಷ್ಟು ಮಂದಿ ಸಿಎಂ ಆಕಾಂಕ್ಷಿಗಳಿದ್ದು, ಅವರೆಲ್ಲರಿಗೂ ಸಿಎಂ ಆಗಬೇಕೆನ್ನುವ ಆಸೆ ಇದೆ. ಅದನ್ನ ನಾವು ತಪ್ಪು ಅಂತ ಹೇಳಲು ಸಾಧ್ಯವಿಲ್ಲ ಎಂದರು.

ಚುನಾವಣಾ ಆಯೋಗದ ಕಮಿಷನರ್ ರಾಜಕೀಯ ಪುಡಾರಿಯ ರೀತಿಯಲ್ಲಿ ಮಾತನಾಡುತ್ತಾರೆ. ಬಿಜೆಪಿ ವೋಟ್ ಚೋರಿ ಮಾಡಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಿದೆ ಎಂದು ಯತೀಂದ್ರ ಆರೋಪಿಸಿದರು.

ಎಂಜಿನಿಯರ್ ಲೋಕಾ ಬಲೆಗೆ

ಬೆಳಗಾವಿ: ಸ್ವಾಧೀನ ಮಾಡಿಕೊಂಡಿದ್ದ ಜಮೀನಿಗೆ ಪರಿಹಾರದ ಚೆಕ್ ನೀಡಲು 1 ಲಕ್ಷ ಲಂಚ ಕೇಳಿದ್ದ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಕಾರ್ಯನಿರ್ವಾಹಕ ಎಂಜಿನಿಯರ್ ಅಶೋಕ ಶಿರೂರ ಅವರನ್ನು ಲೋಕಾಯುಕ್ತ ಅಧಿಕಾರಿಗಳು ಬಂಧಿಸಿದ್ದಾರೆ. ಮುಗಳಖೋಡ ಮತ್ತು ಹಾರೂಗೇರಿ ಪಟ್ಟಣಗಳಿಗೆ ಅಮೃತ ಯೋಜನೆಯಡಿ ಕುಡಿಯುವ ನೀರು ಸರಬರಾಜು ಯೋಜನೆಗೆ ರಾಯಬಾಗ ತಾಲೂಕಿನ ಖೇಮಲಾಪುರ ಗ್ರಾಮದ ರೈತ ಯಾಸಿನ್ ಪೇಂಢಾರಿ ಎಂಬುವರ 14 ಗುಂಟೆ ಜಮೀನು ಸ್ವಾಧೀನ ಮಾಡಿಕೊಳ್ಳಲಾಗಿತ್ತು. ಪರಿಹಾರವಾಗಿ ಸರಕಾರದಿಂದ 18 ಲಕ್ಷ ಮಂಜೂರಾಗಿತ್ತು. ಇದರ ಚೆಕ್ ನೀಡಲು ಅಶೋಕ ಅವರು 1 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಇದರ ಬಗ್ಗೆ ಲೋಕಾಯುಕ್ತ ಠಾಣೆಯಲ್ಲಿ ದೂರು ದಾಖಲಾಗಿತ್ತು.

ಇಂದು ವಿಶ್ವ ಆರೈಕೆದಾರರ ದಿನ

ಬೆಂಗಳೂರು: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಹಯೋಗದೊಂದಿಗೆ 2025ರ ವಿಶ್ವ ಆರೈಕೆದಾರರ ದಿನಾಚರಣೆ ಕಾರ್ಯಕ್ರಮವನ್ನು ಕಬ್ಬನ್ ಪಾರ್ಕ್‌ನ ಬಾಲ ಭವನದಲ್ಲಿ ಅ.29 ಬೆ.10.30 ಗಂಟೆಗೆ ಆಯೋಜಿಸಲಾಗಿದೆ. ಸಚಿವೆ ಲಕ್ಷ್ಮೀ ಆರ್ ಹೆಬ್ಬಾಳಕರ್ ಉದಾಟಿಸಲಿದ್ದಾರೆ. ಶಾಸಕ ರಿಜ್ವಾನ್ ಅರ್ಷದ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕಾರ್ಯದರ್ಶಿ ಡಾ.ಶಮ್ಲಾ ಇಕ್ಬಾಲ್ ಸೇರಿ ಹಲವರು ಉಪಸ್ಥಿತರಿರಲಿದ್ದಾರೆ.

ಭೀಮ್ ಆರ್ಮಿ ಮುಖಂಡರ ನಿಲುವಿಗೆ ಆರ್‌ಎಸ್‌ಎಸ್ ಆಕ್ರೋಶ | ಶಾಂತಿ ಸಭೆ ಮೊಟಕು

ಲಾಠಿ ಬಿಟ್ಟು ಸಂವಿಧಾನ ಹಿಡಿದು ಸಂಚರಿಸಲಿ

ಕಲಬುರಗಿ: ಕರ್ನಾಟಕ ಹೈಕೋರ್ಟ್ ನಿರ್ದೇಶನದಂತೆ ಚಿತ್ತಾಪುರದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘ ನ.2 ರಂದು ನಡೆಸಲು ಉದ್ದೇಶಿಸಿರುವ ಪಥಸಂಚಲನಕ್ಕೆ ಸಂಬಂಧಿಸಿದಂತೆ ಮಂಗಳವಾರ ಇಲ್ಲಿನ ಜಿಲ್ಲಾಧಿಕಾರಿ ಕಚೇರಿಯಲ್ಲಿ ಕರೆಯಲಾಗಿದ್ದ ಶಾಂತಿ ಸಭೆಯು ಯಾವುದೇ ಒಮ್ಮತದ ನಿರ್ಧಾರಕ್ಕೆ ಬಾರದೆ, ಕೊನೆಯಲ್ಲಿ ಪರಸ್ಪರ ವಾಗ್ವಾದಕ್ಕೆ ಕಾರಣವಾಗಿ ಅರ್ಧಕ್ಕೆ ಮೊಟಕುಗೊಂಡಿತು.

- ಶಾಂತಿ ಸಭೆಯಲ್ಲಿ ಗದ್ದಲ, ಆರೋಪ -ಪ್ರತ್ಯಾರೋಪ
- ಒಮ್ಮತ ಮೂಡದ ಕಾರಣ ಶಾಂತಿ ಸಭೆ ಮೊಟಕು

ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್ ಅವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ವಿವಿಧ ಸಂಘ ಟನೆಗಳ ಪ್ರಮುಖರು ಭಾಗವಹಿಸಿದ್ದರು. ಎಲ್ಲ ರಿಗೂ ತಮ್ಮ ಅಭಿಪ್ರಾಯ ಗಳನ್ನು ವ್ಯಕ್ತಪಡಿಸಲು ಐದು ನಿಮಿಷಗಳ ಕಾಲಾ ವಕಾಶ ನೀಡಲಾಗಿತ್ತು.

ಪರಸ್ಪರ ವಾಗ್ವಾದಕ್ಕೆ ಕಾರಣ: ಸಭೆಯಲ್ಲಿ ಆರೆಸ್ಸೆಸ್ ಸಂಘಟಕ ಕೃಷ್ಣ ಜೋಶಿ ಅವರು ಜಿಲ್ಲಾಡಳಿತಕ್ಕೆ ಸಲ್ಲಿಸಿದ ಮನವಿ ಪತ್ರದ ವಿಷಯಗಳನ್ನು ಪ್ರಸ್ತಾಪಿಸಿ, ನವೆಂಬರ್ 2 ರಂದು ಪಥಸಂಚಲನ ನಡೆಸಲು ಸಿದ್ಧವಿರುವು ದಾಗಿ ತಿಳಿಸಿದರು.

ಆರೆಸ್ಸೆಸ್ ನಿಲುವು ಮಂಡಿಸಿದ ನಂತರ, ಭೀಮ್ ಆರ್ಮಿ ಮತ್ತು ಭಾರತೀಯ ದಲಿತ ಪ್ಯಾಂಥರ್ ಸೇರಿದಂತೆ ಹಲವು ಸಂಘಟನೆಗಳ ಮುಖಂಡರು, ಆರೆಸ್ಸೆಸ್ ಪಥಸಂಚಲನ ನಡೆಸುವುದಾದರೆ ಲಾಠಿ ಬದಲಿಗೆ ಭಾರತದ ರಾಷ್ಟ್ರಧ್ವಜ ಹಾಗೂ ಸಂವಿಧಾನದ ಪೀಠಿಕೆ ಹಿಡಿದು ಸಂಚಲನ ಮಾಡಲಿ ಎಂದು ಒಕ್ಕೊರಲಿನ ನಿಲುವು ವ್ಯಕ್ತಪಡಿಸಿದರು.

ಬಹುತೇಕ ಸಂಘಟನೆಗಳು ಈ ಷರತ್ತಿಗೆ ಸಮ್ಮತಿ ಸೂಚಿಸಿದ ಕಾರಣ, ಸಭೆ ಒಮ್ಮತದ ನಿರ್ಧಾರಕ್ಕೆ ಬಂದಂತೆ ಕಂಡುಬಂದಿತ್ತು. ಆದರೆ, ಕೊನೆ ಕ್ಷಣದಲ್ಲಿ ಆರೆಸ್ಸೆಸ್ ಪರ ಹಾಜರಿದ್ದ ಬಿಜೆಪಿ ಮುಖಂಡ ಅಂಬಾರಾಯ್ ಅಷ್ಟಗಿ ಅವರು ಎದ್ದು ನಿಂತು, ಸಂವಿಧಾನದಲ್ಲಿ ಪಥಸಂಚಲನ ನಡೆಸಲು ಅವಕಾಶವಿದೆ. ನಾವು ಲಾಠಿ ಹಿಡಿದೇ ಪಥಸಂಚಲನ ಮಾಡುತ್ತೇವೆ ಎಂದು ಸ್ಪಷ್ಟಪಡಿಸಿದರು. ಈ ಹೇಳಿಕೆಗೆ ಸಭೆಯಲ್ಲಿದ್ದ ಇತರ ಸಂಘಟನೆಗಳು ತೀವ್ರ ವಿರೋಧ ವ್ಯಕ್ತಪಡಿಸಿದ್ದರಿಂದ, ಸಭೆ ಗದ್ದಲದ ಗೂಡಾಗಿ ಮೊಟಕುಗೊಂಡಿತು.

ಶಾಂತಿ ಸಭೆಯಲ್ಲಿ ಪೊಲೀಸ್ ವರಿಷ್ಠಾಧಿಕಾರಿ ಅಡ್ಡೂರು ಶ್ರೀನಿವಾಸುಲು, ನಗರ ಪೊಲೀಸ್ ಆಯುಕ್ತ ಡಾ.ಶರಣಪ್ಪ ಎಸ್.ಡಿ, ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ ಹಾಗೂ ಇತರ ಹಿರಿಯ ಪೊಲೀಸ್ ಮತ್ತು ಜಿಲ್ಲಾಡಳಿತದ ಅಧಿಕಾರಿಗಳು ಉಪಸ್ಥಿತರಿದ್ದರು.

ಕಲಬುರಗಿ ಜಿಲ್ಲಾಧಿಕಾರಿ ಫೌಜಿಯ ತರನ್ನುಮ್ ನೇತೃತ್ವದಲ್ಲಿ ನಡೆದ ಶಾಂತಿ ಸಭೆಯಲ್ಲಿ ಗದ್ದಲ ಉಂಟಾಯಿತು.

> **ರಾಜ್ಯಾದ್ಯಂತ ಈವರೆಗೂ 500 ಪಥ ಸಂಚಲನಗಳು ನಡೆದಿವೆ. ಸುಮಾರು 2 ಲಕ್ಷ ಸ್ವಯಂಸೇವಕರು ಭಾಗಿಯಾಗಿದ್ದಾರೆ. ಎಲ್ಲಿಯೂ ಒಂದು ಅಹಿತಕರ ಘಟನೆ ನಡೆದಿಲ್ಲ. ಚಿತ್ತಾಪುರದಲ್ಲಿ ಯಾವುದೇ ರೀತಿಯ ಅಹಿತಕರ ಘಟನೆ ನಡೆಯದಂತೆ ಭರವಸೆ ನಮ್ಮದು. ಹೈಕೋರ್ಟ್ ತೀರ್ಪಿಗೆ ಅನುಗುಣವಾಗಿ ಅಕ್ಟೋಬರ್ 30 ರಂದು ನಾವು ನಡೆದುಕೊಳ್ಳುತ್ತೇವೆ.**
> **-ಅಶೋಕ್ ಪಾಟೀಲ್,** ಜಿಲ್ಲಾ ಸಂಘಚಾಲಕ, ಆರ್‌ಎಸ್‌ಎಸ್

> **ಆರೆಸ್ಸೆಸ್ ಪಥಸಂಚಲನ ನಡೆಸುವುದಾದರೇ ಲಾಠಿ ಬಿಟ್ಟು, ದೇಶದ ಬಾವುಟ ಹಾಗೂ ಸಂವಿಧಾನದ ಪೀಠಿಕೆ ಹಿಡಿದು ನಡೆಸಲಿ. ನಾವು ಸ್ವಾಗತ ಮಾಡುತ್ತೇವೆ. ನಮ್ಮ ಸಮುದಾಯದ ಜನರನ್ನೇ ಮುಂದೆ ಮಾಡಿ, ನಮ್ಮಲ್ಲೇ ಜಗಳ ಹಚ್ಚುವ ಕೆಲಸ ಸಂಘ ಪರಿವಾರ ಮಾಡುತ್ತಿದೆ.**
> **-ಮಲ್ಲಪ್ಪ ಹೊಸಮನಿ,** ಭಾರತೀಯ ದಲಿತ ಪ್ಯಾಂಥರ್ ಸಮಿತಿ

ನಾನು ಸಚಿವ ಸ್ಥಾನದ ಆಕಾಂಕ್ಷಿ

ವಿಜಯಪುರ: ಸಚಿವ ಸ್ಥಾನ ಆಪೇಕ್ಷೆ ಪಡುವುದರಲ್ಲಿ ನೈತಿಕ ಹಕ್ಕಿನ ಪ್ರಶ್ನೆ ಬರುವುದಿಲ್ಲ, ಯಶವಂತ ರಾಯ ಗೌಡ ನನ್ನ ತಮ್ಮ, ಅವರಿಗೆ ಸಚಿವ ಸ್ಥಾನ ಸಿಕ್ಕರೂ ಸಂತೋಷಪಡುವೆ ಎಂದು ಕರ್ನಾಟಕ ಸಾಬೂನು-ಮಾರ್ಜಕ ನಿಗಮದ ಅಧ್ಯಕ್ಷ ಸಿ.ಎಸ್.ನಾಡಗೌಡ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಚಿವ ಸ್ಥಾನ ಆಪೇಕ್ಷೆ ಪಡುವುದರಲ್ಲಿ ಯಾವ ತಪ್ಪು ಇಲ್ಲ, ಇದರಲ್ಲಿ ನೈತಿಕ ಹಕ್ಕಿನ ಪ್ರಶ್ನೆಯೇ ಉದ್ಭವಿಸುವುದಿಲ್ಲ, ಇನ್ನೊಂದು ಸಚಿವ ಸ್ಥಾನ ಜಿಲ್ಲೆಗೆ ಬಂದರೆ ಬೇಡವೆನ್ನುವುದೇಕೆ? ನಾವೆಲ್ಲರೂ ಒಟ್ಟಾಗಿ ಕಾಂಗ್ರೆಸ್ ಹೈಕಮಾಂಡ್ ಬಳಿ ಹೋಗೋಣ, ನಮ್ಮಲ್ಲಿ ಯಾರಿಗೆ ಸಚಿವ ಸ್ಥಾನ ಕೊಟ್ಟರೂ ಸಂತೋಷ ಎಂದು ಹೇಳಿ ಬರೋಣ, ಪಕ್ಷದ ವಿಷಯ ಬಂದಾಗ ನಾವೆಲ್ಲರೂ ಒಟ್ಟಾಗಿ ಹೋಗಬೇಕಾಗುತ್ತದೆ ಎಂದರು. ಲಿಂಗಾಯತ ಸಮುದಾಯದಲ್ಲಿಯೂ ಒಳಮೀಸಲಾತಿ ಮಾದರಿ ಇದೆ. ಈ ಕೋಟಾದಲ್ಲಿಯೂ ಸಚಿವ ಸ್ಥಾನ ಬರಬೇಕು ಎಂದು ಒತ್ತಾಯಿಸಿದರು.

> **ನಾನು ನಿಷ್ಠಾವಂತ ಕಾಂಗ್ರೆಸ್ಸಿಗ, 1981 ರಿಂದ ಕಾಂಗ್ರೆಸ್ ಪಕ್ಷದಲ್ಲಿಯೇ ಇರುವೆ. ನಾನು ಕೂಡ ಕಾಂಗ್ರೆಸ್ಸಿನ ಹಿರಿಯ ನಾಯಕ. ಯಾವ ಕಪ್ಪು ಚುಕ್ಕೆ ಇಲ್ಲದೇ ರಾಜಕೀಯ ಜೀವನದಲ್ಲಿರುವ ವ್ಯಕ್ತಿ. ಹೀಗಾಗಿ ನಾನು ಸಚಿವ ಸ್ಥಾನದ ಆಕಾಂಕ್ಷಿ ಎನ್ನುವುದರಲ್ಲಿ ಎರಡು ಮಾತಿಲ್ಲ.**
> **-ಸಿ.ಎಸ್.ನಾಡಗೌಡ,** ಸಾಬೂನು-ಮಾರ್ಜಕ ನಿಗಮದ ಅಧ್ಯಕ್ಷ

ವಿಶ್ವವಾಣಿ

ಸಂಪಾದಕೀಯ

ಸಭ್ಯತೆಯ ಎಲ್ಲೆ ಮೀರದಿರಲಿ

ಅಧಿಕಾರದ ಗದ್ದುಗೆಯೇರುವ ರಾಜಕೀಯ ಪಕ್ಷವೊಂದು ತಾನು ನಡೆದದ್ದೇ ಹಾದಿ ಎಂಬ ಠೇಂಕಾರವನ್ನು ಮೆರೆಯುವಂತಿರುವುದಿಲ್ಲ. ಆ ಪಕ್ಷದ ಅಭ್ಯರ್ಥಿಗಳನ್ನು ತಮ್ಮ ಪ್ರತಿನಿಧಿಗಳನ್ನಾಗಿ ಚುನಾಯಿಸಿದ ಮತದಾರರಿಗೆ ಅದು ಸರ್ವಕಾಲಕ್ಕೂ ಉತ್ತರದಾಯಿಯಾಗಬೇಕಾಗುತ್ತದೆ. ಅಂತೆಯೇ, ಸ್ಥಾಪಿತ ಸರಕಾರವೊಂದು ನನ್ನ ಆಡಳಿತ ನಿರ್ವಹಣೆಯಲ್ಲಿ ಮತ್ತು ಜನಕಲ್ಯಾಣದ ಬಾಬತ್ತಿನಲ್ಲಿ ಹಾದಿ ತಪ್ಪದಂತಿರುವುದಕ್ಕೂ, ಕಾಲಾನುಕಾಲಕ್ಕೆ ಅದರ ಕಿವಿಹಿಂಡುವ ಸಮರ್ಥ ವಿರೋಧ ಪಕ್ಷವೂ ಇರಬೇಕಾಗುತ್ತದೆ. ಅದುವೇ ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯ ಸೊಬಗು. ಹೀಗೆ ಆಡಳಿತಾರೂಢರು ಮತ್ತು ವಿಪಕ್ಷೀಯರು ಮುಖಾಮುಖಿಯಾಗುವ ವ್ಯವಸ್ಥೆಯೊಂದರಲ್ಲಿ ಟೀಕೆ-ಟಿಪ್ಪಣಿಗಳು ಒಪ್ಪಿತ ಸ್ಥಿತಿಯೇ ಆಗಿದೆ. ಹಾಗಂತ ಅದು ಸಭ್ಯತೆಯ ಎಲ್ಲೆ ಮೀರಬಾರದು. ಆದರೆ, ಕಳೆದ ಕೆಲ ದಿನಗಳಿಂದ, ಎರಡು ರಾಜಕೀಯ ಪಕ್ಷಗಳ ನಾಯಕರಿಬ್ಬರು ಪರಸ್ಪರರ ವಿರುದ್ಧ ತೂರಿಬಿಟ್ಟ ಕೂರಂಬುಗಳು ವೈಯಕ್ತಿಕ ಚಾರಿತ್ರ್ಯವಧೆಯ ಮಟ್ಟಕ್ಕೂ ಇಳಿದಿದ್ದು ವಿಷಾದನೀಯ. ಜತೆಗೆ, ಈ ಬೆಳವಣಿಗೆಯನ್ನು 'ಪ್ರಚಾರ ಗಿಟ್ಟಿಸುವ' ತಂತ್ರವಾಗಿ ಅವರು ಒಂದೊಮ್ಮೆ ಲೆಕ್ಕಿಸಿದ್ದರೆ, ಅದು ಅಸಹ್ಯದ ಸಂಗತಿಯೇ ಸರಿ. ಏಕೆಂದರೆ, ನೋವುಂಟುಮಾಡುವ ಮಾತನ್ನು ಮೊದಲಿಗೆ ಯಾರೇ ಆಡಿದ್ದರೂ, ನಾಲ್ಕು ಗೋಡೆಗಳ ಮಧ್ಯೆ ಪರಸ್ಪರರು ಅದನ್ನು ಇತ್ಯರ್ಥಪಡಿಸಿಕೊಂಡು, ಪರಿಸ್ಥಿತಿಯನ್ನು ತಿಳಿಗೊಳಿಸಲು ಸಾಧ್ಯವಿತ್ತು. ಆದರೆ ಆಗಿದ್ದೇ ಬೇರೆ. ಸೈದ್ಧಾಂತಿಕ ನೆಲೆಯಲ್ಲಿ ನಡೆಯಬೇಕಾದ ಚರ್ಚೆ ಹೀಗೆ ಕೆಳಮಟ್ಟಕ್ಕೆ ಇಳಿದಾಗ, ಚರ್ಚೆಯ ಮೂಲ ಆಶಯ ಮೂಲೆಗುಂಪಾಗು ವುದು ಒಂದೆಡೆಯಾದರೆ, ಹಾಗೆ ಕೆಸರೆರಚಾಟದಲ್ಲಿ ತೊಡಗಿಸಿಕೊಳ್ಳುವ ನಾಯಕರನ್ನು ಜನರು ಗಂಭೀರವಾಗಿ ಪರಿಗಣಿಸದಿರುವ ಸಾಧ್ಯತೆಗಳೂ ಇವೆ.

ಸೊಂಪಾದಕೀಯ

ಕೋರ್ಟ್ ಅಡ್ಡೇಟು

ಇತ್ತೀಚೆಗೆ ರಾಜ್ಯದಲ್ಲಿ ಸರಕಾರ ಏನೇ ನಿಯಮ ಮಾಡಿದರೂ, ಹೊಸ ಆದೇಶ ತಂದರೂ ಕೋರ್ಟ್ ಅದಕ್ಕೆ ಅಡ್ಡಗಾಲು ಹಾಕೋದು ಕಾಮನ್ ಆಗಿಬಿಟ್ಟಿದೆ. ತಿಂಗಳ ಹಿಂದೆ ಚಿತ್ರಮಂದಿರಗಳಲ್ಲಿ 200 ರುಪಾಯಿಗಿಂತ ಹೆಚ್ಚಿನ ಟಿಕೆಟ್ ದರ ಇರಬಾರದು ಅಂತ ಆದೇಶಿಸಿತ್ತು. ಮಲ್ಟಿಪ್ಲೆಕ್ಸ್‌ಗಳ ಹಗಲು ದರೋಡೆಯಿಂದ ನೊಂದಿದ್ದ ಪ್ರೇಕ್ಷಕ ಇದರಿಂದ ಕೊಂಚ ನಿರಾಳವಾಗಿದ್ದ. ಆದರೆ ಕೋರ್ಟು ಅವನ ನೆಮ್ಮದಿ ಬಹಳ ಹೊತ್ತು ಇರಲು ಬಿಡಲಿಲ್ಲ. ಕಾಂತಾರದ ನಿರ್ಮಾಪಕರು ಕೋರ್ಟಿಗೆ ಹೋಗಿದ್ದೇ ತಡ, ಸರಕಾರದ ಈ ಆದೇಶಕ್ಕೆ ತಡೆ ನೀಡಿ, ಆ ಕೇಸಿನ ವಿಚಾರಣೆಯನ್ನು ಮೂಲೆಗೆ ಎಸೆದಿತ್ತು ಕೋರ್ಟು. ಈ ಮೂಲಕ ಪ್ರೇಕ್ಷಕನಿಗೆ ಬರೆ ಹಾಕಿ ಶ್ರೀಮಂತರು ಹಣ ಮಾಡಿಕೊಳ್ಳಲು ಹಾದಿ ಸುಗಮ ಮಾಡಿತ್ತು. 'ಕೋರ್ಟಿಗೆ ಹೋಗ್ರಿ, ನಿನ್ನ ತೀರ್ಮಾನ ನಾನು ಮೆಟ್ಟಿಲಲ್ಲಿ ಮಾಡ್ತೀನಿ' ಅಂತ ಸರಕಾರವೂ ಗುಟುರು ಹಾಕಲಿಲ್ಲ. ಅತ್ತ ಪ್ರೇಕ್ಷಕನೂ 'ನಿಮ್ಮ ತೀರ್ಮಾನ ಚಿತ್ರಮಂದಿರದ ಮೆಟ್ಟಿಲಲ್ಲಿ ಮಾಡ್ತೀನಿ' ಅಂತನೂ ಹೇಳಲಿಲ್ಲ. ಎಷ್ಟೇ ಟಿಕೆಟ್ ರೇಟ್ ಇದ್ದರೂ ಕಾಂತಾರ ಹಿಟ್ ಆಯ್ತು. ಈಗ ಇದೇ ಕೋರ್ಟು ಸರಕಾರದ ಇನ್ನೊಂದು ಆದೇಶಕ್ಕೆ ಕೊಕ್ಕೆ ಹಾಕಿದೆ. ಆರೆಸ್ಸೆಸ್ ಚಟುವಟಿಕೆ ಮೇಲೆ ನಿಯಂತ್ರಣ ಹೇರಿ ಸರಕಾರ ಹೊರಡಿಸಿದ್ದ ಆದೇಶಕ್ಕೂ ಈಗ ಭಂಗ ಬಂದಿದೆ. ಈ ಆದೇಶವನ್ನು ಕೋರ್ಟು ತಡೆ ಹಿಡಿದಿದೆ. ಇನ್ನು ಮುಂದೆ ಆರೆಸ್ಸೆಸ್ ಚಟುವಟಿಕೆಗಳು ರಾಜಾರೋಷವಾಗಿ ನಡೆಯಲು ಅಡೆತಡೆಯಿಲ್ಲ. ಇದೇ ನೆಪ ಮಾಡಿಕೊಂಡು ಆರೆಸ್ಸೆಸ್ ಈಗ ಅಲ್ಲಲ್ಲಿ ಸಭೆಗಳನ್ನು ನಡೆಸಿ ಸರಕಾರದ ವಿರುದ್ಧ ಸವಾಲು ಹಾಕಿದರೆ ಅಚ್ಚರಿ ಏನಿಲ್ಲ. ಆದರೆ ಇದೇ ನಿಯಮ ಇತರೆ ಸಂಘಟನೆಗಳಿಗೂ ಅನ್ವಯ ಆಗುತ್ತಾ ಅನ್ನೋ ಪ್ರಶ್ನೆಗೆ ಉತ್ತರವಿಲ್ಲ. ಇಂಥದ್ದನ್ನೆಲ್ಲಾ ನೋಡಿ ಸಾಕಾಗಿಯೇ, ಇಷ್ಟು ದಿನ 5 ವರ್ಷಕ್ಕೆ ನಾನೇ ಮುಖ್ಯಮಂತ್ರಿ ಎನ್ನುತ್ತಿದ್ದ ಸಿಎಂ ಸಿದ್ರಾಮಯ್ಯ, ಈಗ 'ಹೈಕಮಾಂಡ್ ಬಯಸಿದರೆ' ಅಂತ ಮಾತಾಡ್ತಿದ್ದಾರೆ. ಸದನದಲ್ಲಿ ಆರೆಸ್ಸೆಸ್ ಗೀತೆ ಹಾಡಿದ್ದ ಡಿಕೆಶಿ ಇದನ್ನು ಕೇಳಿ ಖುಷಿ ಆಗಿದ್ದಾರೆ. ಡಿಕೆಶಿ ಸಿಎಂ ಆದರೆ ಅದು ನಮ್ಮ ಸರಕಾರ ಇದ್ದಂತೆ ಎಂಬ ಭಾವನೆ ಬಿಜೆಪಿಗರಲ್ಲೂ ಇರೋದ್ರಿಂದ ಅವರೂ ಸಂತುಷ್ಟಗೊಂಡಿದ್ದರೆ ಆಶ್ಚರ್ಯ ಏನಿಲ್ಲ.

ಸಂಪಾದಕರ ಸದ್ಯಶೋಧನೆ

ವಿಮಾನದಲ್ಲಿ ಆಹಾರ ವಿತರಣೆ

ವಿಮಾನ ಪ್ರಯಾಣದಲ್ಲಿ ಊಟ-ಉಪಾಹಾರ ವಿತರಣೆ ಅತ್ಯಂತ ಮುಖ್ಯವಾದ ಕಾರ್ಯ. ಕಾರಣ ಅದು ಕೂಡ ಪ್ರಯಾಣದ ಅನುಭವದ ಪ್ರಮುಖ ಭಾಗ. ವಿಶೇಷವಾಗಿ ದೀರ್ಘಾವಧಿಯ ಅಂತಾರಾಷ್ಟ್ರೀಯ ವಿಮಾನಗಳಲ್ಲಿ, ಊಟ ವಿತರಣೆಗೆ ಎಲ್ಲಿಲ್ಲದ ಮಹತ್ವವನ್ನು ನೀಡಲಾಗುತ್ತದೆ. ಒಮ್ಮೊಮ್ಮೆ ಅನಿರೀಕ್ಷಿತ ಸಮಸ್ಯೆಗಳಿಂದಾಗಿ ವಿಮಾನಯಾನ ಸಂಸ್ಥೆಗಳು ಊಟವನ್ನು ವಿತರಿಸಲು ವಿಫಲವಾದಾಗ, ಅದು ಪ್ರಯಾಣಿಕರಲ್ಲಿ ಅಸಮಾಧಾನ ಮತ್ತು ಗೊಂದಲಕ್ಕೆ ಕಾರಣವಾಗುತ್ತದೆ. ಇಂಥ ಸಂದರ್ಭಗಳಲ್ಲಿ, ವಿಮಾನಯಾನ ಸಂಸ್ಥೆಗಳು ಪ್ರಯಾಣಿಕರಿಗೆ ಬಹಿರಂಗವಾಗಿ ಕ್ಷಮೆಯಾಚಿಸುವುದು, ನಷ್ಟ ಪರಿಹಾರ ನೀಡುವುದು ಮತ್ತು ಮುಂದಿನ ದಿನಗಳಲ್ಲಿ ಇಂಥ ಘಟನೆಗಳು ಮರುಕಳಿಸದಂತೆ ಕ್ರಮ ಕೈಗೊಳ್ಳುವುದು ಸಾಮಾನ್ಯವಾಗಿದೆ. ಕೆಲವು ಸಲ ವಿಮಾನದಲ್ಲಿ ಊಟದಲ್ಲಿ ಅಸ್ತವ್ಯಸ್ತವಾಗುವುದು ಸಹಜ. ವಿಮಾನದಲ್ಲಿ ಊಟ ವಿತರಿಸಲು ಸಾಧ್ಯವಾಗದಿರುವುದಕ್ಕೆ ಒಂದೇ ಕಾರಣವಿರುವುದಿಲ್ಲ, ಬದಲಿಗೆ, ಇದು ನೆಲದ ಮೇಲಿನ ಕಾರ್ಯಾಚರಣೆ, ಲಾಜಿಸ್ಟಿಕ್ಸ್ ಮತ್ತು ತುರ್ತು ಪರಿಸ್ಥಿತಿಗಳಿಗೆ ಸಂಬಂಧಿಸಿದ ಅನೇಕ ಸಂಕೀರ್ಣ ಕಾರಣಗಳಿಂದ ಉಂಟಾಗಬಹುದು. ಅಡುಗೆಮನೆಯಲ್ಲಾಗುವ ಗೊಂದಲಗಳಿಂದ ವಿಮಾನಗಳಲ್ಲಿ ಊಟದ ವೈಫಲ್ಯ ತಲೆದೋರಬಹುದು. ವಿಮಾನಯಾನ ಸಂಸ್ಥೆಗಳು ಊಟವನ್ನು ವಿಮಾನ ನಿಲ್ದಾಣದ ಸಮೀಪವಿರುವ ಬೃಹತ್ ಅಡುಗೆ ಗೃಹಗಳಿಂದ (Flight Kitchens) ಪಡೆಯುತ್ತವೆ. ದಕ್ಷಿಣ ಕೊರಿಯಾದ ಏಷಿಯಾನಾ ಏರ್‌ಲೈನ್ಸ್‌ನಲ್ಲಿ 2018ರಲ್ಲಿ ಸಂಭವಿಸಿದ 'ಇನ್‌ಫ್ಲೈಟ್-ಮೀಲ್ ಅವ್ಯವಸ್ಥೆ' ಇದಕ್ಕೆ ಒಂದು ಪ್ರಮುಖ ಉದಾಹರಣೆ. ಅವರ ಪ್ರಮುಖ ಕ್ಯಾಟರರ್‌ನ ಸೌಲಭ್ಯದಲ್ಲಿ ಬೆಂಕಿ ಅನಾಹುತ ಸಂಭವಿಸಿದ ನಂತರ, ಏರ್‌ಲೈನ್ ತುರ್ತಾಗಿ ಬೇರೆ ಸ್ಥಳೀಯ ಮಾರಾಟಗಾರರೊಂದಿಗೆ 3 ತಿಂಗಳ ಒಪ್ಪಂದಕ್ಕೆ ಸಹಿ ಹಾಕಿತು. ಆದರೆ, ಈ ಹೊಸ ಮಾರಾಟಗಾರರಿಗೆ ಏಷಿಯಾನಾದಂಥ ದೊಡ್ಡ ವಿಮಾನಯಾನ ಸಂಸ್ಥೆಯ ಅಗತ್ಯತೆಗಳನ್ನು ಪೂರೈಸುವ ಸಾಮರ್ಥ್ಯವಿರಲಿಲ್ಲ. ಪರಿಣಾಮವಾಗಿ, ನೂರಾರು ವಿಮಾನಗಳು ವಿಳಂಬವಾದವು ಮತ್ತು 36 ವಿಮಾನಗಳು ಊಟವಿಲ್ಲದೇ ಹಾರಾಟ ಮಾಡಬೇಕಾಗಿ ಬಂದವು. ಈ ಘಟನೆಗಾಗಿ ಏರ್‌ಲೈನ್‌ನ ಅಧ್ಯಕ್ಷರು ಬಹಿರಂಗವಾಗಿ ಕ್ಷಮೆಯಾಚಿಸಬೇಕಾಯಿತು. ಕೆಲವೊಮ್ಮೆ, ಆಹಾರ ಸುರಕ್ಷತೆ ಮತ್ತು ಗುಣಮಟ್ಟವನ್ನು ಖಚಿತಪಡಿಸಿಕೊಳ್ಳಲು ಊಟವನ್ನು ರದ್ದುಗೊಳಿಸಿದ ಪ್ರಸಂಗಗಳೂ ಇವೆ. ಉದಾಹರಣೆಗೆ, ಡೆಲ್ಟಾ ಏರ್‌ಲೈನ್ಸ್ ತನ್ನ ಕ್ಯಾಟರಿಂಗ್ ಪಾಲುದಾರರ ಅಡುಗೆಮನೆಯಲ್ಲಿ ಯುಎಸ್ ಫುಡ್ ಆ್ಯಂಡ್ ಡ್ರಗ್ ಅಡ್ಮಿನಿಸ್ಟ್ರೇಷನ್ (FDA) ತಪಾಸಣೆಯ ಸಮಯದಲ್ಲಿ ಆಹಾರ ಸುರಕ್ಷತಾ ಸಮಸ್ಯೆಯನ್ನು ಕಂಡುಕೊಂಡ ನಂತರ 200ಕ್ಕೂ ಹೆಚ್ಚು ವಿಮಾನಗಳಲ್ಲಿ ಊಟ ಸೇವೆಯನ್ನು ರದ್ದುಗೊಳಿಸಿತ್ತು. ಪ್ರಯಾಣಿಕರಿಗೆ ಯಾವುದೇ ಅನಾರೋಗ್ಯ ಉಂಟಾಗದಿದ್ದರೂ, ಮುನ್ನೆಚ್ಚರಿಕೆ ಕ್ರಮವಾಗಿ ಈ ನಿರ್ಧಾರ ತೆಗೆದುಕೊಳ್ಳಲಾಯಿತು. ವಿಮಾನಯಾನ ಸಂಸ್ಥೆಯು ಗಂಭೀರ ಆರ್ಥಿಕ ಸಂಕಷ್ಟದಲ್ಲಿರುವಾಗಲೂ ಊಟದ ಸೇವೆಯನ್ನು ರದ್ದುಗೊಳಿಸಬಹುದು. ಆರ್ಥಿಕ ಬಿಕ್ಕಟ್ಟಿನ ಸಮಯದಲ್ಲಿ, ಭಾರತದ ಸ್ಪೈಸ್‌ಜೆಟ್ ಏರ್‌ಲೈನ್ ತಾತ್ಕಾಲಿಕವಾಗಿ ತನ್ನ ವಿಮಾನಗಳಲ್ಲಿ ಊಟ ಮತ್ತು ಪಾನೀಯಗಳ ವಿತರಣೆಯನ್ನು ನಿಲ್ಲಿಸಿತ್ತು. 'ತಾಂತ್ರಿಕ ಕಾರಣ'ಗಳನ್ನು ಉಲ್ಲೇಖಿಸಿದರೂ, ಸಿಬ್ಬಂದಿಗೆ ಪ್ರಯಾಣಿಕರಲ್ಲಿ ಕ್ಷಮೆಯಾಚಿಸಲು ಮತ್ತು ಮುಂಗಡವಾಗಿ ಬುಕ್ ಮಾಡಿದ ಊಟಕ್ಕೆ ಮರುಪಾವತಿ ಬಯಸುವವರಿಗೆ ಫೀಡ್‌ಬ್ಯಾಕ್ ಫಾರ್ಮ್‌ಗಳನ್ನು ನೀಡಲು ಸೂಚಿಸಲಾಗಿತ್ತು. ಇದು ಏರ್‌ಲೈನ್‌ನ ಆಳವಾಗುತ್ತಿದ್ದ ಆರ್ಥಿಕ ಬಿಕ್ಕಟ್ಟಿನ ಸಂಕೇತವಾಗಿತ್ತು. ವಿಮಾನವು ನಿಗದಿತ ಸಮಯದಲ್ಲಿ ಹೊರಡಲು ಸಿದ್ಧವಾಗಿದ್ದರೂ, ವಿಮಾನಕ್ಕೆ ಊಟದ ಟ್ರಾಲಿಗಳನ್ನು ಲೋಡ್ ಮಾಡುವ ಪ್ರಕ್ರಿಯೆಯಲ್ಲಿ ವಿಳಂಬವಾದರೆ, ಹಾರಾಟದ ವಿಳಂಬವನ್ನು ತಪ್ಪಿಸಲು ಕೆಲವೊಮ್ಮೆ ಊಟವಿಲ್ಲದೆಯೇ ಟೇಕಾಫ್ ಮಾಡಬೇಕಾಗುತ್ತದೆ. ವಿಮಾನ ನಿಲ್ದಾಣದಲ್ಲಿ ವಿಪರೀತ ದಟ್ಟಣೆ ಇದ್ದಾಗ, ಕ್ಯಾಟರಿಂಗ್ ವಾಹನಗಳು ವಿಮಾನವನ್ನು ತಲುಪಲು ಕಷ್ಟವಾಗಬಹುದು. ವಿಮಾನಯಾನ ಸಂಸ್ಥೆಯ ಸೇವೆಯಲ್ಲಿನ ಯಾವುದೇ ವೈಫಲ್ಯವು ಗ್ರಾಹಕರ ನಂಬಿಕೆಯನ್ನು ಹಾಳುಮಾಡುತ್ತದೆ. ಊಟವನ್ನು ವಿತರಿಸಲು ಆಗದೇ ಇದ್ದಾಗ, ಏರ್‌ಲೈನ್‌ಗಳು ಸಾಮಾನ್ಯವಾಗಿ ಕ್ಷಮೆಯಾಚಿಸುತ್ತವೆ, ಇಲ್ಲವೇ ಪರಿಹಾರ ನೀಡುತ್ತವೆ. ಊಟಕ್ಕಾಗಿ ಮುಂಗಡ ಹಣ ಪಾವತಿಸಿದ್ದಲ್ಲಿ, ಆ ಮೊತ್ತವನ್ನು ಸಂಪೂರ್ಣವಾಗಿ ಮರುಪಾವತಿಸುತ್ತದೆ. ಕೆಲವು ಸಲ ಸ್ನ್ಯಾಕ್ಸ್ ಅಥವಾ ಲಘು ಪಾನೀಯಗಳನ್ನು ವಿತರಿಸಲು ಪ್ರಯತ್ನಿಸಲಾಗುತ್ತದೆ. ಸಾಮಾನ್ಯವಾಗಿ, ಏರ್‌ಲೈನ್‌ಗಳು ತೊಂದರೆಗೊಳಗಾದ ಪ್ರಯಾಣಿಕರಿಗೆ ಭವಿಷ್ಯದ ಪ್ರಯಾಣಕ್ಕಾಗಿ ರಿಯಾಯಿತಿ ವೋಚರ್‌ಗಳನ್ನು ಅಥವಾ ಅವರ ಲಾಯಲ್ಟಿ ಪ್ರೋಗ್ರಾಂಗೆ ಹೆಚ್ಚುವರಿ ಅಂಕಗಳನ್ನು ನೀಡುತ್ತವೆ.

ಭಟ್ ಸಾಬ್‌ಗೆ ಲಿಚ್ಚಿ ಕಳುಹಿಸುತ್ತಿದ್ದ ಲಾಲೂ!

ಜನಪಥ

ರಾಘವ ಶರ್ಮ ನಿಡ್ಲೆ

vveditoped@gmail.com

ಖಡಕ್ ಅಧಿಕಾರಿ ಎಂದೇ ಖ್ಯಾತರಾಗಿದ್ದ ಟಿ.ಎನ್. ಶೇಷನ್ ಅವರು ಭಾರತದ ಮುಖ್ಯ ಚುನಾವಣಾಧಿಕಾರಿಯಾಗಿದ್ದ (1990-96) ಕಾಲವದು. ಬಿಹಾರ ರಾಜ್ಯ ವಿಧಾನಸಭೆ ಚುನಾವಣೆಗೆ ಕೆಲವು ತಿಂಗಳುಗಳಷ್ಟೇ ಬಾಕಿ ಇದ್ದವು. ನಿಗದಿತ ಅವಧಿಗೆ ಬಿಹಾರ ಚುನಾವಣೆ ನಡೆಸಬೇಕೆಂದರೆ ಎಲ್ಲಾ ಮತದಾರರು ತಮ್ಮ ಗುರುತಿನ ಚೀಟಿ ಹೊಂದಿರಲೇಬೇಕು. ಮತದಾರರ ಚೀಟಿ ಇದ್ದವರಿಗೆ ಮಾತ್ರ ಮತದಾನಕ್ಕೆ ಅವಕಾಶ ನೀಡಲಾಗುವುದು. ಹೀಗಾಗಿ, ಈ ಸಂಬಂಧ ರಾಜ್ಯ ಸರಕಾರ ಕಾರ್ಯೋನ್ಮುಖವಾಗಬೇಕು ಎಂದು ಶೇಷನ್ ಅವರು ಅಂದಿನ ಬಿಹಾರ ಮುಖ್ಯಮಂತ್ರಿ ಲಾಲೂ ಪ್ರಸಾದ್ ಯಾದವ್‌ಗೆ ಪದೇಪದೆ ನೆನಪಿಸುತ್ತಿದ್ದರು. ಆದರೆ, ಲಾಲೂ ಅದನ್ನು ಕಿವಿಗೇ ಹಾಕಿಕೊಳ್ಳುತ್ತಿರಲಿಲ್ಲ. ಅವರ ಹಠಮಾರಿ ಧೋರಣೆಯಿಂದ ಸಿಟ್ಟಾದ ಶೇಷನ್, ಚುನಾವಣೆಯನ್ನು ಮುಂದಕ್ಕೆ ಹಾಕಲು ನಿರ್ಧರಿಸಿದರು. ಚುನಾವಣಾ ಆಯೋಗದ ಕ್ರಮವನ್ನು ಟೀಕಿಸಿದ ಲಾಲೂ, ವಿರೋಧ ಪಕ್ಷಗಳಿಗೆ (ಕಾಂಗ್ರೆಸ್ ಮತ್ತು ಬಿಜೆಪಿ) ಲಾಭ ಮಾಡಲು ಮತ್ತು ಆರ್‌ಜೆಡಿಯನ್ನು ರಾಜಕೀಯವಾಗಿ ನಾಶಮಾಡಲು ಶೇಷನ್ ಚುನಾವಣೆಗಳನ್ನು ಮುಂದೂಡುತ್ತಿದ್ದಾರೆ ಎಂದು ಗಂಭೀರ ಆರೋಪ ಮಾಡಿ, ಚುನಾವಣೆಯನ್ನು ನಿಗದಿತ ಅವಧಿಗೇ ನಡೆಸಬೇಕು. ಈ ಬಗ್ಗೆ ಕೇಂದ್ರ ಚುನಾವಣಾ ಆಯೋಗಕ್ಕೆ ನಿರ್ದೇಶನ ನೀಡಬೇಕು ಎಂದು ಸುಪ್ರೀಂಕೋರ್ಟ್‌ನ ಮೊರೆಹೋಗಲು ತೀರ್ಮಾನ ಮಾಡಿದರು.

ಈ ಸಂದರ್ಭದಲ್ಲಿ, ಲಾಲೂಗೆ ಕರ್ನಾಟಕ ಮೂಲದ, ಸುಪ್ರೀಂಕೋರ್ಟ್‌ನ ಹಿರಿಯ ವಕೀಲ ಕೆ.ಎನ್. ಭಟ್ ಅವರ ಪರಿಚಯವಾಗಿ ಅವರ ಮೂಲಕವೇ ಅರ್ಜಿ ಸಲ್ಲಿಸಿ ನಿಗದಿತ ಅವಧಿಗೆ ಚುನಾವಣೆ ನಡೆಸುವಂತೆ ಕೋರಲಾಯಿತು. ಲಾಲೂ ಪರ ವಾದಿಸಿದ ಕೆ.ಎನ್. ಭಟ್, ಚುನಾವಣೆ ದಿನಾಂಕವನ್ನು ಮುಂದಕ್ಕೆ ಹಾಕಿರುವ ಆಯೋಗದ ಕ್ರಮ ಏಕಪಕ್ಷೀಯವಾಗಿದ್ದು, ಆಯೋಗ ತನ್ನ ಅಧಿಕಾರ ಮೀರಿ ವರ್ತಿಸುತ್ತಿದೆ ಎಂದು ಹೇಳಿ ಗಮನಸೆಳೆದರು. ಸುಪ್ರೀಂಕೋರ್ಟ್ ಕೂಡ ದಿನಾಂಕ ಮುಂದೂಡಿಕೆಗೆ ಅಸಮ್ಮತಿ ಸೂಚಿಸಿ, ನಿಗದಿತ ಅವಧಿಗೇ ನ್ಯಾಯಸಮ್ಮತ ಚುನಾವಣೆ ನಡೆಸುವಂತೆ ಆಯೋಗಕ್ಕೆ ನಿರ್ದೇಶಿಸಿತು.

ಆಯೋಗಕ್ಕೆ ಮತ್ತು ತಮ್ಮ ವಿರುದ್ಧ ಬಹಿರಂಗ ಸಮರ ಸಾರಿದ್ದ ಟಿ.ಎನ್. ಶೇಷನ್‌ರಿಗೆ ಸುಪ್ರೀಂಕೋರ್ಟ್‌ನಲ್ಲಿ ಮುಖಭಂಗವಾಯ್ತು ಎಂದು ಸಂಭ್ರಮಿಸಿದ್ದ ಲಾಲೂ, ಕೇಸ್ ಗೆದ್ದ ಬಳಿಕ ಕೆ.ಎನ್. ಭಟ್ಟರನ್ನು ಬಿಗಿದಪ್ಪಿಕೊಂಡಿದ್ದರು. ಶೇಷನ್ ಅವರು ಚುನಾವಣಾ ನೀತಿ ಸಂಹಿತೆಯ ಜಾರಿ, ಮತದಾರರ ಗುರುತಿನ ಚೀಟಿ ಜಾರಿಗೊಳಿಸುವುದು, ಅಭ್ಯರ್ಥಿಗಳ ಚುನಾವಣಾ ವೆಚ್ಚ ಮಿತಿಗೊಳಿಸುವುದು ಸೇರಿದಂತೆ ಅನೇಕ ಕಠಿಣ ಸುಧಾರಣೆಗಳನ್ನು ತಂದಿದ್ದರು ಮತ್ತು ಬಿಹಾರದಲ್ಲೂ ಇದನ್ನು ಅನುಷ್ಠಾನಗೊಳಿಸಲು ಮುಂದಾಗಿದ್ದರು. ಅದು ಬಿಹಾರದಲ್ಲಿ ಮುಕ್ತ ಮತ್ತು ನ್ಯಾಯಯುತ ಚುನಾವಣೆಯನ್ನು ಖಚಿತಪಡಿಸಿಕೊಳ್ಳುವ ಅವರ ವಿಶಾಲ ಪ್ರಯತ್ನದ ಭಾಗವಾಗಿತ್ತು.

ಕೋರ್ಟ್ ಆದೇಶದಂತೆ ಆಯೋಗ ಚುನಾವಣಾ ದಿನಾಂಕಗಳನ್ನು ಪ್ರಕಟಿಸಿತು. ಕೋರ್ಟಿನಲ್ಲಿ ಹಿನ್ನಡೆಯಾಗಿದ್ದರೂ, ಲಾಲೂವನ್ನು ಸುಮ್ಮನೆ ಬಿಡಲಾರೆ ಎಂದು ತೀರ್ಮಾನಿಸಿದ್ದ ಶೇಷನ್, 30 ದಿನಗಳಲ್ಲಿ ಪೂರ್ಣಗೊಳಿಸಬೇಕಾಗಿದ್ದ ಚುನಾವಣೆಯನ್ನು, ಸುಮಾರು 70 ದಿನಗಳ ಕಾಲ ನಡೆಯುವಂತೆ ಮಾಡಿದರು. ಹಲವು ಕ್ಷೇತ್ರಗಳಲ್ಲಿ ಮರುಚುನಾವಣೆಗೆ ಶೇಷನ್ ಆದೇಶಿಸಿದ್ದರಿಂದ ವಿವಿಧೆಡೆ ಮರುಚುನಾವಣೆಗಳು ನಡೆದವು. ಅಕ್ರಮದ ಬಗ್ಗೆ ಅನುಮಾನ ಬಂದರೆ, ಆರೋಪಗಳು ಕೇಳಿಬಂದರೆ ನಿರ್ದಿಷ್ಟ ಕ್ಷೇತ್ರಗಳಲ್ಲಿ ಮರುಚುನಾವಣೆ ನಡೆಸುವ ಅಧಿಕಾರ ಚುನಾವಣಾ ಆಯೋಗಕ್ಕಿತ್ತು. ಇದರಿಂದಾಗಿ 1995ರ ಮಾರ್ಚ್ ತಿಂಗಳಲ್ಲಿ ಮುಗಿಯಬೇಕಾಗಿದ್ದ ಚುನಾವಣೆ ಏಪ್ರಿಲ್ 15ರ ಸುಮಾರಿಗೆ ಪೂರ್ಣಗೊಂಡಿತ್ತು.

ಈ ಚುನಾವಣೆ ಪ್ರಚಾರಕ್ಕೆ ಬರುವಂತೆ ಕರ್ನಾಟಕದ ಮಾಜಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಅವರಿಗೆ ಲಾಲೂ ಯಾದವ್ ಆಹ್ವಾನ ನೀಡಿದ್ದರು. ಆದರೆ, 'ನನಗೆ ಬರಲು ಸಾಧ್ಯವಾಗುತ್ತಿಲ್ಲ' ಎಂದು ಹೆಗಡೆ ತಿಳಿಸಿದರು. ಏನು ಮಾಡುವುದು ಎಂದು ಯೋಚಿಸಿದ ಲಾಲೂ, ವಕೀಲ ಮಿತ್ರ ಕೆ.ಎನ್. ಭಟ್ಟರಿಗೆ ಹೆಗಡೆಯವರ ಪರಿಚಯವಿದೆ ಎಂದು ತಿಳಿದು ಭಟ್ಟರಿಗೆ ಫೋನಾಯಿಸಿದರು. ''ಕೈಸೇ ಹೋ ಭಟ್ ಸಾಬ್'' ಎಂದು ಮಾತು ಶುರುಮಾಡಿದ ಲಾಲೂ, ರಾಮಕೃಷ್ಣ ಹೆಗಡೆಯವರು ಇಲ್ಲಿ ಪ್ರಚಾರಕ್ಕೆ ಬರುವಂತೆ ನೀವೇ ಹೇಳಬೇಕು. ನಾನು ಕೇಳಿದರೆ ಬರಲಾಗುತ್ತಿಲ್ಲ ಎನ್ನುತ್ತಿದ್ದಾರೆ. ಅವರನ್ನು ನೀವು ಒಪ್ಪಿಸಿ ಎಂದು ಫೋನಿಟ್ಟರು. ಭಟ್ಟರು ಹೆಗಡೆಯವರಿಗೆ ಫೋನಾಯಿಸಿ, ''ನೀವು ಪಟನಾಕ್ಕೆ ಹೋದರೆ ಸಾಕು, ಉಳಿದೆಲ್ಲಾ ವ್ಯವಸ್ಥೆಯನ್ನು ಲಾಲೂ ಮಾಡುತ್ತಾರೆ. ಇದನ್ನು ನಿಮಗೆ ತಿಳಿಸಿ ಒಪ್ಪಿಸಲು ಹೇಳಿದ್ದಾರೆ'' ಎಂದರು. ಅದಕ್ಕೆ ಹೆಗಡೆಯವರು, ''ನೋಡಿ ಭಟ್ರೆ, ನನಗೆ ಕಣ್ಣು ನೋವು. ಪ್ರಚಾರ ಮಾಡಲು ಆಗುವುದಿಲ್ಲ. ಮೇಲಾಗಿ, ನಾನು ಬ್ರಾಹ್ಮಣನಾಗಿರುವುದರಿಂದ, ಬ್ರಾಹ್ಮಣರೂ ನಮ್ಮೊಂದಿಗೆ ಇದ್ದಾರೆ ಎನ್ನುವುದನ್ನು ಲಾಲೂ ತೋರ್ಪಡಿಸಿಕೊಳ್ಳಬೇಕಿದೆ. ಅದಕ್ಕಾಗಿ ಮಾತ್ರ ಅವರು ನನ್ನನ್ನು ಕರೆಯುತ್ತಿದ್ದಾರೆ. ಕ್ಷಮಿಸಿ ಹೋಗಲಾರೆ'' ಎಂದು ಹೇಳಿ ಫೋನಿಟ್ಟರು. ಅಲ್ಲಿಗೇ ಸುಮ್ಮನಾಗದ ಲಾಲೂ, ಹೆಗಡೆ ಬರದಿದ್ದರೆ ಏನಂತೆ, ದೇವೇಗೌಡರನ್ನು ಕರೆಯೋಣ ಎಂದು ಆಹ್ವಾನಿಸಿದರು. ದೇವೇಗೌಡರು ಲಾಲೂ ಆಹ್ವಾನಕ್ಕೆ ಒಪ್ಪಿ ಪ್ರಚಾರವನ್ನೂ ನಡೆಸಿದರು.

ಅಂದು, ಮಾರ್ಚ್ ತಿಂಗಳೊಳಗೆ ಚುನಾವಣೆ ಮುಗಿದು, ಅಧಿಕಾರಕ್ಕೆ ಬಂದ ಹೊಸ ಸರಕಾರ ಬಜೆಟ್ ಮಂಡಿಸಿ, ಅದಕ್ಕೆ ಅನುಮೋದನೆ ಪಡೆದುಕೊಳ್ಳುವ ಪ್ರಕ್ರಿಯೆಯೂ ಮುಗಿದುಹೋಗಬೇಕಿತ್ತು. ಬಜೆಟ್‌ಗೆ ಅನುಮೋದನೆ

ಪಡೆದುಕೊಳ್ಳಲು ಚುನಾವಣೆಯೇ ಮುಗಿದಿರಲ್ಲ, ಹೊಸ ಸರಕಾರವೂ ಇರಲಿಲ್ಲ. ಬಿಹಾರ ಸರಕಾರದ ಅವಧಿ ಮುಗಿದಿದ್ದರಿಂದ ರಾಷ್ಟ್ರಪತಿ ಆಳ್ವಿಕೆ ಜಾರಿಯಲ್ಲಿತ್ತು. ಹೀಗಾಗಿ, ಏಪ್ರಿಲ್ ತಿಂಗಳಲ್ಲಿ ಕೇಂದ್ರ ಬಜೆಟ್ ಅಧಿವೇಶನ ನಡೆಯುತ್ತಿದ್ದ ವೇಳೆ ರಾಷ್ಟ್ರಪತಿಯವರು ಬಿಹಾರದ ತುರ್ತು ಪರಿಸ್ಥಿತಿ ಬಗ್ಗೆ ಘೋಷಿಸಿ, ಸಂಸತ್ತಿನಲ್ಲೇ ಬಿಹಾರ ಬಜೆಟ್‌ಗೆ ಅನುಮೋದನೆ ನೀಡುವಂತೆ ಆದೇಶ ನೀಡಿದರು. ಈ ಹಿನ್ನೆಲೆಯಲ್ಲಿ, ಬಿಹಾರ ಬಜೆಟ್‌ಗೆ ಸಂಸತ್ ಅನುಮೋದನೆ ನೀಡಿದ ಐತಿಹಾಸಿಕ ಘಟನೆಯೂ 1995ರಲ್ಲಿ ನಡೆಯಿತು.

ಆಯೋಗವು ವಿವಿಧೆಡೆ ಮರುಚುನಾವಣೆ ನಡೆಸಿದ್ದರಿಂದ ಹೈರಾಣಾಗಿದ್ದ ಲಾಲೂ, ಆರ್ಥಿಕವಾಗಿ ಸಾಕಷ್ಟು ನಷ್ಟ ಅನುಭವಿಸಿದ್ದರು. ಲಾಲೂ ಮತ್ತೆ ಅಧಿಕಾರಕ್ಕೆ ಬರುವ ಬಗ್ಗೆ ಉದ್ಯಮಪತಿಗಳಿಗೂ ಅನುಮಾನ ಉಂಟಾಗಿ ಹಣಕಾಸು ಪೂರೈಕೆಯನ್ನು ನಿಲ್ಲಿಸಿದ್ದರು. ಹೀಗಾಗಿ, ಸಂಪನ್ಮೂಲ ಕ್ರೋಡೀಕರಣದ ದಾರಿ ಕಂಡುಕೊಳ್ಳಲು ಲಾಲೂ ಮುಂದಾಗಿದ್ದರು. ಅಂತಿಮವಾಗಿ, ಚುನಾವಣಾ ಆಯೋಗದ ಕ್ರಮ ಹಾಗೂ ಮರುಚುನಾವಣೆಗಳಿಂದ ಉಂಟಾಗಿದ್ದ ಆರ್ಥಿಕ ಬರವೂ ಅಂದು 'ಮೇವು ಹಗರಣ' ಸೃಷ್ಟಿಯಾಗಲು ಕಾರಣವಾಗಿತ್ತು.

ಮೇವು ಹಗರಣ ಬೆಳಕಿಗೆ ಬಂದ ನಂತರ ಲಾಲೂ ಸಿಎಂ ಸ್ಥಾನದಿಂದ ಕೆಳಗಿಳಿಯುವುದು ಅನಿವಾರ್ಯವಾಗಿತ್ತು ಮತ್ತು ಪತ್ನಿ ರಾಬ್ರಿ ದೇವಿಯನ್ನು ಮುಖ್ಯಮಂತ್ರಿ ಕುರ್ಚಿಯಲ್ಲಿ ಕೂರಿಸಿ, ಆಡಳಿತ ನಡೆಸುತ್ತಿದ್ದರು. ರಾಬ್ರಿ ದೇವಿಗೆ ಅಂದು ಆಡಳಿತದ ತಲೆ-ಕಾಲು ತಿಳಿದಿರಲಿಲ್ಲ. ಮೇವು ಹಗರಣದಲ್ಲಿ ಕಾನೂನು ಹೋರಾಟ ನಡೆಸಲು ಮುಂದಾಗಿದ್ದ ಲಾಲೂ, ಮೊದಲು ತಮ್ಮ ವಕೀಲ ಮಿತ್ರ ಕೆ.ಎನ್. ಭಟ್ಟರನ್ನೇ ಸಂಪರ್ಕಿಸಿದ್ದರು. ಆದರೆ, ಭಟ್ಟರು ಆಗ ಕೇಂದ್ರ ಸರಕಾರದ ಹೆಚ್ಚುವರಿ ಸಾಲಿಸಿಟರ್ ಜನರಲ್ ಆಗಿದ್ದರಿಂದ ಲಾಲೂ ಅವರ ಕೇಸ್ ತೆಗೆದುಕೊಂಡಿರಲಿಲ್ಲ. ಬದಲಿಗೆ, ಅವರನ್ನು ಮತ್ತೋರ್ವ ಹಿರಿಯ ವಕೀಲ ಕಪಿಲ್ ಸಿಬಲ್‌ರಿಗೆ ಪರಿಚಯ ಮಾಡಿಸಿದ್ದರು. ಅಲ್ಲಿಂದ ಕಪಿಲ್ ಸಿಬಲ್ ಕೇಸಿನ ಜವಾಬ್ದಾರಿ ವಹಿಸಿಕೊಂಡಿದ್ದರು. 1995ರಲ್ಲಿ ಟಿ.ಎನ್. ಶೇಷನ್ ಕೋರ್ಟ್‌ನಲ್ಲಿ ಹಿನ್ನಡೆ ಅನುಭವಿಸಿದ್ದಕ್ಕೆ ಕೆ.ಎನ್. ಭಟ್ಟರ ವಾದವೇ ಕಾರಣ ಎಂದು ಅವರ ಬಗ್ಗೆ ಭಾರಿ ಅಭಿಮಾನ, ಕಾಳಜಿ ಹೊಂದಿದ್ದ ಲಾಲೂ, ಭಟ್ಟರಿಗೆ ಬಿಹಾರದ ಮುಜಫರಪುರದ ಸುಪ್ರಸಿದ್ಧ ಲಿಚ್ಚಿ ಹಣ್ಣುಗಳನ್ನು ಆಗಾಗ್ಗೆ ಕಳುಹಿಸಿಕೊಡುತ್ತಿದ್ದರು...

2025ರ ಬಿಹಾರ ವಿಧಾನಸಭಾ ಚುನಾವಣೆ ವರದಿಗಾಗಿ ನಾನು ಬಿಹಾರದಲ್ಲಿದ್ದೇನೆ ಎನ್ನುವುದು ಗೊತ್ತಾಗಿ, ಬೆಂಗಳೂರಿನ ಮನೆಯಲ್ಲಿ ನಿವೃತ್ತ ಜೀವನ ನಡೆಸುತ್ತಿರುವ ಕೆ.ಎನ್. ಭಟ್ಟರು ಫೋನಾಯಿಸಿದ್ದರು. ''ನೀನು ಈಗ ಎಲ್ಲಿದ್ದಿ?'' ಎಂದು ಭಟ್ಟರು ಕೇಳಿದ್ದಕ್ಕೆ ನಾನು, ''ಮುಜಫರಪುರದ ಕರ್ನಾಟಕ ರೆಸ್ಟೋರೆಂಟ್‌ನಲ್ಲಿ ಊಟ ಮಾಡುತ್ತಿದ್ದೇನೆ'' ಎಂದು ಉತ್ತರಿಸಿದೆ. ''ಓಹ್ ಅಲ್ಲಿದ್ದೀಯಾ, ಹಾಗಾದರೆ ಮುಜಫರಪುರ ಲಿಚ್ಚಿ ತಿನ್ನದೆ ಬರಬೇಡ. ನನಗೆ ಲಾಲೂ ಪ್ರಸಾದ್ ಅಲ್ಲಿಂದ ಲಿಚ್ಚಿ ಕಳುಹಿಸಿಕೊಡುತ್ತಿದ್ದರು'' ಎಂದರು. ''ಅರೆ, ನಿಮಗ್ಯಾಕೆ ಅವರು ಕಳಿಸುತ್ತಿದ್ದರು?'' ಎಂದು ಕೇಳಿದಾಗ ಟಿ.ಎನ್. ಶೇಷನ್ ಕಥೆ, ಕೋರ್ಟು ಕೇಸು, ಲಾಲೂ ಸ್ನೇಹ, ಮೇವು ಹಗರಣ ಸೇರಿ ಹಳೆಯ ನೆನಪುಗಳ ಬುತ್ತಿಯನ್ನೇ ಭಟ್ಟರು ತೆರೆದಿಟ್ಟರು.

ಮುಜಫರಪುರದ ಲಿಚ್ಚಿ, ಮುಖ್ಯವಾಗಿ ಶಾಹಿ ಲಿಚ್ಚಿ, ಇಲ್ಲಿನ ಒಂದು ವಿಶೇಷ ಹಣ್ಣಾಗಿದ್ದು, ಸಿಹಿ, ರಸಭರಿತ ತಿರುಳು ಮತ್ತು ಗುಲಾಬಿ ಸುಗಂಧದ ಪರಿಮಳಕ್ಕೆ ಹೆಸರುವಾಸಿ. 'ಲೇಟ್ ಲಾರ್ಜ್ ರೆಡ್' ಪ್ರಭೇದ ಕೂಡ ಇಲ್ಲಿ ಗಮನಸೆಳೆದಿದ್ದು, ಇದು ಕಡುಗೆಂಪು ಬಣ್ಣ ಮತ್ತು ಹೆಚ್ಚಿನ ಇಳುವರಿಗೆ ಖ್ಯಾತಿ ಪಡೆದಿದೆ. ಉತ್ತಮ ಗುಣಮಟ್ಟದ ಶಾಹಿಲಿಚ್ಚಿಗೆ 2018ರಲ್ಲಿ Geographical Indication (GI) ಟ್ಯಾಗ್ ಕೂಡ ಸಿಕ್ಕಿತ್ತು.

ದೇವೇಗೌಡರ ಬೆನ್ನು ಬಿದ್ದಿದ್ದರು

1997ರಲ್ಲಿ ಮೇವು ಹಗರಣದ ತನಿಖೆ ಮಾಡುತ್ತಿದ್ದ ಅಂದಿನ ಸಿಬಿಐ ನಿರ್ದೇಶಕ ಯು.ಎನ್. ಬಿಸ್ವಾಸ್ ಮೇಲೂ ಒತ್ತಡ ಹೇರಿ, ಆರೋಪಗಳಿಂದ ಪಾರಾಗಲು ಲಾಲೂ ಯತ್ನಿಸಿದ್ದರು. ಆದರೆ, ಅದು ಫಲಿಸಿರಲಿಲ್ಲ, ಇಲ್ಲ, ಇದಕ್ಕೆ ಪ್ರಧಾನಮಂತ್ರಿಯಿಂದಲೇ ಪರಿಹಾರ ಕಂಡುಕೊಳ್ಳಬೇಕು ಎಂದು ಅಂದಿನ ಪ್ರಧಾನಿ ಎಚ್.ಡಿ. ದೇವೇಗೌಡರನ್ನು ಭೇಟಿಯಾದರು ಲಾಲೂ. ''ನೋಡಿ ದೇವೇಗೌಡಾ ಜೀ, ನೀವು ಮಾಡುತ್ತಿರುವುದು ಸರಿ ಇಲ್ಲ. ಇದರ ಪರಿಣಾಮವೂ ಕೆಟ್ಟದಾಗಿರುತ್ತದೆ. ನಿಮಗೆ ಪಿತೂರಿಗಳನ್ನು ಮಾಡಲೇಬೇಕು ಎಂದಿದ್ದರೆ ನನ್ನನ್ನೇಕೆ ಗುರಿ ಮಾಡುತ್ತೀರಿ? ಬಿಜೆಪಿ ವಿರುದ್ಧ ಒಳಸಂಚು ಮಾಡಿ. ನನ್ನ ಹಿಂದೆ ಏಕೆ ಬಿದ್ದಿದ್ದೀರಿ'' ಎಂದು ಲಾಲೂ ಸಿಡಿಮಿಡಿಗೊಂಡಿದ್ದರು. ''ಕೋರ್ಟ್ ಆದೇಶದ ಮೇಲೆ ಸಿಬಿಐ ತನಿಖೆ ನಡೆಸುತ್ತಿದೆ. ಇಲ್ಲಿ ನಾನೇನು ಮಾಡಲಾಗುತ್ತದೆ?'' ಎಂದು ಗೌಡರು ಮನವರಿಕೆ ಮಾಡಿದರೂ, ಲಾಲೂ ಸಮಾಧಾನಗೊಂಡಿರಲಿಲ್ಲ. ಮೇವು ಹಗರಣದಲ್ಲಿ ಕಾನೂನಿನ ಬಿಗಿ ಅಸ್ತ್ರವು ಲಾಲೂವನ್ನು ನಿದ್ರೆಯಿಲ್ಲದ ರಾತ್ರಿಗಳನ್ನು ಕಳೆಯುವಂತೆ ಮಾಡಿತ್ತು. 1997ರ ಜನವರಿ ತಿಂಗಳಲ್ಲಿ ಸಿಬಿಐ ತನಿಖೆಗೆ ಮುನ್ನ ದೇವೇಗೌಡರನ್ನು ಮತ್ತೊಮ್ಮೆ ಪ್ರಧಾನಿ ನಿವಾಸದಲ್ಲಿ ಭೇಟಿಯಾಗಿದ್ದ ಲಾಲೂ, ''ನನ್ನ ಮೇಲೆ ಕೇಸು ತಯಾರುಮಾಡಲಿ ಎಂದೇ ನಿಮ್ಮನ್ನು ನಾನು ಪ್ರಧಾನಿ ಮಾಡಿದ್ದಾ? ನಿಮ್ಮನ್ನು ಪ್ರಧಾನಿ ಮಾಡಿ ನಾನು ಬಹಳ ದೊಡ್ಡ ತಪ್ಪು ಮಾಡಿದೆ'' ಎಂದು ಬುಸುಗುಟ್ಟಿದ್ದರು. ಆದರೆ, ಗೌಡರು ಮಾತ್ರ ಸೌಮ್ಯದಿಂದಿದ್ದರು. ಗೌಡರು ಪ್ರಧಾನಿಯಾಗಿದ್ದಾಗ ಕರ್ನಾಟಕ ಐಎಎಸ್ ಕೇಡರ್‌ನ ಜೋಗಿಂದರ್ ಸಿಂಗ್ ಸಿಬಿಐ ನಿರ್ದೇಶಕರಾಗಿದ್ದರು ಮತ್ತು ಅವರ ಆಯ್ಕೆಯ ಹಿಂದೆ ದೇವೇಗೌಡರ ಪ್ರಭಾವವಿತ್ತು. ಬಹುಶಃ ಈ ಕಾರಣಕ್ಕಾಗಿಯೇ, ಮೇವು ಹಗರಣದಲ್ಲಿ ಸಿಬಿಐ ಕುಣಿಕೆಯಿಂದ ಪಾರಾಗಲು ಇದೇ ಸರಿಯಾದ ಸಮಯ ಎಂದು ಲಾಲೂ ಭಾವಿಸಿದ್ದಿರಲೂಬಹುದು.

(ಲೇಖಕರು ಹಿರಿಯ ಪತ್ರಕರ್ತರು)

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಜನಪ್ರತಿನಿಧಿಗಳು ಎಲ್ಲಿ?

ಸುಮಾರು ಮೂರು ತಿಂಗಳಿನಿಂದ, ಬೆಂಗಳೂರು ಮಹಾನಗರಿಯಲ್ಲಿನ ರಸ್ತೆ ಗುಂಡಿಗಳ ಬಗ್ಗೆಯೇ ಮಾಧ್ಯಮಗಳು ಸಾರ್ವಜನಿಕರು, ಉದ್ಯಮಿಗಳು ಹಾಗೂ ಸಹಜವಾಗಿ ವಿಪಕ್ಷೀಯರಿಂದ ಟೀಕೆಗಳು ಹೊಮ್ಮುತ್ತಲೇ ಇವೆ. ಸರಕಾರವೂ ನಿದ್ರೆಯಿಂದ ಎಚ್ಚೆತ್ತುಕೊಂಡಂತೆ, ಕೋಟ್ಯಂತರ ರುಪಾಯಿ ಮಂಜೂರು ಮಾಡಿ ರಸ್ತೆ ಗುಂಡಿಗಳಿಗೆ ತೇಪೆ ಹಾಕಲು ಆರಂಭಿಸಿದೆ; ಆದರೆ ರಸ್ತೆಗಳ ಅವಸ್ಥೆ ನೋಡಿದರೆ ಅದು ಶವವನ್ನು ಸಿಂಗರಿಸಿದಂತೆ ಆಗಿದೆ. ನಮ್ಮ ಜನಪ್ರತಿನಿಧಿಗಳು ಈ ಅವ್ಯವಸ್ಥೆಯನ್ನು ಕಂಡೂ ಕಾಣದಂತೆ ಇರುವುದಕ್ಕೆ ಏನನ್ನುವುದು? ತಂತಮ್ಮ ಕ್ಷೇತ್ರದಲ್ಲಿ ಹದಗೆಟ್ಟಿರುವ ರಸ್ತೆಗಳು ಹಾಗೂ ಅಪಾಯಕಾರಿ ಗುಂಡಿಗಳನ್ನು ಅವರು ಗಮನಿಸಿ, ಅಧಿಕಾರಿಗಳನ್ನು ಕಂಡು, ಅವನ್ನು ಸರಿಪಡಿಸುವಂತೆ ಆಗ್ರಹಿಸಬಹುದಿತ್ತು. ಇನ್ನಾದರೂ ನಮ್ಮ ಜನಪ್ರತಿನಿಧಿಗಳು ಮನೆಯಿಂದ ಹೊರಬಂದು, ತಮ್ಮ ಕ್ಷೇತ್ರಗಳ ಉದ್ದಗಲಕ್ಕೂ ಸಂಚರಿಸಿ, ಇರಬಹುದಾದ ಅವ್ಯವಸ್ಥೆಗಳನ್ನು ಮನವರಿಕೆ ಮಾಡಿಕೊಂಡು, ಅವನ್ನು ಸರಿಪಡಿಸುವತ್ತ ಗಮನ ಹರಿಸಲಿ. ತನ್ಮೂಲಕ, ತಮ್ಮನ್ನು ಚುನಾಯಿಸಿದ ಜನರ ಋಣವನ್ನು ತೀರಿಸಲಿ.

- ಬೆಳ್ಳಿ ಚಂದ್ರಶೇಖರಶೆಟ್ಟಿ, ಬೆಂಗಳೂರು

ಹೆಣ್ಣನ್ನು ಗೌರವಿಸಿ

ನಾಗರಿಕ ಸಮಾಜ ಎಂದು ಹೇಳಿಕೊಳ್ಳುವ ನಮ್ಮ ಇಂದಿನ ವ್ಯವಸ್ಥೆಯಲ್ಲಿ ಈಗಲೂ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯ, ಹಿಂಸೆ ಮತ್ತು ಕಿರುಕುಳ ಆತಂಕ ಹುಟ್ಟಿಸುವಂತಿವೆ. ಹೆಣ್ಣುಮಕ್ಕಳ ಶಿಕ್ಷಣ, ಉದ್ಯೋಗಾವಕಾಶ, ಸಮಾನತೆ ಎಂಬ ಮಾತುಗಳೇನೋ ಜೋರಾಗಿ ಕೇಳಿಬರುತ್ತಿದ್ದರೂ ಅವರ 'ಸುರಕ್ಷತೆ' ಇನ್ನೂ ಪ್ರಶ್ನಾರ್ಥಕವಾಗೇ ಉಳಿದಿದೆ. ಅಂಕಿ-ಅಂಶಗಳ ಪ್ರಕಾರ, ನಮ್ಮ ರಾಜ್ಯದಲ್ಲೇ ಗಣನೀಯ ಸಂಖ್ಯೆಯ ಪ್ರಕರಣಗಳು ದಾಖಲಾಗಿವೆ. ಇದು ಕಾನೂನು-ವ್ಯವಸ್ಥೆಯ ವೈಫಲ್ಯವಷ್ಟೇ ಅಲ್ಲ, ಜತೆಗೆ ಮಾನವೀಯ ಮೌಲ್ಯಗಳ ಕುಸಿತದ ದ್ಯೋತಕವೂ ಹೌದು.

ಮಹಿಳೆಯರ ಮೇಲೆ ನಡೆಯುವ ಹಿಂಸೆಯ ಹಿಂದಿರುವುದು 'ವಿಲಕ್ಷಣ ಧೋರಣೆ'. ಹೆಣ್ಣನ್ನು ಇಂದಿಗೂ ಅಸಹಾಯಕಳಂತೆ, ಅಬಲೆಯಂತೆ ನೋಡುವ ದೃಷ್ಟಿ ಬೇರೂರಿರುವುದೇ ದೊಡ್ಡ ಸಮಸ್ಯೆ. ಕಾನೂನು ಎಷ್ಟೇ ನಿಷ್ಠುರಿಯಾದರೂ, ಇಂಥ ಮನೋಧರ್ಮ ಬದಲಾಗದಿದ್ದರೆ ಮಹಿಳೆಯರ ಸುರಕ್ಷತೆಯ ಖಾತ್ರಿಯಿರುವುದಿಲ್ಲ. ಈ ಕಾರಣದಿಂದಲೇ ಮಕ್ಕಳಿಗೆ ಶಾಲಾ ಹಂತದಿಂದಲೇ ಸಮಾನತೆ, ಗೌರವ ಮತ್ತು ಸಹಜೀವನದ ಪಾಠಗಳನ್ನು ಬೋಧಿಸುವುದು ಅತ್ಯಗತ್ಯವಾಗಿದೆ.

ಮಹಿಳಾ ಸುರಕ್ಷತೆಯ ವಿಷಯವನ್ನು ಕೇವಲ ಸರಕಾರ ಅಥವಾ ಪೊಲೀಸರ ಹೊಣೆಗಾರಿಕೆಯಾಗಿ ನೋಡುವುದು ತಪ್ಪು; ಪ್ರತಿಯೊಬ್ಬ ನಾಗರಿಕನೂ ಈ ವಿಷಯದಲ್ಲಿ ಬಾಧ್ಯಸ್ಥನಾಗಬೇಕು. ಬೀದಿಯಲ್ಲಿ ಮಹಿಳೆಯರಿಗೆ ಕಿರುಕುಳವಾಗುತ್ತಿರುವುದನ್ನು ಕಂಡೂ ಸುಮ್ಮನಿರುವುದು ಇಲ್ಲವೇ ಜಾಗ ಖಾಲಿಮಾಡುವುದು ಸಹಾನುಭೂತಿಯ ಕೊರತೆಯಷ್ಟೇ ಅಲ್ಲ, ಅದು ಅಪರಾಧಕ್ಕೆ ನೀಡಿದ ಮೌನ ಸಮ್ಮತಿಯೂ ಆಗಿಬಿಡುತ್ತದೆ. ಸಮಾಜವೇ ಧೈರ್ಯವಾಗಿ ನಿಂತಾಗ ಮಾತ್ರವೇ ಇಂಥ ದೌರ್ಜನ್ಯಕ್ಕೆ ಕಡಿವಾಣ ಬೀಳಲು ಸಾಧ್ಯ. ಬಹುತೇಕರು ಅಂದುಕೊಂಡಿರುವಂತೆ ಮಹಿಳೆ ದುರ್ಬಲಳಲ್ಲ; ಆಕೆ ಬದುಕಿನ ಶಕ್ತಿ, ಕುಟುಂಬದ ಅಡಿಗಲ್ಲು, ಸಮಾಜದ ನಿಜವಾದ ಬಲ. ಹೀಗಾಗಿ ಆಕೆಯ ಮನಸ್ಸನ್ನು ಮುರಿಯುವ ಬದಲು ಜತೆಗಿಟ್ಟುಕೊಂಡು ಜತನವಾಗಿ ಕಾಪಾಡುವುದು ನಮ್ಮೆಲ್ಲರ ಜವಾಬ್ದಾರಿಯಾಗಬೇಕು. ಮಹಿಳಾ ಸುರಕ್ಷತೆಯ ನಿಟ್ಟಿನಲ್ಲಿ ನಿಷ್ಠುರ ಕಾನೂನುಗಳ ಜತೆಜತೆಗೆ, ಮನೋಧರ್ಮದ ಬದಲಾವಣೆಯ ಅಗತ್ಯವೂ ಇದೆ ಎಂಬುದನ್ನು ಅರಿಯೋಣ.

- ಶಿವಯೋಗಿ ಎಂ.ವಿ., ರಾಂಪುರ

ಓದುಗರ ಓಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಭಗವದ್ಗೀತೆಯು ಯುದ್ಧವನ್ನು ಪ್ರತಿಪಾದಿಸುವುದೇ?

ಧರ್ಮಸೂಕ್ಷ್ಮ

ಕೆ.ಲೀಲಾವತಿ

vveditoped@gmail.com

ಸುಮಾರು ಮೂವತ್ತು ವರ್ಷಗಳ ಹಿಂದೆ ನಮ್ಮ ಪಕ್ಕದ ಮನೆಯಲ್ಲಿ ಒಂದು ಕ್ರಿಶ್ಚಿಯನ್ ಕುಟುಂಬವಿತ್ತು. ಅದರ ಸದಸ್ಯರೊಬ್ಬರು, ''ನಿಮ್ಮ ಭಗವದ್ಗೀತೆಯಲ್ಲಿ ಶ್ರೀಕೃಷ್ಣನು 'ಯುದ್ಧ ಮಾಡು, ಯುದ್ಧ ಮಾಡು' ಎಂದೇ ಹೇಳುತ್ತಾನೆ. ಅರ್ಜುನನು 'ಯುದ್ಧ ಮಾಡುವುದು ಹಿಂಸೆ, ಅದರಿಂದ ತುಂಬಾ ನಷ್ಟವಾಗುತ್ತದೆ' ಎಂದರೂ ಕೇಳದೆ ನಿಮ್ಮ ಶ್ರೀಕೃಷ್ಣನು ಅರ್ಜುನನಿಂದ ಬಲವಂತವಾಗಿ ಯುದ್ಧ ಮಾಡಿಸುತ್ತಾನೆ; ನಿಮ್ಮ ಧರ್ಮಗ್ರಂಥ ಸರಿಯಾಗಿಲ್ಲ. ಹಿಂಸೆಯನ್ನು, ಯುದ್ಧವನ್ನು ಪ್ರಚೋದಿಸುತ್ತದೆ'' ಎಂದಿದ್ದರು.

ಈ ಮಾತನ್ನು ಕೇಳಿದ ನನಗೂ ಆಗ 'ಹೌದಾ? ಹಾಗಾದರೆ ಇಡೀ ವಿಶ್ವದಲ್ಲಿ ಭಗವದ್ಗೀತೆಯನ್ನು ಒಂದು ಪರಿಣಾಮಕಾರಿ ಆಧ್ಯಾತ್ಮಿಕ ಗ್ರಂಥವನ್ನಾಗಿ ಹೇಗೆ ಸ್ವೀಕರಿಸಿದ್ದಾರೆ? ಅದೆಷ್ಟೊಂದು ಜನ ಇದಕ್ಕೆ ಹೇಗೆ ವ್ಯಾಖ್ಯಾನ ಬರೆದಿದ್ದಾರೆ! ತಿಳಿದವರು, ಶಾಸ್ತ್ರಜ್ಞರು ಇದನ್ನು ತಮ್ಮ ಮಾರ್ಗದರ್ಶಿ ಗ್ರಂಥವನ್ನಾಗಿ ಹೇಗೆ ಸ್ವೀಕರಿಸಿದರು?' ಎಂತೆಲ್ಲಾ ಯೋಚನೆಗಿಟ್ಟುಕೊಂಡಿತ್ತು.

ನಂತರ ನಾನೂ ಭಗವದ್ಗೀತೆಯನ್ನು ಓದಲಾರಂಭಿಸಿದಾಗ ಗೊತ್ತಾಯಿತು, ನಮ್ಮ ಪಕ್ಕದ ಮನೆಯವರು ಮೊದಲನೆಯ ಅಧ್ಯಾಯದಿಂದ ಮುಂದಕ್ಕೆ ಓದಿಲ್ಲವೆಂದು. ಹೀಗೇ ನಮ್ಮ ಆಧ್ಯಾತ್ಮಿಕ ಗ್ರಂಥಗಳ ಬಗೆಗೆ, ನಮ್ಮ ಸಂಪ್ರದಾಯಗಳ ಬಗೆಗೆ ತಪ್ಪು ತಪ್ಪಾಗಿ ಹೇಳಿ ನಮ್ಮನ್ನೇ ಯಾಮಾರಿಸುತ್ತಾರೆ ಅಂತ ಗೊತ್ತಾಯಿತು. ಅವರು ಏಸುವಿನ ಕರುಣೆ, ಪ್ರೀತಿಗಳ ಬಗೆಗೆ ಪರಿಣಾಮಕಾರಿಯಾಗಿ ಹೇಳುತ್ತಾರೆ. ಅಲ್ಲದೆ, ನಾವೂ ಅದಕ್ಕೆ ಮರುಳಾಗಿ ಅವರ ಧರ್ಮಕ್ಕೆ ಮತಾಂತರವಾಗುವಂತೆ ಮಾಡಿಬಿಡುತ್ತಾರೆ.

ನಾನೂ ಭಗವದ್ಗೀತೆಯನ್ನು ಓದಲಾರಂಭಿಸಿದ ನಂತರ ನಾನು, 'ಇಷ್ಟು ಸುಲಭವಾದ, ಸರಳವಾದ, ನಮ್ಮನ್ನು ಸದಾಕಾಲವೂ ಸಂತೋಷವಾಗಿಡಬಲ್ಲ ಗ್ರಂಥ ಏಕೆ ಬಹಳಷ್ಟು ಜನರಿಗೆ ಅಪರಿಚಿತವಾಗಿದೆ. ಏಕೆ ಯಾರಿಗೂ ಭಗವದ್ಗೀತೆಯ ಶ್ಲೋಕಗಳು ಹೇಳಲು ಬರುವುದಿಲ್ಲ?' ಅಂತೆಲ್ಲಾ ಯೋಚಿಸಲಾರಂಭಿಸಿದೆ. ನಂತರ ನನಗನ್ನಿಸಿದ್ದು- ಮೊದಲಿಗೆ ಅದು ನಮಗೆ ಎಲ್ಲರಿಗೂ ಪರಿಚಿತವಲ್ಲದ ಭಾಷೆಯಲ್ಲಿರುವುದು, ಎರಡನೆಯದಾಗಿ ಅದರಲ್ಲಿರುವ ಅತ್ಯುನ್ನತ ಚಿಂತನೆಗಳನ್ನು ನಮಗೆ ಸರಿಯಾಗಿ ಅರ್ಥ ಮಾಡಿಸದೇ ಇರುವುದು.

ಇನ್ನು ಭಗವದ್ಗೀತೆಯು ಹಿಂಸೆಯನ್ನು ಪ್ರತಿಪಾದಿಸುವುದೇ? ಕೃಷ್ಣನು 'ಯುದ್ಧ ಮಾಡು, ಯುದ್ಧ ಮಾಡು' ಎಂದೇ ಆಗ್ರಹಿಸುತ್ತಾನೆ; ಹಾಗಾದರೆ 'ಅಹಿಂಸಾ ಪರಮೋ ಧರ್ಮಃ' ಎನ್ನುವ ತತ್ವಕ್ಕೆ ಇದು ವಿರುದ್ಧವಲ್ಲವೇ? ಅನ್ನಿಸಬಹುದು. ಆದರೆ ಒಂದು ಜನಾಂಗ ಏನೇ ಅನ್ಯಾಯವಾದರೂ ಸಹಿಸಬೇಕು, ದೌರ್ಜನ್ಯವಾದರೂ ಸುಮ್ಮನಿರಬೇಕು ಅಂತಲ್ಲ. ಹಿಂಸೆಯನ್ನು ಪ್ರತಿಭಟಿಸದೆ ಸೈರಿಸುವುದು ಹೇಡಿತನವೇ ಆಗುತ್ತದೆ. ಅಹಿಂಸೆಯ ಬೋಧನೆಯಾಗಬೇಕಿರುವುದು ಹಿಂಸೆಯಲ್ಲಿ ತೊಡಗಿರುವವನಿಗೇ ಹೊರತು ಹಿಂಸೆಗೆ ಒಳಗಾದವನಿಗಲ್ಲ. ಹಿಂಸೆಯ ವಿರುದ್ಧ ಕ್ಷಾತ್ರತೆಯ ಅಗತ್ಯವಿದೆ. ಕ್ಷಾತ್ರತ್ವ ಇಲ್ಲದ ಒಳ್ಳೆಯವನೂ ಕೆಟ್ಟವನಿಗೇ ಸಮ. ಸಹನೆ ದೌರ್ಬಲ್ಯವಾಗಬಾರದು

ಅರ್ಜುನನಿಗೆ ಜಗತ್ತಿನ ಬಾಧ್ಯತೆಯಿದೆ. ಲೋಕ ಸಂಗ್ರಹದ ಕರ್ತವ್ಯವನ್ನು ನಿರಾಕರಿಸುವುದನ್ನು ಕೃಷ್ಣ ತೀವ್ರವಾದ ಮಾತುಗಳಲ್ಲಿ ಖಂಡಿಸುತ್ತಾನೆ. ಇಲ್ಲಿ ಬರುವುದು ದ್ವೇಷವಿಲ್ಲದ ಮತ್ತು ಧರ್ಮ ಸಂಸ್ಥಾಪನೆಗಾಗಿ ಮಾಡಬೇಕಾಗಿರುವ ಯುದ್ಧ. ಅದು ಕೂಡ, ಬಂಧು-ಬಾಂಧವರೊಂದಿಗೆ! ವಿದ್ಯೆ ಕಲಿಸಿದ ಗುರುಗಳೊಂದಿಗೆ, ಎತ್ತಿ ಆಡಿಸಿದ ತಾತನೊಂದಿಗೆ!

ಆಗ ಗೊಂದಲಕ್ಕೊಳಗಾಗುವ ಅರ್ಜುನನು, ಭಗವಂತನ ಉಪದೇಶವನ್ನು ಕೇಳಿದ ನಂತರ ಕೊನೆಗೆ ಹೇಳಿದ್ದು: 'ನಷ್ಟೋ ಮೋಹಃ ಸ್ಮೃತಿರ್ಲಬ್ಧಾ, ತ್ವತ್ಪ್ರಸಾದಾನ್ಮಯಾಚ್ಯುತ, ಸ್ಥಿತೋಽಸ್ಮಿ ಗತಸಂದೇಹಃ ಕರಿಷ್ಯೇ ವಚನಂತವ' ಅಂದರೆ, 'ಎಲೈ ಅಚ್ಯುತನೇ, ನಿನ್ನ ಕೃಪೆಯಿಂದ ನನ್ನ ಮೋಹ ನಾಶವಾಯಿತು, ನನಗೆ ಜ್ಞಾನೋದಯವಾಗಿದೆ, ಯಾವುದೇ ಸಂದೇಹವಿಲ್ಲದವನಾಗಿದ್ದೇನೆ. ನಿನ್ನ ಆಜ್ಞೆಯನ್ನು ಪರಿಪಾಲಿಸುತ್ತೇನೆ' ಎಂದರ್ಥ.

ಬಂಧು-ಬಾಂಧವರ ಬಗೆಗಿನ ಮೋಹದಿಂದಾಗಿ ಯುದ್ಧ ಮಾಡುವುದಿಲ್ಲವೆಂದು ಗಾಂಡೀವವನ್ನು ಬೀಳಿಸಿಕೊಂಡಿದ್ದ ಅರ್ಜುನನು, ಶ್ರೀಕೃಷ್ಣನ ಉಪದೇಶದ ನಂತರ ಅದನ್ನು ಎತ್ತಿ ಹಿಡಿದ. 'ಯುದ್ಧ ಅನಿವಾರ್ಯ, ಏಕೆಂದರೆ ಜನ ಶಾಂತಿಯಿಂದ ಬದುಕಬೇಕಾಗಿದೆ. ಹಿಂಸೆಗಾಗಿ ಹಿಂಸೆಯಲ್ಲ. ಜೀವ ಪೋಷಣೆ ಧರ್ಮವಾದಂತೆ, ಜೀವ ಹತ್ಯೆಯೂ ಧರ್ಮವೇ. ಧರ್ಮಕ್ಕೆ ಬದ್ಧವಾಗಿದ್ದು ಹಿಂಸೆಯಾದರೂ ಸರಿಯೇ ಅದನ್ನು ಯಾವ ಮುಲಾಜೂ ಇಲ್ಲದೆ ಶತ್ರುಗಳನ್ನು ಮುಗಿಸು. ಧರ್ಮಕ್ಕೆ ಹಿಂಸೆಯಾದರೆ ಯುದ್ಧ ಅನಿವಾರ್ಯ. ಅಹಿಂಸೆಯ ಸ್ಥಾಪನೆಗಾಗಿ ಯುದ್ಧ ಅನಿವಾರ್ಯ' ಎನ್ನುತ್ತಾನೆ ಶ್ರೀಕೃಷ್ಣ. 'ಅಹಿಂಸಾ ಪರಮೋಧರ್ಮಃ'- ಎಂಬುದು ಸರಿ. ನಮ್ಮನ್ನು ಹಿಂಸಿಸಿದವರ ವಿರುದ್ಧ ಕೈ ಎತ್ತದೆ ಇರುವುದಕ್ಕೆ, ಅವರನ್ನು ಕ್ಷಮಿಸಿ ಸುಮ್ಮನಾಗಿಬಿಡುವುದಕ್ಕೆ ಪ್ರಚಂಡ ಅಂತಃಶಕ್ತಿ ಬೇಕು ನಿಜ. ಆದರೆ ಅದು ಸಾಧನೆ ಎನ್ನಿಸಿಕೊಳ್ಳುವುದು ವೈಯುಕ್ತಿಕ ಮಟ್ಟದಲ್ಲಿ ಮಾತ್ರ. ಒಂದಿಡೀ ಜನಾಂಗ, ಸಮುದಾಯ ಅಥವಾ ಪೀಳಿಗೆಯು ಹರಕೆಯ ಕುರಿಗಳ ಹಾಗೆ ಕತ್ತು ಬಗ್ಗಿಸಿ ನಿಂತರೆ ಅದನ್ನು ಅಹಿಂಸೆ ಎನ್ನುವುದಿಲ್ಲ. ಅಸಹಾಯಕತೆ ಅಥವಾ ಹೇಡಿತನ ಎನ್ನುತ್ತಾರೆ. 'ಲೋಕ ಸಂಗ್ರಹಂ ಏವಾಪಿ ಸಂಪಶ್ಯನ್ ಕರ್ತುಂ ಅರ್ಹಸಿ' ಎನ್ನುತ್ತಾನೆ ಶ್ರೀಕೃಷ್ಣ. ಲೋಕ ಸಂಗ್ರಹ ಎಂದರೆ ಜಗತ್ತಿನ ಹಿತ ಎಂದರ್ಥ. 'ಮಾನವ ಸಮಾಜದ ಸ್ಥಿರತೆಯನ್ನು ಸ್ಥಾಪಿಸುವುದಕ್ಕಾಗಿಯಾದರೂ ನೀನು ಕರ್ಮ ಮಾಡಲೇಬೇಕು. ನಿನಗೆ ನಿನ್ನ ಸ್ವಂತ ಆಸೆಗಳೇನೂ ಇಲ್ಲದಿದ್ದಲ್ಲಿ ನೀನು ಸ್ವತಂತ್ರ, ನೀನು ಯಾವ ಕೆಲಸವನ್ನೂ ಮಾಡಬೇಕಾಗಿಲ್ಲ. ಆದರೂ ನೀನು ಕರ್ಮ ಮಾಡಲೇಬೇಕು. ಏಕೆಂದರೆ ನಿನ್ನ ಸಹಾಯ ಬೇಕಾದವರಿದ್ದಾರೆ. ಮಾನವ ಸಮಾಜದ ಹಿತಕ್ಕಾಗಿ ದುಡಿಯಲೇಬೇಕು. ನಾವಿರುವ ಸಮಾಜದಲ್ಲಿ ಯಾರೂ ದುಃಖಿಗಳಿರಬಾರದು'- ಇದು ಗೀತೆಯಲ್ಲಿನ ಮಹತ್ವದ ಕಲ್ಪನೆ.

ಶ್ರೀಕೃಷ್ಣನ ಮಾತುಗಳಲ್ಲಿ ಅಪೂರ್ವವಾದ ಶಕ್ತಿಯಿದೆ, ಸತ್ಯದ ಪೂರ್ಣ ಪರಿಚಯವಿದೆ. ಈ ಪೂರ್ಣ ಸತ್ಯದ ಬಗೆಗೆ ಸರಳವಾಗಿ, ಸ್ಪಷ್ಟವಾಗಿ ಶ್ರೀಕೃಷ್ಣ ಹೇಳುವನು. ಅಲ್ಲಿ ಅನುಮಾನಕ್ಕೆ ಅವಕಾಶವಿಲ್ಲ. ಅವನ ಮಾತುಗಳು ನಮ್ಮ ಹೃದಯಕ್ಕೆ ನೇರವಾಗಿ ತಲುಪುವುದು. ಇದನ್ನು ಎಲ್ಲರಿಗೂ ತಿಳಿಯುವ ಶೈಲಿಯಲ್ಲಿ ಅವನು ಹೇಳುವನು. ಭಗವದ್ಗೀತೆಯನ್ನು ನಿರ್ದಿಷ್ಟ ಜಾತಿಯವರಿಗಾಗಲೀ, ಕೋಮಿನವರಿಗಾಗಲೀ ಮೀಸಲಿಟ್ಟಿಲ್ಲ. ಯಾರು ಬೇಕಾದರೂ ಇದನ್ನು ಓದಿ ಉದ್ಧಾರವಾಗಬಹುದು. ಇಲ್ಲಿ ಭಗವತ್ ಸಾಕ್ಷಾತ್ಕಾರದ ಬಾಗಿಲನ್ನು ಎಲ್ಲರಿಗೂ ತೆರೆಯಲಾಗಿದೆ. ಇದು ಅನುಷ್ಠಾನ ಪ್ರಧಾನವಾದುದು. ನಾವು ತಿಳಿದುಕೊಂಡಿರುವುದನ್ನು ಹೇಗೆ ಅನುಷ್ಠಾನಕ್ಕೆ ತರಬೇಕು ಎಂಬುದನ್ನು ಹೇಳುವುದು. ಇಲ್ಲಿ ಸಿದ್ಧಾಂತದ ಜತೆಗೆ ಸಾಧನೆಗೆ ಪ್ರಾಮುಖ್ಯವಿದೆ.

ಬದುಕಿನ ಕಷ್ಟ ಕಾರ್ಪಣ್ಯಗಳ ನಡುವೆಯೂ ಸಮಾಧಾನ ಪಡೆಯಲು ಗೀತೆ ಸಹಕಾರಿ. ಭಗವದ್ಗೀತೆ ಹೇಳುವುದು ಹೀಗೆ- 'ನಮ್ಮ ಬದುಕಿನ ಯಾವುದೇ ಕರ್ತವ್ಯವಾದರೂ ಸರಿ, ಓಡಿಹೋಗಬಾರದು. ಲೋಕ ಸಂಗ್ರಹಕ್ಕಾಗಿ ಮತ್ತು ನಮ್ಮದೇ ಏಳಿಗೆಗಾಗಿ ನಮ್ಮ ಪಾಲಿನ ಕೆಲಸವನ್ನು ಮಾಡಲೇಬೇಕು'. ಇಲ್ಲಿ ಅರ್ಜುನನ್ನು ನಿಮಿತ್ತವಾಗಿರಿಸಿ ಸಮಸ್ತ ಕಾಲಕ್ಕೆ, ಸಮಸ್ತ ದೇಶಕ್ಕೆ, ಸಮಸ್ತ ಮನುಕುಲಕ್ಕೇ ಹೇಳಿದ ಉಪದೇಶವಿದು. ಇದನ್ನು ಹತ್ತಾರು ಬಾರಿ ಓದಿದರೂ, ವಿಮರ್ಶೆ ಮಾಡಿದರೂ ಮತ್ತೆ ಮತ್ತೆ ಹೊಸತನ್ನು ಕೊಡುತ್ತಿರುತ್ತದೆ. ಆದ್ದರಿಂದಲೇ ಭಗವದ್ಗೀತೆಯ ಬಗ್ಗೆ ಅಷ್ಟೊಂದು ವ್ಯಾಖ್ಯಾನಗಳು, ವಿಮರ್ಶೆಗಳು.

ಗೀತೆಯ ಎಲ್ಲ ಭಾಗವೂ ನಮಗೆ ಒಂದೇ ಸಮನಾಗಿ ಒಂದೇ ಬಾರಿಗೆ ಅರ್ಥವಾಗುವುದಿಲ್ಲ. ನಮ್ಮ ನಮ್ಮ ಶ್ರದ್ಧೆ, ನೈತಿಕತೆ, ಬುದ್ಧಿಶಕ್ತಿ ಯಾವ ಯಾವ ಮಟ್ಟದ್ದೋ ಹಾಗೇ ಗೀತೆ ಅರ್ಥವಾಗುತ್ತಾ ಹೋಗುತ್ತದೆ. ಅಂದರೆ ನಮ್ಮ ಬೆಳವಣಿಗೆಗೆ ತಕ್ಕಂತೆ ಗೀತೆ ಅರ್ಥವಾಗುತ್ತಾ ಹೋಗುತ್ತದೆ. ನಾವು ಪರಿಪಕ್ವಗೊಂಡಂತೆಯೇ ಭಗವಂತನ ಮಾತುಗಳು ನಮಗೆ ಅರ್ಥವಾಗುತ್ತವೆ. ಅರ್ಥವಾಗಲಿಲ್ಲವೆಂದು ಬದಿಗಿರಿಸಿದರೆ ಅದು ನಮಗೆ ನಾವೇ ಮಾಡಿಕೊಳ್ಳು ನಷ್ಟ. ಸದ್ಯಕ್ಕೆ ಅರ್ಥವಾದಷ್ಟು ಗ್ರಹಿಸಿ ಮನನ ಮಾಡುತ್ತಿದ್ದರೆ ಕ್ರಮೇಣ ಅದರ ಆಳ ಹಾಗೂ ಅದರ ಹರಹು ಅರಿವಾಗುತ್ತಾ ಹೋಗುತ್ತದೆ. ಇದು ಮಾನವ-ಮಾನವ ಸಂಬಂಧಗಳನ್ನು ಹಸನಾಗಿಸಿ ಸುಖಮಯವಾಗಿಸುತ್ತದೆ.

ಭಗವದ್ಗೀತೆಯನ್ನು ಹಿಂದೂ ಧರ್ಮಗ್ರಂಥ ಎಂದೆನ್ನುತ್ತಾರೆ. ಆದರೆ, ಇದರಲ್ಲಿ 'ಹಿಂದೂ' ಎನ್ನುವ ಪದವೇ ಇಲ್ಲ. ವ್ಯಕ್ತಿತ್ವ ನಿರ್ಮಾಣವೇ ಭಗವದ್ಗೀತೆಯ ಉದ್ದೇಶ. ಗೀತೆಯಲ್ಲಿ ಆತ್ಮವಿಕಾಸಕ್ಕೆ ಬೇಕಾದ ಎಲ್ಲ ಹಿರಿಮೆಗಳೂ ಇವೆ. ಇದರಲ್ಲಿಯ ಸಂದೇಶವು ಪ್ರಪಂಚದ ಎಲ್ಲ ಜನರಿಗೂ ಸೇರುತ್ತದೆ. ಅರ್ಜುನ ಇಲ್ಲಿ ನಿಮಿತ್ತ ಮಾತ್ರ. ನಾವೂ ಜೀವನದಲ್ಲಿ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ನಮ್ಮನ್ನು ಧೈರ್ಯವಂತರನ್ನಾಗಿಸಿ, ಬಲವಂತರನ್ನಾಗಿಸಿ ಜೀವನದ ಸಮಾಲುಗಳನ್ನು ಎದುರಿಸುವಂತೆ ಮಾಡುವುದು ಈ ಗೀತೆ. ಮಾನವ ಜೀವಿಯಾದವನು ತನ್ನ ಜೀವನದ ಒಡೆಯ ತಾನೇ ಎಂಬುದನ್ನು ತೋರಿಸಬೇಕು. ಬದಲಿಗೆ ಅವನು ಪರಿಸರದ ಒಂದು ಸೃಷ್ಟಿ ಮಾತ್ರ ಎಂದಾಗಿಬಿಡಬಾರದು. ಇಲ್ಲಿ ಜೀವನ ತತ್ತ್ವವಿದೆ, ಅದು ಸಂಪೂರ್ಣ ಪ್ರಾಯೋಗಿಕವಾಗಿದೆ. ಇದನ್ನು ನೋಡಿದ ಮೇಲೆ ನಮಗೆ ಗೊತ್ತಾಗುತ್ತದೆ- ಭಗವದ್ಗೀತೆಯು ಮುಪ್ಪಡರಿದ ಮೇಲೆ ಅಲ್ಲ, ಈಗಲೇ ಓದಬೇಕು ಅಂತ. ಏಕೆಂದರೆ ನಮ್ಮೆಲ್ಲರಿಗೂ ನೆಮ್ಮದಿ, ಮನಃಶಾಂತಿ ಬೇಕಲ್ಲವೇ?

ಭಗವದ್ಗೀತೆಯನ್ನು ಓದುವುದು ಹೇಗೆ? ಅದಿರುವುದು ಸಂಸ್ಕೃತದಲ್ಲಿ. ಎಷ್ಟು ಜನರಿಗೆ ಈ ಭಾಷೆ ಅರ್ಥವಾದೀತು? ಭಾಷೆ ಬಂದರೂ ಅದರ ಭಾವವನ್ನು ಅರ್ಥ ಮಾಡಿಕೊಂಡವರೆಷ್ಟು ಮಂದಿ? ನಮಗೆ ಸರಿಯಾಗಿ ಅರ್ಥ ಮಾಡಿಸುವವರಾರು? ಈಗಿನ ತಂತ್ರಜ್ಞಾನದಿಂದಾಗಿ ಎಲ್ಲಾ ಜ್ಞಾನವೂ ಬೆರಳ ತುದಿಯಲ್ಲಿಯೇ ಸಿಗುತ್ತದೆ. ಆದರೂ ಅದು ಪೂರ್ಣ ಪ್ರಮಾಣದಲ್ಲಿ ತಿಳಿಯುತ್ತದೆ ಎಂದೆನ್ನಲಾಗುವುದಿಲ್ಲ. ಯಾರಾದರೂ ತಿಳಿದವರ ಹೃದಯದಿಂದಲೇ ಭಗವದ್ಗೀತೆಯು ಮುಖತಃ ನೇರವಾಗಿ ಹರಿದುಬಂದರೆ ಒಳ್ಳೆಯದು. ಹಾಗೆ ಆಗದಿದ್ದರೂ ಸಾಕಷ್ಟು ಪುಸ್ತಕಗಳಿವೆ, ಪ್ರವಚನಗಳಿವೆ. ಅದನ್ನಾದರೂ ಕೇಳಿ ಅರ್ಥಮಾಡಿಕೊಳ್ಳೋಣ, ಚಿಂತನೆ ನಡೆಸೋಣ.

ಗೀತೆ ಇರುವುದು ಎಲ್ಲ ವಯಸ್ಸಿನವರಿಗೆ. ಅದರಲ್ಲಿಯೂ ಚಿಕ್ಕಂದಿನಲ್ಲಿ ಬಾಯಿಪಾಠ ಮಾಡಿದ್ದರಂತೂ ಅದರ ಫಲಿತಾಂಶ ಅತ್ಯದ್ಭುತ! ಭಗವದ್ಗೀತೆಯು 'ಈಗಲೇ ಚಂದದ ಬದುಕು ಬೇಕು' ಅನ್ನುವವರಿಗೆ ಇರುವಂಥದ್ದು. ನಾವು ನಮ್ಮ ಬದುಕಿನ ಯಾವುದೇ ಮೆಟ್ಟಿಲಿನಲ್ಲಿರಲಿ, ಭಗವದ್ಗೀತೆ ಅಲ್ಲಿಂದ ಮುಂದಕ್ಕೆ ನಮ್ಮನ್ನು ಕರೆದೊಯ್ಯುವುದು. ಆದ್ದರಿಂದ, ಇಂದಿನಿಂದಲೇ ಭಗವದ್ಗೀತೆಯನ್ನು ಓದೋಣ...

(ಲೇಖಕಿ ಹವ್ಯಾಸಿ ಬರಹಗಾರ್ತಿ)

ಭಟ್ಟರ್ ಸ್ಕಾಚ್

- **ಅಮಾಸೆ ಸುಬ್ಬು, ಮೈಸೂರು**
ಭಟ್ರೇ, ರಸ್ತೆ ವಾಹನಗಳಿಗೆ ವೇಗಮಿತಿ, ಅಂಕಣಕಾರರಿಗೆ ಪದಮಿತಿ, ಮದುವೆ ಹುಡುಗರಿಗೆ?
- **ವಯೋಮಿತಿ!**

- **ಹುಲಿಕುಂಟೆ, ಬಸವನಗುಡಿ**
ಭಟ್ರೇ, ಕಾಲಿಗೆ ಬಿದ್ದ ಭಕ್ತರನ್ನು ಸ್ವಾಮಿಗಳು ಮೈಮುಟ್ಟಿ ಅನುಗ್ರಹಿಸಬಹುದೇ?
- **ಆಲಿಂಗಿಸಿಕೊಳ್ಳದಿದ್ದರೆ ಸಾಕು!**

- **ಸಂಜಯನಗರ ಕಿಟ್ಟಿ, ಬೆಂಗಳೂರು**
ಭಟ್ರೇ, ಗಣಪತಿ ಪೂಜೆ ಮತ್ತು ಸಾಣೇಹಳ್ಳಿ ಶ್ರೀಗಳ ಪಾದಪೂಜೆ ಇವೆರಡರ ಮಧ್ಯೆ ಯಾವುದನ್ನು ಮಾಡಲಿ?
- **ಈ ವಿಷಯದಲ್ಲಿ ಯಾವುದಕ್ಕೂ ಸಾಣೇಹಳ್ಳಿ ಶ್ರೀಗಳ ಅಭಿಪ್ರಾಯ ಕೇಳಬೇಕಿತ್ತು!**

- **ಶೀಲಾ ಒಂಟಿಕೊಪ್ಪಲು, ಮೈಸೂರು**
ವಿಶ್ವವಾಣಿ ಭಟ್ಟರು ತಮ್ಮ 'ಪ್ರ' ಶಿಷ್ಯರು ವಾಕ್ ಸಮರವಾಡುತ್ತಿದ್ದರೂ ಏಕೆ ಕಿವಿ ಹಿಂಡಲಿಲ್ಲ?
- **ಹಿಂಡುವ ವಿಷಯದಲ್ಲಿ ಭಟ್ಟರಿಗೆ ಕಿವಿ ಮೇಲೆ ಆಸಕ್ತಿ ಇರಲಿಕ್ಕಿಲ್ಲ!**

- **ಆರತಿ ಕೃಷ್ಣಮೂರ್ತಿ, ಶಿವಮೊಗ್ಗ**
ಭಟ್ರೇ, ನಿಮ್ಮ ಶಿಷ್ಯರ ಜಟಾಪಟಿ ನೋಡಿ ಜನ ಏನು ಹೇಳುತ್ತಿದ್ದಾರೆ ಗೊತ್ತಾ?
- **ಆ ಗೊಂದಲದಲ್ಲಿ ಏನು ಹೇಳುತ್ತಿದ್ದಾರೆ ಅನ್ನೋದು ಕೇಳಿಸ್ತಾ ಇಲ್ಲ!**

- **ರಾಜು, ಹಳಿಯಾಳ**
ಭಟ್ರೇ, ಹುಡುಗಿಯರ ವಿಷಯದಲ್ಲಿ ನನಗೆ ಸಾಕಾಗಿ ಹೋಗಿದೆಯಲ್ಲ?
- **ಎಲ್ಲಿಗೆ ಹೋಗಿದೆ ಅನ್ನೋದನ್ನು ಹೇಳಬಾರದೇ?!**

- **ಪ್ರಭು ಮಹಾಲೆ, ಕುಮಟಾ**
ಭಟ್ರೇ, ನಿಮ್ಮ ಪ್ರಕಾರ ಎಲ್ಲಿ ಜಗಳವಾಡಬಾರದು?
- **ವಾರ್ ರೂಮಿನಲ್ಲಿ!**

- **ಸಂಗೀತಾ ಗುರು, (ಇಮೇಲ್ ಮೂಲಕ)**
ಭಟ್ರೇ, ಮಾಗಿದಷ್ಟೂ ಚೆನ್ನಾಗಿ ಕಾಣುತ್ತಾರಂತೆ, ಹೌದಾ?
- **ಆದರೆ ನೀವು ಬಾಳೆಹಣ್ಣು ಆಗಿರಬಾರದು!**

- **ನಿರ್ಮಲಾ ಬಿ., (ಇಮೇಲ್ ಮೂಲಕ)**
ಭಟ್ರೇ, ಅತಿ ಹೆಚ್ಚು ಗೊಂದಲದಲ್ಲಿರುವ ಪುಸ್ತಕ ಅಂದ್ರೆ ಯಾವುದು?
- **ಗಣಿತದ ಪುಸ್ತಕ. ಕಾರಣ ಅದರ ತುಂಬಾ ಸಮಸ್ಯೆಗಳೇ ತುಂಬಿರುತ್ತವೆ!**

- **ಗಣೇಶ ಯಾಜಿ, ಶಿರಸಿ**
ಭಟ್ರೇ, ಒಂದು ಕಣ್ಣು ಮತ್ತೊಂದಕ್ಕೆ ಏನು ಹೇಳುತ್ತದೆ?
- **ನಮ್ಮಿಬ್ಬರ ನಡುವೆ ಏನೋ ವಾಸನೆ ಬರ್ತಾ ಇದೆಯಲ್ಲ!**

ಪರೀಕ್ಷೆಯ ಮಾನ ದಂಡವಾಗಬಾರದು !

ಲೋಕಮತ
ಲೋಕೇಶ್ ಕಾಯರ್ಗ
vveditoped@gmail.com

ಅನ್ನಭಾಗ್ಯ, ಹಣದ ಭಾಗ್ಯ, ಸಂಚಾರ ಭಾಗ್ಯ ಮತ್ತು ವಿದ್ಯುತ್ ಭಾಗ್ಯಗಳನ್ನು ಕೊಟ್ಟ ನಮ್ಮ ರಾಜ್ಯ ಸರಕಾರ ಆರನೇ ಭಾಗ್ಯವಾಗಿ 16 ವರ್ಷ ದಾಟುವ ಎಲ್ಲ ಮಕ್ಕಳಿಗೆ ಉಚಿತವಾಗಿಯೇ ಎಸ್‌ಎಸ್‌ಎಲ್‌ಸಿ ತೇರ್ಗಡೆ ಸರ್ಟಿಫಿಕೆಟ್ ವಿತರಿಸಿದರೆ ಹೇಗಿರಬಹುದು ? ಇದರಿಂದ ಸರಕಾರಕ್ಕೆ ಹೆಚ್ಚುವರಿ ಆರ್ಥಿಕ ನಷ್ಟವಿಲ್ಲ. ಬದಲು ಹಲವು ರೀತಿಯಲ್ಲಿ ಉಳಿತಾಯವಿದೆ. ಈ ಪರೀಕ್ಷೆಗೆ ಮಕ್ಕಳನ್ನು ಸಜ್ಜುಗೊಳಿಸಲು ಶಿಕ್ಷಕರು ಪರಿಶ್ರಮಪಡಬೇಕಿಲ್ಲ. ಪಾಲಕರು ಟ್ಯೂಷನ್‌ಗೆ ಹಣ ವ್ಯಯಿಸಬೇಕಿಲ್ಲ. ಸರಕಾರವು ಬಿಇಒಗಳಿಗೆ, ಡಿಡಿಪಿಐಗಳಿಗೆ ಗುರಿ ನಿಗದಿಪಡಿಸಬೇಕಿಲ್ಲ. ಶೈಕ್ಷಣಿಕ ಜಿಲ್ಲೆಗಳ ನಡುವೆ ಪೈಪೋಟಿಯೂ ಇಲ್ಲ. ಭಾವೀ ಮತದಾರರನ್ನು ಎರಡು ವರ್ಷಕ್ಕೆ ಮೊದಲೇ ತನ್ನತ್ತ ಒಲಿಸಿಕೊಳ್ಳಲು ಆಳುವ ಸರಕಾರಕ್ಕಿದು ಸುಲಭದ ಮಾರ್ಗ !

ಒಂದರಿಂದ 9ರವರೆಗೆ ಎಲ್ಲರನ್ನೂ ಉತ್ತೀರ್ಣಗೊಳಿಸುವ ನೀತಿ ಈಗಾಗಲೇ ಜಾರಿಯಲ್ಲಿದೆ. ಒಂದು ಹೆಜ್ಜೆ ಮುಂದಕ್ಕೆ ಸಾಗಿ ಎಸ್ಸೆಸ್ಸೆಲ್ಸಿವರೆಗೂ ಉತ್ತೀರ್ಣ ಉಚಿತ ಎಂದು ಘೋಷಿಸಿದರೆ 'ಉಚಿತ ಮತ್ತು ಕಡ್ಡಾಯ' ಶಿಕ್ಷಣದ ಆಶಯವೂ ಈಡೇರಿದಂತಾಗುತ್ತದೆ. ಪ್ರಾಥಮಿಕ ಶಿಕ್ಷಣ ಸಚಿವರ ತಲೆಭಾರವೂ ಕಡಿಮೆಯಾಗುತ್ತದೆ! ರಾಜ್ಯ ಸರಕಾರ ಇದೇ ಶೈಕ್ಷಣಿಕ ವರ್ಷದಿಂದಲೇ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ತೇರ್ಗಡೆಗೆ ನಿಗದಿಪಡಿಸಲಾದ ಕನಿಷ್ಠ ಅಂಕಗಳ ಮಟ್ಟವನ್ನು ಶೇ.33ಕ್ಕೆ ಇಳಿಸಲು ಹೊರಟಿದೆ. ಈ ಮೂಲಕ ಉತ್ತೀರ್ಣರಾಗುವ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸಲು ಮುಂದಾಗಿದೆ. ಇದರ ಬದಲು ಎಸ್‌ಎಸ್‌ಎಲ್‌ಸಿವರೆಗೆ 'ಉತ್ತೀರ್ಣ ಉಚಿತ' ಎಂದು ಘೋಷಿಸಿದ್ದರೆ ವಿದ್ಯಾರ್ಥಿಗಳ ಪಾಲಿಗೆ ನಮ್ಮ ಶಿಕ್ಷಣ ಸಚಿವರು ಹೀರೋ ಆಗಿರುತ್ತಿದ್ದರು.

ನಮ್ಮ ದೇಶದಲ್ಲಿ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕು ಜಾರಿಗೆ ಬಂದು 23 ವರ್ಷಗಳಾದವು. ಸುಪ್ರೀಂಕೋರ್ಟ್ ನಿರ್ದೇಶನದ ಮೇರೆಗೆ 2002ರಲ್ಲಿ ಜಾರಿ ಮಾಡಿದ 86ನೇ ಸಂವಿಧಾನ ತಿದ್ದುಪಡಿ ಕಾನೂನು ಶಿಕ್ಷಣವನ್ನು ಮೂಲಭೂತ ಹಕ್ಕನ್ನಾಗಿ ಮಾಡಿದೆ. ಸಂವಿಧಾನದ 21ಎ ವಿಧಿ ಪ್ರಕಾರ 6 ರಿಂದ 14 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಸರಕಾರವು ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಒದಗಿಸಬೇಕು. ಆದರೆ ಸರಕಾರಗಳು ನ್ಯಾಯಾಲಯದ ನಿರ್ದೇಶನವನ್ನೇ ತಪ್ಪಾಗಿ ಅರ್ಥೈಸಿಕೊಂಡು 'ಎಲ್ಲರಿಗೂ ಉತ್ತೀರ್ಣತೆಯ ಪ್ರಮಾಣ ಪತ್ರ' ನೀಡಿ 'ಉಚಿತ ಶಿಕ್ಷಣ'ದ ಆಶಯವನ್ನು ಸಾಕಾರಗೊಳಿಸಲು ಮುಂದಾದವು. ತೇರ್ಗಡೆಯ ಮಾನದಂಡವನ್ನೇ ಇಳಿಸಲು ಹೊರಟಿರುವುದು ಇದರ ಮುಂದುವರಿದ ಭಾಗ.

2010ರ ಶಿಕ್ಷಣ ಹಕ್ಕು ಕಾಯಿದೆ (ಆರ್‌ಟಿಇ) ಪ್ರಕಾರ ಮಕ್ಕಳ ಕಲಿಕೆಯ ಗುಣಮಟ್ಟ ಏನೇ ಆಗಿರಲಿ 8ನೇ ತರಗತಿವರೆಗೆ ಯಾವ ಮಕ್ಕಳನ್ನೂ ಅನುತ್ತೀರ್ಣಗೊಳಿಸದಿರಲು ನಿರ್ಧರಿಸಲಾಯಿತು. ಫೇಲಾದ ಮಕ್ಕಳು ಶಾಲಾ ಶಿಕ್ಷಣವನ್ನು ಅರ್ಧಕ್ಕೆ ತೊರೆಯಬಾರದೆನ್ನುವುದು ಈ ಆದೇಶದ ಹಿಂದಿನ ಕಳಕಳಿಯಾಗಿತ್ತು. ಆದರೆ ಪಾಸ್/ಫೇಲ್ ನಿಯಮವು ರದ್ದಾದ ಬೆನ್ನಿಗೇ ಕಲಿಕೆಯ ಮಟ್ಟವೂ ಅಷ್ಟಕಷ್ಟೇ ಎಂಬಂತಾಯಿತು. ಶಿಕ್ಷಕರೂ ಜವಾಬ್ದಾರಿ ಮರೆತರು. ಎಂಟನೇ ಕ್ಲಾಸ್ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ 100ರ ತನಕ ಸರಿಯಾಗಿ ಅಂಕಿಗಳನ್ನು ಆರೋಹಣ/ ಅವರೋಹಣ ಪದ್ಧತಿಯಲ್ಲಿ ಹೇಳಲು ಬರುವುದಿಲ್ಲ ಎಂದು ದೂರುಗಳು ಬಂದ ಬಳಿಕ 2019ರಲ್ಲಿ ಈ ನೀತಿಯನ್ನು ರದ್ದು ಮಾಡಲಾಯಿತು. ಕೇಂದ್ರ ಸರಕಾರ ಐದು ಮತ್ತು ಎಂಟನೇ ತರಗತಿಗಳಿಗೆ ವಾರ್ಷಿಕ ಮೌಲ್ಯಮಾಪನ ಕಡ್ಡಾಯಗೊಳಿಸಿತು.

ಈ ನಿಯಮದ ಪ್ರಕಾರ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಹೆಚ್ಚುವರಿ ತರಬೇತಿ ನೀಡಿ ಮರುಪರೀಕ್ಷೆಗೆ ಅವಕಾಶ ನೀಡಬೇಕು. ಮರುಪರೀಕ್ಷೆಯಲ್ಲಿಯೂ ಅನುತ್ತೀರ್ಣರಾದರೆ, ಅಂತಹ ವಿದ್ಯಾರ್ಥಿಗಳನ್ನು ಅದೇ ತರಗತಿಯಲ್ಲಿ ಉಳಿಸಿಕೊಳ್ಳಬೇಕು.

ಆದರೆ ಕರ್ನಾಟಕವೂ ಸೇರಿದಂತೆ ಬಹುತೇಕ ರಾಜ್ಯಗಳಲ್ಲೂ ಈ ನಿಯಮ ಪಾಲನೆಯಾಗುತ್ತಿಲ್ಲ. 8ರ ತನಕವಿದ್ದ ಕಡ್ಡಾಯ ಉತ್ತೀರ್ಣತೆಯನ್ನು ಈಗ 9ರ ತನಕವೂ ವಿಸ್ತರಿಸಲಾಗಿದೆ. ಸಿಬಿಎಸ್‌ಇ ಶಾಲೆಗಳು ಸೇರಿದಂತೆ ಯಾವ ಶಾಲೆಗಳಲ್ಲೂ 9ನೇ ತರಗತಿ ವರೆಗೆ ವಿದ್ಯಾರ್ಥಿಗಳನ್ನು ಅನುತ್ತೀರ್ಣಗೊಳಿಸುವ ಧೈರ್ಯ ಮಾಡುತ್ತಿಲ್ಲ. ಒಂದು ವೇಳೆ ವಿದ್ಯಾರ್ಥಿ ಕಲಿಕೆಯಲ್ಲಿ ತೀರಾ ಹಿಂದುಳಿದಿದ್ದರೆ ಕೆಲವು ಖಾಸಗಿ ಶಾಲೆಗಳು 9ನೇ ತರಗತಿ ಪಾಸಾದ ವಿದ್ಯಾರ್ಥಿಗಳಿಗೆ ಟಿಸಿ ಕೊಟ್ಟು ಬೇರೆ ಶಾಲೆಗಳಿಗೆ ಸೇರಿಸಲು ಒತ್ತಡ ಹೇರುತ್ತವೆ. ಈ ಮೂಲಕ ನೂರು ಪ್ರತಿಶತ ತೇರ್ಗಡೆಯ ತಮ್ಮ ದಾಖಲೆ ಉಳಿಸಿಕೊಳ್ಳುತ್ತವೆ.

ಆದರೆ ಈ ಕಸರತ್ತಿನಲ್ಲಿ ನಮ್ಮ ಶಾಲಾ ಶಿಕ್ಷಣದ ಗುಣಮಟ್ಟ ಹಳ್ಳ ಹಿಡಿದಿರುವ ಬಗ್ಗೆ ಯಾರೂ ಚಿಂತಿಸಲಿಲ್ಲ. ತಜ್ಞರೆನಿಸಿಕೊಂಡವರು, 'ಸಾರ್ವತ್ರಿಕ ಶಿಕ್ಷಣದಲ್ಲಿ ಈ ರೀತಿಯ ಏರುಪೇರು ಸಾಮಾನ್ಯ, ಮಕ್ಕಳು ಶಾಲಾ ಮೆಟ್ಟಿಲು ಹತ್ತುವುದು ಎಲ್ಲಕ್ಕಿಂತ ಮುಖ್ಯ' ಎಂದರು. ಕೋವಿಡ್ ಸಂದರ್ಭದಲ್ಲಿ ಎರಡು ವರ್ಷಗಳ ಕಾಲ ಕ್ಲಾಸ್ ರೂಮ್ ಕಲಿಕೆಯಿಂದ ದೂರವುಳಿದ ಗ್ರಾಮೀಣ ಪ್ರದೇಶದ ಕೆಲವು ವಿದ್ಯಾರ್ಥಿಗಳಿಗೆ ಗಣಿತದ ಸರಳ ಲೆಕ್ಕಾಚಾರಗಳನ್ನೂ ಬಿಡಿಸಲು ಬರುತ್ತಿರಲಿಲ್ಲ. ಅಕ್ಷರ ಫೌಂಡೇಷನ್ ಕರ್ನಾಟಕದ 2,625 ಗ್ರಾಮ ಪಂಚಾಯತಿ ವ್ಯಾಪ್ತಿಗಳಲ್ಲಿ 2022ರ ನವೆಂಬರ್‌ನಿಂದ 2023ರ ಮಾರ್ಚ್‌ವರೆಗೆ ಸಮೀಕ್ಷೆ ನಡೆಸಿದಾಗ ವಿದ್ಯಾರ್ಥಿಗಳ ಕಲಿಕೆಯ ಗುಣಮಟ್ಟ ತೀರಾ ಕುಸಿದಿರುವುದನ್ನು ಗುರುತಿಸಿತ್ತು. ಈ ಮಕ್ಕಳಿಗೆ ತಮ್ಮ ಹಿಂದಿನ ತರಗತಿಗಳಲ್ಲಿ ಓದಿದ ಸಂಕಲನ, ವ್ಯವಕಲನ, ಗುಣಾಕಾರ, ಭಾಗಾಕಾರಗಳು ಬರುತ್ತಿರಲಿಲ್ಲ. ಭಾಷಾ ಕಲಿಕೆಯಲ್ಲೂ ಇವರು ತೀರಾ ಹಿಂದುಳಿದಿದ್ದರು. ಕಳೆದ ವರ್ಷ ಕೇಂದ್ರ ಸರಕಾರ ನಡೆಸಿದ ಸಮೀಕ್ಷೆಯ ಪ್ರಕಾರ, ಇಡೀ ದೇಶದ ಶಿಕ್ಷಣ ವ್ಯವಸ್ಥೆಯ ಗುಣಮಟ್ಟದಲ್ಲಿ ಕುಸಿತ ಕಂಡುಬಂದಿದೆ. 6 ನೇ ತರಗತಿಯಲ್ಲಿ, ಕೇವಲ ಶೇ.54ರಷ್ಟು ವಿದ್ಯಾರ್ಥಿಗಳು ಮಾತ್ರ ಗುಣಾಕಾರ ಮತ್ತು ಭಾಗಾಕಾರವನ್ನು ಅರ್ಥಮಾಡಿಕೊಳ್ಳಲು ಶಕ್ತರಾಗಿದ್ದಾರೆ ಎಂದು ಈ ವರದಿ ತಿಳಿಸಿದೆ.

ಕುಸಿದಿರುವ ಶಿಕ್ಷಣ ಗುಣಮಟ್ಟವನ್ನು ಮತ್ತೆ ಮೇಲಕ್ಕೆತ್ತುವುದು ಹೇಗೆ ಎನ್ನುವುದು ಶಿಕ್ಷಣ ತಜ್ಞರು, ಪಾಲಕರ ಚಿಂತೆಯಾದರೆ ಕರ್ನಾಟಕದಲ್ಲಿ ಮಕ್ಕಳ ಉತ್ತೀರ್ಣತೆಯ ಪ್ರಮಾಣವನ್ನು ಏರಿಸುವುದು ಅಧಿಕಾರಿಗಳು ಮತ್ತು ಶಿಕ್ಷಣ ಸಚಿವರ ಚಿಂತೆಯಾಗಿದೆ. ಮೂರು ವರ್ಷಗಳ ಹಿಂದೆ ಕೋವಿಡ್ ನೆಪದಲ್ಲಿ ಬಹುತೇಕ ಎಲ್ಲ ಮಕ್ಕಳನ್ನು ತೇರ್ಗಡೆ ಎಂದು ಘೋಷಿಸಲಾಯಿತು. 2023–24ರಲ್ಲಿ ಶೇಕಡಾವಾರು ಫಲಿತಾಂಶ ಕುಸಿದಾಗ ನಕಲು ಪ್ರಮಾಣವನ್ನು ತಡೆಯಲು ಸರಕಾರ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದ್ದರಿಂದ ಫಲಿತಾಂಶದಲ್ಲಿ ಕುಸಿತ ಕಂಡು ಬಂದಿದೆ ಎಂದು ಕಾರಣ ನೀಡಲಾಯಿತು. ಅಂದರೆ ಈವರೆಗೆ ಪರೀಕ್ಷೆ ಪಾಸಾದವರಲ್ಲಿ ಅನೇಕರು ನಕಲು ಹೊಡೆದೇ ಪಾಸಾಗಿದ್ದಾರೆ ಎನ್ನುವುದನ್ನು ಸರಕಾರವೇ ಒಪ್ಪಿಕೊಂಡಿದೆ.

ಎಸ್‌ಎಸ್‌ಎಲ್‌ಸಿ ಅಥವಾ ಪಿಯುಸಿ ಹಂತದಲ್ಲಿ ವಿದ್ಯಾರ್ಥಿಗಳೂ ಈ ಹಿಂದೆಯೂ ಫೇಲಾಗಿದ್ದರು. ಇವರಲ್ಲಿ ಅನೇಕರು ಮರುಪರೀಕ್ಷೆ ಬರೆದು ಶಿಕ್ಷಣ ಮುಂದುವರಿಸುತ್ತಿದ್ದರು. ಕೆಲವರು ಶಿಕ್ಷಣವನ್ನು ಅರ್ಧಕ್ಕೇ ಕೈ ಬಿಡುತ್ತಿದ್ದರು. ಇಂಥವರು ಈಗ ಶಿಕ್ಷಣ ಮೊಟಕುಗೊಳಿಸುವ ಅಗತ್ಯವಿಲ್ಲ. ಎಸ್ಸೆಸ್ಸೆಲ್ಸಿ ಮತ್ತು ಪಿಯು ಹಂತದಲ್ಲಿ ಮೊದಲ ಫಲಿತಾಂಶ ಪ್ರಕಟವಾದ ಬೆನ್ನಿಗೇ ಎರಡು ಬಾರಿ ಪರೀಕ್ಷೆಗಳನ್ನು ಬರೆಯಲು ಸರಕಾರವೇ ಅವಕಾಶ ಮಾಡಿಕೊಟ್ಟಿದೆ. ಮೊದಲ ಬಾರಿ ಫೇಲಾದರೂ, ಎರಡು ಅಥವಾ ಮೂರನೇ ಬಾರಿಗೆ ಪರೀಕ್ಷೆ ಬರೆದು ಇವರು ತಮ್ಮ ವ್ಯಾಸಂಗ ಮುಂದುವರಿಸಬಹುದು. ತಮ್ಮ ಶಿಕ್ಷಣದ ಬಗ್ಗೆ ಕಾಳಜಿಯುಳ್ಳವರಿಗೆ ಇದಕ್ಕಿಂತ ಹೆಚ್ಚಿನ ಅವಕಾಶ ನೀಡುವ ಅಗತ್ಯವಿಲ್ಲ.

ಆದರೆ ರಾಜ್ಯ ಸರಕಾರ ಈಗ ತೇರ್ಗಡೆಗೆ ನಿಗದಿ ಮಾಡಲಾದ ಶೇ.35ರ ಅಂಕ ಮಿತಿಯನ್ನು ಶೇ. 33ಕ್ಕಿಳಿಸಲು ಮುಂದಾಗಿದೆ. ಎಸ್ಸೆಸ್ಸೆಲ್ಸಿಯಲ್ಲಿ ಪ್ರತಿ ವಿಷಯದಲ್ಲಿ ಕನಿಷ್ಠ 30 ಅಂಕಗಳನ್ನು ಪಡೆದು ಒಟ್ಟು 625 ಅಂಕಗಳಿಗೆ ಕನಿಷ್ಠ 206 ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳು ತೇರ್ಗಡೆಯಾಗುತ್ತಾರೆ. ಇದೇ ರೀತಿ ದ್ವಿತೀಯ ಪಿಯುಸಿಯಲ್ಲಿ ಒಟ್ಟು 600 ಅಂಕಗಳಿಗೆ ಕನಿಷ್ಠ 198 ಅಂಕಗಳನ್ನು ಅಂಕ ಪಡೆದ ವಿದ್ಯಾರ್ಥಿಗಳು ಉತ್ತೀರ್ಣರಾಗುತ್ತಾರೆ. ಆಂತರಿಕ ಮೌಲ್ಯಮಾಪನದಲ್ಲಿ ಆಯಾ ಶಾಲೆಗಳು ಪ್ರತಿ ವಿಷಯಕ್ಕೆ 20ಕ್ಕೆ 20 ಅಂಕಗಳನ್ನು ನೀಡಿದರೆ ಉಳಿದಂತೆ ವಿದ್ಯಾರ್ಥಿ ಕೇವಲ 13 ಅಂಕಗಳನ್ನು ಪಡೆದರೆ ಸಾಕು. ಇದರೊಂದಿಗೆ ಪ್ರಶ್ನೆಪತ್ರಿಕೆ ರಚನಾಕಾರರಿಗೆ ಮಾತ್ರ ಸೀಮಿತವಾಗಿದ್ದ ಪ್ರಶ್ನೆ ಪತ್ರಿಕೆ ನೀಲನಕಾಶೆಯನ್ನು ವಿದ್ಯಾರ್ಥಿಗಳು ಮತ್ತು ಶಿಕ್ಷಕರೊಂದಿಗೆ ಕಡ್ಡಾಯವಾಗಿ ಹಂಚಿಕೊಳ್ಳಬೇಕೆಂದು ಸರಕಾರವೇ ಸುತ್ತೋಲೆ ಹೊರಡಿಸಿದೆ. ಇದರ ಪ್ರಕಾರ ಯಾವ ಘಟಕದಲ್ಲಿ ಎಷ್ಟು ಅಂಕಗಳ ಪ್ರಶ್ನೆಗಳನ್ನು ಕೇಳಲಾಗುತ್ತದೆ ಎಂಬ ಮಾಹಿತಿ ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ಮೊದಲೇ ತಿಳಿಯುತ್ತದೆ. ವಿದ್ಯಾರ್ಥಿಗಳು ಪರೀಕ್ಷೆಗೆ ಎರಡು ವಾರ ಮೊದಲು ಕನಿಷ್ಠ ಮೂರರಿಂದ ನಾಲ್ಕು ಪಾಠಗಳನ್ನಷ್ಟೇ ಶ್ರದ್ಧೆಯಿಂದ ಓದಿದರೂ ನಪಾಸಾಗಲಾರರು. ನಿಜ ಹೇಳಬೇಕೆಂದರೆ ಈಗ ಪಾಸಾಗುವುದಕ್ಕಿಂತ ಫೇಲಾಗುವುದೇ ಕಷ್ಟ !

ರಾಜ್ಯ ಸರಕಾರ ಮಾನದಂಡ ಇಳಿಕೆಯ ಮೂಲಕ ಯಾವ ಸಾಧನೆ ಮಾಡಲು ಹೊರಟಿದೆ ಗೊತ್ತಿಲ್ಲ. ಇದರಿಂದ ಪರೋಕ್ಷವಾಗಿ ಮತ್ತೆ ನಷ್ಟ ಅನುಭವಿಸುವವರು ಗ್ರಾಮೀಣ ಭಾಗದ ಬಡ ವಿದ್ಯಾರ್ಥಿಗಳು. ಹಿಂದೊಮ್ಮೆ 'ಗುಣಮಟ್ಟ'ಕ್ಕೆ ಹೆಸರಾಗಿದ್ದ ಸರಕಾರಿ ಶಿಕ್ಷಣ ವ್ಯವಸ್ಥೆಯನ್ನು ಸರಕಾರವೇ ಕತ್ತು ಹಿಸುಕಿ ಸಾಯಿಸಲು ಹೊರಟಿದೆ. ಸರಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ಸಿಗುತ್ತಿಲ್ಲ. ತಮ್ಮ ಮಕ್ಕಳ ಜೀವನಕ್ಕೆ ಅಗತ್ಯವಾದ ಇಂಗ್ಲಿಷ್ ಭಾಷೆಯ ಶಿಕ್ಷಣ ಸಿಗುತ್ತಿಲ್ಲ ಎನ್ನುವ ಕಾರಣಕ್ಕೆ ಕೆಳ ಮಧ್ಯಮವರ್ಗದ ಜನರೂ ತಮ್ಮ ಜೀವಿತಾವಧಿಯ ಗಳಿಕೆಯೆಲ್ಲವನ್ನೂ ಮಕ್ಕಳ ಫೀಸಿಗೆ ಸುರಿದು ಖಾಸಗಿ ಶಾಲೆಗಳಿಗೆ ಸೇರಿಸುತ್ತಿದ್ದಾರೆ. ಒಂದು ವೇಳೆ ಸರಕಾರ ಉತ್ತೀರ್ಣತೆಯ ಪ್ರಮಾಣವನ್ನು ಲೆಕ್ಕಿಸದೇ ಸರಕಾರಿ ಶಿಕ್ಷಣದ ಗುಣಮಟ್ಟವನ್ನು ಮೇಲಕ್ಕೆತ್ತಲು ಕ್ರಮ ಕೈಗೊಂಡಿದ್ದರೆ ಖಾಸಗಿ ಶಾಲೆಗಳ ವಿದ್ಯಾರ್ಥಿಗಳೂ ಇತ್ತ ಮರಳಿ ಬರುವ ಅವಕಾಶಗಳಿತ್ತು. ಆದರೆ ಸರಕಾರ ಇಡೀ ಶಿಕ್ಷಣ ವ್ಯವಸ್ಥೆಯನ್ನು ಖಾಸಗಿ ರಂಗಕ್ಕೆ ವಹಿಸಲು ಟೊಂಕ ಕಟ್ಟಿ ನಿಂತಿದೆ.

ಬಡತನ ಮತ್ತು ಸಿರಿತನದ ವಿಚಾರ ಬಂದಾಗ ನಮ್ಮಲ್ಲಿ ಬಡವರ ಭಾರತವೂ ಇದೆ. ಅತಿ ಶ್ರೀಮಂತರ ಇಂಡಿಯಾವೂ ಇದೆ. ವಿಶ್ವದ ನಾಲ್ಕನೇ ಅತಿ ದೊಡ್ಡ ಆರ್ಥಿಕತೆ ಹೊಂದಿದ ದೇಶದಲ್ಲಿ ಶೇ. 40ರಷ್ಟು ಸಂಪತ್ತು ಶೇ. ಒಂದರಷ್ಟು ಜನರ ಕೈಯಲ್ಲಿದೆ. ನಮ್ಮ ಶಿಕ್ಷಣ ವ್ಯವಸ್ಥೆಯೂ ಇದೇ ರೀತಿ ಎರಡು ಹೋಳಾಗಿದೆ. ಖಾಸಗಿ ಮತ್ತು ಸರಕಾರಿ ಶಾಲೆಗಳಲ್ಲಿ ಓದುವ ಮಕ್ಕಳ ನಡುವೆ ಆರ್ಥಿಕ ಮತ್ತು ಸಾಮಾಜಿಕ ಅಂತರ ದಿನದಿಂದ ದಿನಕ್ಕೇ ಏರುತ್ತಲೇ ಇದೆ. ವಿಶ್ವಮಟ್ಟದ ಶಿಕ್ಷಣವನ್ನು ಬಯಸುವ, ಐಐಟಿಗಳಲ್ಲಿ ಪ್ರವೇಶ ಬಯಸಿ ಶೇ. 100ರ ಅಂಕ ಗಳಿಕೆಗಾಗಿ ಪ್ರಯತ್ನಿಸುವ ವಿದ್ಯಾರ್ಥಿ ವೃಂದ ಒಂದೆಡೆಯಾದರೆ, ಶೇ. 33 ಅಂಕ ಗಳಿಕೆಯೊಂದಿಗೆ ಜಸ್ಟ್ ಪಾಸಾದರೆ ಸಾಕು ಎಂಬ ಬಹುದೊಡ್ಡ ವಿದ್ಯಾರ್ಥಿ ಸಮೂಹ ಎರಡು ದಡಗಳಲ್ಲಿ ನಿಂತಿವೆ. ಇವರು ಎರಡು ಭಾರತಗಳ ಪ್ರತಿನಿಧಿಗಳಾಗಿದ್ದಾರೆ. ಎರಡನೇ ವರ್ಗಕ್ಕೂ ಗುಣಮಟ್ಟದ ಶಿಕ್ಷಣ ದೊರಕುವಂತಾದರೆ ಮಾತ್ರ ಈ ಅಂತರವನ್ನು ಕಡಿಮೆ ಮಾಡಬಹುದು. ಇದಕ್ಕೆ ಪರೀಕ್ಷೆಯ ಮಾನ 'ದಂಡ'ವನ್ನು ಉಳಿಸಿಕೊಳ್ಳಲೇಬೇಕು.

ಡಿಂಡಿಮದ ಮೌನ: ಕನ್ನಡದ ಅಸಲಿ ಸವಾಲುಗಳು

ಕನ್ನಡ ಡಿಂಡಿಮ
ಲಕ್ಷ್ಮೀಕಾಂತ್ ಎಲ್.ವಿ.
vveditoped@gmail.com

ಕುವೆಂಪು ಅವರು 'ಬಾರಿಸು ಕನ್ನಡ ಡಿಂಡಿಮವ' ಎಂದು ಕರೆ ಕೊಟ್ಟಿದ್ದು ನಮಗೆಲ್ಲರಿಗೂ ಗೊತ್ತಿರುವಂಥದ್ದೇ. ಇದು ಕೇವಲ ಒಂದು ಪ್ರಚಾರಗೀತೆಯಲ್ಲ, ಬದಲಿಗೆ ಕನ್ನಡಿಗರ ಜಾಯಮಾನದಲ್ಲಿ ಅಡಗಿರುವ ತಾಮಸ ಗುಣವನ್ನು ಬಡಿದೆಬ್ಬಿಸುವ, ಒಡಕು ಮನಸ್ಸುಗಳನ್ನು ಒಗ್ಗೂಡಿಸುವ ಒಂದು ತುರ್ತುಕಹಳೆ. ಕುವೆಂಪು ಅವರು ತಮ್ಮ ಈ ಗೀತೆಯಲ್ಲಿ ಉಲ್ಲೇಖಿಸಿರುವ 'ಸತ್ತಂತಿಹರನು ಬಡಿದೆಚ್ಚರಿಸು, ಕಚ್ಚಾಡುವರನು ಕೂಡಿಸಿ ಒಲಿಸು' ಎಂಬ ಸಾಲು ಕರ್ನಾಟಕ ಹೃದಯಶಿವನಿಗೆ ಅಂದು ಅವರು ಅರ್ಪಿಸಿದ ಪ್ರಾರ್ಥನೆಯಾಗಿತ್ತಾದರೂ, ಅದು ಇಂದಿನ ಕನ್ನಡಿಗರ ಪ್ರಜ್ಞಾಹೀನ ಸ್ಥಿತಿಗೂ ಅನ್ವಯಿಸುತ್ತದೆ. ಸ್ವಾತಂತ್ರ್ಯ ನಂತರ ಮತ್ತು ಏಕೀಕರಣದ ಕಾಲದಲ್ಲಿ ಕನ್ನಡವು ಕಂಡಿದ್ದ ಉತ್ಸಾಹ, ಹೋರಾಟ ಮತ್ತು ಹೆಮ್ಮೆಯ ಸ್ವರ ಇಂದು ಮಂಕಾಗಿದೆ. ಜಾಗತೀಕರಣದ ಸವಾಲುಗಳ ನಡುವೆ ಕನ್ನಡವು ತನ್ನ ನೆಲದಲ್ಲೇ ಪಲಾಯನಗೈಯುತ್ತಿದೆಯೇ ಎಂಬ ವಸ್ತುನಿಷ್ಠ ವಿಮರ್ಶೆಗೆ ಈಗ ನಾವು ನಿಲ್ಲಬೇಕಾಗಿದೆ.

ಕನ್ನಡದ ಸ್ಥಿತಿಗತಿಯ ಕುರಿತು ವಿಮರ್ಶೆ ಮಾಡುವಾಗ ನಾವು ಕೇವಲ ಭಾವನಾತ್ಮಕತೆಯಿಂದ ಮಾತನಾಡುವುದನ್ನು, ಡಿಂಡಿಮವನ್ನು ನಾವಾಗಿಯೇ ಬಾರಿಸುವ ಪ್ರಯತ್ನ ಮಾಡುವುದನ್ನು ಬಿಡಬೇಕು. ಬದಲಿಗೆ, ವಾಸ್ತವದ ನೆಲೆಗಟ್ಟಿನಲ್ಲಿ ನಮ್ಮ ಸವಾಲುಗಳೇನು ಮತ್ತು ನಮ್ಮ ಸಾಮರ್ಥ್ಯಗಳೇನು ಎಂಬುದನ್ನು ಅರಿತುಕೊಳ್ಳಬೇಕು. ಹಳೆಯ ವೈಭವದ ಕಥೆಗಳನ್ನು ಹೇಳುತ್ತಾ ಕಾಲ ಕಳೆಯುವುದಕ್ಕಿಂತ, ಆಧುನಿಕ ಕಾಲದ ಬಹುಮುಖಿ ಸಮಸ್ಯೆಗಳಿಗೆ ಕನ್ನಡವನ್ನು ಹೇಗೆ ಸಜ್ಜುಗೊಳಿಸಬೇಕು ಎಂಬುದರತ್ತ ಗಮನ ಹರಿಸಬೇಕು.

'ಅನ್ನದ ಭಾಷೆ'ಯ ಸವಾಲು

ಕನ್ನಡದ ಇಂದಿನ ಸ್ಥಿತಿಗೆ ಅತ್ಯಂತ ಮುಖ್ಯ ಕಾರಣ, ಕುವೆಂಪು ಗುರುತಿಸಿದಂತೆ ಕನ್ನಡಿಗರೊಳಗಿನ 'ಹೊಟ್ಟೆಯ ಕಿಚ್ಚು' ಮತ್ತು ಸಂಘಟನಾತ್ಮಕ ಮನೋಭಾವದ ಕೊರತೆ. ಕನ್ನಡ ಪರ ಹೋರಾಟಗಳು ಪ್ರಸ್ತುತ, ಪ್ರಾದೇಶಿಕ ಭಿನ್ನಾಭಿಪ್ರಾಯಗಳು, ರಾಜಕೀಯ ಲಾಭಗಳು ಮತ್ತು ತಾತ್ಕಾಲಿಕ ಆವೇಶಗಳಿಗೆ ಸೀಮಿತವಾಗುತ್ತಿವೆ. 'ಕನ್ನಡ' ಎನ್ನುವ ಒಂದು ಅಸ್ಮಿತೆಯ ಅಡಿಯಲ್ಲಿ ಬರುವಂಥ ಒಕ್ಕೊರಲಿನ ಧ್ವನಿಯ ಕೊರತೆ ಇದೆ. ನೆಲ-ಜಲದಂಥ ಗಂಭೀರ ಸಮಸ್ಯೆಗಳಲ್ಲೂ ಕನ್ನಡಿಗರು ಒಡೆದು ಹೋಗಿ, ನಿಷ್ಕ್ರಿಯ ಮನೋಭಾವವನ್ನು ಪ್ರದರ್ಶಿಸುತ್ತಾರೆ. ಈ ಆಂತರಿಕ ದೌರ್ಬಲ್ಯವನ್ನು ನಮ್ಮ ಭಾಷೆಯ ವಿರೋಧಿಗಳು ಸುಲಭವಾಗಿ ಬಳಸಿಕೊಳ್ಳುತ್ತಿದ್ದಾರೆ.

ಕನ್ನಡವು ಎದುರಿಸುತ್ತಿರುವ ಅತಿದೊಡ್ಡ ಸವಾಲೆಂದರೆ ಅದು 'ಅನ್ನದ ಭಾಷೆ'ಯಾಗದಿರುವುದು ಎಂಬ ಭ್ರಮೆ. ಬಹುತೇಕ ಕನ್ನಡಿಗರು ತಮ್ಮ ಮಕ್ಕಳನ್ನು ಆಂಗ್ಲ ಮಾಧ್ಯಮ ಶಾಲೆಗಳಿಗೆ ಸೇರಿಸಲು ಮುಂದಾಗುತ್ತಾರೆ. ಇದಕ್ಕೆ ಮುಖ್ಯ ಕಾರಣ, ಜಾಗತೀಕರಣದ ಹಿನ್ನೆಲೆಯಲ್ಲಿ ಇಂಗ್ಲಿಷ್ ಭಾಷೆಯು ಉದ್ಯೋಗ ಮತ್ತು ಉನ್ನತ ಶಿಕ್ಷಣಕ್ಕೆ ಕೀಲಿಕೈ ಎಂಬ ಆಳವಾದ ನಂಬಿಕೆ. ಕುವೆಂಪು ಯುಗದ ಆಶಯಗಳು ಕೇವಲ ಸಾಂಸ್ಕೃತಿಕ ಹೆಮ್ಮೆಗೆ ಸೀಮಿತವಾಗಿದ್ದು, ವರ್ತಮಾನದ ಪೋಷಕರಿಗೆ ತಮ್ಮ ಮಕ್ಕಳ ಉಜ್ವಲ ಭವಿಷ್ಯವೇ ಮುಖ್ಯವಾಗಿದೆ. ಈ 'ಕೀಳರಿಮೆ' ಮತ್ತು 'ಮೇಲರಿಮೆ'ಯ ದಾಸ್ಯವು ಕನ್ನಡದ ಮೂಲಕ್ಕೆ ಹತ್ತಿದ ಹುಳದಂತಿದೆ. ನಮ್ಮ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಗುಣಮಟ್ಟದ ಇಂಗ್ಲಿಷ್ ಕಲಿಕೆ, ವಿಜ್ಞಾನ ಮತ್ತು ತಂತ್ರಜ್ಞಾನದ ಅರಿವು ಮೂಡಿಸುವಲ್ಲಿನ ಹಿನ್ನಡೆ ಈ ಸಮಸ್ಯೆಯನ್ನು ಮತ್ತಷ್ಟು ಉಲ್ಬಣಗೊಳಿಸಿದೆ.

ಕಂಪ್ಯೂಟರ್ ಮತ್ತು ಮೊಬೈಲ್ ತಂತ್ರಜ್ಞಾನದಲ್ಲಿ ಕನ್ನಡದ ಬಳಕೆ ಹೆಚ್ಚಿದ್ದರೂ, ಆಡಳಿತ ಮತ್ತು ನ್ಯಾಯಾಂಗ ವ್ಯವಸ್ಥೆಯಲ್ಲಿ ಕನ್ನಡದ ಸ್ಥಾನ ಇನ್ನೂ ಎರಡನೇ ದರ್ಜೆಯಲ್ಲಿದೆ. ಆಡಳಿತದ ಬಹುತೇಕ ಕಡತಗಳು ಇಂಗ್ಲಿಷಿನಲ್ಲೇ ಸಿದ್ಧವಾಗುತ್ತವೆ. ಜನಸಾಮಾನ್ಯರಿಗೆ ಸುಲಭವಾಗಿ ತಲುಪಬೇಕಾದ ಸರಕಾರಿ ಸೇವೆಗಳು ಮತ್ತು ಕಾನೂನು ಮಾಹಿತಿಗಳನ್ನು ಸಂಪೂರ್ಣವಾಗಿ ಕನ್ನಡದಲ್ಲಿ ತಲುಪಿಸುವಲ್ಲಿನ ವಿಳಂಬವು ಕನ್ನಡಿಗರನ್ನು ಆಂಗ್ಲ ಭಾಷಾ ಜ್ಞಾನವಿರುವ ಮಧ್ಯವರ್ತಿಗಳ ಮೇಲೆ ಅವಲಂಬಿಸುವಂತೆ ಮಾಡಿದೆ. ಈ ವಸ್ತುನಿಷ್ಠ ಸತ್ಯವನ್ನು ಒಪ್ಪಿಕೊಂಡು, ಕನ್ನಡವನ್ನು ಸಾಹಿತ್ಯ ಮತ್ತು ಸಂಸ್ಕೃತಿಗೆ ಮಾತ್ರವಲ್ಲದೆ, ಆರ್ಥಿಕ ಪ್ರಗತಿ, ಜ್ಞಾನ ಮತ್ತು ಶಕ್ತಿಗೆ ಮೂಲವಾಗಿಸುವ ನಿಟ್ಟಿನಲ್ಲಿ ನಾವೆಲ್ಲರೂ 'ಡಿಂಡಿಮ'ದ ಸ್ವರವನ್ನು ಬದಲಾಯಿಸಬೇಕಾಗಿದೆ.

ನವಪೀಳಿಗೆಯ ಭಾಷಾ ಬಳಕೆ

ಕಳೆದ ಎರಡು ದಶಕಗಳಲ್ಲಿ ಕನ್ನಡದ ಬಳಕೆಯಲ್ಲಿ ಹೊಸ ಪರ್ವವೊಂದು ಆರಂಭವಾಗಿದೆ. ತಂತ್ರಜ್ಞಾನದ ಆಗಮನವು ಕನ್ನಡವನ್ನು ಕೇವಲ ಪುಸ್ತಕ ಮತ್ತು ಪತ್ರಿಕೆಗಳ ಭಾಷೆಯಾಗಿ ಉಳಿಯಲು ಬಿಡದೆ, ಆಡುಭಾಷೆಯ ವಿಸ್ತೃತ ರೂಪಕ್ಕೆ ತಂದು ನಿಲ್ಲಿಸಿದೆ. ಸಾಮಾಜಿಕ ಮಾಧ್ಯಮಗಳು, ಬ್ಲಾಗ್‌ಗಳು, ಯುಟ್ಯೂಬ್, ಪಾಡ್‌ಕಾಸ್ಟ್‌ಗಳು ಮತ್ತು ಡಿಜಿಟಲ್ ಪತ್ರಿಕೆಗಳಲ್ಲಿ ಕನ್ನಡವು ಹೊಸ ಹುರುಪಿನಿಂದ ಬಳಕೆಯಾಗುತ್ತಿದೆ. ಈ ವೇದಿಕೆಗಳಲ್ಲಿನ ಭಾಷಾ ನಿರೂಪಣೆಯು ಸಾಂಪ್ರದಾಯಿಕ ವ್ಯಾಕರಣ ಮತ್ತು ಶೈಲಿಗೆ ಅಂಟಿಕೊಳ್ಳದೆ, ಹೊಸ ತಲೆಮಾರಿನ ಸಂವಹನ ಅಗತ್ಯಗಳಿಗೆ ಅನುಗುಣವಾಗಿ ಹೆಚ್ಚು ಸರಳ, ನೇರ ಮತ್ತು ಆಡುಮಾತಿನ ಶೈಲಿಗೆ ಬದಲಾಗಿದೆ. ಇಂದಿನ ಕನ್ನಡ ಭಾಷಾಭಿಮಾನಿಗಳು ತಮ್ಮ ಮಾತೃಭಾಷೆಯನ್ನು ಕೇವಲ ಪೂಜನೀಯ ಭಾವದಿಂದ ನೋಡುವುದಕ್ಕಿಂತ, ಅದನ್ನು ತಮ್ಮ ದೈನಂದಿನ ಜೀವನದ ಅತ್ಯಗತ್ಯ ಸಾಧನವನ್ನಾಗಿ ಬಳಸುತ್ತಿದ್ದಾರೆ.

ಆದರೆ, ಈ ಡಿಜಿಟಲ್ ಕ್ರಾಂತಿಯ ಸವಾಲುಗಳೂ ಸಣ್ಣವಲ್ಲ. ಕನ್ನಡದ ಶುದ್ಧತೆ ಮತ್ತು ಸಮೃದ್ಧತೆಯ ಬಗ್ಗೆ ಚಿಂತಿಸದೆ, ಯುಟ್ಯೂಬ್ ಮತ್ತು ರೀಲ್‌ಗಳಲ್ಲಿನ ತಕ್ಷಣದ ಪ್ರತಿಕ್ರಿಯೆಗಳನ್ನು ಪಡೆಯಲು ಆಕರ್ಷಕ ಮತ್ತು ಗುಣಮಟ್ಟವಿಲ್ಲದ ವಿಷಯವನ್ನೇ ಸೃಷ್ಟಿಸಲಾಗುತ್ತಿದೆ. ಇದು ಒಂದು ಕಡೆ ಕನ್ನಡದ ವ್ಯಾಪ್ತಿಯನ್ನು ಹೆಚ್ಚಿಸಿದರೆ, ಇನ್ನೊಂದು ಕಡೆ ಗಂಭೀರವಾದ ಓದು, ಬರಹ ಮತ್ತು ಚಿಂತನೆಗಳನ್ನು ಗೌಣವಾಗಿಸುತ್ತಿದೆ. ಇಂದಿನ ಯುವಜನತೆ ದೀರ್ಘವಾದ ಲೇಖನ, ಮಹಾಕಾವ್ಯಗಳನ್ನು ಓದುವ ಬದಲು ಇನ್ಸ್ಟಾಗ್ರಾಮ್‌ನ ಚಿಕ್ಕ ಕವನಗಳತ್ತ, 'ಎಕ್ಸ್' ಮಾಧ್ಯಮದಲ್ಲಿನ (ಟ್ವಿಟರ್) ಸಂಕ್ಷಿಪ್ತ ಅಭಿಪ್ರಾಯಗಳತ್ತ ಹೆಚ್ಚು ವಾಲುತ್ತಿದ್ದಾರೆ. ಇದು ಕನ್ನಡ ಸಾಹಿತ್ಯದ ಪರಂಪರೆಯನ್ನು ಮುಂದಿನ ಪೀಳಿಗೆಗೆ ತಲುಪಿಸುವಲ್ಲಿ ಬಹುದೊಡ್ಡ ಅಂತರವನ್ನು ಸೃಷ್ಟಿಸಬಹುದು.



ಇನ್ನೊಂದು ವಾಸ್ತವವೆಂದರೆ, ಮಹಾನಗರಗಳಲ್ಲಿರುವ ಅನ್ಯಭಾಷಿಕರ ಸಂಖ್ಯೆಯ ಹೆಚ್ಚಳದಿಂದಾಗಿ ಕನ್ನಡಿಗರೇ ಕನ್ನಡದಲ್ಲಿ ಮಾತನಾಡುವ ಸಂಕೋಚಕ್ಕೆ ಒಳಗಾಗುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ ಕನ್ನಡವನ್ನು ಮಾತನಾಡಲು ಕಲಿಯದ ಅನ್ಯಭಾಷಿಕರ ಸಂಖ್ಯೆ ಗಣನೀಯವಾಗಿದೆ. ಇದಕ್ಕೆ ಕಾರಣ ಕನ್ನಡಿಗರಲ್ಲೇ ಇರುವ 'ಹೊಂದಿಕೊಂಡು ಹೋಗುವ' ಮನೋಭಾವ, ಅಥವಾ ಕನ್ನಡವನ್ನು ಕಡ್ಡಾಯವಾಗಿ ಬಳಸುವಂತೆ ಮಾಡುವ ಒಂದು ನಿರ್ಧಾರಿತವಾದ ಒತ್ತಡದ ಕೊರತೆ. ಕುವೆಂಪು ಅವರು 'ಕರ್ನಾಟಕ ಹೃದಯ ಶಿವ'ನನ್ನು ಎಚ್ಚರಿಸಿದಂತೆ, ಈ ವಿಷಯದಲ್ಲಿ ಕಠಿಣ ನಿರ್ಧಾರಗಳನ್ನು ತೆಗೆದುಕೊಳ್ಳದ ಹೊರತು, ಕನ್ನಡವು ತನ್ನ ಆಡಳಿತ ಮತ್ತು ವಾಣಿಜ್ಯ ಸ್ಥಾನಮಾನವನ್ನು ಪೂರ್ಣವಾಗಿ ಸಾಧಿಸಲು ಸಾಧ್ಯವಿಲ್ಲ. ಶಕ್ತಿಯ ಕೊರತೆಯು ಭಾಷೆಯ ಮೇಲೆ ಪರಿಣಾಮ ಬೀರುತ್ತದೆ. ಹೀಗಾಗಿ, ಕನ್ನಡದ ವಸ್ತುನಿಷ್ಠ ಪ್ರಗತಿ ಎಂದರೆ, ಅದನ್ನು ಮಾತನಾಡುವವರಿಗೆ ಸಾಮಾಜಿಕ ಮತ್ತು ಆರ್ಥಿಕ ಶಕ್ತಿಯನ್ನು ಒದಗಿಸುವುದು.

ನಿಜವಾದ ಡಿಂಡಿಮದ ಸ್ವರ

ಕುವೆಂಪುರವರ ಡಿಂಡಿಮವು ಭವಿಷ್ಯದ ಕನ್ನಡ ಸಮುದಾಯಕ್ಕೆ ಒಂದು ದಾರಿದೀಪವನ್ನು ನೀಡುತ್ತದೆ. ಕೇವಲ ಕಚ್ಚಾಡುವ ಮನಸ್ಸುಗಳನ್ನು ಒಲಿಸುವುದು ಮಾತ್ರವಲ್ಲದೆ, 'ಕವಿ ಋಷಿ ಸಂತರ ಆದರ್ಶದಲಿ ಸರ್ವೋದಯವಾಗಲಿ ಸರ್ವರಲಿ' ಎಂಬ ಅವರ ಆಶಯವನ್ನು ನಾವು ವರ್ತಮಾನಕ್ಕೆ ಅಳವಡಿಸಿಕೊಳ್ಳಬೇಕು. ಕನ್ನಡದ ನಿಜವಾದ ಡಿಂಡಿಮದ ಸ್ವರವು ಕೇವಲ ರಾಜಕೀಯ ಹೋರಾಟಗಳಲ್ಲಾಗಲೀ ಅಥವಾ ಭಾವನಾತ್ಮಕ ಘೋಷಣೆಗಳಲ್ಲಾಗಲೀ ಇಲ್ಲ. ಅದು ಇರುವುದು- ಕನ್ನಡ ಮಾಧ್ಯಮ ಶಾಲೆಗಳನ್ನು ಇಂಗ್ಲಿಷ್ ಭಾಷೆ ಮತ್ತು ಆಧುನಿಕ ಜ್ಞಾನವನ್ನು ಉನ್ನತ ಗುಣಮಟ್ಟದಲ್ಲಿ ಕಲಿಸುವ ಕೇಂದ್ರಗಳನ್ನಾಗಿ ರೂಪಿಸುವುದರಲ್ಲಿ. ಕನ್ನಡವು ಉತ್ತಮ ಶಿಕ್ಷಣ, ಉನ್ನತ ಉದ್ಯೋಗ ಮತ್ತು ಜ್ಞಾನ ಸಂಪಾದನೆಗೆ ಅಡ್ಡಿಯಾಗುವುದಿಲ್ಲ, ಬದಲಿಗೆ ಮಾರ್ಗವಾಗುತ್ತದೆ ಎಂಬ ನಂಬಿಕೆಯನ್ನು ಮೂಡಿಸುವುದು.

ತಂತ್ರಜ್ಞಾನದ ಬಲವರ್ಧನೆ

ಆಡಳಿತ, ಬ್ಯಾಂಕಿಂಗ್, ವಾಣಿಜ್ಯ ಮತ್ತು ನ್ಯಾಯಾಂಗದಂಥ ನಿರ್ಣಾಯಕ ಕ್ಷೇತ್ರಗಳಲ್ಲಿ ಕನ್ನಡವನ್ನು ಸಂಪೂರ್ಣವಾಗಿ ಅಳವಡಿಸಲು ತಂತ್ರಜ್ಞಾನವನ್ನು ಬಳಸುವುದು; ಕನ್ನಡವನ್ನು 'ಕ್ಲಿಕ್' ಮಾಡುವ ಭಾಷೆಯನ್ನಾಗಿ, ಕೀಬೋರ್ಡ್‌ನಿಂದ ನೇರವಾಗಿ ಬಳಕೆಯಾಗುವ ಭಾಷೆಯನ್ನಾಗಿ ಮಾಡುವುದು; ಭಾಷಾ ವೈವಿಧ್ಯವನ್ನು ಗೌರವಿಸುತ್ತಲೇ, ಕರ್ನಾಟಕದಲ್ಲಿ ಕನ್ನಡವೇ ಸಾರ್ವಭೌಮ ಭಾಷೆ ಎಂಬ ವಸ್ತುನಿಷ್ಠ ಸತ್ಯವನ್ನು ಪ್ರತಿಪಾದಿಸುವುದು; ಕನ್ನಡ ಕಲಿಯುವವರಿಗೆ ಪ್ರೋತ್ಸಾಹ, ಕನ್ನಡವನ್ನು ನಿರ್ಲಕ್ಷಿಸುವವರಿಗೆ ಕಡ್ಡಾಯದ ಒತ್ತಡವನ್ನು ಸೃಷ್ಟಿಸುವ ರಾಜಕೀಯ ಇಚ್ಛಾಶಕ್ತಿಯನ್ನು ಪ್ರದರ್ಶಿಸುವುದು- ಇವೆಲ್ಲವೂ ನೆರವೇರಬೇಕಿರುವ ಸಂಕಲ್ಪಗಳಾಗಿವೆ.

ಕನ್ನಡವು ಕೇವಲ ಒಂದು ಪ್ರಾಚೀನ ಭಾಷೆಯಾಗಿ ಉಳಿಯಬಾರದು; ಅದು ನಮ್ಮ ಜ್ಞಾನ, ವಿಜ್ಞಾನ, ವಾಣಿಜ್ಯ ಮತ್ತು ನಿತ್ಯ ಜೀವನದ ಪ್ರತಿಯೊಂದು ಕಣದಲ್ಲಿಯೂ ಜೀವಂತವಾಗಿರಬೇಕು. 'ಚೈತ ಶಿವೇತರ ಕೃತಿ ಕೃತಿಯಲ್ಲಿ ಮೂಡಲಿ ಮಂಗಳ ಮತಿ ಮತಿಯಲ್ಲಿ' ಎಂದಿದ್ದಾರೆ ಕುವೆಂಪು. ಅಂದರೆ, ಕೇವಲ ಬೌದ್ಧಿಕವಾಗಿ ಬೆಳೆಯುವುದಲ್ಲ, ನಮ್ಮ ಪ್ರತಿ ಕಾರ್ಯದಲ್ಲಿ, ಪ್ರತಿಯೊಂದು ಆಲೋಚನೆಯಲ್ಲಿ ಮಂಗಳಕರವಾದ, ಪ್ರಗತಿಪರವಾದ ಚಿಂತನೆ ಮೂಡಬೇಕು. ಅಂಥ ಸಮೃದ್ಧವಾದ ಮತ್ತು ಪ್ರಜ್ಞಾಪೂರ್ವಕವಾದ ಸಮಾಜವನ್ನೇ ಕುವೆಂಪು ಬಯಸಿದ್ದರು. ಆ ಡಿಂಡಿಮದ ಸ್ವರ ಇಂದು ಕನ್ನಡಿಗರ ಪ್ರತಿಯೊಬ್ಬರ ಮನಸ್ಸಿನ ಆಳದಿಂದ ಹೊರಹೊಮ್ಮಬೇಕು. ಇದು ಕೇವಲ ನಮ್ಮ ಅಸ್ತಿತ್ವದ ಪ್ರಶ್ನೆಯಲ್ಲ, ಇದು ನಮ್ಮ ಭವಿಷ್ಯದ ಪ್ರಶ್ನೆ...

(ಲೇಖಕರು ಹವ್ಯಾಸಿ ಬರಹಗಾರರು)

ಆರೋಗ್ಯ ಭಾಗ್ಯ

ಡಾ. ಮುರಲೀಮೋಹನ್ ಚೂಂತಾರು
vveditoped@gmail.com

ಮಿದುಳಿನ ಪಾರ್ಶ್ವವಾಯು ಇರಲಿ ಒಂದಿಷ್ಟು ಎಚ್ಚರ

ಪ್ರತಿ ವರ್ಷದ ಅಕ್ಟೋಬರ್ 29ರಂದು ವಿಶ್ವದಾದ್ಯಂತ 'ಬ್ರೇನ್ ಸ್ಟ್ರೋಕ್ ಡೇ' ಅಥವಾ 'ಮಿದುಳಿನ ಆಘಾತದ ದಿನ'ವನ್ನು ಆಚರಿಸಿ, ಮಿದುಳಿನ ಪಾರ್ಶ್ವವಾಯುವಿನ ಬಗ್ಗೆ ಜಾಗೃತಿ ಮೂಡಿಸಿ, ಈ ಆಘಾತವು ಉಂಟಾಗುವ ಸಾಧ್ಯತೆಯನ್ನು ತಗ್ಗಿಸಲು ಯತ್ನಿಸಲಾಗುತ್ತದೆ. 'ಸ್ಟ್ರೋಕ್ ಡೇ' ಆಚರಣೆ ಶುರುವಾಗಿದ್ದು 2006ರಲ್ಲಿ, ವಿಶ್ವ ಸ್ಟ್ರೋಕ್ ಸಂಸ್ಥೆಯು ಈ ಆಚರಣೆಯನ್ನು ಜಾರಿಗೆ ತಂದಿದೆ. 'ಪ್ರತಿ ನಿಮಿಷವೂ ಅಮೂಲ್ಯ' (Every Minute Counts) ಎಂಬುದು 2025ರ ಆಚರಣೆಯ ಧ್ಯೇಯವಾಕ್ಯವಾಗಿದೆ.

ಈ 'ಸ್ಟ್ರೋಕ್' ಯಾರಿಗೆ ಬೇಕಾದರೂ, ಯಾವಾಗ ಬೇಕಾದರೂ, ಯಾವುದೇ ಹೊತ್ತಿನಲ್ಲೂ ಸಂಭವಿಸಬಹುದು. ಸಾಮಾನ್ಯವಾಗಿ, 60 ವರ್ಷದ ನಂತರವೇ ಈ ಕಾಯಿಲೆ ಹೆಚ್ಚಾಗಿ ಕಾಣಸಿಗುತ್ತದೆ. ಜಾಗತಿಕವಾಗಿ, ತೀವ್ರ ಹೃದಯಾಘಾತದ ನಂತರ ಸಾವಿಗೆ ಕಾರಣವಾಗುವ ರೋಗಗಳಲ್ಲಿ 'ಸ್ಟ್ರೋಕ್' ಎರಡನೇ ಸ್ಥಾನವನ್ನು ಗಳಿಸಿದೆ. ಆದರೆ, ಸಮಾಧಾನಕರ ಅಂಶವೆಂದರೆ ಬಹುತೇಕ 'ಸ್ಟ್ರೋಕ್'ಗಳನ್ನು ತಡೆಗಟ್ಟಬಹುದಾಗಿದೆ. ವಾರ್ಷಿಕವಾಗಿ ಅಮೆರಿಕ ದೇಶವೊಂದರಲ್ಲೇ ಸುಮಾರು 8 ಲಕ್ಷ ಮಂದಿ (ಜಾಗತಿಕವಾಗಿ ಸುಮಾರು 20 ಲಕ್ಷ ಮಂದಿ) ಈ ರೋಗಕ್ಕೆ ತುತ್ತಾಗುತ್ತಾರೆ. ಈ 'ಸ್ಟ್ರೋಕ್' ಬಂದ ಬಳಿಕ ಸಕಾಲದಲ್ಲಿ ಸೂಕ್ತ ಚಿಕಿತ್ಸೆಯನ್ನು ಪಡೆಯದಿದ್ದಲ್ಲಿ ಅಂಥ ವ್ಯಕ್ತಿಯು ಶಾಶ್ವತವಾಗಿ ಅಂಗವೈಕಲ್ಯವನ್ನು ಹೊಂದುತ್ತಾನೆ. ಹೀಗಾಗಿ, ಶಾಶ್ವತ ಅಂಗವೈಕಲ್ಯಕ್ಕೆ ಕಾರಣವಾಗುವ ಸಮಸ್ಯೆಗಳಲ್ಲಿ 'ಸ್ಟ್ರೋಕ್'ಗೆ ಗಮನಾರ್ಹ ಸ್ಥಾನ ಸಿಕ್ಕಿಬಿಟ್ಟಿದೆ.

ಇಂದು ವಿಶ್ವ ಮಿದುಳಿನ ಪಾರ್ಶ್ವವಾಯು ದಿನ

ಮಿದುಳಿನ ಯಾವುದಾದರೊಂದು ಭಾಗಕ್ಕೆ ರಕ್ತಸಂಚಾರ ನಿಂತುಹೋಗಿ, ಆ ಭಾಗದ ಮಿದುಳು ನಿರ್ಜೀವವಾಗುತ್ತದೆ ಮತ್ತು ಆ ಭಾಗದಿಂದ ನಿಯಂತ್ರಿಸಲ್ಪಡುವ ಕೆಲಸಗಳು ನಿಷ್ಕ್ರಿಯವಾಗಿ 'ಮಿದುಳಿನ ಆಘಾತ' ಎಂದು ಕರೆಸಿಕೊಳ್ಳುತ್ತದೆ. 'ಸ್ಟ್ರೋಕ್'ನಲ್ಲಿ 'ಹಿಮೋರೇಜಿಕ್ ಸ್ಟ್ರೋಕ್' ಮತ್ತು 'ಇಷ್ಕೆಮಿಕ್ ಸ್ಟ್ರೋಕ್' ಎಂಬ ಎರಡು ಬಗೆಗಳಿವೆ. 'ಹಿಮೋರೇಜಿಕ್ ಸ್ಟ್ರೋಕ್'ನಲ್ಲಿ ಮಿದುಳಿನ ರಕ್ತನಾಳಗಳು ಒಡೆದುಕೊಂಡು, ಜೀವಕೋಶಗಳು ನಿರ್ಜೀವವಾಗುತ್ತವೆ. 'ಇಷ್ಕೆಮಿಕ್ ಸ್ಟ್ರೋಕ್'ನಲ್ಲಿ ರಕ್ತನಾಳಗಳ ಒಳಗೆ ರಕ್ತವು ಹೆಪ್ಪುಗಟ್ಟಿಕೊಂಡು ರಕ್ತ ಪರಿಚಲನೆಗೆ ಅಡ್ಡಿಯಾಗಿ, ಆ ಭಾಗದ ಜೀವಕೋಶಗಳು ಸಾಯುತ್ತವೆ. ಇದು ಅತಿ ಸಾಮಾನ್ಯವಾಗಿ ಕಾಣಬರುವ ಪ್ರಭೇದವಾಗಿರುತ್ತದೆ.

'ಸ್ಟ್ರೋಕ್' ಯಾರಿಗೆ ಬರಬಹುದು?

ಮಿತಿಮೀರಿದ ಧೂಮಪಾನ, ಮದ್ಯಪಾನ ಮಾಡುವವರಿಗೆ, ಮಾದಕದ್ರವ್ಯಗಳನ್ನು ಸೇವಿಸುವ ಗೀಳು ಇರುವವರಿಗೆ 'ಸ್ಟ್ರೋಕ್' ಬರುವ ಸಾಧ್ಯತೆ ಹೆಚ್ಚಿರುತ್ತದೆ. ಮಿಕ್ಕಂತೆ, ರಕ್ತದಲ್ಲಿ ಹೆಚ್ಚಿನ ಕೊಬ್ಬಿನಂಶ ಉಳ್ಳವರು, ಮಧುಮೇಹಿಗಳು, ಅಧಿಕ ರಕ್ತದೊತ್ತಡ ಇರುವವರು, ಹೃದಯಸಂಬಂಧಿ ಕಾಯಿಲೆ ಮತ್ತು ಪೆಡಸುಗೊಂಡ ರಕ್ತನಾಳವಿರುವವರು, ಸ್ಥೂಲದೇಹಿಗಳು ಮತ್ತು ವಿಲಾಸಿ ಜೀವನಶೈಲಿಯವರು, ಅತಿಯಾದ ಮಾನಸಿಕ ಒತ್ತಡ/ವ್ಯಥೆ/ವ್ಯಾಧಿಯಿರುವವರು, ದೈಹಿಕ ಶ್ರಮವಿಲ್ಲದ ಜೀವನಕ್ರಮಕ್ಕೆ ಒಡ್ಡಿಕೊಂಡವರು, ಅತಿಯಾಗಿ ನೋವು ನಿವಾರಕ ಮಾತ್ರೆಗಳನ್ನು ಸೇವಿಸುವವರು, ಸಮತೋಲಿತ ಆಹಾರದ ಬದಲಿಗೆ 'ಜಂಕ್ ಫುಡ್' ಮತ್ತು ಕೊಬ್ಬಿನಂಶದ/ಕರಿದ ಪದಾರ್ಥಗಳನ್ನು ಅತಿಯಾಗಿ ಸೇವಿಸುವವರು ಈ 'ಸ್ಟ್ರೋಕ್'ಗೆ ಒಳಗಾಗುತ್ತಾರೆ. ಈ ಕಾಯಿಲೆಯು ವಂಶಪಾರಂಪರ್ಯವಾಗಿ ವಂಶವಾಹಿನಿಗಳಲ್ಲಿಯೂ ಬರುವ ಸಾಧ್ಯತೆ ಇರುತ್ತದೆ.

'ಸ್ಟ್ರೋಕ್'ನ ಲಕ್ಷಣಗಳು

ಮುಖದ ಒಂದು ಭಾಗದಲ್ಲಿ ಅಥವಾ ಕೈ-ಕಾಲು, ಎದೆಭಾಗದಲ್ಲಿ ನೋವು ಇರುವುದು, ಕಣ್ಣು ಮಂಜಾಗುವುದು, ವಸ್ತುಗಳು ಎರಡೆರಡಾಗಿ ಕಾಣುವುದು, ಉಸಿರಾಡಲು ಮತ್ತು ನುಂಗಲು ಕಷ್ಟವಾಗುವುದು, ವಾಂತಿ/ವಾಕರಿಕೆ ಬಂದಂತಾಗುವುದು, ತಲೆ ತಿರುಗಿದಂತೆ ಭಾಸವಾಗುವುದು, ಮೈಯಲ್ಲಿ ನಡುಕ, ದೇಹದಲ್ಲಿ ಸಮತೋಲನ ತಪ್ಪುವುದು, ಕೈಕಾಲುಗಳಲ್ಲಿ ಹೊಂದಾಣಿಕೆ ಇಲ್ಲದಿರುವುದು, ಕಣ್ಣು ಕತ್ತಲಿಟ್ಟುಕೊಂಡು ಬರುವುದು, ನಡೆದಾಡಲು ಕಷ್ಟವಾಗುವುದು, ಕೈಕಾಲುಗಳು ಮರಗಟ್ಟಿದಂತೆ ಭಾಸವಾಗುವುದು 'ಸ್ಟ್ರೋಕ್'ನ ಲಕ್ಷಣಗಳಾಗಿರುತ್ತವೆ. ಮಿಕ್ಕಂತೆ, ಕಾರಣವಿಲ್ಲದೆ ಅತಿಯಾಗಿ ತಲೆನೋವು ಬರುವುದು, ಏನಾದರೂ ಕೆಲಸದ ಮಧ್ಯದಲ್ಲಿರುವಾಗ ಎಲ್ಲಾ ಆಲೋಚನೆಗಳೂ ನಿಷ್ಕ್ರಿಯವಾಗಿ ಏನೂ ತೋಚದಂತಾಗುವುದು, ಯೋಚನಾಶಕ್ತಿಯನ್ನು ಕಳೆದುಕೊಳ್ಳುವುದು, ಮಾತನಾಡಲು ಕಷ್ಟವಾಗುವುದು/ತೊದಲುವುದು, ಅತಿಯಾದ ಸುಸ್ತು ಮತ್ತು ಭ್ರಾಂತಿ ಉಂಟಾಗುವುದು ಕೂಡ ಇದರ ಲಕ್ಷಣಗಳಾಗಿವೆ.

'ಸ್ಟ್ರೋಕ್' ಅಮರಿಕೊಂಡಾಗ ಮುಖ ಸೊಟ್ಟಗಾಗುತ್ತದೆ, ಮುಖದಲ್ಲಿನ ಸ್ನಾಯುಗಳ ಮೇಲಿನ ನಿಯಂತ್ರಣ ತಪ್ಪುತ್ತದೆ. ಮುಖದ ಒಂದು ಭಾಗದಲ್ಲೂ ಈ ಲಕ್ಷಣ ಕಂಡುಬರಬಹುದು. ಕೈಕಾಲುಗಳ ನಿಯಂತ್ರಣ ತಪ್ಪುತ್ತದೆ, ಎರಡೂ ಕೈಗಳನ್ನು ತಲೆಯ ಮೇಲ್ಭಾಗಕ್ಕೆ ಎತ್ತಲು ಹೇಳಿದಾಗ ಅದು ಕಷ್ಟವಾಗಬಹುದು/ಸಾಧ್ಯವಾಗದಿರಬಹುದು. ಅದೇ ರೀತಿಯಲ್ಲಿ, ನಗುವುದು ಕೂಡ ಸಾಧ್ಯವಾಗುವುದಿಲ್ಲ. ಇಂಥ ಲಕ್ಷಣಗಳು ಒಂದೊಮ್ಮೆ ಕಾಣಿಸಿಕೊಂಡರೆ ವಿಳಂಬ ಮಾಡದೆ ಆಸ್ಪತ್ರೆಗೆ ಧಾವಿಸಿ, ತಜ್ಞರಿಗೆ ತೋರಿಸಬೇಕು. ಕಾಲಹರಣ ಮಾಡಿದಷ್ಟೂ ಮಿದುಳಿನ ಆಘಾತದ ತೀವ್ರತೆ ಹೆಚ್ಚುತ್ತದೆ.

ತಡೆಗಟ್ಟುವುದು ಹೇಗೆ?

ಸಾಕಷ್ಟು ಮುಂಜಾಗರೂಕತೆ ವಹಿಸುವುದರಿಂದ ಮಿದುಳಿನ ಆಘಾತವನ್ನು ಶೇ.80ರಷ್ಟು ತಡೆಗಟ್ಟಲು ಸಾಧ್ಯವಿದೆ. ಶಿಸ್ತುಬದ್ಧವಾಗಿಲ್ಲದ ಜೀವನಶೈಲಿಯನ್ನು ಬದಲಿಸಿಕೊಳ್ಳಬೇಕು, ಮದ್ಯಪಾನ-ಧೂಮಪಾನ, ಮಾದಕದ್ರವ್ಯದ ವ್ಯಸನವನ್ನು ತ್ಯಜಿಸಬೇಕು. ಸೋಮಾರಿತನಕ್ಕೆ ತಿಲಾಂಜಲಿಯಿತ್ತು, ಚಟುವಟಿಕೆಯ ಬದುಕಿಗೆ ಒಡ್ಡಿಕೊಳ್ಳಬೇಕು. ವ್ಯಾಯಾಮ/ದೈಹಿಕ ಕಸರತ್ತಿನೆಡೆಗೆ ಮುಖ ಮಾಡಬೇಕು. ದಿನಕ್ಕೆ ಅರ್ಧತಾಸು ಬಿರುಸಿನ ನಡಿಗೆಯಲ್ಲಿ ತೊಡಗಬೇಕು. ವಿಲಾಸಿ ಜೀವನಕ್ರಮವನ್ನು ಬಿಟ್ಟುಬಿಡಬೇಕು.

ಕೊಬ್ಬಿನಿಂದ ಭರಿತವಾಗಿರುವ ಆಹಾರ, ಕರಿದ ಪದಾರ್ಥಗಳನ್ನು ತ್ಯಜಿಸಿ ಕಾಳುಧಾನ್ಯಗಳು, ಹಸಿ ತರಕಾರಿ, ಹಣ್ಣು-ಹಂಪಲನ್ನು ಜಾಸ್ತಿ ತಿನ್ನಬೇಕು. ಮಧುಮೇಹ ಮತ್ತು ರಕ್ತದೊತ್ತಡವನ್ನು ನಿಯಂತ್ರಣದಲ್ಲಿ ಇರಿಸಿಕೊಳ್ಳಬೇಕು. ಸ್ಥೂಲಕಾಯದ ಸಮಸ್ಯೆಯಿಂದ ಹೊರಬರಬೇಕು. ದೇಹದ ತೂಕದ ಮಾಪನವು (Body Mass Index- BMI) 25ಕ್ಕಿಂತ ಕಡಿಮೆ ಇರಬೇಕು.

(ಲೇಖಕರು, ಬಾಯಿ, ಮುಖ ಮತ್ತು ದವಡೆಯ ಶಸ್ತ್ರಚಿಕಿತ್ಸಕರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:288

ಸಮಾಚಾರ ಸಣ್ಣದಲ್ಲ

ಜಾರ್ಖಂಡ್ ಐಆರ್‌ಬಿ ಯೋಧನ ಗುಂಡಿಕ್ಕಿ ಹತ್ಯೆ

ಬೊಕಾರೊ: ಜಾರ್ಖಂಡ್‌ನ ಬೊಕಾರೊ ಜಿಲ್ಲೆಯಲ್ಲಿ ಸಣ್ಣ ವಿವಾದವೇ ದೊಡ್ಡ ಜಗಳವಾಗಿ ಬದಲಾಗಿದ್ದರಿಂದ ಭಾರತೀಯ ಮೀಸಲು ಬೆಟಾಲಿಯನ್(ಐಆರ್‌ಬಿ) ಯೋಧರೊಬ್ಬರನ್ನು ವ್ಯಕ್ತಿಯೊಬ್ಬ ಗುಂಡಿಕ್ಕಿ ಹತ್ಯೆ ಮಾಡಿದ್ದಾನೆ. ಚಾಸ್ ಪೊಲೀಸ್ ಠಾಣೆ ವ್ಯಾಪ್ತಿಯ ಆದರ್ಶ ಕಾಲೋನಿಯ ಯದುವಂಶ ನಗರದ ನಿವಾಸಿ ಅಜಯ್ ಯಾದವ್ (25) ಅವರೇ ಮೃತ ಯೋಧ ಎಂದು ಪೊಲೀಸರು ಸುದ್ದಿಸಂಸ್ಥೆಗೆ ಮಂಗಳವಾರ ತಿಳಿಸಿದ್ದಾರೆ. ಯಾದವ್ ಅವರನ್ನು ಗಿರಿದಿಹ್ ಜಿಲ್ಲೆಯಲ್ಲಿ ನಿಯೋಜಿಸಲಾಗಿತ್ತು ಮತ್ತು ಛತ್ ಪೂಜಾ ರಜೆಯ ಸಮಯದಲ್ಲಿ ಚಾಸ್‌ನಲ್ಲಿರುವ ಊರಿಗೆ ಆಗಮಿಸಿದ್ದರು. ಸಣ್ಣದೊಂದು ಕಾರಣಕ್ಕೆ ಅಜಯ್ ಮತ್ತು ಬಲರಾಮ್ ತಿವಾರಿ ಎಂಬ ಯುವಕನ ಮಧ್ಯೆ ಮಾತಿನ ಚಕಮಕಿ ನಡೆದಿದೆ. ನಂತರ ಗಲಾಟೆಗೆ ತಿರುಗಿದೆ. ಬಲರಾಮ್, ಯೋಧ ಅಜಯ್ ರತ್ತ 3 ಗುಂಡು ಹಾರಿಸಿದ್ದಾನೆ. ಗಂಭೀರವಾಗಿ ಗಾಯಗೊಂಡಿದ್ದ ಯಾದವ್ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ.

ಭಾರತದ ಭಾಗ ಸೇರಿಸಿ ನಕ್ಷೆ: ಬಾಂಗ್ಲಾ ಕೀಟಲೆ

ಢಾಕಾ: ಒಂದೆಡೆ ಪಾಕಿಸ್ತಾನ ಭಯೋತ್ಪಾದಕರನ್ನು ಭಾರತದೊಳಕ್ಕೆ ನುಸುಳುವಂತೆ ಮಾಡಿ ಭಯೋತ್ಪಾದಕ ಚಟುವಟಿಕೆಗಳಿಗೆ ಕುಮ್ಮಕ್ಕು ನೀಡುತ್ತಿದ್ದರೆ ಇನ್ನೊಂದೆಡೆ ಬಾಂಗ್ಲಾದೇಶ ಹೊಸ ದಾಗಿ ಬಾಂಗ್ಲಾ ನಕ್ಷೆ ತಯಾರಿಸಿ ಅದರಲ್ಲಿ ಈಶಾನ್ಯ ಭಾರತದ ಭೂಭಾಗವನ್ನು ಸೇರಿಸಿ ಕೀಟಲೆ ಮಾಡುವುದಕ್ಕೆ ಆರಂಭಿಸಿದೆ. ಷೇಕ್ ಹಸೀನಾ ಆಡಳಿತ ಕಾಲದಲ್ಲಿ ಭಾರತದ ಮಿತ್ರ ರಾಷ್ಟ್ರವಾಗಿದ್ದ ಬಾಂಗ್ಲಾದೇಶ ಈಗ ಪಾಕ್‌ನ ಪ್ರಚೋದನೆ ಮೇರೆಗೆ ಭಾರತವನ್ನು ಕೆಣಕುತ್ತಿದೆ. ದೇಶದ ಹಂಗಾಮಿ ಸರಕಾರದ ಮುಖ್ಯ ಸಲಹೆಗಾರ ಮೊಹಮ್ಮದ್ ಯೂನಸ್, ಪಾಕ್ ಮಿಲಿಟರಿ ಅಧಿಕಾರಿ ಸಾಹಿರ್ ಶಂಶಾದ್ ಮಿರ್ಜಾಗೆ ಬಾಂಗ್ಲಾದೇಶದ ವಿವಾದಿತ ನಕ್ಷೆ ಇರುವ ಪುಸ್ತಕವನ್ನು ಉಡುಗೊರೆಯಾಗಿ ನೀಡಿದ್ದಾರೆ. ಆ ನಕ್ಷೆಯಲ್ಲಿ ಭಾರತದ ಹಲವು ಭೂಭಾಗಗಳನ್ನೂ ಒಳಪಡಿಸಿ ಬಾಂಗ್ಲಾದೇಶದ ಭಾಗ ಎಂದೇ ಮುದ್ರಿಸಲಾಗಿದೆ. ನಕ್ಷೆಯಲ್ಲಿ ಬಿಹಾರ, ಜಾರ್ಖಂಡ್, ಒಡಿಶಾ, ಅಸ್ಸಾಂ ಮತ್ತು ಇತರ ಈಶಾನ್ಯ ರಾಜ್ಯಗಳನ್ನು ಗ್ರೇಟರ್ ಬಾಂಗ್ಲಾದೇಶ ಎಂದು ಚಿತ್ರಿಸಲಾಗಿದೆ. ಇದು ಭಾರತದ ಸಿಟ್ಟಿಗೆ ಕಾರಣವಾಗಿದೆ.

ಸೌದಿ: ಭಾರತೀಯನಿಗೆ ₹240 ಕೋಟಿ ಲಾಟರಿ

ದುಬೈ: 29 ವರ್ಷದ ಭಾರತೀಯ ಪ್ರಜೆ ಮತ್ತು ದೀರ್ಘಕಾಲದಿಂದ ಅಬುಧಾಬಿಯಲ್ಲಿ ನೆಲೆಸಿರುವ ಆಂಧ್ರ ಮೂಲದ ಅನಿಲ್ ಕುಮಾರ್ ಬೊಲ್ಲಾ(29)

ಅವರ ಭವಿಷ್ಯ ಅದೃಷ್ಟದಾಟದಲ್ಲಿ ಒಂದೇ ದಿನದಲ್ಲಿ ಭಾರೀ ಬದಲಾವಣೆ ಕಂಡಿದೆ. ಅ.18ರ ಶನಿವಾರ ನಡೆದ ಯುಎಇ ಲಾಟರಿಯಲ್ಲಿ 23ನೇ ಲಕ್ಕಿ ಡೇ ಡ್ರಾ 251018ರಲ್ಲಿ ಬೊಲ್ಲಾ ಚಿನ್ನ ಗೆದ್ದು, ಒಂದೇ ಕ್ಷಣದಲ್ಲಿ ಕೋಟ್ಯಾಧಿಪತಿಯಾಗಿದ್ದಾರೆ. ತಾಯಿಯ ಜನ್ಮದಿನದ ಅಂಕಿಗಳನ್ನೇ ಆಧರಿಸಿ ಅನಿಲ್ ಕುಮಾರ್ ಒಟ್ಟು 12 ಟಿಕೆಟ್‌ಗಳನ್ನು ತಲಾ 1210 ರು. ಕೊಟ್ಟು ಖರೀದಿಸಿದ್ದರು. ಆ ಟಿಕೆಟ್‌ಗಳಿಗೆ ಈಗ 10 ಕೋಟಿ ದಿರ್ಹಾನ್‌ಗಳಷ್ಟು ಅತಿ ದೊಡ್ಡ ಮೊತ್ತದ ಬಹುಮಾನ(240 ಕೋಟಿ ರು.) ಬಂದಿದೆ. 'ಈ ಗೆಲುವು ನನ್ನ ಕನಸಿಗೆ ಮೀರಿದ್ದು' ಎಂದು ಬೊಲ್ಲಾ ಭಾವುಕರಾಗಿದ್ದಾರೆ. 'ಯುಎಇ ಲಾಟರಿ ಅಧಿಕಾರಿಗಳಿಂದ ಕರೆ ಬಂದಾಗ, ಭ್ರಮೆ ಇರಬೇಕು ಎನಿಸಿತು. ತಾಯಿಯ ಹುಟ್ಟುಹಬ್ಬ 11ನೇ ತಿಂಗಳಲ್ಲಿ ಬರುತ್ತದೆ. ಹಾಗಾಗಿಯೇ ಈ ಅದೃಷ್ಟದ ಲಾಟರಿ ಬಂದಿದೆ ಎಂದಿದ್ದಾರೆ.

ರಜನಿಕಾಂತ್, ಧನುಷ್ ಮನೆಗೆ ಬಾಂಬ್ ಬೆದರಿಕೆ

ಚೆನ್ನೈ: ಖ್ಯಾತ ತಮಿಳು ನಟರಾದ ರಜನಿಕಾಂತ್ ಮತ್ತು ಧನುಷ್ ನಿವಾಸಗಳಲ್ಲಿ ಬಾಂಬ್ ಇಡಲಾಗಿದೆ ಎಂಬ ಬೆದರಿಕೆ ಇಮೇಲ್ ರಾಜ್ಯ ಪೊಲೀಸ್ ಮಹಾನಿರ್ದೇಶಕರ(ಡಿಜಿಪಿ) ವಿಳಾಸಕ್ಕೆ ಬಂದಿದೆ. ಅಲ್ಲದೇ, ರಜನಿಕಾಂತ್ ಅವರ ಮನೆಯಲ್ಲಿ ಬಾಂಬ್ ಇಡಲಾಗಿದೆ ಎಂಬ ಬೆದರಿಕೆ ಪತ್ರ, ಅ.27ರ ಬೆಳಗ್ಗೆ 8.30ರಲ್ಲಿ ತೇನಾಂಪೇಟೆ ಪೊಲೀಸ್ ಠಾಣೆಗೂ ಬಂದಿದೆ. ಬಳಿಕ ಬಾಂಬ್ ನಿಷ್ಕ್ರಿಯ ತಂಡದೊಂದಿಗೆ ಪೊಲೀಸರು ರಜನಿಕಾಂತ್ ಅವರ ಮನೆಗೆ ತೆರಳಿದಾಗ ಅವರು ಬಾಂಬ್ ಸ್ಕ್ವಾಡ್‌ನಿಂದ ಶೋಧ ನಡೆಸಬೇಕಾದ ಅಗತ್ಯ ಇಲ್ಲ ಎಂದು ತಿಳಿಸಿದರು. ಮಂಗಳವಾರ ಸಂಜೆ 6.30ಕ್ಕೆ 2ನೇ ಬೆದರಿಕೆ ಪತ್ರ ಬಂದಿತು. ಆಗಲೂ ರಜನಿಕಾಂತ್ ಮನೆಯವರು ಮನೆಯಲ್ಲಿ ತಪಾಸಣೆ ನಡೆಸುವುದಕ್ಕೆ ನಿರಾಕರಿಸಿದರು. ನಟ ಧನುಷ್ ಅವರ ಮನೆಯಲ್ಲೂ ಬಾಂಬ್ ಇಡಲಾಗಿದೆ ಎಂಬ ಬೆದರಿಕೆ ಪತ್ರ ಮಂಗಳವಾರವೇ ಬಂದಿದೆ. ಅವರು ಕೂಡ ಶೋಧ ಕಾರ್ಯವನ್ನು ನಿರಾಕರಿಸಿದರು ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

{ ರಾಹುಲ್ ಗಾಂಧಿ } ಕಾಂಗ್ರೆಸ್ ನಾಯಕ

ಕೇಂದ್ರ ಮತ್ತು ವಿವಿಧ ರಾಜ್ಯಗಳಲ್ಲಿರುವ ಎನ್‌ಡಿಎ ಮೈತ್ರಿಕೂಟದ ಸರಕಾರ ಕೋಟ್ಯಂತರ ಯುವಜನರ ಕನಸುಗಳನ್ನೇ ನಾಶಪಡಿಸಿದೆ. ಬಿಹಾರದಲ್ಲಂತೂ ನರೇಂದ್ರ ಮೋದಿ-ನಿತೀಶ್ ಕುಮಾರ್ ನೇತೃತ್ವದ ಮೈತ್ರಿ ಸರಕಾರ ಬಿಹಾರದ ಯುವಜನರ ಕತ್ತು ಹಿಸುಕಿ ಕೊಂದೇಬಿಟ್ಟಿದೆ. ಡಬಲ್ ಎಂಜಿನ್ ಸರಕಾರದಲ್ಲಿ ಬಿಹಾರ ಬಹಳ ಹಿಂದಕ್ಕೆ ದೂಡಲ್ಪಟ್ಟಿದೆ.

ನ.2ಕ್ಕೆ ಎಸ್‌ಐಆರ್ ವಿರೋಧಿಸುವ ಪಕ್ಷಗಳ ಸಭೆ ಕರೆದಿರುವ ಡಿಎಂಕೆ | ಎಸ್‌ಐಆರ್ ಎಂಬುದು ಪ್ರಜಾಪ್ರಭುತ್ವಕ್ಕೆ ಮಾರಕ: ಸಿಎಂ ಪಿಣರಾಯಿ

ಎಸ್‌ಐಆರ್ ಆರಂಭಕ್ಕೆ ಪ್ರತಿಪಕ್ಷಗಳ ತೀವ್ರ ವಿರೋಧ

ಚೆನ್ನೈ/ತಿರುವನಂತಪುರಂ: ಚುನಾವಣಾ ಆಯೋಗ 12 ರಾಜ್ಯಗಳಲ್ಲಿ ನಡೆಸಲು ಹೊರಟಿರುವ ಮತದಾರರ ಪಟ್ಟಿಯಲ್ಲಿನ 'ವಿಶೇಷ ತೀವ್ರ ಪರಿಷ್ಕರಣೆ'(ಎಸ್‌ಐಆರ್) ಪ್ರತಿಪಕ್ಷಗಳಿಂದ ತೀವ್ರ ವಿರೋಧ ವ್ಯಕ್ತವಾಗಿದೆ. ತಮಿಳುನಾಡಿನಲ್ಲಿನ ಆಡಳಿತಾರೂಢ 'ದ್ರಾವಿಡ ಮುನ್ನೇತ್ರ ಕಳಗಂ'(ಡಿಎಂಕೆ) ಪಕ್ಷದ ಮುಖ್ಯಸ್ಥ, ರಾಜ್ಯದ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು 'ನ.2ರಂದು ಎಸ್‌ಐಆರ್ ವಿರುದ್ಧ ರಾಜಕೀಯ ಪಕ್ಷಗಳ ಸಭೆ'ಯನ್ನು ಕರೆದಿದ್ದಾರೆ. ಇನ್ನೊಂದೆಡೆ, ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರೂ 'ಎಸ್‌ಐಆರ್' ಪ್ರಕ್ರಿಯೆಯನ್ನು ತೀವ್ರವಾಗಿ ವಿರೋಧಿಸುವುದಾಗಿ ಹೇಳಿದ್ದಾರೆ.

'ಎಸ್‌ಐಆರ್' ಭಾರತದ ಪ್ರಜಾಪ್ರಭುತ್ವಕ್ಕೇ ಕಂಟಕ

ತಿರುವನಂತಪುರಂ: ಭಾರತೀಯ ಚುನಾವಣಾ ಆಯೋಗ ನಡೆಸಲು ಹೊರಟಿರುವ ಮತದಾರರ ಪಟ್ಟಿಯ 'ವಿಶೇಷ ತೀವ್ರ ಪರಿಷ್ಕರಣೆ'(ಎಸ್‌ಐಆರ್) ಪ್ರಕ್ರಿಯೆಯು ದೇಶದಲ್ಲಿನ ಪ್ರಜಾಪ್ರಭುತ್ವ ವ್ಯವಸ್ಥೆಗೆ ಗಂಭೀರವಾದ ಅಪಾಯವನ್ನು ತಂದೊಡ್ಡಲಿದೆ ಎಂದು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ದೇಶದ ಮತದಾರರನ್ನು ಎಚ್ಚರಿಸುವ ದಾಟಿಯಲ್ಲಿದ್ದಾರೆ.

ಮಂಗಳವಾರ ಸುದ್ದಿಸಂಸ್ಥೆಗೆ ಹೇಳಿಕೆ ನೀಡಿರುವ ಅವರು, 'ಎಸ್‌ಐಆರ್' ಪ್ರಕ್ರಿಯೆಯು ಸಂವಿಧಾನದಲ್ಲಿನ 326ನೇ ಪರಿಚ್ಛೇದವನ್ನು ಉಲ್ಲಂಘಿಸುವಂತಹುದಾಗಿದೆ ಎಂದೂ ಹೇಳಿದ್ದಾರೆ. ಇಂಥ ಪ್ರಜಾಪ್ರಭುತ್ವ ವಿರೋಧಿ ಕ್ರಮಗಳನ್ನು ಕೈಗೊಳ್ಳುತ್ತಿರುವ ಚುನಾವಣಾ ಆಯೋಗದ ನಡೆ ಖಂಡನಾರ್ಹ. ಈ ಎಸ್‌ಐಆರ್ ಪ್ರಕ್ರಿಎಯೆಯು ದೇಶದ ಮತದಾರರಿಗೆ ಚುನಾವಣಾ ವ್ಯವಸ್ಥೆಯ ಮೇಲಿರುವ ನಂಬಿಕೆಯನ್ನೇ ಅಳಿಸಿಹಾಕಲಿದೆ. ಹಾಗಾಗಿ, ಚುನಾವಣಾ ಆಯೋಗದ ಈ ಕ್ರಮದ ವಿರುದ್ಧ ಆಡಳಿತಾರೂಢ ಪಕ್ಷಗಳ ಹೊರತಾದ ಉಳಿದ ಎಲ್ಲಾ ರಾಜಕೀಯ ಪಕ್ಷಗಳೂ ಒಟ್ಟಾಗಿ ಹೋರಾಟ ನಡೆಸಬೇಕು ಎಂದು ಕರೆ ನೀಡಿದ್ದಾರೆ.

ಚು. ಆಯೋಗದ ಕ್ರಮ ಸಮರ್ಥಿಸಿ, ಪ್ರತಿಪಕ್ಷ ನಡೆ ಟೀಕಿಸಿದ ಬಿಜೆಪಿ

ಎಸ್‌ಐಆರ್ ವಿರೋಧಿ ನಡೆ ಸರಿಯಲ್ಲ

ದೇಶಾದ್ಯಂತದ ಮತದಾರರ ಪಟ್ಟಿಯ ಪರಿಷ್ಕರಣೆಗಾಗಿ ಕೇಂದ್ರ ಚುನಾವಣಾ ಆಯೋಗ ವಿವಿಧ ರಾಜ್ಯಗಳಲ್ಲಿ ಮೊದಲ ಹಂತದಲ್ಲಿ ನಡೆಸಲಿರುವ 'ಎಸ್‌ಐಆರ್' ಪ್ರಕ್ರಿಯೆಯನ್ನು ತಮಿಳುನಾಡು ಮತ್ತು ಕೇರಳ ಮುಖ್ಯಮಂತ್ರಿಗಳು ವಿರೋಧಿಸುತ್ತಿರುವುದಕ್ಕೆ ಬಿಜೆಪಿ ಕಿಡಿಕಾರಿದೆ. ದೆಹಲಿಯಲ್ಲಿನ ಬಿಜೆಪಿ ಕಚೇರಿಯಲ್ಲಿ ಮಂಗಳವಾರ ಸುದ್ದಿಸಂಸ್ಥೆ ಜತೆ ಮಾತನಾಡಿದ ಪಕ್ಷದ ವಕ್ತಾರ ಶೆಹಜಾದ್ ಪೂನಾವಾಲ, ಪ್ರತಿಪಕ್ಷಗಳು ಎಸ್‌ಐಆರ್ ವಿರೋಧಿಸುತ್ತಿರುವುದು ಸರಿಯಾದ ನಡೆಯಲ್ಲ. 'ಎಸ್‌ಐಆರ್' ಎಂಬುದು ದೇಶದಲ್ಲಿನ ಮತದಾರರ ಪಟ್ಟಿಯಲ್ಲಿನ ಲೋಪದೋಷಗಳನ್ನು ಸರಿಪಡಿಸುವ, ಅಕ್ರಮವಾಗಿ ಮತದಾರರ ಪಟ್ಟಿಗೆ ಸೇರಿರುವ ನುಸುಳುಕೋರರ ಹೆಸರುಗಳನ್ನು ತೆಗೆದುಹಾಕುವ ಹಾಗೂ ವಿವಿಧ ಮತಕ್ಷೇತ್ರಗಳಲ್ಲಿಯೂ ಇರುವ ಮತದಾರರ ಹೆಸರುಗಳನ್ನು ತೆಗೆದು ಮತದಾರರ ಪಟ್ಟಿಯನ್ನು ಶುದ್ಧೀಕರಿಸುವ ಕಾರ್ಯವಾಗಿದೆ ಎಂದು ಹೇಳಿದರು. 'ಮತದಾರರ ಪಟ್ಟಿಯ ಪರಿಷ್ಕರಣೆ ಆಗಬೇಕು' ಎಂದು ಈ ಹಿಂದೆ ಪ್ರತಿಪಕ್ಷಗಳೇ ಕೇಳಿದ್ದವು. ಮಹಾರಾಷ್ಟ್ರದಲ್ಲಿನ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸುವುದಕ್ಕೂ ಮುನ್ನವೇ ಮತದಾರರ ಪಟ್ಟಿಯ ಪರಿಷ್ಕರಣೆ ಆಗಬೇಕಿದೆ ಎಂಬುದು ಪ್ರತಿಪಕ್ಷಗಳ ಬೇಡಿಕೆಯಾಗಿದೆ ಎಂದೂ ಪೂನಾವಾಲಾ ಹೇಳಿದ್ದಾರೆ.

ನ.2ಕ್ಕೆ ಸಭೆ: ಮಿತ್ರಪಕ್ಷಗಳಿಗೆ ಡಿಎಂಕೆ ಆಹ್ವಾನ

ಚೆನ್ನೈ: ತಮಿಳುನಾಡಿನಲ್ಲಿ ಮತದಾರರ ಪಟ್ಟಿಯ 'ವಿಶೇಷ ತೀವ್ರ ಪರಿಷ್ಕರಣೆ'(ಎಸ್‌ಐಆರ್) ನಡೆಸುವುದಕ್ಕೆ ಮುಂದಾಗಿರುವ ಚುನಾವಣಾ ಆಯೋಗದ ಕ್ರಮದಲ್ಲಿ 'ಪಿತೂರಿ' ಕಾಣಿಸುತ್ತಿದೆ ಎಂದು ತಮಿಳುನಾಡು ಮುಖ್ಯಮಂತ್ರಿ, ಡಿಎಂಕೆ ಪಕ್ಷದ ಅಧ್ಯಕ್ಷ ಎಂ.ಕೆ.ಸ್ಟಾಲಿನ್ ಶಂಕೆ ವ್ಯಕ್ತಪಡಿಸಿದ್ದಾರೆ.

'ಎಸ್‌ಐಆರ್' ವಿರೋಧಿಸಿ ನ.2ರಂದು ಚೆನ್ನೈನಲ್ಲಿ 'ಇಂಡಿಯ' ಒಕ್ಕೂಟ ಸೇರಿದಂತೆ ಪ್ರತಿಪಕ್ಷಗಳ ಸಭೆ ಕರೆಯಲಾಗಿದ್ದು, ಎಸ್‌ಐಆರ್ ವಿರೋಧಿಸುವ ಪಕ್ಷಗಳು ರಾಜಕೀಯ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಈ ಸಭೆಯಲ್ಲಿ ಭಾಗವಹಿಸಬೇಕು ಎಂದು ಸ್ಟಾಲಿನ್ ಮನವಿ ಮಾಡಿದ್ದಾರೆ.

ತಮಿಳುನಾಡು ಸೇರಿದಂತೆ 9 ರಾಜ್ಯಗಳಲ್ಲಿ ಮುಂದಿನ ಹಂತದ 'ಎಸ್‌ಐಆರ್' ನಡೆಯಲಿದೆ ಎಂದು ಭಾರತೀಯ ಚುನಾವಣಾ ಆಯೋಗ ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದೆ. ಇದೇ ವೇಳೆ ತಮಿಳುನಾಡಿನ ಅಣ್ಣಾ ಅರಿವಲಯಂನಲ್ಲಿ ನಡೆದ ಜಾತ್ಯತೀತ ಪ್ರಗತಿಪರ ಒಕ್ಕೂಟದ ನಾಯಕರ ಸಮಾಲೋಚನಾ ಸಭೆಯಲ್ಲಿ ಭಾಗಿಯಾಗಿದ್ದ ಸ್ಟಾಲಿನ್ ಅವರು ನಂತರ ಸುದ್ದಿಗಾರರ ಬಳಿ ಮಾತನಾಡಿದರು. ಬಿಜೆಪಿ ನೇತೃತ್ವದ ಎನ್‌ಡಿಎ ಕೇಂದ್ರ ಸರಕಾರ ಪ್ರಜಾಪ್ರಭುತ್ವ ಮೌಲ್ಯಗಳನ್ನು ನಿರಂತರವಾಗಿ ನಾಶಪಡಿಸುತ್ತಿದೆ. ಕೇಂದ್ರದಲ್ಲಿನ ಸಾಂವಿಧಾನಿಕ ಮತ್ತು ಸ್ವಾಯತ್ತ ಸಂಸ್ಥೆಗಳನ್ನು ತನಗಿಷ್ಟ ಬಂದಂತೆ ದುರುಪಯೋಗಪಡಿಸಿಕೊಳ್ಳುತ್ತಿದೆ. ಅದೇ ಬಗೆಯಲ್ಲಿ ಭಾರತೀಯ ಚುನಾವಣಾ ಆಯೋಗದ ಕಾರ್ಯನಿರ್ವಹಣೆ ಕೂಡಾ ವಿವಾದಾತ್ಮಕ ಮತ್ತು ಅನುಮಾನಾಸ್ಪದವಾಗಿದೆ ಎಂದು ಆರೋಪಿಸಿದರು.

ಸುಪ್ರೀಂ ಕೋರ್ಟ್‌ನ ನಿರ್ದೇಶನಗಳನ್ನೂ ಚುನಾವಣಾ ಆಯೋಗ ಪಾಲಿಸಲಿಲ್ಲ. ಎಸ್‌ಐಆರ್ ಪ್ರಕ್ರಿಯೆಯಲ್ಲಿ ಆಧಾರ್ ಕಾರ್ಡ್ ಏಕೆ ಸೇರಿಸಲಾಗಿಲ್ಲ? ಪಡಿತರ ಚೀಟಿಯನ್ನೇಕೆ ಸ್ವೀಕರಿಸಲಿಲ್ಲ? ಮತದಾನದ ಹಕ್ಕು ಪ್ರಜಾಪ್ರಭುತ್ವದ ಅಡಿಪಾಯ. ಅದನ್ನು ಕೊಲೆ ಮಾಡುವ ಯಾವುದೇ ಪ್ರಯತ್ನದ ವಿರುದ್ಧ ತಮಿಳುನಾಡು ಹೋರಾಡುತ್ತದೆ ಮತ್ತು ತಮಿಳುನಾಡು ಜನತೆ ಗೆಲ್ಲುತ್ತಾರೆ.

-ಎಂ.ಕೆ.ಸ್ಟಾಲಿನ್, ತಮಿಳುನಾಡು ಸಿಎಂ

ಬಿಹಾರದಲ್ಲಿನ ಎಸ್‌ಐಆರ್‌ನಲ್ಲಿ ನೈಜ ಮತದಾರರ ಹೆಸರನ್ನೇ ಮತದಾರರ ಪಟ್ಟಿಯಿಂದ ತೆಗೆದುಹಾಕುವ ಸಂಚು ನಡೆದಿತ್ತು. ಮುಸ್ಲಿಮರು, ಪರಿಶಿಷ್ಟ ಜಾತಿ ಮತ್ತು ವರ್ಗಗಳ ಜನರು ಮತ್ತು ಮಹಿಳೆಯರ ಹೆಸರು ತೆಗೆದುಹಾಕುವುದೇ ಆ ಪ್ರಕ್ರಿಯೆಯ ಗುರಿಯಾಗಿತ್ತು. ಅಂತಹ ಪಿತೂರಿ ನಡೆಸುವುದಕ್ಕೆ ತಮಿಳುನಾಡು ಎಂದಿಗೂ ಅನುಮತಿ ನೀಡುವುದಿಲ್ಲ. ರಾಜ್ಯ ಜನತೆ ಒಂದಾಗಿ ವಿರೋಧಿಸುತ್ತಾರೆ ಎಂದು ಹೇಳಿದರು. ಮುಂದಿನ ಏಪ್ರಿಲ್ ತಿಂಗಳಲ್ಲಿ ತಮಿಳುನಾಡು ವಿಧಾನಸಭೆಗೆ ಚುನಾವಣೆ ನಡೆಯಲಿರುವಾಗ, ಈಗ ಎಸ್‌ಐಆರ್ ನಡೆಸುವುದು ಸರಿಯಲ್ಲ. ತಮಿಳುನಾಡಿನ ಜನರ ಮತದಾನದ ಹಕ್ಕನ್ನು ಕಸಿದುಕೊಳ್ಳುವ ಪಿತೂರಿ ಇದಾಗಿದೆ. ಅಲ್ಲದೇ, ನವೆಂಬರ್-ಡಿಸೆಂ ಬರ್ ವೇಳೆ ತಮಿಳುನಾಡಿನಲ್ಲಿ ಎಸ್‌ಐಆರ್ ನಡೆಸು ವುದು ತುಂಬಾ ಕಷ್ಟ ಹಾಗೂ ಪ್ರಾಯೋಗಿಕವಾಗಿ ಅಸಾಧ್ಯ. ಚುನಾವಣಾ ಆಯೋಗ ಘೋಷಿಸಿರುವ ಕಾರ್ಯವಿಧಾನಗಳು ರಾಜ್ಯದ ಮತದಾರರಿಗೆ ತೊಂದರೆ ಉಂಟು ಮಾಡುವಂತಿವೆ ಎಂದರು.

ಅಲ್‌ಖೈದಾ ಸಂಪರ್ಕ, ಉಗ್ರ ದಾಳಿ ಸಂಚು: ಪುಣೆ ಟೆಕ್ಕಿ ಸೆರೆ

ಪುಣೆ: ಅಲ್ ಖೈದಾ ಉಗ್ರ ಸಂಘಟನೆ ಸಂಪರ್ಕ ಹೊಂದಿದ್ದು, ದೇಶದ ವಿವಿಧೆಡೆ ಭಯೋತ್ಪಾದಕ ದಾಳಿ ನಡೆಸಲು ಸಂಚು ರೂಪಿಸಿದ್ದ ಟೆಕ್ಕಿಯನ್ನು ಬಂಧಿಸಲಾಗಿದೆ.

ಟೆಕ್ಕಿ ಜುಬೈರ್ ಹಂಗರ್‌ಗೇಕರ್‌ನನ್ನು ಮಹಾರಾಷ್ಟ್ರದ ಭಯೋತ್ಪಾದನಾ ನಿಗ್ರಹ ದಳ(ಎಟಿಎಸ್) ಪುಣೆಯ ಕೊಂಧ್ವಾದಲ್ಲಿ ಮಂಗಳವಾರ ಬಂಧಿಸಿದೆ. ಆರೋಪಿ ಮೇಲೆ 1 ತಿಂಗಳಿನಿಂದ 'ಎಟಿಎಸ್' ತೀವ್ರ ನಿಗಾ ಇಟ್ಟಿತ್ತು. ಬಂಧನದ ಬಳಿಕ ಪುಣೆಯಲ್ಲಿನ ವಿಶೇಷ ಯುಎಪಿಎ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ. ಜುಬೈರ್ ತನ್ನ ಸಂಪರ್ಕಕ್ಕೆ ಬಂದ ಯುವಕರನ್ನು ಭಯೋತ್ಪಾದಕರನ್ನಾಗಿ ಮಾಡಲು ಯತ್ನಿಸುತ್ತಿದ್ದ. ದೇಶದ ವಿವಿಧ ನಗರಗಳಲ್ಲಿ ಭಯೋತ್ಪಾದನೆ ದಾಳಿ ನಡೆಸಲು ಸಂಚು ರೂಪಿಸುತ್ತಿದ್ದ ಎಂದು 'ಎಟಿಎಸ್' ಅಧಿಕಾರಿಗಳು ನ್ಯಾಯಾಲಯಕ್ಕೆ ತಿಳಿಸಿದ್ದಾರೆ. ಆರೋಪಿಯ ವಿರುದ್ಧ ಕಾನೂನುಬಾಹಿರ ಚಟುವ ಟಿಕೆಗಳು (ತಡೆಗಟ್ಟುವಿಕೆ) ಕಾಯ್ದೆಯ ನಿಬಂಧನೆಗಳ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. ನ್ಯಾಯಾಲಯ ಆರೋಪಿಯನ್ನು ನ.4 ರವರೆಗೆ ಎಟಿಎಸ್ ಕಸ್ಟಡಿಗೆ ಒಪ್ಪಿಸಿದೆ.

ಅ.9ರಂದು 'ಎಟಿಎಸ್' ಪುಣೆಯ ಹಲವು ಸ್ಥಳಗಳ ಮೇಲೆ ದಾಳಿ ನಡೆಸಿತ್ತು. ಈ ವೇಳೆ ಭಯೋತ್ಪಾದಕ ಜಾಲದ ಸುಳಿವು ನೀಡುವ ಎಲೆಕ್ಟ್ರಾನಿಕ್ ಸಾಧನಗಳು, ದಾಖಲೆ ಪತ್ರಗಳು ಪತ್ತೆಯಾಗಿದ್ದವು.

ಜೈಪುರದಲ್ಲೂ ಬಸ್‌ಗೆ ಬೆಂಕಿ

ಜೈಪುರ: ರಾಜಸ್ಥಾನ ರಾಜ್ಯದ ಮನೋಹರಪುರದಲ್ಲಿ ಮಂಗಳವಾರ ಬೆಳಗ್ಗೆ ಸಂಚರಿಸುತ್ತಿದ್ದ ಖಾಸಗಿ ಸ್ಲೀಪರ್ ಬಸ್‌ಗೆ ಹೈಟೆನ್ಷನ್ ವಿದ್ಯುತ್ ತಂತಿ ತಗುಲಿದ್ದರಿಂದ ಬೆಂಕಿ ಹೊತ್ತಿಕೊಂಡಿದ್ದು, ಬಸ್ ಬಹುತೇಕ ಸುಟ್ಟುಹೋಗಿದೆ. ಪರಿಣಾಮ ಇಬ್ಬರು ಪ್ರಯಾಣಿಕರು ದುರ್ಮರಣಕ್ಕೀಡಾಗಿ, 10 ಪ್ರಯಾಣಿಕರು ಗಾಯಗೊಂಡಿದ್ದಾರೆ.

ಉತ್ತರ ಪ್ರದೇಶದ ಪಿಲಿಭಿತ್ ಜಿಲ್ಲೆಯ ಕಾರ್ಮಿಕರು ಈ ಬಸ್‌ನಲ್ಲಿ ರಾಜಸ್ಥಾನದ ಮನೋಹರಪುರದ ಇಟ್ಟಿಗೆ ಭಟ್ಟಿ ಕೆಲಸಕ್ಕೆ ತೆರಳುತ್ತಿದ್ದರು. ಬಸ್‌ನ ಮೇಲ್ಭಾಗದಲ್ಲಿ ಅಡುಗೆ ಅನಿಲ ಸಿಲಿಂಡರ್ ಮತ್ತು ಇತರೆ ಗೃಹ ಬಳಕೆ ವಸ್ತುಗಳನ್ನು ಎತ್ತರವಾಗಿ ಜೋಡಿಸಿದ್ದರಿಂದ ಅವು ಮನೋಹರಪುರದ ಹಳ್ಳಿಯೊಂದರ ಬಳಿ ಚಲಿಸುತ್ತಿದ್ದಾಗ 11 ಸಾವಿರ ವೋಲ್ಟ್ ಸಾಮರ್ಥ್ಯದ ಹೈಟೆನ್ಷನ್ ವಿದ್ಯುತ್ ತಂತಿಗೆ ತಾಕಿವೆ. ಆಗ ಬೆಂಕಿ ಹೊತ್ತುಕೊಂಡಿದೆ ಎಂದು ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ತೇಜ್ಪಾಲ್ ಸಿಂಗ್ ಹೇಳಿದ್ದಾರೆ. ನಾಲ್ವರು ಗಾಯಾಳುಗಳನ್ನು ಶಹಪುರದ ಸರಕಾರಿ ಆಸ್ಪತ್ರೆಗೆ ದಾಖಲಿಸಲಾಯಿತು. ತೀವ್ರವಾಗಿ ಗಾಯಗೊಂಡಿದ್ದ ಆರು ಪ್ರಯಾಣಿಕರನ್ನು ಜೈಪುರದ ಎಸ್‌ಎಂಎಸ್ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ ಎಂದು ಸುದ್ದಿಸಂಸ್ಥೆಗೆ ಮಾಹಿತಿ ನೀಡಿದ್ದಾರೆ.

ಕರ್ನೂಲ್ ನೆನಪು: ಕಳೆದ ವಾರವಷ್ಟೇ ಬೆಂಗಳೂರಿಗೆ ಸಂಚರಿಸುತ್ತಿದ್ದ ಖಾಸಗಿ ಸ್ಲೀಪರ್ ಬಸ್‌ಗೆ ಆಂಧ್ರಪ್ರದೇಶದ ಕರ್ನೂಲ್ ಬಳಿ ಬೆಂಕಿ ಹೊತ್ತಿಕೊಂಡಿದ್ದು, 21 ಪ್ರಯಾಣಿಕರು ಸಾವಿಗೀಡಾಗಿ, ಕೆಲವರು ಗಾಯಗೊಂಡರು. ಬಸ್‌ನಲ್ಲಿ 44 ಪ್ರಯಾ ಣಿಕರಿದ್ದರು. ಕೆಲ ಪ್ರಯಾಣಿಕರು ಕಿಟಕಿ ಗಾಜು ಒಡೆದು ಹೊರಕ್ಕೆ ಜಿಗಿದು ಪಾರಾದರು.

ಮೊಂಥಾ: ರೈಲು, ವಿಮಾನ ರದ್ದು

ಅಮರಾವತಿ: 'ಮೊಂಥಾ' ಚಂಡಮಾರುತ ಆಂಧ್ರಪ್ರದೇಶದ ಕರಾವಳಿಗೆ ಹತ್ತಿರವಾಗುತ್ತಿದೆ. ಮಚಲಿಪಟ್ಟಣಂ ಮತ್ತು ಕಾಕಿನಾಡ ನಡುವಿನ ಕರಾವಳಿಯನ್ನು ಚಂಡಮಾರುತ ದಾಟುವ ನಿರೀಕ್ಷೆಯಿದೆ ಎಂದು ಮುನ್ಸೂಚನೆ ನೀಡಿರುವ ಭಾರತೀಯ ಹವಾಮಾನ ಇಲಾಖೆ, ಕರಾವಳಿ ಆಂಧ್ರಪ್ರದೇಶ, ಉತ್ತರ ತಮಿಳುನಾಡು ಮತ್ತು ಒಡಿಶಾದ ಕೆಲವು ಭಾಗಗಳಲ್ಲಿ ಮಂಗಳವಾರ ತೀವ್ರ ಮಳೆಯಾಗಲಿದೆ ಎಂದು ಎಚ್ಚರಿಕೆ ನೀಡಿದೆ. ಮೊಂಥಾದ ಪ್ರಭಾವದಿಂದಾಗಿ ಬಿರುಗಾಳಿ ಬೀಸಿ ಭಾರೀ ಮಳೆಯಾಗಲಿದೆ. ಅದರಿಂದ ಸಾರಿಗೆ ಸಂಚಾರದಲ್ಲಿ ವ್ಯತ್ಯಯವಾಗಲಿದೆ. ದಕ್ಷಿಣ ಮಧ್ಯ ರೈಲ್ವೆ ವಿಭಾಗದ 72 ರೈಲು ಸೇವೆಗಳನ್ನು ರದ್ದುಗೊಳಿಸಲಾಗಿದೆ. ವಿಜಯವಾಡ, ರಾಜಮಂಡ್ರಿ,

ಕಾಕಿನಾಡ ಬಂದರು, ಗುಂಟೂರು, ತೆನಾಲಿ, ಮಚಲಿಪಟ್ನಂ ಮತ್ತು ವಿಶಾಖಪಟ್ಟಣದಂತಹ ಪ್ರಮುಖ ಮಾರ್ಗಗಳನ್ನು ಒಳಗೊಂಡಂತೆ ಪ್ರಯಾಣಿಕರ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಮುನ್ನೆಚ್ಚರಿಕೆ ಕ್ರಮವಾಗಿ ರದ್ದುಗೊಳಿಸಲಾಗುತ್ತಿದೆ ಎಂದು ರೈಲ್ವೆ ಪ್ರಕಟಣೆ ತಿಳಿಸಿದೆ. ಇನ್ನೊಂದೆಡೆ, ಇಂಡಿಗೋ ಮತ್ತು ಏರ್ ಇಂಡಿಯಾ ಎಕ್ಸ್‌ಪ್ರೆಸ್ ಸೇರಿದಂತೆ ಪ್ರಮುಖ ವಿಮಾನಯಾನ ಸಂಸ್ಥೆಗಳು ವಿಮಾನ ಹಾರಾಟ ರದ್ದುಗೊಳಿಸಿವೆ.

ಗಾಂಧಿ-ಬುದ್ಧ-ಮಹಾವೀರ ನಡೆದಾಡಿದ ರಾಜ್ಯ ಬಿಹಾರ: ಇಲ್ಲಿನ ಜನರು ಈಗ ಬಯಸುತ್ತಿರುವುದಾದರೂ ಏನನ್ನು?

ಪಾಸ್ವಾನ್ ಭದ್ರಕೋಟೆಯಲ್ಲಿ ಪರಿವರ್ತನೆಗೆ ಮತವೇ?

ಬಿಹಾರ ರಾಜಧಾನಿ ಪಟನಾದಿಂದ ಪಕ್ಕದ ವೈಶಾಲಿ ಜಿಲ್ಲೆಯ ಹಾಜಿಪುರಕ್ಕೆ ಹೋಗಬೇಕೆಂದರೆ 6 ಕಿಮೀ ಉದ್ದದ ಗಾಂಧಿ ಸೇತು ದಾಟಿಯೇ ಹೋಗಬೇಕು. ಉತ್ತರ ಮತ್ತು ದಕ್ಷಿಣ ಬಿಹಾರ ಸಂಪರ್ಕಿಸುವ ಮಹತ್ವದ ಸೇತುವೆ ಇದು. ಕೆಲವೊಮ್ಮೆ ಟ್ರಾಫಿಕ್ ಹೆಚ್ಚಾದರೆ ಗಂಟೆಗಟ್ಟಲೆ ವಾಹನಗಳು ಸೇತುವೆ ಮೇಲೆಯೇ ನಿಂತಿರಬೇಕಾಗುತ್ತದೆ.

ಆದರೆ, ಈಗ ಪಟನಾ ಸುಗಮ ಸಂಚಾರಕ್ಕಾಗಿ ಹೊಸದಾಗಿ ಜಯಪ್ರಕಾಶ ನಾರಾಯಣ (ಜೆಪಿ) ರೈಲ್-ರಸ್ತೆ ಸೇತುವೆ ನಿರ್ಮಾಣಗೊಂಡಿದ್ದು, ಹಾಜಿಪುರಕ್ಕೆ ಇದರ ಮೂಲಕವೂ ತೆರಳಬಹುದಾಗಿದೆ. ಇದು ಭಾರತದ ಎರಡನೇ ಅತಿ ಉದ್ದದ (4.5 ಕಿಮೀ) ರೈಲು-ಕಮ್-ರೋಡ್ ಸೇತುವೆಯಾಗಿದೆ. ರೈಲ್ವೇ ಬ್ರಿಜ್ 2016ರಲ್ಲಿ ಉದ್ಘಾಟನೆಗೊಂಡಿದ್ದರೆ, 2025ರ ಏಪ್ರಿಲ್‌ನಲ್ಲಿ ರಸ್ತೆ ಸೇತುವೆ ಲೋಕಾರ್ಪಣೆಗೊಂಡಿದೆ.

ಪಟನಾದಲ್ಲಿ ಮೆಟ್ರೋ ಕಾಮಗಾರಿ ಕೂಡ ಭರದಿಂದ ಸಾಗುತ್ತಿದ್ದು, ಬದಲಾವಣೆಗೆ ರಾಜ್ಯ ತೆರೆದುಕೊಂಡಿದೆ. ಗಂಗಾ ನದಿ ದಡದ ಮೆರೈನ್ ಡ್ರೈವ್‌ನಲ್ಲಿ ಸಂಜೆ ವೇಳೆ ಪಟನಾ ನಿವಾಸಿಗಳು ವಿಹಾರಕ್ಕೆ ಬರುತ್ತಿದ್ದಾರೆ. ರಾತ್ರಿ 10ರ ನಂತರವೂ ಪಟನಾ ಜನರು ನಿರಾತಂಕವಾಗಿ ಓಡಾಡುತ್ತಿದ್ದಾರೆ. 20 ವರ್ಷಗಳ ಹಿಂದೆ ಇಂಥ ದೃಶ್ಯ ಕಲ್ಪಿಸಿಕೊಳ್ಳಲೂ ಸಾಧ್ಯವಿರಲಿಲ್ಲ. ಪಟನಾದ ಬನ್ನಿ ವಿಹಾರ್ ಸೌತ್ ಇಂಡಿಯನ್ ಹೋಟೆಲ್‌ನಲ್ಲಿ 'ವಿಶ್ವವಾಣಿ' ಜತೆ ಮಾತನಾಡಿದ ಎಂಜಿನಿಯರ್ ರಾಕೇಶ್ ಕುಮಾರ್, ಎನ್‌ಡಿಎ ಮೈತ್ರಿಕೂಟವೇ ಇಲ್ಲಿ ಅಧಿಕಾರಕ್ಕೆ ಬರಬೇಕು ಎಂಬ ತಮ್ಮ ಆಶಯಕ್ಕೆ ಈ ಮೇಲಿನ ಅಂಶಗಳನ್ನೇ ಕಾರಣವಾಗಿ ನೀಡಿದರು. ಅಲ್ಲಿ ಮಾತುಕತೆ ಮುಗಿಸಿ, ಜೆಪಿ ಸೇತು ದಾಟಿ ಹಾಜಿಪುರಕ್ಕೆ ತೆರಳುತ್ತಿದ್ದಂತೆ ಮತ್ತದೆ ಹಳೆ ಬಿಹಾರವೇ ಕಣ್ಣ ಮುಂದೆ ಬಂದಂತಾಯಿತು. ಇಲ್ಲಿ ಯುವಕರನ್ನು ನಿರುದ್ಯೋಗ ಬಾಧಿಸುತ್ತಿದ್ದರೆ, ರಸ್ತೆ, ಆಸ್ಪತ್ರೆಯಂತಹ ಮೂಲಸೌಕರ್ಯಗಳಿಂದ ಜನತೆ ಈಗಲೂ ವಂಚಿತರಾಗಿದ್ದಾರೆ. ಸರಿಯಾದ ಆಸ್ಪತ್ರೆಗಳಿಲ್ಲದೆ, ಎಲ್ಲದಕ್ಕೂ ಪಟನಾವನ್ನೇ ಅವಲಂಬಿಸಬೇಕಾದ ದುಸ್ಥಿತಿಯಿದೆ.

ಹಾಜಿಪುರ ವೈಶಾಲಿ ಜಿಲ್ಲೆಗೆ ಒಳಪಟ್ಟಿದ್ದರೂ, ಜಿಲ್ಲಾ ಕೇಂದ್ರ ಹಾಜಿಪುರದಲ್ಲೇ ಇದೆ. 'ಎಲ್‌ಜೆಪಿ' ಪಕ್ಷದ ಸ್ಥಾಪಕ ದಿ.ರಾಮ್ ವಿಲಾಸ್ ಪಾಸ್ವಾನ್ ಅವರ ಕರ್ಮಭೂಮಿ ಹಾಜಿಪುರ. ಇಲ್ಲಿಂದ 9 ಬಾರಿ ಸಂಸದರಾಗಿ ಆಯ್ಕೆಯಾಗಿದ್ದ ಪಾಸ್ವಾನ್, ಬಹುಪಾಲು ಸರಕಾರಗಳಲ್ಲಿ ಕೇಂದ್ರ ಮಂತ್ರಿಯಾಗಿದ್ದರು. ಈಗ ಪುತ್ರ ಚಿರಾಗ್ ಪಾಸ್ವಾನ್ ಇದೇ ಕ್ಷೇತ್ರದಿಂದ ಲೋಕಸಭೆಗೆ ಆಯ್ಕೆಯಾಗಿ ಕೇಂದ್ರ ಮಂತ್ರಿಯಾಗಿದ್ದಾರೆ. 2019ರಲ್ಲಿ ರಾಮ್ ವಿಲಾಸ್ ಸೋದರ ಪಶುಪತಿನಾತ್ ಪರಸ್ ಇದೇ ಕ್ಷೇತ್ರದಿಂದ ಸಂಸದರಾಗಿದ್ದರು. ಹಾಗಾಗಿ ಇದು ಪಾಸ್ವಾನ್ ಕುಟುಂಬದ ಭದ್ರಕೋಟೆ. ರಾಮ್ ವಿಲಾಸ್ ನಿಧನದ ನಂತರ ಪಶುಪತಿನಾಥ್ ಮತ್ತು ಚಿರಾಗ್ ಪಾಸ್ವಾನ್ ನಡುವೆ ಪಕ್ಷ ಇಬ್ಭಾಗಗೊಂಡಿತು.

ಅಸಮಾಧಾನದ ಧ್ವನಿ: ಮೋದಿ ಜಿ ತಮ್ಮ ಹನುಮಾನ್ 'ಚಿರಾಗ್ ಪಾಸ್ವಾನ್' ಪ್ರತಿನಿಧಿಸುವ ಹಾಜಿಪುರ ಪಟ್ಟಣ ಹೇಗಿದೆ ಎಂಬುದನ್ನು ನೋಡಲು ಒಮ್ಮೆ ಬರಬೇಕು ಎಂದು ಮಾತಿಗಿಳಿದ ಮನೋಜ್ ಕುಮಾರ್ ಕುಶ್ವಾಹ, ಹಾಜಿಪುರ ಕ್ಷೇತ್ರದಲ್ಲಿ ಬಿಜೆಪಿ ಶಾಸಕ ಅವಧೇಶ್ ಕುಮಾರ್ ಸಿಂಗ್ ಬಗ್ಗೆ ತೀವ್ರ ಅಸಮಾಧಾನ ಹೊರಹಾಕಿದರು. ನಿತೀಶ್-ಮೋದಿ ಬಗ್ಗೆ ನಮಗೆ ಖುಷಿಯಿದೆ, ಆದರೆ ಅವಧೇಶ್ ಸಿಂಗ್ ಕೆಲಸ ಮಾಡುವುದಿಲ್ಲ. ಜೋರಾಗಿ ಮಳೆ ಬಂದಾಗ ಗಂಗಾ ನಾಲೆ ತುಂಬಿ ಹಾಜಿಪುರಕ್ಕೆ ಹರಿದುಬರುತ್ತದೆ. ಮನೆ ಒಳಗೆಲ್ಲಾ ನೀರು. ಜನರಿಗೆ ಸಾಕಾಗಿ ಹೋಗಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು. ಹಾಜಿಪುರದಲ್ಲಿ ಗಾಂಧಿ ಆಶ್ರಮವೊಂದಿದೆ. ಒಳಭಾಗದಲ್ಲಿ 1961ರಲ್ಲಿ ಆಯ್ಕೆಯಾದ ಬಿಹಾರದ 2ನೇ ಮುಖ್ಯಮಂತ್ರಿ ದೀಪ್ ನಾರಾಯಣ ಸಿಂಗ್ ಅವರ ಸ್ಮಾರಕವೂ ಇದೆ. ಗಾಂಧೀಜಿಯವರ ಅಸಹಕಾರ ಚಳವಳಿಗೆ ಸಂಬಂಧಿಸಿ ವೈಶಾಲಿ ಮತ್ತು ಹಾಜಿಪುರದ ಆಶ್ರಮದಲ್ಲಿ ಮಹತ್ವದ ಸಭೆಗಳು ನಡೆದಿದ್ದವು. ಸ್ವಾತಂತ್ರ್ಯ ಸಂಗ್ರಾಮದ ಐತಿಹಾಸಿಕ ನೆಲೆ ಈ ಹಾಜಿಪುರ.

ರಾಘವ ಶರ್ಮ ನಿಡ್ಲೆ
ವಿಶ್ವವಾಣಿ ಸಾಕ್ಷಾತ್ ವರದಿ
ಬಿಹಾರ ಯಾತ್ರೆ

ವಿಪರ್ಯಾಸ ಎಂದರೆ, ಈಗ ಈ ಗಾಂಧಿ ಆಶ್ರಮ ಯಾರಿಗೂ ಬೇಡವಾಗಿದೆ. ಸುತ್ತಮುತ್ತ ಗಲೀಜು, ಚರಂಡಿ, ಕಸಕಡ್ಡಿಗಳು ತುಂಬಿವೆ. ನಗರ ನಿಗಮ ಕಸ ಇಲ್ಲಿ ಹಾಕಿ ಎಂಬ ದೊಡ್ಡ ಬೋರ್ಡ್ ಹಾಕಿದ್ದರೂ, ತ್ಯಾಜ್ಯ ಹಾಕಲು ಯಾವುದೇ ವ್ಯವಸ್ಥೆ ಇಲ್ಲ. ಗಾಂಧೀಜಿಯ ಸ್ವಚ್ಛತೆ ಪರಿಕಲ್ಪನೆಯನ್ನೇ ಅವಮಾನಿಸುವಂತಿದೆ ಆಶ್ರಮದ ಪರಿಸರ.

'ನಮ್ಮ ಹಾಜಿಪುರ ಕೂಡ ಸ್ವಚ್ಛವಾಗಬೇಕು' ಎಂದು ಬಯಸುವ ಮನೋಜ್ ಕುಶ್ವಾಹ, 'ಕರ್ನಾಟಕದವರಾದ ನಿಮಗೆ ಇಲ್ಲಿನ ಗಲೀಜು ನೋಡಿ ವಾಕರಿಕೆ ಬರುತ್ತಿರಬಹುದು. ನಮ್ಮ ಹಣೆಬರಹ ಹೀಗಿದೆ ನೋಡಿ' ಎಂದು ಆಶ್ರಮದಲ್ಲಿ ನಮ್ಮೊಂದಿಗೆ ಹೆಜ್ಜೆ ಹಾಕುತ್ತಾ ಹತಾಶರಾದರು.ಅಲ್ಲಿಂದ ಹೊರಬಂದು ವಾಪಸ್ ಪಟ್ಟಣದೊಳಗೆ ಪ್ರವೇಶಿಸುತ್ತಿದ್ದಂತೆಯೇ ರಸ್ತೆಗಳನ್ನು ತೋರಿಸಿದ ರವೀಂದ್ರ ಪ್ರಸಾದ್, 'ಹಾಳಾದ ರಸ್ತೆಯೇ ನಮಗೆ ಚುನಾವಣೆ ವಿಷಯ. ನಾವು ಬದಲಾವಣೆಗೆ ಮತ ಹಾಕುತ್ತಿದ್ದೇವೆ. ಕೇಂದ್ರ ಸಚಿವ ಗಡ್ಕರಿ ಅವರು ದೇಶದೆಲ್ಲೆಡೆ ರಸ್ತೆ ಮಾಡಿರಬಹುದು. ಆದರೆ ನಮ್ಮ ಹಾಜಿಪುರ ಸ್ಥಿತಿ ಕೇಳಬೇಡಿ' ಎಂದು ಕಿಡಿಕಾರಿದರು. ಗಂಗಾ ನಾಲೆಯಲ್ಲಿ ನೀರು ತುಂಬಿದರಂತೂ ಹಾಜಿಪುರ ನಿವಾಸಿಗಳ ಸ್ಥಿತಿ ಹೇಳತೀರದು.

ಕಳೆದ ಚುನಾವಣೆಯಲ್ಲಿ ಬಿಜೆಪಿಯ ಅವಧೇಶ್ ಕುಮಾರ್ ವಿರುದ್ಧ ಆರ್‌ಜೆಡಿಯ ದೇವ್ ಕುಮಾರ್ ಚೌರಾಸಿಯಾ ಇಲ್ಲಿ ಕೇವಲ 3000 ಮತಗಳಿಂದ ಸೋತರು. ಅವಧೇಶ್ ಕುಮಾರ್ ಈ ಸಲವೂ ಎನ್‌ಡಿಎ ಅಭ್ಯರ್ಥಿ. ಈ ಬಾರಿ ಹೆಚ್ಚಿರುವ ಜನವಿರೋಧಿ ಅಲೆ ನೋಡಿದರೆ ಪಾಸ್ವಾನ್ ಭದ್ರಕೋಟೆ ಹಾಜಿಪುರ ವಿಧಾನಸಭೆ ಕ್ಷೇತ್ರದಲ್ಲಿ ದೇವ್ ಚೌರಾಸಿಯ ಅವರೇ ಗೆಲುವಿನ ನಗೆ ಬೀರಿದರೂ ಅಚ್ಚರಿ ಇಲ್ಲ ಎನ್ನಲಾಗುತ್ತಿದೆ.

ವೈಶಾಲಿಯಲ್ಲಿ ಕಾಂಗ್ರೆಸ್ ವಿರುದ್ಧ ಆರ್‌ಜೆಡಿ: ಹಾಜಿಪುರದ ಬಳಿಕ ಸಿಗುವ ವೈಶಾಲಿ ಜೈನ ಧರ್ಮದ 24ನೇ ತೀರ್ಥಂಕರ ಮಹಾವೀರರು ಜನಿಸಿದ ನಾಡು. ಇಲ್ಲಿನ ಮಹಾವೀರ ಮಂದಿರ ಜೈನರ ಯಾತ್ರಾಸ್ಥಳ. ಅದೇ ರೀತಿ ಬೌದ್ಧ ಧರ್ಮದ ಗೌತಮ ಬುದ್ಧನ ಕಾರ್ಯಸ್ಥಳವೂ ವೈಶಾಲಿ. ಹೀಗಾಗಿ, ಇಂಡೋನೇಷ್ಯಾ, ಶ್ರೀಲಂಕಾ ಸೇರಿದಂತೆ ಅನೇಕ ದೇಶಗಳ ಪ್ರವಾಸಿಗರು ಇಲ್ಲಿಗೆ ಬರುತ್ತಿರುತ್ತಾರೆ. ಬೌದ್ಧ ಸ್ತೂಪಗಳಿರುವ ಪ್ರವಾಸಿ ಸ್ಥಳಗಳಲ್ಲಿ ಸಣ್ಣಮಟ್ಟಿನ ಅಭಿವೃದ್ಧಿ ಹಾಗೂ ಸ್ವಚ್ಛತೆ ಕಂಡು ಬರುವುದು ಬಿಟ್ಟರೆ ಉಳಿದಂತೆ, ವೈಶಾಲಿಯಲ್ಲಿ ಮೂಲಸೌಕರ್ಯದ್ದೇ ದೊಡ್ಡ ಸಮಸ್ಯೆ. ಹಾಜಿಪುರದಂತೆ, ಗುಣಮಟ್ಟದ ಆಸ್ಪತ್ರೆ, ಕಾಲೇಜುಗಳಿಲ್ಲ ಎನ್ನುವುದು ಜನರ ಗೋಳು. ಇಂತಿಪ್ಪ ವೈಶಾಲಿ ಕ್ಷೇತ್ರದಲ್ಲಿ ಈ ಬಾರಿ 'ಮಹಾಘಟಬಂಧನ್' ಅಭ್ಯರ್ಥಿಗಳ ನಡುವೆಯೇ ಸ್ಪರ್ಧೆ ಏರ್ಪಟ್ಟಿದೆ!

'ಇಂಡಿ' ಒಕ್ಕೂಟದ ಅಭ್ಯರ್ಥಿ ಘೋಷಣೆಗೆ ಮುನ್ನವೇ ಭೂಮಿಹಾರ್ ಸಮುದಾಯದ ಸಂಜೀವ್ ಕುಮಾರ್ ಕಾಂಗ್ರೆಸ್ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದು, ಆರ್‌ಜೆಡಿಯಿಂದ ಕುಶ್ವಾಹ ಸಮುದಾಯದ ಅಜಯ್ ಕುಶ್ವಾಹ ಕಣದಲ್ಲಿದ್ದಾರೆ. ಜೆಡಿಯುನ ಸಿದ್ಧಾರ್ಥ್ ಪಟೇಲ್ ಹಾಲಿ ಶಾಸಕ ಮತ್ತು ಎನ್‌ಡಿಎ ಅಭ್ಯರ್ಥಿ. ಅವರು ನಿತೀಶ್ ಕುಮಾರ್ ಪ್ರತಿನಿಧಿಸುವ ಕುರ್ಮಿ ಜನಾಂಗಕ್ಕೆ ಸೇರಿದವರು. ಎಲ್‌ಜೆಪಿಯಲ್ಲಿ ಟಿಕೆಟ್ ಸಿಗಲಿಲ್ಲ ಎಂದು ಆರ್‌ಜೆಡಿ ಸೇರಿದ ಅಜಯ್ ಕುಶ್ವಾಹಗೆ ಟಿಕೆಟ್ ಕೊಡುವ ಚರ್ಚೆ ಇದ್ದುದರಿಂದಲೇ ಕಾಂಗ್ರೆಸ್‌ನ ಸಂಜೀವ್ ಕುಮಾರ್ ಅಭ್ಯರ್ಥಿ ಘೋಷಣೆವರೆಗೂ ಕಾಯದೆ ಮೊದಲೇ ನಾಮಪತ್ರ ಸಲ್ಲಿಸಿದರು. ಜನ ಸುರಾಜ್ ಪಕ್ಷದಿಂದ ಕೂಡ ಭೂಮಿಹಾರ್ ಸಮುದಾಯದ, ನಿವೃತ್ತ ವೈದ್ಯ ಡಾ. ಸುನೀಲ್ ಕುಮಾರ್ ಸಿಂಗ್ ಅಭ್ಯರ್ಥಿ ಆಗಿದ್ದಾರೆ. ಹಾಗಾಗಿ ಮೇಲ್ವರ್ಗದ ಭೂಮಿಹಾರ್ ಮತಗಳ ವಿಭಜನೆ ಎನ್‌ಡಿಎಗೆ ಹಾನಿ ಮಾಡುವ ಲಕ್ಷಣ ಕಾಣುತ್ತಿದೆ.

ಸುಮಾರು 65 ಸಾವಿರದಷ್ಟು ಕುರ್ಮಿ ಜನರಿದ್ದರೂ, 58 ಸಾವಿರ ಯಾದವ, 32 ಸಾವಿರ ಮುಸ್ಲಿಂ, 20 ಸಾವಿರ ನಿಷಾದ್ (ಬೆಸ್ತ) ಸಮುದಾಯದ ಮತಗಳ ಒಗ್ಗೂಡುವಿಕೆ ಮಧ್ಯೆ ಸಂಜೀವ್ ಕುಮಾರ್, ಡಾ. ಸುನೀಲ್ ಕುಮಾರ್ ಸಿಂಗ್ ಎನ್‌ಡಿಎಯ ಭೂಮಿಹಾರ್ ಮತಗಳನ್ನು ಸೆಳೆಯಬಲ್ಲರು. ಹೀಗಾಗಿ, ಮಹಾಘಟಬಂಧನ್ ನಡುವೆ ಸ್ಪರ್ಧೆ ಏರ್ಪಟ್ಟರೂ, ಕಾಂಗ್ರೆಸ್ ಅಭ್ಯರ್ಥಿ ಭೂಮಿಹಾರ್ ಆಗಿರುವುದರಿಂದ ಆರ್‌ಜೆಡಿಗೆ ಯಾವುದೇ ಹಾನಿ ಆಗುವುದಿಲ್ಲ ಎಂದು ವೈಶಾಲಿಯ ತುರ್ಕಹಿಯಾ ಬಸ್ತಿ ಎಂಬ ಗ್ರಾಮೀಣ ಭಾಗದ ನಿವಾಸಿ ಜಯಪ್ರಕಾಶ್ ಯಾದವ್ ಹೇಳುತ್ತಾರೆ.

ದೊಡ್ಡಪ್ಪನೇ ವೈರಿ: ಇದೆಲ್ಲಕ್ಕಿಂತ ಮುಖ್ಯವಾಗಿ, ಹಿಂದೆ ನಿತೀಶ್ ಸರಕಾರದಲ್ಲಿ ಶಿಕ್ಷಣ ಮತ್ತು ಪರಿಸರ ಮಂತ್ರಿಯಾಗಿದ್ದ ವೃಷಿಣ್ ಪಟೇಲ್ (ಸಿದ್ಧಾರ್ಥ ಪಟೇಲ್ ದೊಡ್ಡಪ್ಪ) ಪಕ್ಷೇತರರಾಗಿ ಇಲ್ಲಿಂದ ಸ್ಪರ್ಧೆ ಮಾಡುತ್ತಿದ್ದಾರೆ. ವೈಶಾಲಿ ಕ್ಷೇತ್ರದಿಂದ 5 ಬಾರಿ ಶಾಸಕ, ರಾಜ್ಯದಲ್ಲಿ 3 ಬಾರಿ ಮಂತ್ರಿ ಹಾಗೂ ಒಮ್ಮೆ ಸಂಸದರಾಗಿದ್ದ ವೃಷಿಣ್ ಪಟೇಲ್, 2020ರ ಚುನಾವಣೆಯಲ್ಲಿ ತಮ್ಮ ಸೋದರನ ಪುತ್ರ ಸಿದ್ಧಾರ್ಥ ಪಟೇಲ್‌ರನ್ನು ಬೆಂಬಲಿಸಿದ್ದರು. ಆದರೆ, ನಂತರ ಜಮೀನು ವಿವಾದ ಉಂಟಾಗಿದ್ದರಿಂದ ಈ ಬಾರಿ ಸಿದ್ಧಾರ್ಥನನ್ನು ಸೋಲಿಸಲೇಬೇಕು ಎಂದು ಚುನಾವಣಾ ಅಖಾಡಕ್ಕಿಳಿದಿದ್ದಾರೆ. 'ಜನರಿಗಾಗಿ ನಾನು ನಿಸ್ವಾರ್ಥದಿಂದ ಕೆಲಸ ಮಾಡಿದೆ. ಆದರೆ ಸಿದ್ಧಾರ್ಥ ಪಟೇಲ್ ಎಲ್ಲಾ ಕೆಲಸಕ್ಕೂ ಹಣ ತೆಗೆದುಕೊಂಡು ಜನರಿಗೆ ತೊಂದರೆ ಉಂಟು ಮಾಡಿದ್ದಾನೆ' ಎಂದೇ ಪ್ರಚಾರ ಮಾಡುತ್ತಾ, ಸಿದ್ಧಾರ್ಥರನ್ನು ಸೋಲಿಸಲೇಬೇಕೆಂದು ವೃಷಿಣ್ ಪಟೇಲ್ ಪಣತೊಟ್ಟಿದ್ದಾರೆ.

ಭೂಮಿಹಾರರು ಬದಲಾದ ಬಗೆ: 1990ರ ದಶಕದ ತನಕ ಬಿಹಾರದ ಮೇಲ್ಜಾತಿಯ ಭೂಮಿಹಾರರು ಕಾಂಗ್ರೆಸ್ ಜತೆಗಿದ್ದರು. ಆದರೆ, ಮಂಡಲ್ ಆಯೋಗದ ವರದಿ ನಂತರ ಬದಲಾದ ರಾಜಕೀಯ ಚಿತ್ರಣ ಬಿಹಾರದ ಭೂಮಿಹಾರರನ್ನು ನಿಧಾನವಾಗಿ ಬಿಜೆಪಿ ಕಡೆ ಪರಿವರ್ತನೆಯಾಗುವಂತೆ ಮಾಡಿತು. 1995ರ ನಂತರದಲ್ಲಿ ಭೂಮಿಹಾರ್ ಸಮುದಾಯ ಎನ್‌ಡಿಎ ಮೈತ್ರಿಕೂಟದ ಅತಿದೊಡ್ಡ ಮತಬ್ಯಾಂಕ್ ಆಗಿದೆ. ವೈಶಾಲಿ ವಿಧಾನಸಭೆ ಕೂಡ ಇಂಥದ್ದೇ ಬದಲಾವಣೆಗೆ ಸಾಕ್ಷಿಯಾಗಿ ನಿಂತಿದೆ. 1967ರಿಂದ 1992ರ ತನಕ ಭೂಮಿಹಾರರೇ ಇಲ್ಲಿ ಶಾಸಕರಾಗಿ ಆಯ್ಕೆಯಾಗಿದ್ದರು. 1967ರಿಂದ 3 ಬಾರಿ ಆಯ್ಕೆಯಾದ ಲಲಿತೇಶ್ವರ್ ಶಾಹಿ, ನಂತರದಲ್ಲಿ ಅವರ ಪುತ್ರ ಹೇಮಂತ್ ಶಾಹಿ, ಅವರ ನಿಧನದ ನಂತರ ಶಾಸಕಿಯಾದ ಪತ್ನಿ ವೀಣಾ ಶಾಹಿಗೆ ಭೂಮಿಹಾರರದ್ದೇ ಪೂರ್ಣ ಬೆಂಬಲವಿತ್ತು. ಆದರೆ 1995ರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ತಿರಸ್ಕರಿಸಿದ ಭೂಮಿಹಾರರು, ಅದೇ ಸಮುದಾಯದ ಜನತಾದಳ ಪಕ್ಷದ ರಾಜ್‌ಕಿಶೋರ್ ಸಿಂಗ್ ಅವರನ್ನು ಆಯ್ಕೆ ಮಾಡಿದರು.

ಹಾಜಿಪುರದ ಹರೌಲಿ ಗ್ರಾಮದ ಮುಸಾರ್ಫಿ ಪಾಸ್ವಾನ್, ಕದಮ್ ರಸೂಲ್, ಜಗ್ಗು ಪಾಂಡೆ. ರಾಜಕೀಯ ಭಿನ್ನಾಭಿಪ್ರಾಯ ಇದ್ದರೂ ಸ್ನೇಹಕ್ಕೆ ಅಡ್ಡಿಯಾಗಿಲ್ಲ.

4 ಎನ್‌ಡಿಎ, 4 'ಇಂಡಿ'ಗೆ

ವೈಶಾಲಿ ಭಾಗದಲ್ಲಿ ವೈಶಾಲಿ ವಿಧಾನಸಭೆ ಜತೆಗೆ ಮಹುವಾ, ಹಾಜಿಪುರ, ಲಾಲ್‌ಗಂಜ್, ಮಹನಾರ್, ರಾಜಾಪರ್ಕ, ಫತೇಪುರ್, ರಾಘವಪುರ ಸೇರಿ 8 ಕ್ಷೇತ್ರಗಳಿವೆ. ಇದರಲ್ಲಿ 4 ಕ್ಷೇತ್ರಗಳಲ್ಲಿ ಬಿಜೆಪಿ ಗೆದ್ದಿದ್ದರೆ, ಉಳಿದ 4ರಲ್ಲಿ ಮಹಾಘಟಬಂಧನ್ ಶಾಸಕರಿದ್ದಾರೆ. ತೇಜಸ್ವಿ ಯಾದವ್ ಸ್ಪರ್ಧಿಸುವ ರಾಘವಪುರ ಮತ್ತು ಸೋದರ ತೇಜ್ ಪ್ರತಾಪ್ ಯಾದವ್, ಹೊಸದಾಗಿ ಆರಂಭಿಸಿದ 'ಜನಶಕ್ತಿ ಜನತಾದಳ' ಪಕ್ಷದಿಂದ ಸ್ಪರ್ಧಿಸುತ್ತಿರುವ ಮಹುವಾ ಕ್ಷೇತ್ರಗಳೂ ವೈಶಾಲಿ ಜಿಲ್ಲೆಯ ವ್ಯಾಪ್ತಿಯಲ್ಲೇ ಇವೆ. ಸೋದರ ತೇಜಸ್ವಿ ಯಾದವ್ ಸೋಲಬೇಕೆಂದೇ ರಾಘವಪುರದಲ್ಲೂ 'ಜನಶಕ್ತಿ ಜನತಾದಳ ಪಕ್ಷ'ದ ಅಭ್ಯರ್ಥಿಯನ್ನು ತೇಜ್ ಪ್ರತಾಪ್ ಕಣಕ್ಕಿಳಿಸಿದ್ದಾರೆ.

ಗಾಂಧಿ ಆಶ್ರಮದ ಎದುರೇ ತ್ಯಾಜ್ಯ ರಾಶಿ

ಹಾಜಿಪುರ ಮತ್ತು ಬಿಹಾರದಲ್ಲಿ ಬದಲಾವಣೆ ಬೇಕು. ಯುವಕರ ನಾಯಕತ್ವಕ್ಕಾಗಿ ನನ್ನ ಮತ ಲಾಲ್ಟೇನ್''ಗೆ (ಕಂದೀಲು-ಒಡಿ ಚಿಹ್ನೆ). ಬಿಹಾರಕ್ಕೆ ಮೋದಿ-ನಿತೀಶ್ ಬೇಕಾಗಿಲ್ಲ.

- ಕದಮ್ ರಸೂಲ್, ಹಾಜಿಪುರ

ನಾವು ಚಿರಾಗ್ ಪಾಸ್ವಾನ್ ಮತ್ತು ಬಿಜೆಪಿ ಜತೆಗಿದ್ದೇವೆ. ಎನ್‌ಡಿಎ ಬಂದ ಬಳಿಕ ಬಿಹಾರ ಬದಲಾಗಿದೆ. ಇಲ್ಲದಿದ್ದರೆ ಈ ಇಳಿಸಂಜೆ 6 ಗಂಟೆಗೆ ಮನೆಯಿಂದ ಹೊರಬಂದು ನಿಮ್ಮೊಂದಿಗೆ ಮಾತನಾಡಲು ಸಾಧ್ಯವಿರುತ್ತಿತ್ತಾ?

- ಜಗ್ಗು ಪಾಂಡೆ ಮತ್ತು ಮುಸಾಫಿರ್ ಪಾಸ್ವಾನ್
ಹಾಜಿಪುರದ ಹರೌಲಿ ಗ್ರಾಮಸ್ಥರು

ಸಮಾಚಾರ ಸಣ್ಣದಲ್ಲ

ಕೀನ್ಯಾದಲ್ಲಿ ವಿಮಾನ ಅಪಘಾತ: 11 ಸಾವು

ನೈರೋಬಿ: ಮಂಗಳವಾರ ಬೆಳಗ್ಗೆ ಕೀನ್ಯಾದ ಕರಾವಳಿ ಪ್ರದೇಶ ಕ್ವಾಲೆಯಲ್ಲಿ ಮಾಸಾಯಿ ಮಾರಾ ರಾಷ್ಟ್ರೀಯ ಅಭಯಾರಣ್ಯಕ್ಕೆ ತೆರಳುತ್ತಿದ್ದ ಸಣ್ಣ ವಿಮಾನವೊಂದು ಅಪಘಾತಕ್ಕೀಡಾಗಿದ್ದು, 11 ಜನರು ಸಾವನ್ನಪ್ಪಿರುವ ಶಂಕೆ ವ್ಯಕ್ತವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಡಯಾನಿ ವಾಯು ನೆಲೆಯಿಂದ ಸುಮಾರು 40 ಕಿಲೋ ಮೀಟರ್ ದೂರದಲ್ಲಿರುವ ಗುಡ್ಡಗಾಡು ಪ್ರದೇಶದಲ್ಲಿ ಈ ಅಪಘಾತ ಸಂಭವಿಸಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಕ್ವಾಲೆ ಕೌಂಟಿ ಆಯುಕ್ತ ಸ್ಟೀಫನ್ ಒರಿಂಡೆ ಅಸೋಸಿಯೇಟೆಡ್ ಈ ಬಗ್ಗೆ ಮಾತನಾಡಿ, ಪ್ರಯಾಣಿಕರೆಲ್ಲರೂ ವಿದೇಶಿ ಪ್ರವಾಸಿಗರು ಎಂದು ತಿಳಿಸಿದ್ದಾರೆ. ಮೃತರ ಪೈಕಿ 8 ಮಂದಿ ಹಂಗೇರಿ ಪ್ರಜೆಗಳು, ಇಬ್ಬರು ಜರ್ಮನ್ ಪ್ರಯಾಣಿಕರು ಮತ್ತು ಕೀನ್ಯಾದ ಕ್ಯಾಪ್ಟನ್ ಎಂದು ಗುರುತಿಸಲಾಗಿದೆ. ಅಪಘಾತದ ಬಳಿಕ ವಿಮಾನದಲ್ಲಿ ಬೆಂಕಿ ಕಾಣಿಸಿಕೊಂಡು ಸಂಪೂರ್ಣ ಸುಟ್ಟು ಭಸ್ಮವಾಗಿದೆ. ಅಪಘಾತಕ್ಕೆ ಕಾರಣ ಇನ್ನೂ ಸ್ಪಷ್ಟವಾಗಿಲ್ಲ. ಈ ಬಗ್ಗೆ ಅಧಿಕಾರಿಗಳಿ ತನಿಖೆ ಕೈಗೆತ್ತಿಕೊಂಡಿದ್ದಾರೆ. ಕೆಟ್ಟ ಹವಾಮಾನದ ಕಾರಣದಿಂದ ಅಪಘಾತ ಸಂಭವಿಸಿರುವ ಸಾಧ್ಯತೆ ಇದೆ ಎಂದು ಊಹಿಸಲಾಗಿದೆ. ವಿಮಾನದಲ್ಲಿ ಒಟ್ಟು 11 ಮಂದಿ ಪ್ರಯಾಣಿಕರಿದ್ದರು, ಈ ಪೈಕಿ ಯಾರೂ ಬದುಕುಳಿದಿಲ್ಲ ಎಂದು ಕೀನ್ಯಾ ನಾಗರಿಕ ವಿಮಾನಯಾನ ಪ್ರಾಧಿಕಾರ ತಿಳಿಸಿದೆ.

ಬಿಷ್ಣೋಯ್ ಗ್ಯಾಂಗ್: ಮತ್ತೊರ್ವನ ಸೆರೆ

ದೆಹಲಿ: ಕೆನಾಡಾದಿಂದ ಇತ್ತೀಚೆಗೆ ಭಯೋತ್ಪಾದಕ ಗುಂಪು ಎಂದು ಗುರುತಿಸಲ್ಪಟ್ಟಿರುವ ಲಾರೆನ್ಸ್ ಬಿಷ್ಣೋಯ್ ಗ್ಯಾಂಗ್‌ನ ಸದಸ್ಯ ಜಗ್ದೀಪ್ ಸಿಂಗ್ ಅಲಿಯಾಸ್ ಜಗ್ಗಾನನ್ನು ಯುಎಸ್-ಕೆನಡಾ ಗಡಿ ಬಳಿ ರಾಜಸ್ಥಾನದ ಗ್ಯಾಂಗ್‌ಸ್ಟರ್ ವಿರೋಧಿ ಕಾರ್ಯಪಡೆ ಮತ್ತು ಯುಎಸ್ ವಲಸೆ ಮತ್ತು ಕಸ್ಟಮ್ಸ್ ಜಾರಿ ಸಂಸ್ಥೆ ಬಂಧಿಸಿದೆ. ಹಲವು ವರ್ಷಗಳ ಹಿಂದೆ ಜಗ್ದೀಪ್ ಸಿಂಗ್ ಅಲಿಯಾಸ್ ಜಗ್ಗಾ ಭಾರತದಿಂದ ಪರಾರಿಯಾಗಿದ್ದನು. ಅಂತಾರಾಷ್ಟ್ರೀಯ ಕಾನೂನು ಜಾರಿ ಸಂಸ್ಥೆಗಳ ಸಹಯೋಗದೊಂದಿಗೆ ರಾಜಸ್ಥಾನದ ಗ್ಯಾಂಗ್ ಸ್ಟರ್ ವಿರೋಧಿ ಕಾರ್ಯಪಡೆ ಮತ್ತು ಯುಎಸ್ ವಲಸೆ ಮತ್ತು ಕಸ್ಟಮ್ಸ್ ಜಾರಿ ಸಂಸ್ಥೆ ಜಂಟಿಯಾಗಿ ಕಾರ್ಯಾಚರಣೆ ನಡೆಸಿ ಕುಖ್ಯಾತ ಲಾರೆನ್ಸ್ ಬಿಷ್ಣೋಯ್ ಗ್ಯಾಂಗ್‌ನ ಪ್ರಮುಖ ಸದಸ್ಯನಾಗಿರುವ ಜಗದೀಪ್ ಸಿಂಗ್ ನನ್ನು ಯುಎಸ್ ಮತ್ತು ಕೆನಡಾ ಗಡಿಯ ಬಳಿ ಬಂಧಿಸಿದೆ.

ಛತ್‌ಪೂಜೆ ವೇಳೆ 15 ಮಂದಿ ನೀರುಪಾಲು

ರಾಂಚಿ: ಸೋಮವಾರ ಮತ್ತು ಮಂಗಳವಾರ ಜಾರ್ಖಂಡ್‌ನಾದ್ಯಂತ ನಡೆದ ಛತ್ ಪೂಜೆ ಆಚರಣೆಯ ಸಮಯದಲ್ಲಿ ಕನಿಷ್ಠ 15 ಜನರು ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ. ಹೆಚ್ಚಿನ ಮಂದಿ ಕೊಳಗಳು ಮತ್ತು ನದಿಗಳಲ್ಲಿ ಪ್ರಾರ್ಥನೆ ಸಲ್ಲಿಸುವಾಗ ಅಥವಾ ಸ್ನಾನ ಮಾಡುವಾಗ ಮುಳುಗಿ ಸಾವನ್ನಪ್ಪಿದ್ದಾರೆ ಎಂದು ವರದಿಯಾಗಿದೆ. ಛತ್ ಪೂಜೆಯ ನಂತರ ಹುಡುಗಿಯರು ಬಟ್ಟೆ ತೊಳೆಯಲು ಹತ್ತಿರದ ಕೊಳಕ್ಕೆ ಹೋಗಿದ್ದರು. ಬಟ್ಟೆ ತೊಳೆಯುವಾಗ, ಹುಡುಗಿಯರಲ್ಲಿ ಒಬ್ಬರು ಕೊಳಕ್ಕೆ ಬಿದ್ದು ಆಕೆಯನ್ನು ಉಳಿಸಲು ಪ್ರಯತ್ನದಲ್ಲಿ ಒಬ್ಬೊಬ್ಬರಾಗಿ ನಾಲ್ವರು ಹುಡುಗಿಯರು ಆಳವಾದ ಕೊಳಕ್ಕೆ ಬಿದ್ದು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಮೃತರನ್ನು ರಿಂಕಿ ಕುಮಾರಿ (16), ಪೂಜಾ ಕುಮಾರಿ (20), ಸಾಕ್ಷಿ ಕುಮಾರ್ (16), ಮತ್ತು ರಿಯಾ ಕುಮಾರಿ (14) ಎಂದು ಗುರುತಿಸಲಾಗಿದೆ. ಸೋಮವಾರ ಐದು ಮಕ್ಕಳು ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮಾನಹಾನಿ ಪ್ರಕರಣ: ಕಂಗನಾಗೆ ಜಾಮೀನು

ಬಂಠಿಡಾ(ಚಂಡೀಗಢ): ಮಾನಹಾನಿ ಪ್ರಕರಣಕ್ಕೆ

ಸಂಬಂಧಿಸಿದಂತೆ ಬಿಜೆಪಿ ಸಂಸದೆ, ನಟಿ ಕಂಗನಾ ರನೌತ್‌ಗೆ ಪಂಜಾಬ್‌ನ ಬಂಠಿಡಾ ನ್ಯಾಯಾಲಯವು ಜಾಮೀನು ನೀಡಿದೆ. ತಮ್ಮ ಸಾಮಾಜಿಕ ಮಾಧ್ಯಮದಲ್ಲಿ ಹಾಕಿದ ಪೋಸ್ಟ್ ಕುರಿತಂತೆ ವಿಷಾದ ವ್ಯಕ್ತಪಡಿಸಿದರು. ಅಲ್ಲದೇ, ಪ್ರತಿಯೊಬ್ಬರ ತಾಯಿ ಕುರಿತು ಗೌರವ ಹೊಂದಿದ್ದೇನೆ ಎಂದು ನ್ಯಾಯಾಲಯಕ್ಕೆ ತಿಳಿಸಿದರು. ಹಿಮಾಚಲ ಪ್ರದೇಶದ ಮಂಡಿ ಲೋಕಸಭಾ ಕ್ಷೇತ್ರದ ಸಂಸದೆಯಾಗಿರುವ ಕಂಗನಾ ಅವರು ವಿಡಿಯೊ ಕಾನ್ಫರೆನ್ಸ್ ಮೂಲಕ ವಿಚಾರಣೆಗೆ ಹಾಜರಾಗಲು ಅವಕಾಶ ನೀಡಬೇಕು ಎಂದು ಕಳೆದ ಸೆಪ್ಟೆಂಬರ್‌ನಲ್ಲಿ ನ್ಯಾಯಾಲಯಕ್ಕೆ ಮನವಿ ಮಾಡಿದ್ದರು. ಆದರೆ ಇದಕ್ಕೆ ನ್ಯಾಯಾಲಯ ಅವಕಾಶ ನೀಡಿರಲಿಲ್ಲ. ಮಂಗಳವಾರ ನ್ಯಾಯಾಲಯದ ಖುದ್ದು ಹಾಜರಾದ ಹಿನ್ನೆಲೆಯಲ್ಲಿ ನ್ಯಾಯಾಲಯದ ಸುತ್ತಲೂ ಗರಿಷ್ಠ ಭದ್ರತೆ ಕೈಗೊಳ್ಳಲಾಗಿತ್ತು. 2020-21ರ ರೈತ ಹೋರಾಟದ ವೇಳೆ ಮಹಿಳಾ ಹೋರಾಟಗಾರರ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿರುವ ಆರೋಪದಲ್ಲಿ ಅವರ ವಿರುದ್ಧ ಪ್ರಕರಣ ದಾಖಲಾಗಿತ್ತು.

ವೈದ್ಯರ ಬಗ್ಗೆ ಕಾಳಜಿ ವಹಿಸದಿದ್ದರೆ ನ್ಯಾಯಾಂಗವನ್ನು ಸಮಾಜ ಕ್ಷಮಿಸದು: ಸುಪ್ರೀಂ ಕೋರ್ಟ್

ನ್ಯಾಯಾಂಗಕ್ಕೆ ವೈದ್ಯರ ಬಗ್ಗೆ ಕಾಳಜಿ ಇರಲಿ

ದೆಹಲಿ: ವೈದ್ಯರ ಬಗ್ಗೆ ಕಾಳಜಿ ವಹಿಸದೇ

ಇದ್ದರೆ ಮತ್ತು ಅವರ ಪರವಾಗಿ ನಾವು ನಿಲ್ಲದೇ ಇದ್ದರೆ ನ್ಯಾಯಾಂಗವನ್ನು ಸಮಾಜ ಕ್ಷಮಿಸುವುದಿಲ್ಲ ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿತು. ಇದೇ ವೇಳೆ ಕೋವಿಡ್ ಸಾಂಕ್ರಾಮಿಕ ರೋಗದ ಸಂದರ್ಭದಲ್ಲಿ ಖಾಸಗಿ ವೈದ್ಯರು ಲಾಭಕ್ಕಾಗಿ ಕೆಲಸ ಮಾಡಿದ್ದಾರೆ ಎಂಬ ವಾದವನ್ನು ಕೋರ್ಟ್ ಖಂಡಿಸಿತು.

ಖಾಸಗಿ ಆಸ್ಪತ್ರೆಗಳು ಮತ್ತು ಮಾನ್ಯತೆ ಪಡೆಯದ ಆಸ್ಪತ್ರೆಗಳಲ್ಲಿ ಕೋವಿಡ್ ವಿರುದ್ಧ ಹೋರಾಡಿ ಪ್ರಾಣ ಕಳೆದುಕೊಂಡ ವೈದ್ಯರು ಮತ್ತು ಆರೋಗ್ಯ ಕಾರ್ಯಕರ್ತರನ್ನು ವಿಮಾ ಪಾಲಿಸಿಗಳಲ್ಲಿ ಸೇರಿಸದಿರುವ ವಿರುದ್ಧದ ಅರ್ಜಿಯ ತೀರ್ಪು ಕಾಯ್ದಿರಿಸಿದ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಮತ್ತು ಆರ್. ಮಹಾದೇವನ್ ಅವರಿದ್ದ ಪೀಠ ಈ ಅಭಿಪ್ರಾಯ



ವ್ಯಕ್ತಪಡಿಸಿದೆ. ವಿಮಾ ಕಂಪನಿಗಳು ಅರ್ಹ ಕ್ಲೈಮ್‌ಗಳನ್ನು ಇತ್ಯರ್ಥಪಡಿಸುವುದನ್ನು ಸರಕಾರ ಖಚಿತ ಪಡಿಸಿಕೊಳ್ಳಬೇಕು. ಕೋವಿಡ್ ವೇಳೆ ಕಾರ್ಯ ನಿರ್ವಹಿಸಿದ್ದಾರೆ ಮತ್ತು ಕೋವಿಡ್‌ನಿಂದಾಗಿ ಸಾವನ್ನಪ್ಪಿದ್ದಾರೆ ಎಂಬ ಷರತ್ತು ಪೂರೈಸಿದರೆ ವಿಮಾ ಕಂಪನಿ ಕ್ಲೈಮ್ ಪಾವತಿಸುವಂತೆ ನೀವು ನಿರ್ದೇಶನ ನೀಡಬೇಕು ಎಂದು ಕೋರ್ಟ್ ಮೌಖಿಕ ಆದೇಶದಲ್ಲಿ ಸೂಚನೆ ನೀಡಿದೆ. ಇದೇ ವೇಳೆ ಖಾಸಗಿ ವೈದ್ಯರು ಲಾಭಕ್ಕಾಗಿ ಕೆಲಸ ಮಾಡುತ್ತಿದ್ದಾರೆ ಎಂಬ ಊಹೆಯೂ ಸರಿಯಲ್ಲ. ವೈದ್ಯರು ಸರಕಾರಿ ಕರ್ತವ್ಯದಲ್ಲಿಲ್ಲ ಮತ್ತು ಅವರು ಲಾಭ ಗಳಿಸುತ್ತಿದ್ದಾರೆ ಎಂದು ಭಾವಿಸುವುದು ಕೂಡಾ ಸರಿಯಲ್ಲ ಎಂದು ಪೀಠ ಹೇಳಿದೆ. ಪ್ರಧಾನಮಂತ್ರಿ ವಿಮಾ ಯೋಜನೆಯ ಹೊರತಾಗಿ ಲಭ್ಯವಿರುವ ಇತರ ರೀತಿಯ ಅಥವಾ ಸಮಾನಾಂತರ ಯೋಜನೆಗಳಿಗೆ ಸಂಬಂಧಿಸಿದ ದತ್ತಾಂಶಗಳು ಮತ್ತು ಮಾಹಿತಿ ದಾಖಲಿಸುವಂತೆ ಪೀಠವು ಕೇಂದ್ರ ಸರಕಾರಕ್ಕೆ ತಿಳಿಸಿದೆ. ನಾವು ಇದಕ್ಕೆ ನಿಯಮಗಳನ್ನು ರೂಪಿಸುತ್ತೇವೆ. ಅದರ ಆಧಾರದ ಮೇಲೆ ವಿಮಾ ಕಂಪನಿಗೆ ಹಕ್ಕು ಸಲ್ಲಿಸಬಹುದು. ನಮ್ಮ ತೀರ್ಪಿನ ಆಧಾರದ ಮೇಲೆ ವಿಮಾ ಕಂಪನಿ ಪರಿಗಣಿಸಿ ಆದೇಶಗಳನ್ನು ಹೊರಡಿಸ ಬಹುದು ಎಂದು ಪೀಠ ಹೇಳಿದೆ.

2021ರ ಮಾರ್ಚ್ 9ರಂದು ಬಾಂಬೆ ಹೈಕೋರ್ಟ್‌ನ ಆದೇಶದ ವಿರುದ್ಧ ಪ್ರದೀಪ್ ಅರೋರಾ ಮತ್ತಿತರರು ಸಲ್ಲಿಸಿರುವ ಅರ್ಜಿಯನ್ನು ಪೀಠ ವಿಚಾರಣೆ ನಡೆಸಿದೆ. ರಾಜ್ಯ ಅಥವಾ ಕೇಂದ್ರ ಸರಕಾರ ಅವರ ಸೇವೆಗಳನ್ನು ಕೋರಿರದ ಹೊರತು, ಖಾಸಗಿ ಆಸ್ಪತ್ರೆಯ ಸಿಬ್ಬಂದಿ ವಿಮಾ ಯೋಜನೆಯಡಿ ಪ್ರಯೋಜನ ಪಡೆಯಲು ಅರ್ಹರಲ್ಲ ಎಂದು ಹೈಕೋರ್ಟ್ ತೀರ್ಪು ನೀಡಿತ್ತು.

ಪ್ರಕರಣದ ಹಿನ್ನೆಲೆ

2020ರಲ್ಲಿ ಥಾಣೆಯಲ್ಲಿ ಖಾಸಗಿ ಕ್ಲಿನಿಕ್ ನಡೆಸುತ್ತಿದ್ದ ತಮ್ಮ ಪತಿಯನ್ನು ಕೋವಿಡ್ ರೋಗದಿಂದ ಕಳೆದುಕೊಂಡಿದ್ದ ಕಿರಣ್ ಭಾಸ್ಕರ್ ಸುರ್ಗಡೆ ಎಂಬವರು ಸಲ್ಲಿಸಿದ್ದ ಅರ್ಜಿಯ ಮೇರೆಗೆ ಬಾಂಬೆ ಹೈಕೋರ್ಟ್ ಈ ಆದೇಶ ಹೊರಡಿಸಿತ್ತು. ಪತಿಯ ಕ್ಲಿನಿಕ್ ಅನ್ನು ಕೋವಿಡ್ ಆಸ್ಪತ್ರೆ ಎಂದು ಗುರುತಿಸಲಾಗಿಲ್ಲ ಎಂಬ ಕಾರಣಕ್ಕೆ ವಿಮಾ ಕಂಪನಿ ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ್ ಪ್ಯಾಕೇಜ್ ಅಡಿಯಲ್ಲಿ ಅವರ ಹಕ್ಕನ್ನು ತಿರಸ್ಕರಿಸಿತ್ತು. ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ್ ಪ್ಯಾಕೇಜ್ ಅನ್ನು ಮಾರ್ಚ್ 2020ರಲ್ಲಿ ಘೋಷಿಸಲಾಗಿದೆ. ಅಂದಿನಿಂದ ಅದರ ವ್ಯಾಪ್ತಿಯನ್ನು ವಿಸ್ತರಿಸಲಾಗಿದೆ. ಯೋಜನೆಯಡಿ ಆರೋಗ್ಯ ಕಾರ್ಯ ಕರ್ತರಿಗೆ 50 ಲಕ್ಷ ರು.ಗಳ ವಿಮಾ ರಕ್ಷಣೆ ಒದಗಿಸಲಾಗಿದೆ. ಇದು ಕೋವಿಡ್ ಸೋಂಕಿನಿಂದ ಪ್ರಾಣ ಕಳೆದುಕೊಂಡ ಕೋವಿಡ್ ಯೋಧರ ಅವಲಂಬಿತರಿಗೆ ಇರುವ ಸುರಕ್ಷತಾ ಸೌಲಭ್ಯವಾಗಿದೆ.

ದೆಹಲಿ: ಹೊತ್ತಿ ಉರಿದ ಏರ್ ಇಂಡಿಯಾ ಬಸ್

ದೆಹಲಿ: ರಾಷ್ಟ್ರರಾಜಧಾನಿಯ ಅತೀ ದಟ್ಟಣೆಯ ಇಂದಿರಾ ಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಟರ್ಮಿನಲ್ 3ನೇ ಆವರಣದಲ್ಲಿ ನಿಲ್ಲಿಸಿದ್ದ ಏರ್ ಇಂಡಿಯಾ ವಿಮಾನದ ಬಸ್ಸೊಂದು ಬೆಂಕಿಗೆ ಹೊತ್ತಿ ಉರಿದಿದೆ. ಅದೃಷ್ಟವಶಾತ್ ಘಟನೆಯಲ್ಲಿ ಬಸ್‌ನಲ್ಲಿ ಯಾವುದೇ ಪ್ರಯಾಣಿಕರು, ಲಗೇಜು ಇಲ್ಲದಿರುವುದರಿಂದ ಹೆಚ್ಚಿನ ಪ್ರಮಾದ ನಡೆದಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಘಟನೆ ಮಾಹಿತಿ ನೀಡಿದ ಪೊಲೀಸ್ ಉಪ ಆಯುಕ್ತ ವಿಚಿತ್ರ ವೀರ್, 'ಮಂಗಳವಾರ ಮಧ್ಯಾಹ್ನ 1ಗಂಟೆ ಸುಮಾರಿಗೆ ಈ ಘಟನೆ ನಡೆದಿದೆ. ಘಟನೆ ವರದಿಯಾಗುತ್ತಿದ್ದಂತೆ ಅಗ್ನಿಶಾಮಕದಳ, ಸ್ಥಳೀಯ ಪೊಲೀಸರು ಹಾಗೂ ಸಿಐಎಸ್‌ಎಫ್ ಸಿಬ್ಬಂದಿಗಳು ಸ್ಥಳಕ್ಕೆ ಆಗಮಿಸಿ, ಅಗ್ನಿ ನಂದಿಸುವ ಕಾರ್ಯದಲ್ಲಿ ಪ್ರವೃತ್ತರಾದರು' ಎಂದಿದ್ದಾರೆ.

ನ್ಯಾ. ತಾರಾ ವಿತಾಸ್ತ ಗಂಜು ಪ್ರಮಾಣ ವಚನ

ಕರ್ನಾಟಕ ಹೈಕೋರ್ಟ್‌ನಲ್ಲಿ ನ್ಯಾ. ತಾರಾ ವಿತಾಸ್ತ ಗಂಜು ಪ್ರಮಾಣ ವಚನ ಸ್ವೀಕರಿಸಿದರು.

ಬೆಂಗಳೂರು: ದೆಹಲಿ ಹೈಕೋರ್ಟ್‌ನಿಂದ ಕರ್ನಾಟಕ ಹೈಕೋರ್ಟ್‌ಗೆ ವರ್ಗಾವಣೆಗೊಂಡಿರುವ ನ್ಯಾ. ತಾರಾ ವಿತಾಸ್ತ ಗಂಜು ಅವರಿಗೆ ಮಂಗಳವಾರ ಮುಖ್ಯ ನ್ಯಾಯಮೂರ್ತಿ ವಿಭು ಬಕ್ರು ಅವರು ಪ್ರಮಾಣ ವಚನ ಬೋಧಿಸಿದರು.

ಬಳಿಕ ಮಾತನಾಡಿದ ನ್ಯಾ. ಗಂಜು ಅವರು ಕಾನೂನು ಪಾಂಡಿತ್ಯ, ನ್ಯಾಯಾಂಗ ಸ್ವಾತಂತ್ರ್ಯ ಮತ್ತು ಶ್ರೀಮಂತ ಪರಂಪರೆಗಾಗಿ ಕರ್ನಾಟಕ ಹೈಕೋರ್ಟ್‌ನ ಖ್ಯಾತಿಯು ಸ್ಫೂರ್ತಿದಾಯಕವಾಗಿದೆ. ಈ ಘನ ಸಂಸ್ಥೆಗೆ ಅರ್ಥಪೂರ್ಣವಾಗಿ ಕೊಡುಗೆ ನೀಡುವ ಸಂಕಲ್ಪದೊಂದಿಗೆ ನಾನು ಈ ಹೊಸ ಜವಾಬ್ದಾರಿಗೆ ಹೆಗಲು ಕೊಡುತ್ತೇನೆ. ಈ ಹೊಸ ಅಧ್ಯಾಯವು ನ್ಯಾಯವನ್ನು ಎತ್ತಿಹಿಡಿಯಲು ಮೀಸಲಾಗಿರಲಿದೆ. ನಮ್ಮ ನ್ಯಾಯಾಂಗ ವ್ಯವಸ್ಥೆಯ ಹೃದಯಭಾಗದಲ್ಲಿರುವ ನ್ಯಾಯಸಮ್ಮತತೆ, ಸಮಗ್ರತೆ ಮತ್ತು ಸ್ವಾತಂತ್ರ್ಯದ ಆದರ್ಶಗಳನ್ನು ಎತ್ತಿಹಿಡಿಯಲು ನಾನು ಎದುರು ನೋಡುತ್ತಿದ್ದೇನೆ ಎಂದರು. ಕೇಂದ್ರ ಸರಕಾರವು ಅ. 14ರಂದು ನ್ಯಾ. ವಿತಾಸ್ತ ಗಂಜು ಅವರನ್ನು ವರ್ಗಾವಣೆ ಮಾಡಿ ಅಧಿಸೂಚನೆ ಪ್ರಕಟಿಸಿತ್ತು. 2022ರ ಮೇ 18ರಂದು ನ್ಯಾ. ಗಂಜು ಅವರು ದೆಹಲಿ ಹೈಕೋರ್ಟ್ ನ್ಯಾಯಮೂರ್ತಿಯಾಗಿ ನೇಮಕ ಗೊಂಡಿದ್ದರು.

ಚಾಟ್ ಜಿಪಿಟಿ ಗೋ 1 ವರ್ಷ ಉಚಿತ

ಬೆಂಗಳೂರು: ನವೆಂಬರ್ 4ರಿಂದ ಪ್ರಾರಂಭವಾಗುವ ಸೀಮಿತ ಅವಧಿಯಲ್ಲಿ ಸೈನ್ ಅಪ್ ಮಾಡುವ ಭಾರತದ ಬಳಕೆದಾರರಿಗೆ 'ಚಾಟ್ ಜಿಪಿಟಿ ಗೋ' ಅನ್ನು ಒಂದು ವರ್ಷದವರೆಗೆ ಉಚಿತವಾಗಿ ನೀಡುವುದಾಗಿ ಓಪನ್‌ಎಐ ಮಂಗಳವಾರ ತಿಳಿಸಿದೆ. ಇತ್ತೀಚೆಗೆ 'ಚಾಟ್ ಜಿಪಿಟಿ ಗೋ' ಎಂಬ ಚಂದದಾರಿಕೆಯ ಶ್ರೇಣಿಯನ್ನು ಬಿಡುಗಡೆ ಮಾಡಿರುವ ಓಪನ್ ಎಐ, ಹೆಚ್ಚಿನ ಸಂದೇಶ ಮಿತಿಗಳು, ಇಮೇಜ್ ಉತ್ಪಾದನೆ ಮತ್ತು ಫೈಲ್ ಅಪ್‌ಲೋಡ್‌ಗಳನ್ನು ನೀಡುವ ಜೊತೆಗೆ ಹಲವು ಕಾರ್ಯಗಳನ್ನು ಮಾಡುವ ಸಾಮರ್ಥ್ಯ ಹೊಂದಿದ್ದು, ಅದನ್ನು ಕಂಪನಿ ತನ್ನ ಎರಡನೇ ಅತಿದೊಡ್ಡ ಹಾಗೂ ವೇಗವಾಗಿ ಬೆಳೆಯುತ್ತಿರುವ ಸಾಧನವಾಗಿ ಪರಿಗಣಿಸಿದೆ. ಈ ಕುರಿತು ಮಾತನಾಡಿರುವ ಚಾಟ್ ಜಿಪಿಟಿಯ ಉಪಾಧ್ಯಕ್ಷ ಮತ್ತು ಮುಖ್ಯಸ್ಥ ನಿಕ್ ಟರ್ಲಿ, ಕೆಲವು ತಿಂಗಳ ಹಿಂದೆ ಭಾರತದಲ್ಲಿ ಚಾಟ್ ಜಿಟಿಪಿ ಗೋ ಅನ್ನು ಪ್ರಾರಂಭಿಸಿದಾಗಿನಿಂದ, ನಮ್ಮ ಬಳಕೆದಾರ ರಿಂದ ನಾವು ಕಂಡ ಸೃಜನಶೀಲತೆ ಸ್ಫೂರ್ತಿದಾಯಕವಾಗಿದೆ. ಭಾರತದಲ್ಲಿ ನಮ್ಮ ಮೊದಲ ದೇವ್ ಡೇ ಎಕ್ಸ್ ಚೇಂಜ್ ಕಾರ್ಯಕ್ರಮಕ್ಕೂ ಮುಂಚಿತವಾಗಿ, ಭಾರತದಾದ್ಯಂತ ಹೆಚ್ಚಿನ ಜನರು ಸುಧಾರಿತ ಎಐ ಅನ್ನು ಸುಲಭವಾಗಿ ಪಡೆಯಲು ಮತ್ತು ಅದರ ಪ್ರಯೋಜನ ಪಡೆಯಲು ಸಹಾಯ ಮಾಡಲು ನಾವು ಚಾಟ್ ಜಿಪಿಟಿ ಗೋ ಅನ್ನು ಒಂದು ವರ್ಷದವರೆಗೆ ಉಚಿತವಾಗಿ ಲಭ್ಯವಾಗುವಂತೆ ಮಾಡುತ್ತಿದ್ದೇವೆ ಎಂದು ಹೇಳಿದ್ದಾರೆ.

ಆರ್‌ಎಸ್‌ಎಸ್ ಶತಮಾನೋತ್ಸವ ದೇಶಾದ್ಯಂತ ಆಚರಣೆ: ಸುನಿಲ್ ಅಂಬೇಕರ್ ಹೇಳಿಕೆ

ಲಕ್ಷಕ್ಕೂ ಹೆಚ್ಚು ಹಿಂದೂ ಸಮ್ಮೇಳನ

ಜಬಲ್ಪುರ(ಮಧ್ಯ ಪ್ರದೇಶ): ರಾಷ್ಟ್ರೀಯ

ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಶತಮಾನೋತ್ಸವ ಆಚರಿಸಲು ದೇಶಾದ್ಯಂತ ಒಂದು ಲಕ್ಷಕ್ಕೂ ಹೆಚ್ಚು ಹಿಂದೂ ಸಮ್ಮೇಳನಗಳು ಅಥವಾ ಸಭೆಗಳನ್ನು ಆಯೋಜಿಸಲಾಗುವುದು ಎಂದು ಸಂಘಟನೆ ಮಂಗಳವಾರ ತಿಳಿಸಿದೆ.

ಪಂಚ ಪರಿವರ್ತನೆ (ಐದು ಬದಲಾವಣೆಗಳು), ಹಿಂದುತ್ವದ ವಿಸ್ತರಣೆ, ಕುಟುಂಬ ಪ್ರಬೋಧನ (ಕುಟುಂಬ ಪ್ರಜ್ಞೆ), ಸಾಮಾಜಿಕ ಸಾಮ್ರಸ್ಯ (ಸಾಮಾಜಿಕ ಸಾಮರಸ್ಯ) ಮತ್ತು ಸಾಮಾಜಿಕ ಸಮಸ್ಯೆಗಳನ್ನು ಚರ್ಚಿಸುವುದು ಈ ಒಂದು ಲಕ್ಷ ಹಿಂದೂ ಸಮ್ಮೇಳನಗಳ ಮುಖ್ಯ ಉದ್ದೇಶವೆಂದು ಸಂಘದ ಅಖಿಲ ಭಾರತ ಪ್ರಚಾರ ಮುಖ್ಯಸ್ಥ ಸುನಿಲ್ ಅಂಬೇಕರ್ ಹೇಳಿದರು

ಅಕ್ಟೋಬರ್ 30ರಿಂದ ಇಲ್ಲಿ ಪ್ರಾರಂಭವಾಗಲಿರುವ ಆರ್‌ಎಸ್‌ಎಸ್‌ನ ಅಖಿಲ ಭಾರತೀಯ ಕಾರ್ಯಕಾರಿ ಮಂಡಲದ (ಅಖಿಲ ಭಾರತ ಕಾರ್ಯಕಾರಿ ಸಮಿತಿ) ವಾರ್ಷಿಕ 3 ದಿನಗಳ ಸಭೆಗೆ ಮುಂಚಿತವಾಗಿ ಅಂಬೇಕರ್ ಸುದ್ದಿಗೋಷ್ಠಿ ನಡೆಸಿ ಮಾಹಿತಿ ನೀಡಿದರು.

ಅಕ್ಟೋಬರ್ 2 ವಿಜಯದಶಮಿಯಂದು ನಾಗ್ಪುರದಲ್ಲಿ ಶತಮಾನೋತ್ಸವ ಆಚರಣೆಗಳು ಪ್ರಾರಂಭವಾದವು. ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಸೇರಿದಂತೆ ಒಟ್ಟು 406 ಪದಾಧಿಕಾರಿಗಳು ಮುಂದಿನ ಅಖಿಲ ಭಾರತೀಯ ಕಾರ್ಯಕಾರಿ ಮಂಡಲ ಸಭೆಯಲ್ಲಿ ಭಾಗವಹಿಸಲಿದ್ದಾರೆ.

ಶತಮಾನೋತ್ಸವದ ನೆನಪಿಗಾಗಿ ಆರ್‌ಎಸ್‌ಎಸ್ ಕಾರ್ಯಕರ್ತರು ನವೆಂಬರ್ ಮತ್ತು ಜನವರಿ ನಡುವೆ 25ರಿಂದ 40 ದಿನಗಳ ಕಾಲ ಮನೆ ಮನೆಗೆ ತೆರಳಿ ಅಭಿಯಾನ ನಡೆಸಲಿದ್ದಾರೆ. ಈ ಅವಧಿಯಲ್ಲಿ ಅವರು ಜನರಿಗೆ 'ಪಂಚ ಪರಿವರ್ತನೆ', ನಾಗರಿಕ ಕರ್ತವ್ಯ, ಕುಟುಂಬ ಪ್ರಜ್ಞೆ ಮತ್ತು ಸಾಮಾಜಿಕ ಸಮಸ್ಯೆಗಳ ಬಗ್ಗೆ ಜಾಗೃತಿ ಮೂಡಿಸಲಿದ್ದಾರೆ ಮತ್ತು ಚರ್ಚಿಸಲಿದ್ದಾರೆ ಎಂದು ತಿಳಿಸಿದರು.

ದೇಶಕ್ಕಾಗಿ ದುಡಿಯಲು ಯುವಕರನ್ನು ಪ್ರೋತ್ಸಾಹಿಸಲು ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ. ಹೆಚ್ಚಿನ ಸಂಖ್ಯೆಯ ಯುವಕರು ಆರ್‌ಎಸ್‌ಎಸ್ ಸಿದ್ಧಾಂತಕ್ಕೆ ಸೇರುತ್ತಿದ್ದಾರೆ. ಶಿಸ್ತು ಯುವಕರನ್ನು ಸರಿಯಾದ ಹಾದಿಯಲ್ಲಿ ನಡೆಸುತ್ತದೆ ಎಂದು ನಾವು ನಂಬುತ್ತೇವೆ. ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಕೋಲ್ಕತ್ತಾ, ಮುಂಬೈ ಮತ್ತು ಬೆಂಗಳೂರಿನಲ್ಲಿ ಬುದ್ಧಿಜೀವಿಗಳ ಸಮ್ಮೇಳನಗಳಲ್ಲಿ ಭಾಗವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಅಖಿಲ ಭಾರತೀಯ ಕಾರ್ಯಕಾರಿ ಮಂಡಲವು ದೇಶದ ಪ್ರಸ್ತುತ ಪರಿಸ್ಥಿತಿ ಕುರಿತು ಚರ್ಚಿಸುತ್ತದೆ. ಸಂಘಟನೆಗೆ ಮಾರ್ಗದರ್ಶನ ನೀಡುತ್ತದೆ ಮತ್ತು ಅಗತ್ಯ ನಿರ್ಧಾರಗಳನ್ನು ತೆಗೆದುಕೊಳ್ಳುತ್ತದೆ ಎಂದು ಅವರು ಹೇಳಿದರು. ಕಾಶಿ-ಮಥುರಾ ದೇವಾಲಯದ ವಿಷಯಗಳ ಬಗ್ಗೆ ಚರ್ಚಿಸಲಾಗುತ್ತದೆಯೇ ಎಂದು ಕೇಳಿದಾಗ, ಎಲ್ಲಾ ಸಾಮಾಜಿಕ ಸಮಸ್ಯೆಗಳು ಮತ್ತು ಪ್ರಸ್ತುತ ಪರಿಸ್ಥಿತಿಗಳನ್ನು ಚರ್ಚಿಸಲಾಗುವುದು ಎಂದು ಅವರು ಹೇಳಿದರು.

ಆರ್‌ಎಸ್‌ಎಸ್ ಪಥಸಂಚಲನ.

ಪಂಚ ಪರಿವರ್ತನೆ: ಆರ್‌ಎಸ್‌ಎಸ್ ಉಪಕ್ರಮ

ಸಾಮಾಜಿಕ ಸಾಮರಸ್ಯ, ಕುಟುಂಬ ಪ್ರಜ್ಞೆ, ನಾಗರಿಕ ಕರ್ತವ್ಯ, ಪರಿಸರ ಜಾಗೃತಿ ಮತ್ತು ಸ್ವಾವಲಂಬನೆ ಎಂಬ ಐದು ಪ್ರಮುಖ ಕ್ಷೇತ್ರಗಳ ಮೂಲಕ ರಾಷ್ಟ್ರೀಯ ಪರಿವರ್ತನೆಯ ಮೇಲೆ ಕೇಂದ್ರೀಕರಿಸಿದ ಆರ್‌ಎಸ್‌ಎಸ್ ಉಪಕ್ರಮವಾಗಿದೆ.

ತಮಿಳುನಾಡಿನ ಹೊಸೂರಿನಲ್ಲಿನ ಏಷ್ಯಾ ಇಂಟರ್ ನ್ಯಾಷನಲ್ ಕಲ್ಚರಲ್ ರಿಸರ್ಚ್ ಯೂನಿವರ್ಸಿಟಿಯ ವತಿಯಿಂದ ಜಾನಪದ ಕಲಾವಿದ ನಿಟಗೌಡ ಪಾಟೀಲ್‌ರಿಗೆ ಗೌರವ ಡಾಕ್ಟರೇಟ್ ಪದವಿ ಹಾಗೂ 550 ಸಾಮೂಹಿಕ ವಿವಾಹಗಳಿಗೆ ಬಾಸಿಂಗವನ್ನು ಉಚಿತವಾಗಿ ನೀಡಿರುವ ಯಮಕನ ಮರಡಿಯ ಕರಕುಶಲ ಕಲಾವಿದ ಸೋಮಶೇಖರ ಹೊರಕೇರಿರವರಿಗೆ ನಿತ್ಯೋತ್ಸವ ಕನ್ನಡ ಸಿರಿ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಈ ವೇಳೆ ಪ್ರಣವ ಮೀಡಿಯಾ ಹೌಸ್ ಪ್ರಕಾಶನದ ಗುರುರಾಜ ಪೋಶೆಟ್ಟಿಹಳ್ಳಿ, ಡಾ. ಕೃಷ್ಣಮೂರ್ತಿ ಮಹಾಸ್ವಾಮಿ ಹಾಗೂ ಇತರ ಗಣ್ಯರಿದ್ದರು.

ಅಭಿನಂದನಾ ಕಾರ್ಯಕ್ರಮ

ಬೆಂಗಳೂರು: ಬಿಎಂಟಿಸಿ ಸಾಂಸ್ಕೃತಿಕ ಕಲಾ ಕುಟೀರ ವತಿಯಿಂದ ರವೀಂದ್ರ ಕಲಾಕ್ಷೇತ್ರದ ಮಹಿಳಾ ವಿಶ್ರಾಂತಿ ಕೊಠಡಿಯಲ್ಲಿ ಅ.29ರ ಸಂಜೆ 5 ಗಂಟೆಗೆ ಆರ್ ಕುಮಾರಸ್ವಾಮಿ ನಾಯಕ್, ವಿ. ಮಾರ್ಕಂಡಯ್ಯ ಅವರಿಗೆ ಅಭಿನಂದನಾ ಸಮಾರಂಭ ಆಯೋಜಿಸಲಾಗಿದೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಡಾ. ಸಂತೋಷ ಹಾನಗಲ್ಲ ಅವರು ಆರ್ ಕುಮಾರ ಸ್ವಾಮಿ ನಾಯಕ್, ವಿ. ಮಾರ್ಕಂಡಯ್ಯರನ್ನು ಅಭಿನಂದಿಸಲಿದ್ದು, ಉಪಮುಖ್ಯ ಕಾರ್ಮಿಕ ಕಲ್ಯಾಣಾಧಿಕಾರಿ ಮಧುರ ರಾಡ್ರಿಕ್ಸ್ ಅಧ್ಯಕ್ಷತೆ ವಹಿಸಲಿದ್ದಾರೆ. ಸಾಹಿತಿ ಡಾ. ರುದ್ರೇಶ್ ಅದರಂಗಿ, ಬಿಎಂಟಿಸಿ ಸಾಂಸ್ಕೃತಿಕ ಕಲಾ ಕುಟೀರದ ಗೌರವ ನಿರ್ದೇಶಕ ಬಿ.ಎಂ ಗಂಗಣ್ಣ, ರಂಗಭೂಮಿ ಕಲಾವಿದ ಕೆ. ಕಾಳಯ್ಯ ಉಪಸ್ಥಿತರಿರಲಿದ್ದಾರೆ.

ಅಂತಾರಾಷ್ಟ್ರೀಯ ಸೌರ ಒಕ್ಕೂಟದ 8ನೇ ಅಧಿವೇಶನದಲ್ಲಿ ರಾಷ್ಟ್ರಪತಿ ಪ್ರಶಂಸೆ

ಹವಾಮಾನ ಸವಾಲು ಎದುರಿಸಲು ದೇಶ ಸಿದ್ಧ

ದೆಹಲಿ: ಹವಾಮಾನ ಬದಲಾವಣೆ ಪ್ರಪಂಚದಾದ್ಯಂತ ಪರಿಣಾಮ ಬೀರುತ್ತಿದ್ದು, ಇದನ್ನೆದುರಿಸಲು ಭಾರತ ಬದ್ಧವಾಗಿದೆ. ಈ ನಿಟ್ಟಿನಲ್ಲಿ ನವೀಕರಿಸಬಹುದಾದ ಇಂಧನ ಗುರಿ ಸಾಧನೆ ಮೂಲಕ ದೃಢವಾದ ಹೆಜ್ಜೆಯಿರಿಸಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಶ್ಲಾಘಿಸಿದರು.

ದೆಹಲಿಯಲ್ಲಿ ಮಂಗಳವಾರ ಆಯೋಜಿಸಿದ್ದ ಅಂತಾರಾಷ್ಟ್ರೀಯ ಸೌರ ಒಕ್ಕೂಟದ 8ನೇ ಅಧಿ ವೇಶನವನ್ನು ಉದ್ಘಾಟಿಸಿ ಮಾತನಾಡಿದ ಅವರು, ಹವಾಮಾನ ಬದಲಾವಣೆ ಎದುರಿಸಲು ಇಂದು ತುರ್ತು ಮತ್ತು ದೃಢವಾದ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ. ಸೌರಶಕ್ತಿ ಅಳವಡಿಕೆ ಮತ್ತು ಬಳಕೆ ಮೂಲಕ ಈ ಜಾಗತಿಕ ಸವಾಲೆದುರಿಸುವಲ್ಲಿ ಐಎ ಮಹತ್ವದ ಪಾತ್ರವಹಿಸಿದೆ ಎಂದು ಪ್ರತಿಪಾದಿಸಿದರು.

ಸೌರಶಕ್ತಿ ವಿದ್ಯುತ್ ಉತ್ಪಾದನೆಗೆ ಮಾತ್ರ ಸೀಮಿತವಾಗಿಲ್ಲ, ಬದಲಾಗಿ ಸಮಾಜ, ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದ ಸಬಲೀಕರಣ, ಅಂತರ್ಗತ ಅಭಿವೃದ್ಧಿಗೂ ಪೂರಕವಾಗಿದೆ. ದೊಡ್ಡ ಪ್ರಮಾಣದ ಸೌರ ಸ್ಥಾಪನೆಗಳ ವಿಸ್ತರಣೆ ವೇಳೆ ಆಯಾ ಪ್ರದೇಶದ ಪರಿಸರ ಸಮತೋಲನ ಕಾಯ್ದುಕೊಳ್ಳಬೇಕಿದೆ ಎಂದರು. ಸೌರಶಕ್ತಿಯನ್ನು ಘನತೆ ಮತ್ತು ಸಾಮೂಹಿಕ ಸಮೃದ್ಧಿಯ ಮೂಲವಾಗಿ ಬಳಸಿಕೊಳ್ಳುವುದು ಅಗತ್ಯವಾಗಿದ್ದು, ಈ ನಿಟ್ಟಿನಲ್ಲಿ ಭವಿಷ್ಯದ ಪೀಳಿಗೆಗೆ ಹೆಚ್ಚಿನ ಸಮರ್ಪಣಾಭಾವದಿಂದ ಕೆಲಸ ಮಾಡಬೇಕು ಎಂದು ರಾಷ್ಟ್ರಪತಿ ಅವರು ಕರೆ ನೀಡಿದರು.

ಅಂತಾರಾಷ್ಟ್ರೀಯ ಸೌರ ಒಕ್ಕೂಟದ 8ನೇ ಅಧಿವೇಶನವನ್ನು ರಾಷ್ಟ್ರಪತಿಯವರು ಉದ್ಘಾಟಿಸಿದರು.

125 ಸದಸ್ಯ ರಾಷ್ಟ್ರಗಳ ಸಹಿ

ಸೌರಶಕ್ತಿಯಲ್ಲಿ ಜಾಗತಿಕ ಸಹಕಾರ ಮತ್ತು ಹೂಡಿಕೆಯನ್ನು ತ್ವರಿತಗೊಳಿಸಲು 125 ಸದಸ್ಯ ರಾಷ್ಟ್ರಗಳು ಮತ್ತು ಪಾಲುದಾರರು, ಸಹಿ ಹಾಕಿದರು. ವಿವಿಧ ದೇಶಗಳ 550ಕ್ಕೂ ಹೆಚ್ಚು ಪ್ರತಿನಿಧಿಗಳು ಮತ್ತು 30 ಸಚಿವರು, ಸಹಾಯಕ ಸಚಿವರು ಭಾಗವಹಿಸಿದ್ದರು.

ಭಾರತ ಮಹತ್ವದ ಮೈಲಿಗಲ್ಲು: ಸೌರಶಕ್ತಿ ಉತ್ಪಾದನೆಯಲ್ಲಿ ಭಾರತ ಒಂದು ಮಹತ್ವದ ಮೈಲಿಗಲ್ಲಾಗಿ ಕಾರ್ಯ ನಿರ್ವಹಿಸಿ ಜಗತ್ತಿಗೆ ವಿಶಿಷ್ಟ ಕೊಡುಗೆ ನೀಡುತ್ತಿದೆ. ಕೈಗೆಟುಕುವ ಮತ್ತು ಶುದ್ಧ ಇಂಧನ ಸಮುದಾಯಗಳನ್ನು ಸಬಲಗೊಳಿಸುತ್ತದೆ ಹಾಗೂ ಸ್ಥಳೀಯ ಆರ್ಥಿಕತೆಯನ್ನು ಮುನ್ನಡೆಸುತ್ತದೆ. ಸೌರಶಕ್ತಿ ವಿದ್ಯುತ್ ಉತ್ಪಾದನೆ ಮಾತ್ರವಲ್ಲ, ಸಬಲೀಕರಣ ಮತ್ತು ಸಮಗ್ರ ಅಭಿವೃದ್ಧಿಗೂ ಪೂರಕವಾಗಿದೆ ಎಂದು ಅವರು ಪ್ರತಿಪಾದಿಸಿದರು.

ಅಂತಾರಾಷ್ಟ್ರೀಯ ಸೌರ ಒಕ್ಕೂಟದ ಅಧ್ಯಕ್ಷ ಮತ್ತು ಎಲ್ಲಾ ಸದಸ್ಯ ರಾಷ್ಟ್ರಗಳು ಮೂಲಸೌಕರ್ಯ ಮತ್ತು ಜನಜೀವನದ ಮೇಲೆ ಕೇಂದ್ರೀಕರಿಸಬೇಕು. ಉದ್ಯೋಗ ಸೃಷ್ಟಿ, ಮಹಿಳಾ ನಾಯಕತ್ವ, ಗ್ರಾಮೀಣ ಜೀವನೋಪಾಯ ಮತ್ತು ಡಿಜಿಟಲ್ ಸೇರ್ಪಡೆಗೆ ನೆರವಾಗುವಂತೆ ಸೌರಶಕ್ತಿ ಸಾಮೂಹಿಕ ಕ್ರಿಯಾ ಯೋಜನೆ ಅಭಿವೃದ್ಧಿ ಪಡಿಸಬೇಕು ಎಂದು ಅವರು ಇದೇ ವೇಳೆ ಸಲಹೆ ನೀಡಿದರು. ಸೌರ ಸ್ಥಾಪನೆಗಳ ವೇಳೆ ಪರಿಸರ ಸಂರಕ್ಷಣೆ, ಹಸಿರು ಶಕ್ತಿಯತ್ತ ಗಮನ ಹರಿಸಿ ಪ್ರದೇಶದ ಪರಿಸರ ಸಮತೋಲನಕ್ಕೆ ಆದ್ಯತೆ ನೀಡಬೇಕು ಎಂದು ಮುರ್ಮು ಅವರು ಅಭಿಪ್ರಾಯಪಟ್ಟರು.

CreditAccess® Grameen

ಕ್ರೆಡಿಟ್‌ಆ್ಯಕ್ಸೆಸ್ ಗ್ರಾಮೀಣ್ ಲಿಮಿಟೆಡ್

ನೋಂದಾಯಿತ & ಕಾರ್ಪೊರೇಟ್ ಕಛೇರಿ: ಸಂ.49, 46ನೇ ಕ್ರಾಸ್, 8ನೇ ಬ್ಲಾಕ್, ಜಯನಗರ, (ರಾಜಲಕ್ಷ್ಮಿ ಕಲ್ಯಾಣಮಂಟಪದ ಪಕ್ಕ) ಬೆಂಗಳೂರು – 560070, ಕರ್ನಾಟಕ, ಭಾರತ
ವೆಬ್‌ಸೈಟ್: www.creditaccessgrameen.in
ಸಿಐಎನ್: L51216KA1991PLC053425

ಸೆಪ್ಟೆಂಬರ್ 30, 2025 ಕ್ಕೆ ಕೊನೆಯಾದ ತ್ರೈಮಾಸಿಕ ಮತ್ತು ಅರ್ಧ ವರ್ಷದ ಅಪರಿಶೋಧಿತ ಕ್ರೋಢೀಕೃತ ಆರ್ಥಿಕ ಫಲಿತಾಂಶಗಳ ಸಾರಾಂಶ

(ಕೋಟಿ ರೂಗಳಲ್ಲಿ)

ಕ್ರ. ಸಂ.	ವಿವರಗಳು	30-09-2025 ಕ್ಕೆ ಕೊನೆಯಾದ ತ್ರೈಮಾಸಿಕ	30-09-2025 ಅರ್ಧ ವರ್ಷಕ್ಕೆ ಕೊನೆಯಾದ	30-09-2024 ಕ್ಕೆ ಕೊನೆಯಾದ ತ್ರೈಮಾಸಿಕ	31-03-2025 ಕ್ಕೆ ಕೊನೆಯಾದ ವರ್ಷ
		(ಅಪರಿಶೋಧಿತ)	(ಅಪರಿಶೋಧಿತ)	(ಅಪರಿಶೋಧಿತ)	(ಪರಿಶೋಧಿತ)
1	ಕಾರ್ಯಾಚರಣೆಗಳಿಂದ ಬಂದ ಒಟ್ಟು ಆದಾಯ	1,509.02	2,972.65	1,453.92	5,756.14
2	ಸದರಿ ಅವಧಿಗೆ ನಿವ್ವಳ ಲಾಭ (ತೆರಿಗೆ, ಅಸಾಧಾರಣ ಮತ್ತು/ಯಾ ಅಸಾಮಾನ್ಯ ಐಟಂಗಳನ್ನು ಕಳೆಯುವ ಮುನ್ನ)	169.16	250.28	251.99	708.87
3	ಸದರಿ ಅವಧಿಗೆ ನಿವ್ವಳ ಲಾಭ – ಅಸಾಧಾರಣ ಮತ್ತು/ಯಾ ಅಸಾಮಾನ್ಯ ಐಟಂಗಳನ್ನು ಕಳೆದು	169.16	250.28	251.99	708.87
4	ಸದರಿ ಅವಧಿಗೆ ತೆರಿಗೆ, ಅಸಾಧಾರಣ ಮತ್ತು/ಯಾ ಅಸಾಮಾನ್ಯ ಐಟಂಗಳನ್ನು ಕಳೆದ ನಂತರ ನಿವ್ವಳ ಲಾಭ	125.81	186.00	186.06	531.40
5	ಸದರಿ ಅವಧಿಗೆ ಒಟ್ಟು ಸಮಗ್ರ ಆದಾಯ [ಸದರಿ ಅವಧಿಗೆ ತೆರಿಗೆ ಕಳೆದ ನಂತರದ ಲಾಭ / (ನಷ್ಟ) ಮತ್ತು ಇತರೆ ಸಮಗ್ರ ಆದಾಯ (ತೆರಿಗೆ ಕಳೆದು) ಸೇರಿದಂತೆ]	128.41	185.81	178.12	504.21
6	ಪೇಯ್ಡಪ್ ಇಕ್ವಿಟಿ ಷೇರು ಬಂಡವಾಳ	159.88	159.88	159.46	159.72
7	ಮೀಸಲುಗಳು–ಮರುಮೌಲ್ಯಮಾಪನ ಮೀಸಲುಗಳನ್ನು ಬಿಟ್ಟು	4,470.49	4,470.49	4,325.56	4,275.33
8	ಸೆಕ್ಯುರಿಟೀಸ್ ಪ್ರೀಮಿಯಮ್ ಖಾತೆ	2,534.01	2,534.01	2,503.39	2,520.92
9	ನಿವ್ವಳ ಮೌಲ್ಯ	7,164.38	7,164.38	6,988.41	6,955.97
10	ಬಾಕಿ ಇರುವ ರಿಡೀಮಬಲ್ ಪ್ರಿಫರೆನ್ಸ್ ಷೇರುಗಳು	Nil	Nil	Nil	Nil
11	ಡೆಟ್ ಇಕ್ವಿಟಿ ಅನುಪಾತ	2.81	2.81	2.74	2.94
12	ಪೇಯ್ಡಪ್ ಋಣ ಬಂಡವಾಳ/ಬಾಕಿ ಇರುವ ಋಣ	20,103.16	20,103.16	19,153.67	20,445.77
13	ತಲಾ ಷೇರಿಗೆ ಗಳಿಕೆ (ತಲಾ ಷೇರಿನ ಮುಖ ಬೆಲೆ 10 ರೂ.) (ನಡೆಯುತ್ತಿರುವ ಮತ್ತು ನಿಲ್ಲಿಸಿರುವ ಕಾರ್ಯಾಚರಣೆಗಳಿಗೆ)– ವಾರ್ಷಿಕೀಕರಿಸಿಲ್ಲ				
	– ಬೇಸಿಕ್ (ರೂ)	7.87	11.64	11.67	33.32
	– ಡೈಲ್ಯೂಟೆಡ್ (ರೂ)	7.83	11.60	11.61	33.24
14	ಬಂಡವಾಳ ವಿಮೋಚನಾ ಮೀಸಲು	Nil	Nil	Nil	Nil
15	ಡಿಬೆಂಚರ್ ವಿಮೋಚನಾ ಮೀಸಲು	Nil	Nil	Nil	Nil
16	ಸಾಲ ತೀರಿಕೆ ಕವರೇಜ್ ಅನುಪಾತ	ಅನ್ವಯಿಸುವುದಿಲ್ಲ	ಅನ್ವಯಿಸುವುದಿಲ್ಲ	ಅನ್ವಯಿಸುವುದಿಲ್ಲ	ಅನ್ವಯಿಸುವುದಿಲ್ಲ
17	ಬಡ್ಡಿ ತೀರಿಕೆ ಕವರೇಜ್ ಅನುಪಾತ	ಅನ್ವಯಿಸುವುದಿಲ್ಲ	ಅನ್ವಯಿಸುವುದಿಲ್ಲ	ಅನ್ವಯಿಸುವುದಿಲ್ಲ	ಅನ್ವಯಿಸುವುದಿಲ್ಲ

ಟಿಪ್ಪಣಿಗಳು:

1. ಮೇಲಿನ ಹಣಕಾಸಿನ ಫಲಿತಾಂಶಗಳನ್ನು ಲೆಕ್ಕಪರಿಶೋಧನಾ ಸಮಿತಿ ಹಾಗೂ ನಿರ್ದೇಶಕರ ಮಂಡಳಿ ಅಕ್ಟೋಬರ್ 28, 2025 ರಂದು ನಡೆದ ತಮ್ಮ ಸಭೆಯಲ್ಲಿ ಪರಿಶೀಲಿಸಿ ಅನುಮೋದಿಸಿದೆ. ಜಂಟಿ ಶಾಸನಬದ್ಧ ಲೆಕ್ಕಪರಿಶೋಧಕರು ಸೆಪ್ಟೆಂಬರ್ 30, 2025 ಕ್ಕೆ ಕೊನೆಯಾದ ತ್ರೈಮಾಸಿಕ ಮತ್ತು ಅರ್ಧ ವರ್ಷದ ಅಪರಿಶೋಧಿತ ಕ್ರೋಢೀಕೃತ ಆರ್ಥಿಕ ಫಲಿತಾಂಶಗಳ ಸಾರಾಂಶ ಹೇಳಿಕೆಯ ಬಗ್ಗೆ unmodified opinion ವ್ಯಕ್ತಪಡಿಸಿದ್ದಾರೆ.
2. (ಎ) ಪ್ರತ್ಯೇಕವಾಗಿ ತೆಗೆದುಕೊಂಡಾಗ ಅನುಕ್ರಮವಾಗಿ ತ್ರೈಮಾಸಿಕಕ್ಕೆ ಮತ್ತು ವರ್ಷಕ್ಕೆ ಕಾರ್ಯಾಚರಣೆಗಳಿಂದ ಬಂದಿರುವ ಒಟ್ಟು ಆದಾಯ: 1,509.02/– ಕೋಟಿ ರೂ. ಮತ್ತು 2,972.65/– ಕೋಟಿ ರೂ.; (ಬಿ) ತೆರಿಗೆಗೆ ಮುನ್ನ ನಿವ್ವಳ ಲಾಭ: 169.16/– ಕೋಟಿ ರೂ. ಮತ್ತು 250.28/– ಕೋಟಿ ರೂ; ಮತ್ತು (ಸಿ) ತೆರಿಗೆಯ ನಂತರದ ನಿವ್ವಳ ಲಾಭ: 125.81/– ಕೋಟಿ ರೂ. ಮತ್ತು 186.00/– ಕೋಟಿ ರೂ.
3. ಮೇಲೆ ನೀಡಿರುವುದು ಸೆಬಿ (ಲಿಸ್ಟಿಂಗ್ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವ ಅಗತ್ಯತೆಗಳು) ನಿಬಂಧನೆಗಳು, 2015 ರ ನಿಬಂಧನೆ 33 ಹಾಗೂ ನಿಬಂಧನೆ 52 ಪ್ರಕಾರ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ದಾಖಲಿಸಿರುವ ತ್ರೈಮಾಸಿಕದ ಮತ್ತು ವಾರ್ಷಿಕ ಆರ್ಥಿಕ ಫಲಿತಾಂಶಗಳ ವಿಸ್ತೃತ ರೂಪದ ಸಾರಾಂಶವಾಗಿರುತ್ತದೆ. ಈ ತ್ರೈಮಾಸಿಕದ ಮತ್ತು ವಾರ್ಷಿಕ ಆರ್ಥಿಕ ಫಲಿತಾಂಶಗಳು ಕಂಪನಿಯ ಷೇರುಗಳು ಲಿಸ್ಟ್ ಆಗಿರುವ ಸ್ಟಾಕ್ ಎಕ್ಸ್‌ಚೇಂಜುಗಳಾದ ನ್ಯಾಷನಲ್ ಎಕ್ಸ್‌ಚೇಂಜಿನ www.nseindia.com/corporates ವೆಬ್‌ಸೈಟ್‌ನಲ್ಲಿಯೂ ಮತ್ತು ಬಿಎಸ್‌ಇ ಲಿಮಿಟೆಡ್ ನ www.bseindia.com/corporates ವೆಬ್‌ಸೈಟ್‌ನಲ್ಲಿಯೂ ಮತ್ತು ಕಂಪನಿಯ www.creditaccessgrameen.in ವೆಬ್‌ಸೈಟಿನಲ್ಲಿಯೂ ಲಭ್ಯವಿರುತ್ತವೆ.
4. ತಿದ್ದುಪಡಿಮಾಡಿದ ಲಿಸ್ಟಿಂಗ್ ನಿಬಂಧನೆಗಳ ನಿಬಂಧನೆ 52(4) ರಲ್ಲಿ ಹೇಳಿರುವಂತಹ ಇತರ ಲೈನ್ ಐಟಂಗಳ ಬಗ್ಗೆ ಸ್ಟಾಕ್ ಎಕ್ಸ್‌ಚೇಂಜಿಗೆ(ಗಳಿಗೆ) ಸಮಂಜಸವಾಗಿ ತಿಳಿಸಲಾಗಿದ್ದು ಅದನ್ನು ಮೇಲೆ (3) ರಲ್ಲಿ ಹೇಳಿರುವಂತಹ ವೆಬ್‌ಸೈಟ್ ಲಿಂಕ್ ಮೂಲಕ ನೋಡಬಹುದಾಗಿರುತ್ತದೆ.

ದಿನಾಂಕ: ಅಕ್ಟೋಬರ್ 28, 2025
ಸ್ಥಳ: ಬೆಂಗಳೂರು

ಸೆಪ್ಟೆಂಬರ್ 30, 2025 ಕ್ಕೆ ಕೊನೆಯಾದ ತ್ರೈಮಾಸಿಕ ಮತ್ತು ಅರ್ಧ ವರ್ಷದ ಹಣಕಾಸು ಫಲಿತಾಂಶಗಳ ಸಾರಾಂಶವನ್ನು ನೋಡಲು ಈ QR ಕೋಡ್ ಅನ್ನು ಸ್ಕ್ಯಾನ್ ಮಾಡಿ

ಕ್ರೆಡಿಟ್‌ಆ್ಯಕ್ಸೆಸ್ ಗ್ರಾಮೀಣ್ ಲಿಮಿಟೆಡ್ ಮಂಡಳಿಗಾಗಿ ಮತ್ತು ಪರವಾಗಿ
ಸಹಿ/–
ಗಣೇಶ್ ನಾರಾಯಣನ್
ವ್ಯವಸ್ಥಾಪಕ ನಿರ್ದೇಶಕರು ಮತ್ತು ಸಿಇಒ

ಪ್ರಧಾನಿ ಹುದ್ದೆ ಉಳಿಸಿಕೊಳ್ಳಲು ದೇವೇಗೌಡರಿಂದ ಸೀತಾರಾಮ್ ಕೇಸರಿಗೆ ಆಫರ್
ಮಾಧ್ಯಮ ಸಂದರ್ಶನದಲ್ಲಿ ಕಾಂಗ್ರೆಸ್ ಕಾರ್ಯಕಾರಿಣಿ ಸದಸ್ಯ ತಾರಿಖ್ ಅನ್ವರ್ ಹೇಳಿಕೆ

ಕೇಸರಿಗೆ ರಾಷ್ಟ್ರಪತಿ ಹುದ್ದೆಯ ಆಮಿಷವೊಡ್ಡಿದ್ದರೇ ಗೌಡರು?

ದೆಹಲಿ: ಎರಡು ದಿನಗಳ ಹಿಂದೆಯಷ್ಟೇ ಕಾಂಗ್ರೆಸ್‌ನಲ್ಲಿ ಕಳೆದ 25 ವರ್ಷಗಳಲ್ಲಿ ನಡೆಯದಂತಹ ಘಟನೆಯೊಂದು ನಡೆದಿತ್ತು. 90ರ ದಶಕದಲ್ಲಿ ಪಕ್ಷದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದ ಸೀತಾರಾಮ್ ಕೇಸರಿ ಅವರ ಪುಣ್ಯಸ್ಮರಣೆ ಕಾರ್ಯಕ್ರಮವನ್ನು ದೆಹಲಿ ಎಐಸಿಸಿ ಕಚೇರಿಯಲ್ಲಿ ಏರ್ಪಡಿಸಲಾಗಿತ್ತು. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಯವರು ಕೇಸರಿಯವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಅವರನ್ನು ಸ್ಮರಿಸಿದ್ದರು. ಆದರೆ ಇಷ್ಟು ವರ್ಷಗಳ ಕಾಲ ಇರದ ಈ ಪುಣ್ಯಸ್ಮರಣೆ ದಿಢೀರ್ ಏಕೆ ಪ್ರಾರಂಭವಾಯಿತು ಎಂಬ ಪ್ರಶ್ನೆ ಎಲ್ಲರಲ್ಲೂ ಮೂಡಿತ್ತು. ಇದರ ಹಿಂದೆ ಬಿಹಾರ ಚುನಾವಣೆಯ ಕಾರ್ಯತಂತ್ರ ಅಡಗಿದೆ ಎಂಬುದು ಹಲವರ ವಿಶ್ಲೇಷಣೆಯಾಗಿತ್ತು.


ದೇವೇಗೌಡ

ತಾರಿಖ್ ಅನ್ವರ್

ಸೀತಾರಾಮ್ ಕೇಸರಿ

ಸೀತಾರಾಮ್ ಕೇಸರಿ ಅವರು ಮೂಲತಃ ಬಿಹಾರದವರು. ಹೀಗಾಗಿ ಅವರನ್ನು ಸ್ಮರಿಸುವ ಮೂಲಕ ಬಿಹಾರಿಗಳ ಒಲವನ್ನು ತನ್ನತ್ತ ಸೆಳೆಯುವ ಮಾಸ್ಟರ್ ಪ್ಲ್ಯಾನ್ ಕಾಂಗ್ರೆಸ್‌ನದ್ದು ಎನ್ನಲಾಗಿದೆ. ಪಕ್ಷ ಇಷ್ಟು ಕಾಲ ಮರೆತಿದ್ದ ಕೇಸರಿಯವರು ಒಂದು ಕಾಲದಲ್ಲಿ ಪಕ್ಷದ ಅಸ್ತಿತ್ವದ ಉಳಿವಿಗಾಗಿ ಅರಸಿ ಬಂದ ರಾಷ್ಟ್ರಪತಿ ಹುದ್ದೆಯನ್ನೇ ತಿರಸ್ಕರಿಸಿದವರು.

ಸೀತಾರಾಮ್ ಕೇಸರಿ ಕಾಂಗ್ರೆಸ್ ಅಧ್ಯಕ್ಷರಾಗಿದ್ದಾಗಲೇ ಕರ್ನಾಟಕದ ಎಚ್.ಡಿ. ದೇವೇಗೌಡ ದೇಶದ ಪ್ರಧಾನಿಯಾಗಿದ್ದರು. 1997ರಲ್ಲಿ ದೇವೇಗೌಡರ ನೇತೃತ್ವದ ಯುನೈಟೆಡ್ ಫ್ರಂಟ್ ಕೇಂದ್ರ ಸರಕಾರಕ್ಕೆ ನೀಡಿದ ಬೆಂಬಲವನ್ನು ಕೇಸರಿ ನೇತೃತ್ವದ ಕಾಂಗ್ರೆಸ್ ಪಕ್ಷ ಹಿಂಪಡೆಯುವ ಮೂಲಕ ಭಾರೀ ಟೀಕೆಗೆ ಗುರಿಯಾಗಿದ್ದವರು. ಅದು ದೇವೇಗೌಡರು ಅನಿರೀಕ್ಷಿತವಾಗಿ ಒಲಿದು ಬಂದಿದ್ದ ಪ್ರಧಾನಿ ಪಟ್ಟವನ್ನು ಉಳಿಸಿಕೊಂಡು ಮುಂದುವರಿಸುವ ಮಹತ್ವಾಕಾಂಕ್ಷೆಯಲ್ಲಿದ್ದ ಕಾಲ. ತನ್ನ ಹುದ್ದೆಯ ಉಳಿವಿಗಾಗಿ ದೇವೇಗೌಡರು ನಾನಾ ಕಸರತ್ತುಗಳನ್ನು ಮಾಡಿದ್ದರು, ಆದರೆ ಅದಕ್ಕೆ ಪ್ರಮುಖ ಅಡ್ಡಿಯಾಗಿದ್ದವರು ಸೀತಾರಾಂ ಕೇಸರಿ. ಹೀಗಾಗಿ ಅವರನ್ನು ಮನವೊಲಿಸಲು ದೇವೇಗೌಡರು ಹಲವು ಪ್ರಯತ್ನಗಳನ್ನು ಮಾಡಿದ್ದರು ಎಂದು ಕಾಂಗ್ರೆಸ್ ಕಾರ್ಯಕಾರಿಣಿ ಸದಸ್ಯ ಮತ್ತು ಸಂಸದ ತಾರಿಖ್ ಅನ್ವರ್ ಹೇಳಿದ್ದಾರೆ.

ಈ ಬಗ್ಗೆ ಮಾಧ್ಯಮ ಸಂದರ್ಶನದಲ್ಲಿ ಮಾಹಿತಿ ಹಂಚಿಕೊಂಡಿರುವ ಅವರು, ಆಗಿನ ಯುನೈಟೆಡ್ ಫ್ರಂಟ್ ಸರಕಾರದ ಪ್ರಧಾನಿ ಎಚ್.ಡಿ ದೇವೇಗೌಡರು 1997ರಲ್ಲಿ ಸೀತಾರಾಮ್ ಕೇಸರಿ ಅವರನ್ನು ಭಾರತದ ರಾಷ್ಟ್ರಪತಿಯನ್ನಾಗಿ ಮಾಡಲು ಮುಂದಾಗಿದ್ದರು ಎಂದೂ ಬಹಿರಂಗಪಡಿಸಿದ್ದಾರೆ. ಇದು ಕಾಂಗ್ರೆಸ್‌ನ ಬೆಂಬಲವನ್ನು ಉಳಿಸಿಕೊಳ್ಳಲು ಗೌಡರ ಶಾಂತಿ ಒಪ್ಪಂದದ ಭಾಗವಾಗಿತ್ತು. ಆದಾಗ್ಯೂ, ಕೇಸರಿ ಆ ಆಫರ್ ತಿರಸ್ಕರಿಸಿ ಅದನ್ನು 'ಆಮಿಷ ಮತ್ತು 'ಕಾಂಗ್ರೆಸ್ ಅನ್ನು ವಿಭಜಿಸುವ ಪಿತೂರಿ' ಎಂದು ಎಂದು ನೇರವಾಗಿಯೇ ಹೇಳಿದರು. ಕಾಂಗ್ರೆಸ್ ಬೆಂಬಲ ವಾಪಾಸ್ ಪಡೆದ ಬಳಿಕ ದೇವೇಗೌಡ ಪ್ರಧಾನಿ ಪಟ್ಟದಿಂದ ಕೆಳಗಿಳಿದು ಐ.ಕೆ. ಗುಜ್ರಾಲ್ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡಿದ್ದರು ಎಂದೂ ತಾರಿಖ್ ಹೇಳಿದ್ದಾರೆ.

ಅಂದಿನ ಪ್ರಧಾನಿ ದೇವೇಗೌಡರು ತಮ್ಮ ಸಚಿವಾಲಯದಲ್ಲಿ 50% ಸಚಿವ ಸ್ಥಾನಗಳನ್ನು ಕಾಂಗ್ರೆಸ್‌ಗೆ ನೀಡುವುದಾಗಿ ಹೇಳಿದ್ದರು ಮತ್ತು ಕೆಲವು ಹಿರಿಯ ಕಾಂಗ್ರೆಸ್ ಸದಸ್ಯರು ಇದಕ್ಕೆ ಒಪ್ಪಿಗೆ ಸೂಚಿಸಿದ್ದರೂ ಕೇಸರಿ ಅದಕ್ಕೆ ಒಪ್ಪರಲಿಲ್ಲ. ಯುನೈಟೆಡ್ ಫ್ರಂಟ್ ಸರಕಾರ ಮತ್ತು ಕಾಂಗ್ರೆಸ್ (ಸರಕಾರಕ್ಕೆ ಬಾಹ್ಯ ಬೆಂಬಲ ನೀಡಿದ್ದ ಪಕ್ಷ) ನಡುವೆ ಭಿನ್ನಾಭಿಪ್ರಾಯಗಳು ಉಂಟಾಗಲು ಪ್ರಾರಂಭವಾದಾಗ, ಪ್ರಧಾನಿ ಎಚ್.ಡಿ ದೇವೇಗೌಡರು ಕಾಂಗ್ರೆಸ್ ಅಧ್ಯಕ್ಷ ಸೀತಾರಾಮ್ ಕೇಸರಿ ಅವರ ಮನವೊಲಿಸಲು ಕೆಲವು ಪ್ರಯತ್ನಗಳನ್ನು ಮಾಡಿದರು. 1997ರಲ್ಲಿ ಆಗಿನ ರಾಷ್ಟ್ರಪತಿ ಶಂಕರ್ ದಯಾಳ್ ಶರ್ಮಾ ಅವರ ಅವಧಿ ಮುಗಿಯುತ್ತಿದ್ದಂತೆ ಕೇಸರಿ ಅವರನ್ನು ರಾಷ್ಟ್ರಪತಿ ಹುದ್ದೆಗೆ ತರುವ ಬಗ್ಗೆ ಗೌಡರು ಪ್ರಸ್ತಾಪಿಸಿ, ಕಾಂಗ್ರೆಸ್‌ಗೆ 50% ಸಚಿವ ಸ್ಥಾನಗಳನ್ನು ಸಹ ನೀಡಲು ಮುಂದಾಗಿದ್ದರು ಎಂದು ಆಗಿನ ಕೇಂದ್ರ ಸಚಿವ ಸಿ.ಎಂ ಇಬ್ರಾಹಿಂ ಆಗಿನ ಪ್ರಧಾನಿ ಪರವಾಗಿ ಸೀತಾರಾಮ್ ಕೇಸರಿ ಬಳಿ ಪ್ರಸ್ತಾಪಿಸಿದ್ದರು, ಅದರ ಬಗ್ಗೆ ಅವರು ನನಗೆ ಹೇಳಿದರು ಎಂದು ಅನ್ವರ್ ತಿಳಿಸಿದ್ದಾರೆ.

ತನ್ನ ಸರಕಾರದ ಉಳಿಸಲು ಈ ಪ್ರಸ್ತಾಪಗಳು ರಾಜಕೀಯ ಆಮಿಷವಾಗಿದ್ದವು ಎಂದು ಕೇಸರಿಯವರು ದೃಢವಾಗಿ ನಂಬಿದ್ದರು. ಅವು ಕಾಂಗ್ರೆಸ್ ಅನ್ನು ವಿಭಜಿಸುವ ಪಿತೂರಿ ಎಂದೂ ಅವರು ಭಾವಿಸಿದ್ದರು, ಹಾಗಾಗಿ ಅವುಗಳನ್ನು ತಿರಸ್ಕರಿಸಿದರು. ಯುನೈಟೆಡ್ ಫ್ರಂಟ್ ಸರಕಾರದ ಪತನದ ನಂತರ ಕಾಂಗ್ರೆಸ್ ತನ್ನ ಶಕ್ತಿಯನ್ನು ಮರಳಿ ಪಡೆಯುತ್ತದೆ ಮತ್ತು ತನ್ನದೇ ಆದ ಸರಕಾರವನ್ನು ಮುನ್ನಡೆಸುತ್ತದೆ ಎಂದು ಅವರು ಬಲವಾಗಿ ನಂಬಿದ್ದರು. ಕೆಲವು ಹಿರಿಯ ಕಾಂಗ್ರೆಸ್ ನಾಯಕರು ಗೌಡರ ಸರಕಾರವನ್ನು ಸೇರುವ ಒಲವು ಹೊಂದಿದ್ದರು, ಆದರೆ ಕೇಸರಿ ಅವರು ತಮ್ಮ ದೃಢ ನಿರ್ಧಾರವನ್ನು ಬದಲಿಸಿಕೊಳ್ಳಲೇ ಇಲ್ಲ ಎಂದು ಅನ್ವರ್ ಹೇಳಿದರು.

ಶರದ್ ಪವಾರ್ ಆಗ ಲೋಕಸಭೆಯಲ್ಲಿ ಕಾಂಗ್ರೆಸ್ ನಾಯಕರಾಗಿದ್ದರು. ಗೌಡ ಸರಕಾರವನ್ನು ಪದಚ್ಯುತಗೊಳಿಸಿದ ತಿಂಗಳುಗಳಲ್ಲಿ, ಕೆ.ಆರ್. ನಾರಾಯಣನ್ 1997ರಲ್ಲಿ ಯುನೈಟೆಡ್-ಕಾಂಗ್ರೆಸ್-ಎಡಪಕ್ಷಗಳ ಜಂಟಿ ಅಭ್ಯರ್ಥಿಯಾಗಿ ಭಾರತದ ರಾಷ್ಟ್ರಪತಿಯಾದರು ಎಂದೂ ಅನ್ವರ್ ಹೇಳಿದ್ದಾರೆ.

ಎಐಸಿಸಿ ಕಚೇರಿಯಲ್ಲಿ ನಡೆದ ಸೀತಾರಾಮ್ ಕೇಸರಿ ಪುಣ್ಯಸ್ಮರಣೆ ಕಾರ್ಯಕ್ರಮ.

ಆಗಿನ ಸರಕಾರದಿಂದ ಬ್ಲ್ಯಾಕ್‌ಮೈಲ್

ಕೇಸರಿಯವರ ದೃಢ ನಿರ್ಧಾರದಿಂದಾಗಿ ಆಗ ಅಧಿಕಾರದಲ್ಲಿದ್ದ ಸರಕಾರದ ಬ್ಲ್ಯಾಕ್‌ಮೈಲ್ ತಂತ್ರಗಳು ವಿಫಲವಾಗಿದ್ದರಿಂದ ದೇವೇಗೌಡ ಸರಕಾರ ಕೆಳಗಿಳಿಯ ಬೇಕಾಯಿತು ಎಂದು ಅನ್ವರ್ ಹೇಳಿದ್ದಾರೆ. ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಮತ್ತು 17 ವರ್ಷಗಳ ಕಾಲ ಎಐಸಿಸಿ ಖಜಾಂಚಿಯಾಗಿ ಕಾರ್ಯನಿರ್ವಹಿಸಿದ್ದ ಸೀತಾರಾಮ್ ಕೇಸರಿ ಅವರನ್ನು ಆಮಿಷವೊಡ್ಡಿ ತಮ್ಮತ್ತ ಸೆಳೆಯುವುದು ಸಾಧ್ಯವಿಲ್ಲ ಎಂಬುದು ಸ್ಪಷ್ಟವಾದಾಗ, ಆಗಿನ ಪ್ರಧಾನಿ ಕಚೇರಿಯು ಸುಳ್ಳು ಪ್ರಕರಣಗಳನ್ನು ಅವರ ವಿರುದ್ಧ ದಾಖಲಿಸಿ (ತನ್ವಾರ್ ಕೊಲೆ ಪ್ರಕರಣ) ಸಿಬಿಐ ತನಿಖೆಯ ಮೂಲಕ ಅವರನ್ನು ಬ್ಲ್ಯಾಕ್ ಮೇಲ್ ಮಾಡಲು ಪ್ರಯತ್ನಿಸಿತು, ಆದರೆ ಸೀತಾರಾಮ್ ಕೇಸರಿ ಅವರು ಅದಕ್ಕೂ ಮಣೆಯಲಿಲ್ಲ ಎಂದರು ಅನ್ವರ್ ತಿಳಿಸಿದರು.

ಸಿಎಂ ಅಭ್ಯರ್ಥಿ ಘೋಷಿಸದ ಎನ್‌ಡಿಎ: ಆರ್‌ಜೆಡಿ ಅಣಕ

ಪಟನಾ: ನ್ಯಾಷನಲ್ ಡೆಮಾಕ್ರೆಟಿಕ್ ಅಲಯನ್ಸ್(ಎನ್‌ಡಿಎ) ಮುಖ್ಯಮಂತ್ರಿ ಅಭ್ಯರ್ಥಿಯ ಹೆಸರನ್ನೇ ಈವರೆಗೂ ಪ್ರಕಟಿಸಿಲ್ಲ ಎಂದು ರಾಷ್ಟ್ರೀಯ ಜನತಾ ದಳ(ಆರ್‌ಜೆಡಿ) ಅಣಕವಾಡಿದೆ.

'ಬಿಹಾರ್ ಕಾ ತೇಜಸ್ವಿ ಪ್ರಾಣ್ ಪತ್ರ' ಹೆಸರಿನಲ್ಲಿ 'ಮಹಾಘಟಬಂಧನ್' ಒಕ್ಕೂಟದ ಪ್ರಣಾಳಿಕೆಯನ್ನು ಮಂಗಳವಾರ ಬಿಡುಗಡೆ ಮಾಡಿದ ಆರ್‌ಜೆಡಿ ನಾಯಕ, ಮಹಾಘಟಬಂಧನ್ ಒಕ್ಕೂಟದ ಮುಖ್ಯಮಂತ್ರಿ ಅಭ್ಯರ್ಥಿ ತೇಜಸ್ವಿ ಯಾದವ್, 'ಎನ್‌ಡಿಎ ಕಾರ್ಯಸೂಚಿ ಏನಿದೆ ಎಂಬುದನ್ನು ತಿಳಿದುಕೊಳ್ಳಲು ನನಗೆ ಬಹಳ ಕುತೂಹಲವಿದೆ. ಮುಂದಿನ 5 ವರ್ಷಗಳ ಕಾಲ ನಾವು ಹೇಗೆ ಕೆಲಸ ಮಾಡಲಿದ್ದೇವೆ ಎಂಬುದರ ಬಗೆಗೂ ಪ್ರಣಾಳಿಕೆ ಬಿಡುಗಡೆ ಮಾಡಿದ್ದೇವೆ. 'ಮಹಾಘಟಬಂಧನ್'ನ ಮಾರ್ಗಸೂಚಿ, ದೃಷ್ಟಿಕೋನವನ್ನು ಜನರ ಮುಂದೆ ಪ್ರಕಟಿಸಿದ್ದೇವೆ. 'ನಮ್ಮ ಸರಕಾರ ರಚನೆ ಆದರೆ ನಾವು ಬಿಹಾರವನ್ನು ನಂಬರ್ 1 ಮಾಡುತ್ತೇವೆ ಎಂಬುದು ಜನತೆಗೆ ಸ್ಪಷ್ಟವಾಗಿದೆ ಎಂದರು.

'ಮಹಾಘಟಬಂಧನ್'ನ ಸಿಎಂ ಅಭ್ಯರ್ಥಿ ಯಾರು ಎಂದು ನಾವು ಈಗಾಗಲೇ ಘೋಷಿಸಿದ್ದೇವೆ. ಅದೇ ರೀತಿಯಲ್ಲಿ ಎನ್‌ಡಿಎ ಕೂಡಾ ತನ್ನ ಮುಖ್ಯಮಂತ್ರಿ ಅಭ್ಯರ್ಥಿ ಯಾರು ಎಂಬುದನ್ನು ತಿಳಿಸಬೇಕು. ಅದನ್ನು ತಿಳಿಯಲು ರಾಜ್ಯದ ಜನತೆಯೂ ಬಯಸಿದ್ದಾರೆ. ಎನ್‌ಡಿಎ ಯಾವ ಯೋಜನೆಗಳನ್ನು ಹೊಂದಿದೆ, ಅದರ ದೃಷ್ಟಿಕೋನ ಏನು ಮತ್ತು ಬಿಹಾರವನ್ನು ಹೇಗೆ ಮುಂದಕ್ಕೆ ಕೊಂಡೊಯ್ಯಲಿದೆ? ಎಂಬ ಅಂಶಗಳನ್ನು ತಿಳಿಯಲು ರಾಜ್ಯದ ಜನತೆ ಕಾತುರರಾಗಿದ್ದಾರೆ ಎಂದರು.

ಮಹಾಘಟಬಂಧನ ನಾಯಕರ ವಿರುದ್ಧ ಎನ್‌ಡಿಎ ನಾಯಕರು ನಕಾರಾತ್ಮಕವಾಗಿ ಮಾತನಾಡುತ್ತಿದ್ದಾರೆ. ವಿನಾಕಾರಣ ಆರೋಪಗಳನ್ನು ಮಾಡುತ್ತಿದ್ದಾರೆ. ಆದರೆ, ಬಿಹಾರದ ಜನರು ಸರಕಾರವನ್ನೇ ಬದಲಾವಣೆ ಮಾಡಲು ಮನಸ್ಸು ಮಾಡಿದ್ದಾರೆ ಎಂದರು.

ಪಟನಾದಲ್ಲಿ ಆರ್‌ಜೆಡಿ ಪಕ್ಷದ ಕಚೇರಿಯಲ್ಲಿ ಪ್ರಣಾಳಿಕೆ ಪ್ರಕಟಿಸಿದ ಮಹಾಘಟಬಂಧನ್ ನಾಯಕರು.

ಪ್ರಣಾಳಿಕೆಯ ಪ್ರಮುಖಾಂಶ

- ಮದ್ಯಪಾನ ಮೇಲೆ ಎನ್‌ಡಿಎ ಸರಕಾರ ವಿಧಿಸಿರುವ ನಿರ್ಬಂಧವನ್ನು ತೆಗೆದುಹಾಕಲಾಗುವುದು
- ಎಲ್ಲಾ ಗುತ್ತಿಗೆ ಮತ್ತು ಹೊರಗುತ್ತಿಗೆ ಕಾರ್ಮಿಕರನ್ನು ಖಾಯಂಗೊಳಿಸಲಾಗುವುದು
- ರಾಜ್ಯದ ಪ್ರತಿ ಕುಟುಂಬದ ಒಬ್ಬ ಸದಸ್ಯನಿಗೆ ಸರಕಾರಿ ಉದ್ಯೋಗದ ಭರವಸೆ
- ಇಂಡಿ ಒಕ್ಕೂಟ ಸರಕಾರ ರಚಿಸಿದ 20 ತಿಂಗಳಲ್ಲೇ ಯೋಜನೆ ಜಾರಿ
- ಜೀವಿಕಾ ದೀದಿಗೆ ಸರಕಾರಿ ನೌಕರರಾಗಿ ಶಾಶ್ವತ ಸ್ಥಾನಮಾನ

ರೈಲು ನೀಡದ ಸರಕಾರ

ಛತ್ ಪೂಜೆ ವೇಳೆ ಬೇರೆ ರಾಜ್ಯಗಳಿಂದ ಹಿಂದಿರುಗಿದ ಬಿಹಾರದ ದುಡಿಮೆಗಾರರ ಸ್ಥಿತಿ ನೋಡುವುದೇ ಕಷ್ಟವಾಗಿತ್ತು. ರೈಲ್ವೆ ಸಚಿವರು 12,000 ವಿಶೇಷ ರೈಲುಗಳನ್ನು ಓಡಿಸುವುದಾಗಿ ಘೋಷಿಸಿದ್ದರು. ಆದರೆ, ನಮ್ಮ ಸಹೋದರ ಸಹೋದರಿಯರು ಊರಿಗೆ ವಾಪಸಾಗಲೆಂದು ರೈಲು ಹತ್ತಿದರೆ ಕಾಲಿಡಲೂ ಜಾಗವಿರಲಿಲ್ಲ. ಅವರ ಸ್ಥಿತಿಯನ್ನು ನೋಡಿ ನೋವಾಗಿದೆ. ಕೇಂದ್ರ ಹೇಳಿದ ವಿಶೇಷ ರೈಲುಗಳಿಗೆ ಏನಾಯಿತು? ಎಂದು ತೇಜಸ್ವಿ ಯಾದವ್ ಪ್ರಶ್ನಿಸಿದ್ದಾರೆ. ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಎರಡು ರಾಜ್ಯಗಳಲ್ಲಿ ಪ್ರಶಾಂತ್ ಕಿಶೋರ್ ಮತದಾರ

ಪಟನಾ: ಬಿಹಾರದಲ್ಲಿ ಹೊಸದಾಗಿ ಸ್ಥಾಪನೆಯಾಗಿರುವ ಜನ್ ಸುರಾಜ್ ಪಕ್ಷದ ಸಂಸ್ಥಾಪಕ ಮುಖಂಡ, ಚುನಾವಣಾ ತಂತ್ರಗಾರ ಎಂದೇ ಹೆಸರಾಗಿರುವ ಪ್ರಶಾಂತ್ ಕಿಶೋರ್ ಅವರು ಎರಡು ರಾಜ್ಯಗಳಲ್ಲಿ 'ಮತದಾರ' ಎನಿಸಿಕೊಂಡಿರುವುದು ಮಂಗಳವಾರ ಪತ್ತೆಯಾಗಿದೆ. ಇದು ಬಿಹಾರ ಚುನಾವಣೆ ವೇಳೆ ಹೊಸ ವಿವಾದಕ್ಕೆ ಕಾರಣವಾಗಿದೆ.

ಒಂದು: ಪಶ್ಚಿಮ ಬಂಗಾಳ ಮತ್ತು ಬಿಹಾರ ಎರಡೂ ರಾಜ್ಯಗಳ ಮತದಾರರ ಪಟ್ಟಿಯಲ್ಲಿ ಪ್ರಶಾಂತ್ ಕಿಶೋರ್ ಹೆಸರು ನೋಂದಣಿಯಾಗಿದೆ. ಬಿಹಾರದ ರೋಹ್ತಾಸ್ ಜಿಲ್ಲೆಯ ಸಸಾರಾಮ್ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಕಾರ್ಗಹಾರ್ ವಿಧಾನಸಭಾ ಕ್ಷೇತ್ರದಲ್ಲಿ ಪ್ರಶಾಂತ್ ಕಿಶೋರ್ ಮತದಾರರಾಗಿದ್ದು, ಪೂರ್ವಜರ ಗ್ರಾಮ ಕೋನಾರ್‌ನಲ್ಲಿನ ಮಧ್ಯ ವಿದ್ಯಾಲಯದ ಮತದಾನ ಕೇಂದ್ರದಲ್ಲಿ ಅವರು ಮತ ಚಲಾಯಿಸಲು ಅವಕಾಶವಿದೆ.

ಇದಕ್ಕೂ ಮುನ್ನ ಗೊಂದಲ

ಪಸ್ತುತ ನಡೆದಿರುವ ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಪ್ರಶಾಂತ್ ಕಿಶೋರ್ ಕಾರ್ಗಹಾರ್ ವಿಧಾನಸಭಾ ಕ್ಷೇತ್ರದಿಂದ ಜನ ಸುರಾಜ್ ಪಕ್ಷದ ಅಭ್ಯರ್ಥಿಯಾಗಲಿದ್ದಾರೆ ಎಂದು ಹೇಳಲಾಗಿತ್ತು. ನಂತರ ಅವರು ರಾಘೋಪುರದಿಂದ ರಾಷ್ಟ್ರೀಯ ಜನತಾ ದಳ (ಆರ್‌ಜೆಡಿ) ನಾಯಕ ತೇಜಸ್ವಿ ಪ್ರಸಾದ್ ಯಾದವ್ ವಿರುದ್ಧ ಸ್ಪರ್ಧಿಸುವ ಇಚ್ಛೆ ವ್ಯಕ್ತಪಡಿಸಿದರು. ಆ ಬಳಿಕ ಕಿಶೋರ್ ಚುನಾವಣೆಗೆ ಸ್ಪರ್ಧಿಸುವ ಆಲೋಚನೆಯನ್ನು ಕೈಬಿಟ್ಟರು.

ಎರಡು: ಪಶ್ಚಿಮ ಬಂಗಾಳದಲ್ಲಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಪ್ರತಿನಿಧಿಸುವ ಭಬಾನಿಪುರ ವಿಧಾನಸಭಾ ಕ್ಷೇತ್ರದ ಮತದಾರರ ಪಟ್ಟಿಯಲ್ಲಿಯೂ ಪ್ರಶಾಂತ್ ಕಿಶೋರ್ ಹೆಸರಿದೆ. ಕಾಲಿಘಾಟ್ ರಸ್ತೆಯಲ್ಲಿನ ನಂ. 121ರ ನಿವಾಸ ಪ್ರಶಾಂತ್ ಕಿಶೋರ್ ಅವರ ವಿಳಾಸವಾಗಿದೆ. ಬಿ.ರಾಣಿ ಶಂಕರಿ ಲೇನ್‌ನಲ್ಲಿರುವ ಸೇಂಟ್ ಹೆಲೆನ್ ಶಾಲೆಯಲ್ಲಿನ ಮತಕೇಂದ್ರದಲ್ಲಿ ಅವರು ಮತ ಚಲಾಯಿಸಬಹುದಾಗಿದೆ.

2021ರ ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆ ವೇಳೆ ತೃಣಮೂಲ ಕಾಂಗ್ರೆಸ್ ಪಕ್ಷದ(ಟಿಎಂಸಿ) ರಾಜಕೀಯ ಸಲಹೆಗಾರರಾಗಿ ಕೆಲಸ ಮಾಡುತ್ತಿದ್ದಾಗ ಕಿಶೋರ್ ಹೆಸರು ರಾಜ್ಯ ಮತದಾರರ ಪಟ್ಟಿಗೆ ಸೇರ್ಪಡೆಯಾಗಿದೆ. ಈ ವಿಚಾರವಾಗಿ ಸುದ್ದಿಸಂಸ್ಥೆ ಪ್ರತಿಕ್ರಿಯೆ ಬಯಸಿದಾಗ ಪ್ರಶಾಂತ್ ಕಿಶೋರ್ ಸಂಪರ್ಕಕ್ಕೆ ಸಿಗಲಿಲ್ಲ.

ಪಶ್ಚಿಮ ಬಂಗಾಳ ಚುನಾವಣೆ ನಂತರ ಪ್ರಶಾಂತ್ ಕಿಶೋರ್, ಬಿಹಾರದ ಕಾರ್ಗಹಾರ್ ವಿಧಾನಸಭಾ ಕ್ಷೇತ್ರದಲ್ಲಿ ಮತದಾರರಾಗಿ ನೋಂದಾಯಿಸಿಕೊಂಡರು. ಆನಂತರ ಪಶ್ಚಿಮ ಬಂಗಾಳದ ಮತದಾರರ ಪಟ್ಟಿಯಿಂದ ತಮ್ಮ ಹೆಸರು ತೆಗೆಸಲು ಅರ್ಜಿ ಸಲ್ಲಿಸಿದ್ದಾರೆ ಎಂದು ತಿಳಿದುಬಂದಿದೆ. ಆ ಅರ್ಜಿ ಸ್ಥಿತಿಗತಿ ಸದ್ಯ ನಮಗೆ ತಿಳಿದಿಲ್ಲ ಎಂದು ಜನ ಸುರಾಜ್ ಪಕ್ಷದ ಹಿರಿಯ ನಾಯಕರೊಬ್ಬರು ಸುದ್ದಿಸಂಸ್ಥೆಗೆ ಪ್ರತಿಕ್ರಿಯಿಸಿದ್ದಾರೆ.

ಪಶ್ಚಿಮ ಟರ್ಕಿ: ಪ್ರಬಲ ಭೂಕಂಪ

6.1 ತೀವ್ರತೆಯ ಕಂಪನಕ್ಕೆ ಕಟ್ಟಡಗಳು ನೆಲಸಮ

ಅಂಕಾರಾ: ಪಶ್ಚಿಮ ಟರ್ಕಿಯ ಬಲಿಕೇಸಿರ್ ಪ್ರಾಂತ್ಯದ ಸಿಂದಿರ್‌ಗಿ ಪಟ್ಟಣದಲ್ಲಿ ಸೋಮವಾರ ಭೂಕಂಪವಾಗಿದ್ದು, ರಿಕ್ಟರ್ ಮಾಪಕದಲ್ಲಿ 6.1 ತೀವ್ರತೆ ದಾಖಲಾಗಿದೆ. ಪರಿಣಾಮ ಬೃಹತ್ ಕಟ್ಟಡಗಳು ನೆಲಕ್ಕುರುಳಿವೆ. ಜನರು ಭಯದಿಂದ ಮನೆಯಿಂದಾಚೆ ಓಡಿಹೋಗಿ ಜೀವ ಉಳಿಸಿಕೊಂಡಿದ್ದಾರೆ. ಯಾವುದೇ ಸಾವು-ನೋವು ಸಂಭವಿಸಿಲ್ಲ.

ಕಳೆದ ಬಾರಿ ಸಂಭವಿಸಿದ ಭೂಕಂಪದ ತೀವ್ರತೆಗೆ ಅಲುಗಾಡಿ ಅಡಿಪಾಯ ದುರ್ಬಲಗೊಂಡಿದ್ದ ಮೂರು ಕಟ್ಟಡಗಳು ಹಾಗೂ ಎರಡು ಅಂತಸ್ತಿನ ಅಂಗಡಿ ನೆಲಸಮಗೊಂಡಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಸ್ಥಳೀಯ ಕಾಲಮಾನ ರಾತ್ರಿ 10.48ರಲ್ಲಿ ಭೂಕಂಪವಾಗಿದೆ. ಬಾಲಿಕೇಸಿರ್ ಪ್ರಾಂತ್ಯದ ಸಿಂದಿರ್‌ಗಿ ಪಟ್ಟಣದಲ್ಲಿ, 6 ಕಿ.ಮೀ ಆಳದಲ್ಲಿ ಭೂಕಂಪದ ಕೇಂದ್ರ ಬಿಂದುವಿತ್ತು.

ಭೂಕಂಪದಿಂದಾಗಿ ಇಸ್ತಾನ್‌ಬುಲ್, ಬುರ್ಸಾ, ಮನಿಸಾ, ಇಜ್ಮಿರ್ ಪ್ರಾಂತ್ಯಗಳಲ್ಲಿಯೂ ಕಂಪನವಾಗಿದೆ ಎಂದು ವಿಪತ್ತು ಮತ್ತು ತುರ್ತು ನಿರ್ವಹಣಾ ಪ್ರಾಧಿಕಾರದ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಸ್ಥಳೀಯ ಕಾಲಮಾನ ರಾತ್ರಿ 10.48ರಲ್ಲಿ ಭೂಕಂಪ

ಯಾವುದೇ ಸಾವು-ನೋವು ಸಂಭವಿಸಿಲ್ಲ

ಸಮಾಚಾರ ಸಣ್ಣದಲ್ಲ

ಬಾಲಣ್ಣ ಆನೆಯ ಕಿವಿ ಕತ್ತರಿಸಿದ ವೈದ್ಯರು

ಶಿವಮೊಗ್ಗ: ಸಕ್ರೆಬೈಲು ಆನೆ ಶಿಬಿರ ಆನೆಗಳಲ್ಲಿ ಒಂದಾದ ಬಾಲಣ್ಣ ತೀವ್ರ ಅನಾರೋಗ್ಯದಿಂದ ಬಳಲುತ್ತಿದ್ದು, ಬಲಗಿವಿಯಲ್ಲಿ ಉಂಟಾಗಿದ್ದ ಗ್ಯಾಂಗ್ರಿನ್ ಸೋಂಕಿನಿಂದಾಗಿ ಆನೆಯ ಬಲ ಕಿವಿಯ ಭಾಗವನ್ನು ವೈದ್ಯರ ತಂಡವು ಕತ್ತರಿಸಿ ತೆಗೆದಿದೆ. ತೀವ್ರವಾಗಿ ಸೋಂಕಿಗೆ ಒಳಗಾಗಿದ್ದ ಬಾಲಣ್ಣ ಆನೆಯ ಬಲಗಿವಿ ಸಂಪೂರ್ಣವಾಗಿ ಕಪ್ಪಾಗಿ, ಕೀವು ಸೋರುತ್ತಿತ್ತು. ಈ ಹಿನ್ನೆಲೆ ಆನೆಗೆ ತುರ್ತು ಚಿಕಿತ್ಸೆ ನೀಡಲು ಶನಿವಾರ ಸಂಜೆ ಬೆಂಗಳೂರಿನಿಂದ ವಿಶೇಷ ವೈದ್ಯರ ತಂಡವು ಸಕ್ರೆಬೈಲು ಶಿಬಿರಕ್ಕೆ ಆಗಮಿಸಿತ್ತು. ತಜ್ಞ ವೈದ್ಯರಾದ ಡಾ. ಚೆಟ್ಟಿಯಪ್ಪ, ಡಾ. ರಮೇಶ್ ಸೇರಿದಂತೆ ಒಟ್ಟು ಐದು ಜನರ ವೈದ್ಯರ ತಂಡವು ಆನೆಯ ಆರೋಗ್ಯವನ್ನು ಪರಿಶೀಲಿಸಿ ತಕ್ಷಣವೇ ಚಿಕಿತ್ಸೆಯನ್ನು ಆರಂಭಿಸಿತು. ಸೋಂಕು ತೀವ್ರವಾಗಿದ್ದರಿಂದ ಮತ್ತು ಗ್ಯಾಂಗ್ರಿನ್ ದೇಹದ ಇತರ ಭಾಗಗಳಿಗೆ ಹರಡುವುದನ್ನು ತಡೆಯಲು, ವೈದ್ಯಕೀಯ ತಂಡವು ಆನೆಯ ಬಲ ಕಿವಿಯನ್ನು ಕತ್ತರಿಸಿದೆ.

ಖಾಸಗಿ ಬಸ್‌ನಲ್ಲಿ ಹಣ ಸಾಗಣೆ: ಇಬ್ಬರು ವಶಕ್ಕೆ

ಕಾರವಾರ: ಗೋವಾದಿಂದ ಬೆಂಗಳೂರಿನ ಹೊಸೂರಿಗೆ ಖಾಸಗಿ ಬಸ್ಸಿನಲ್ಲಿ ಅಕ್ರಮವಾಗಿ ಸಾಗಿಸಲಾಗುತ್ತಿದ್ದ 1 ಕೋಟಿ ನಗದು ಹಣವನ್ನು ಕಾರವಾರದ ಮಾಜಾಳಿ ಚೆಕ್‌ಪೋಸ್ಟ್ ಬಳಿ ಪೊಲೀಸರು ವಶಪಡಿಸಿಕೊಂಡಿದ್ದಾರೆ. ಈ ಸಂಬಂಧ ಇಬ್ಬರು ವ್ಯಕ್ತಿಗಳನ್ನು ವಶಕ್ಕೆ ಪಡೆಯಲಾಗಿದೆ. ಸೋಮವಾರ ತಡರಾತ್ರಿ ಮಾಜಾಳಿ ಚೆಕ್‌ಪೋಸ್ಟ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಪೊಲೀಸರು ಖಾಸಗಿ ಬಸ್‌ನ ಪ್ರಯಾಣಿಕರ ಬ್ಯಾಗ್‌ಗಳನ್ನು ತಪಾಸಣೆ ನಡೆಸುತ್ತಿದ್ದಾಗ, ಕಲ್ವೇಶ್‌ಕುಮಾರ ಎಂಬಾತನ ಬಳಿ ಇದ್ದ ಬ್ಯಾಗ್‌ನಲ್ಲಿ ಒಂದು ಕೋಟಿ ರೂಪಾಯಿ ಪತ್ತೆಯಾಗಿದೆ. ಕಲ್ವೇಶ್‌ಕುಮಾರ ಹಾಗೂ ಮತ್ತೊಬ್ಬ ವ್ಯಕ್ತಿ ಸೇರಿ ಈ ಹಣವನ್ನು ಸಾಗಿಸುತ್ತಿದ್ದರು. ವಶಪಡಿಸಿಕೊಂಡ ಹಣದ ಮೂಲ ಮತ್ತು ಅದು ಯಾರಿಗೆ ಸೇರಿದ್ದು ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಅಕ್ರಮ ವ್ಯವಹಾರ ಅಥವಾ ರಾಜಕೀಯ ನಂಟಿನ ಶಂಕೆ ವ್ಯಕ್ತವಾಗಿದೆ. ಈ ಬಗ್ಗೆ ಚಿತ್ತಾಕುಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸೌರ ಗುರಿಸಾಧನೆಯಲ್ಲಿ ಜಿ.20 ರಾಷ್ಟ್ರಗಳ ಪೈಕಿ ಭಾರತವೇ ಮುಂಚೂಣಿ
ದೆಹಲಿಯಲ್ಲಿ ಅಂತಾರಾಷ್ಟ್ರೀಯ ಸೌರ ಒಕ್ಕೂಟ ಸಭೆಯ 8ನೇ ಅಧಿವೇಶನ ಉದ್ಘಾಟನೆ

ನವೀಕರಿಸಬಹುದಾದ ಇಂಧನ: ಭಾರತವು ವಿಶ್ವದ 2ನೇ ಮಾರುಕಟ್ಟೆ

ಅಂತಾರಾಷ್ಟ್ರೀಯ ಸೌರ ಒಕ್ಕೂಟ ಸಭೆಯ 8ನೇ ಅಧಿವೇಶನ ಉದ್ದೇಶಿಸಿ ಸಚಿವ ಪ್ರಲ್ಹಾದ್ ಜೋಶಿ ಮಾತನಾಡಿದರು.

ದೆಹಲಿ: ನವೀಕರಿಸಬಹುದಾದ ಇಂಧನ ಗುರಿ ಸಾಧನೆಯಲ್ಲಿ ಜಿ. 20 ರಾಷ್ಟ್ರಗಳ ಪೈಕಿ ಭಾರತ ಏಕೈಕ ರಾಷ್ಟ್ರವಾಗಿ ಹೊರಹೊಮ್ಮಿದ್ದು, ಶೀಘ್ರದಲ್ಲೇ ವಿಶ್ವದ ಎರಡನೇ ಅತಿದೊಡ್ಡ ಮಾರುಕಟ್ಟೆಯಾಗಲಿದೆ ಎಂದು ಕೇಂದ್ರ ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ದೆಹಲಿಯಲ್ಲಿ ನಡೆದ ಅಂತಾರಾಷ್ಟ್ರೀಯ ಸೌರ ಒಕ್ಕೂಟ ಸಭೆಯ 8ನೇ ಅಧಿವೇಶನ ಉದ್ದೇಶಿಸಿ ಮಾತನಾಡಿ, ಭಾರತ ವಿಶ್ವದ ಎರಡನೇ ಅತಿದೊಡ್ಡ ನವೀಕರಿಸಬಹುದಾದ ಇಂಧನ ಮಾರುಕಟ್ಟೆಯಾಗಲಿದೆ ಎಂದು ಅಂತರಾಷ್ಟ್ರೀಯ ನವೀಕರಿಸಬಹುದಾದ ಇಂಧನ ಸಂಸ್ಥೆಯೇ ವಿಶ್ವಾಸ ವ್ಯಕ್ತಪಡಿಸಿದೆ ಎಂದರು.

ಹವಾಮಾನ ಬದಲಾವಣೆ ತಗ್ಗಿಸುವ ಜಾಗತಿಕ ಪ್ರಯತ್ನಗಳಲ್ಲಿ ಭಾರತ ನಿರಂತರವಾಗಿ ಮುಂಚೂಣಿಯಲ್ಲಿದೆ. ಹೀಗಾಗಿ ಅಂತರಾಷ್ಟ್ರೀಯ ನವೀಕರಿಸಬಹುದಾದ ಇಂಧನ ಸಂಸ್ಥೆ ಭಾರತವನ್ನು ಇಂಧನ ಪರಿವರ್ತನಾ ಶಕ್ತಿ ಕೇಂದ್ರವೆಂದು ಕರೆದಿದೆ. ಮತ್ತು ಹವಾಮಾನ ಬದಲಾವಣೆ ಕಾರ್ಯಕ್ಷಮತೆಯ ಸೂಚ್ಯಂಕದಲ್ಲಿ ಭಾರತ ಉನ್ನತ ಸಾಧನೆ ತೋರುತ್ತಿದೆ. 5 ವರ್ಷದಲ್ಲಿ ವಿದ್ಯುತ್ ಉತ್ಪಾದನಾ ಸಾಮರ್ಥ್ಯದಲ್ಲಿ ಭಾರತ ಜಾಗತಿಕವಾಗಿ ಮೂರನೇ ಸ್ಥಾನದಲ್ಲಿದೆ. 257 ಜಿಡಬ್ಲ್ಯೂ ಸಾಮರ್ಥ್ಯದೊಂದಿಗೆ ಭಾರತ 4ನೇ ಅತಿದೊಡ್ಡ ನವೀಕರಿಸಬಹುದಾದ ಇಂಧನ ಉತ್ಪಾದಕ ರಾಷ್ಟ್ರವಾಗಿ ಗುರುತಿಸಿಕೊಂಡಿದ್ದು, ಭಾರತದ ಸೌರ ಸಾಮರ್ಥ್ಯ 2014ರಲ್ಲಿನ 2.8 ಜಿಡಬ್ಲ್ಯೂ ಇಂದು 128 ಜಿಡಬ್ಲ್ಯೂ ಏರಿದೆ ಎಂದರು.

ಪ್ರಧಾನಿ ನರೇಂದ್ರ ಮೋದಿಯವರ ದೂರದೃಷ್ಟಿ ಮತ್ತು ನೇತೃತ್ವದಲ್ಲಿ ಭಾರತ ಪಳೆಯುಳಿಕೆಯೇತರ ಇಂಧನದಲ್ಲಿ ಐದು ವರ್ಷ ಮೊದಲೇ ಶೇ.50ರಷ್ಟು ಗುರಿ ಸಾಧಿಸಿದೆ. ಕೇಂದ್ರ ಸರಕಾರ ಜಿಎಸ್‌ಟಿ ಕಡಿತಗೊಳಿಸಿದ್ದರಿಂದ ಸೌರಶಕ್ತಿಯಾಗಿರಲಿ, ಬ್ಯಾಟರಿಯಾಗಿರಲಿ ಮತ್ತು ಹಸಿರು ಅಮೋನಿಯಾ ಆಗಿರಲಿ ಜಾಗತಿಕವಾಗಿ ಅತ್ಯಂತ ಕಡಿಮೆ ದರಗಳಲ್ಲಿ ಲಭ್ಯವಾಗುತ್ತಿದೆ. ಈ ಮೂಲಕ ಜಗತ್ತಿಗೆ ಶುದ್ಧ ಇಂಧನ ಕೈಗೆಟುಕುವಂತೆ ಮಾಡುವಲ್ಲಿ ಭಾರತ ದಿಟ್ಟ ಹೆಜ್ಜೆಯಿರಿಸಿದೆ. ಜಾಗತಿಕ ಸೌರಶಕ್ತಿಯು 1,600 ಜಿಡಬ್ಲ್ಯೂ ಮೀರಿದೆ. ಆದರೆ, ಒಟ್ಟು ನವೀಕರಿಸಬಹುದಾದ ಇಂದನ ಉತ್ಪಾದನೆಯಲ್ಲಿ ಸುಮಾರು 40 ಪ್ರತಿಶತದಷ್ಟು ಪಾಲನ್ನು ಹೊಂದಿದೆ. ಆದರೂ ಉಪ-ಸಹಾರನ್ ಆಫ್ರಿಕಾ ಮತ್ತು ಸಣ್ಣ ದ್ವೀಪ ರಾಷ್ಟ್ರಗಳಲ್ಲಿ ಲಕ್ಷಾಂತರ ಜನರು ಇನ್ನೂ ವಿದ್ಯುತ್ ಇಲ್ಲದೆ ಬದುಕುತ್ತಿದ್ದಾರೆ. ಇದನ್ನು ನಿವಾರಿಸಲು ಸಾಮೂಹಿಕ ಪ್ರಯತ್ನ ಮತ್ತು ಸಮಾನ ಹಣಕಾಸು ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು.

ಮಾರುಕಟ್ಟೆಗೆ ಶೇ. 25 ತರಕಾರಿ ಕೊರತೆ | ಮಳೆಯಿಂದಾಗಿ ಬೆಳೆಹಾನಿ | ನುಗ್ಗೆಕಾಯಿ ಬೆಲೆ ರು. 100ರಿಂದ 150ಕ್ಕೆ ಏರಿಕೆ

ತರಕಾರಿಗಳ ಬೆಲೆಯಲ್ಲಿ ಭಾರೀ ಏರಿಕೆ

ಹೂವಪ್ಪ ಐ ಹೆಚ್. ಬೆಂಗಳೂರು

ಏಕಾಏಕಿ ಹಲವು ತರಕಾರಿಗಳ ಬೆಲೆ ಏರಿಕೆಯಾಗಿದೆ. ಕಳೆದ ಒಂದು ವಾರದಿಂದ ನಗರದಲ್ಲಿ ಬಿಟ್ಟು ಬಿಡದೆ ಮಳೆಯಾಗುತ್ತಿದೆ. ಇದರ ಪರಿಣಾಮವಾಗಿ ಸಗಟು ಮಾರುಕಟ್ಟೆಗೆ ಶೇ.25ರಷ್ಟು ತರಕಾರಿ ಪೂರೈಕೆ ಕೊರತೆಯಾಗಿದೆ. ಹೀಗಾಗಿ ಹಲವು ತರಕಾರಿಗಳ ಬೆಲೆ 100 ರು. ಗಡಿ ದಾಟಿವೆ.

ಬೆಂಗಳೂರು ಸೇರಿದಂತೆ ರಾಜ್ಯದ ಪ್ರಮುಖ ಜಿಲ್ಲೆಗಳಲ್ಲಿ ಅಕ್ಟೋಬರ್ ಕೊನೆಯ ವರೆಗೂ ಮಳೆ ಮುಂದುವರಿಯಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಹೀಗಾಗಿ ಮುಂದಿನ ದಿನಗಳಲ್ಲಿ ತರಕಾರಿ ಬೆಲೆ ಇನ್ನಷ್ಟು ಹೆಚ್ಚಳವಾಗುವ ಆತಂಕವೂ ಎದುರಾಗಿದೆ. ಸತತವಾಗಿ ಸುರಿಯುತ್ತಿರುವ ಮಳೆಯಿಂದಾಗಿ ತರಕಾರಿ ಪೂರೈಕೆ ವ್ಯತ್ಯಾಸವಾಗಿದೆ, ಅಲ್ಲದೇ ಮಳೆಯಿಂದ ಬೆಳೆಗಳಿಗೆ ಹಾನಿಯಾಗಿದೆ. ಇದರಿಂದ ಬೇಡಿಕೆ ಹೆಚ್ಚಿದ್ದರೂ, ಪೂರೈಕೆ ಕಡಿಮೆಯಾಗಿದೆ. ತರಕಾರಿ ಪೂರೈಕೆ ಹಾಗೂ ಬೇಡಿಕೆ ನಡುವಿನ ವ್ಯತ್ಯಾಸದಿಂದಾಗಿ ಸಹಜವಾಗಿಯೇ ಸಗಟು ಬೆಲೆ ಏರಿಕೆಯಾಗಿದೆ.

ಈ ಹಿನ್ನೆಲೆಯಲ್ಲಿ ತರಕಾರಿಯ ಚಿಲ್ಲರೆ ದರ ಏರಿಕೆಯಾಗಿದ್ದು, ಈರುಳ್ಳಿ, ಆಲೂಗಡ್ಡೆ ಸೇರಿದಂತೆ ಅಗತ್ಯ ತರಕಾರಿ ವಸ್ತುಗಳಾದ ತರಕಾರಿಗಳ ಬೆಲೆ ಹೆಚ್ಚಳವಾಗಿದೆ. ಬೆಳ್ಳುಳ್ಳಿ ಹಾಗೂ ಶುಂಠಿ ಬೆಲೆಯೂ ಹೆಚ್ಚಳವಾಗಿದೆ. ಬೆಳ್ಳುಳ್ಳಿ ಬೆಲೆ ಕೆ.ಜಿಗೆ 120 ರು.ಯಿಂದ 140 ರು.ಗೆ ಹೆಚ್ಚಳವಾಗಿದೆ. ಶುಂಠಿ ಬೆಲೆಯು 50ರಿಂದ 80 ರು.ಆಗಿದೆ. ಅಲ್ಲದೇ, ಈರುಳ್ಳಿ ಬೆಲೆ ಪ್ರತಿ ಕೆ.ಜಿಗೆ 25 ರು.ನಿಂದ 35 ರು.ಗೆ ಏಕಾಏಕಿ ಹೆಚ್ಚಳವಾಗಿದೆ. ಆಲೂಗಡ್ಡೆ ಬೆಲೆ 30 ರೂಪಾಯಿಯಿ 40 ರು. ಆಗಿದ್ದರೆ, ಟೊಮೆಟೊ ಬೆಲೆ ಪ್ರತಿ ಕೆ.ಜಿಗೆ 20ರಿಂದ 30 ರು. ಆಗಿದೆ.

ಬೇಡಿಕೆ ಹೆಚ್ಚಳ: ದಸರಾ ಮತ್ತು ದೀಪಾವಳಿ ಹಬ್ಬದ ನಂತರ ತರಕಾರಿಗಳ ಬೆಲೆ ಏರಿಕೆ ಸಾಮಾನ್ಯ. ಕಾರ್ತಿಕ ಮಾಸ ಆರಂಭವಾಗಿದ್ದು, ಮದುವೆ, ಗೃಹಪ್ರವೇಶ ಸೇರಿದಂತೆ ಶುಭ ಕಾರ್ಯಗಳು ಆರಂಭವಾಗಿದ್ದು, ಎಲ್ಲೆಡೆ ತರಕಾರಿಗಳಿಗೆ ಬೇಡಿಕೆ ಹೆಚ್ಚಿದೆ. ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡು ಸೇರಿದಂತೆ ಹೊರ ರಾಜ್ಯಗಳಲ್ಲಿ ವಿಪರೀತ ಮಳೆಯಿಂದಾಗಿ ತರಕಾರಿ ಬೆಳೆಗಳು ಹಾನಿಗೀಡಾಗಿವೆ. ಮಳೆ ಮತ್ತು ಮೋಡ ಮುಸುಕಿದ ವಾತಾವರಣದ ಕಾರಣಕ್ಕೆ ರೋಗಬಾಧೆ ಕಾಣಿಸಿಕೊಂಡಿದ್ದು, ತರಕಾರಿ ಬೆಳೆಗಳು ಹೆಚ್ಚಿನ ಪ್ರಮಾಣದಲ್ಲಿ ನಾಶವಾಗಿವೆ. ಹೊರ ರಾಜ್ಯಗಳಲ್ಲಿ ತರಕಾರಿಗಳಿಗೆ ಬೇಡಿಕೆ ದಿಢೀರ್ ಹೆಚ್ಚಳವಾಗಿದೆ. ಬೇಡಿಕೆ ತಕ್ಕಂತೆ ಬೆಲೆ ಏರಿಕೆಯಾಗಿದೆ ಎಂದು ಹೇಳುತ್ತಾರೆ ಚಿಲ್ಲರೆ ತರಕಾರಿ ವ್ಯಾಪಾರಿ ವಿಜಯಕುಮಾರ್.

ಕುಸಿದ ನುಗ್ಗೆಕಾಯಿ ಫಸಲು: ಅಕ್ಟೋಬರ್‌ನಿಂದ ಜನವರಿಯ ವರೆಗೆ ನುಗ್ಗೆ ಮರಗಳಿಗೆ ಕಂಬಳಿ ಹುಳು ಬಾಧೆ ಸಾಮಾನ್ಯ. ಇದರಿಂದ ಇಳುವರಿ ಕಡಿಮೆಯಾಗುತ್ತದೆ. ಜಿಲ್ಲೆಯಲ್ಲಿ ನುಗ್ಗೆ ಮರಗಳಲ್ಲಿ ಕಂಬಳಿ ಹುಳು ಕಾಣಿಸಿಕೊಂಡಿದ್ದು ಫಸಲು ಕುಸಿದಿದೆ. ಹೊರ ಜಿಲ್ಲೆಗಳಿಂದ ಸ್ಥಳೀಯ ಮಾರುಕಟ್ಟೆಗೆ ನುಗ್ಗೆಕಾಯಿ ಬರುತ್ತಿದ್ದು, ಬೆಲೆ ನಿರೀಕ್ಷೆಗೂ ಮೀರಿ ಏರಿಕೆಯಾಗಿದೆ ಚಿಲ್ಲರೆ ದರ ಕೆಜಿಗೆ 100ರಿಂದ 150 ರು. ಆಗಿದೆ.

ಕೊಳೆತ ಸೊಪ್ಪು: ಕೆಲ ತಿಂಗಳ ಹಿಂದೆ ಸೊಪ್ಪಿನ ಬೆಲೆ ಸ್ವಲ್ಪ ಮಟ್ಟಿಗೆ ಇಳಿಕೆ ಕಂಡಿದ್ದರಿಂದ ಗ್ರಾಹಕರು ನಿಟ್ಟುಸಿರು ಬಿಟ್ಟಿದ್ದರು. ಆದರೆ ರೈತರು ಬೆಲೆ ಕುಸಿತದಿಂದ ನಷ್ಟ ಅನುಭವಿಸಿದ್ದರು. ಇದೀಗ ಗ್ರಾಹಕರಿಗೆ ಬೆಲೆ ಏರಿಕೆಯ ಬಿಸಿ ತಟ್ಟಿದೆ. ಜಮೀನುಗಳಲ್ಲಿ ಮಳೆನೀರು ನಿಂತು ಸೊಪ್ಪಿನ ಗಿಡಗಳು ಕೊಳೆತಿವೆ. ಇದರಿಂದ ಮಾರುಕಟ್ಟೆಯಲ್ಲಿ ಸೊಪ್ಪುಗಳು ಸಿಗುವುದೇ ಕಷ್ಟವಾಗಿದೆ. ಕೊತ್ತಂಬರಿ ಸೊಪ್ಪು ಒಂದು ಕಟ್ಟಿಗೆ 50, ರೂ. ದಂಟು ಮತ್ತು ಸಬ್ಬಕ್ಕಿ 30 ರು., ಮೆಂತೆ ಸೊಪ್ಪು 45 ರು.ಗೆ ಮಾರಾಟವಾಗುತ್ತಿದೆ.

ಟೊಮ್ಯಾಟೋ ಬೆಲೆಯೂ ಕುಸಿತ

ಮಳೆಯಿಂದಾಗಿ ಟೊಮ್ಯಾಟೋ ಬೆಳೆಗೆ ಹಾನಿಯಾಗಿದ್ದು, ಬೆಂಗಳೂರು ಎಪಿಎಂಸಿ ಮಾರುಕಟ್ಟೆಗೆ ಶೇ. 20ರಷ್ಟು ಪೂರೈಕೆ ಕಡಿಮೆಯಾಗಿದೆ. ಈ ಹಿನ್ನೆಲೆಯಲ್ಲಿಎರಡು ತಿಂಗಳ ಹಿಂದೆ ಸಗಟು ದರ ಕೆ.ಜಿಗೆ 3-4 ರು.ಇದ್ದ ಬೆಲೆ ಈಗ 8-12 ರು. ಆಗಿದೆ. ಚಿಲ್ಲರೆ ದರ ಕೆ.ಜಿಗೆ 20 ರು.ಇದ್ದ ಟೊಮ್ಯಾಟೋ ಬೆಲೆ ಈಗ 30 ರು. ಗಡಿ ದಾಟಿದೆ. ಮನೆ, ಹೋಟೆಲ್ ಹಾಗೂ ಶುಭ ಕಾರ್ಯಗಳಲ್ಲಿ ಅಡುಗೆಗೆ ಟೊಮ್ಯಾಟೋ ಬಳಕೆ ಸರ್ವೇ ಸಾಮಾನ್ಯ. ಮಳೆಯಿಂದಾಗಿ ಜಿಲ್ಲೆಯಲ್ಲಿ ಟೊಮ್ಯಾಟೋ ಬೆಳೆಗೆ ಹೆಚ್ಚಿನ ಹಾನಿಯಾಗಿದೆ. ಇದರಿಂದ ಸ್ಥಳೀಯ ಮಾರುಕಟ್ಟೆಯಲ್ಲಿ ಟೊಮೆಟೊ ಆವಕ ಕಡಿಮೆಯಾಗಿದೆ. ಹೊರ ರಾಜ್ಯ ಮತ್ತು ಜಿಲ್ಲೆಗಳಲ್ಲೂ ಇದೇ ಪರಿಸ್ಥಿತಿಯಿದೆ.

ಈ ಬಾರಿ ಸುರಿದ ಮಳೆಗೆ ಇಳುವರಿ ಕಡಿಮೆಯಾಗಿದೆ. ಇದರಿಂದ ಮಾರುಕಟ್ಟೆಗೆ ಪೂರೈಕೆ ಕೂಡ ಕಡಿಮೆಯಾದ ಹಿನ್ನೆಲೆಯಲ್ಲಿ ಸ್ವಲ್ಪ ಲಾಭದಲ್ಲಿಯೇ ಮಾರಾಟ ಮಾಡಿ ಖುಷಿ ಪಡುವಂತಾಗಿದೆ.

-ಶ್ರೀನಿವಾಸ್ ಕೋಲಾರ ರೈತ

ಮಳೆಯಿಂದಾಗಿ ತರಕಾರಿ ಬೆಳೆಗಳು ಹಾನಿಗೀಡಾಗಿವೆ. ಹೊರ ರಾಜ್ಯಗಳಲ್ಲಿ ತರಕಾರಿಗಳಿಗೆ ಬೇಡಿಕೆ ದಿಢೀರ್ ಹೆಚ್ಚಳವಾಗಿದೆ. ಬೇಡಿಕೆ ತಕ್ಕಂತೆ ಬೆಲೆ ಏರಿಕೆಯಾಗಿದೆ.

-ವಿಜಯಕುಮಾರ್ ಬೆಂಗಳೂರು, ಎಪಿಎಂಸಿ ಸಗಟು ವ್ಯಾಪಾರಿ

ವಿಶ್ವವಾಣಿ
@vishwavaninews
ಆರಾಮ
ಅನುದಿನವೂ ವಿರಾಮಕ್ಕೆ ಒಂದು ನೆಪ ಬೆಂಗಳೂರು 29-10-2025 ಬುಧವಾರ

ವಿಜ್ಞಾನಕ್ಕೆ ಮಹಾನ್ ತಿರುವನ್ನು ನೀಡಿದ ಚಿರಂಜೀವಿ ಹೆನ್ರೀಟ್ಟಾ ಲ್ಯಾಕ್ಸ್

ಹೀಲಾ ಜೀವಕೋಶಗಳು ಹಲವು ವೈಜ್ಞಾನಿಕ ಸಾಧನೆಗಳಿಗೆ ಕಾರಣವಾಗಿವೆ, ಆಗುತ್ತಿವೆ. ಆದರೆ ಈ ಜೀವಕೋಶಗಳನ್ನು ಬಳಸಿಕೊಳ್ಳಲು ಹೆನ್ರೀಟ್ಟಾ ಲ್ಯಾಕ್ಸ್ ಇಂದ ಯಾವುದೇ ಅನುಮತಿಯನ್ನು ಪಡೆದಿಲ್ಲ. ಆಕೆಯ ಮರಣಾನಂತರ ಪ್ರಯೋಗಗಳಲ್ಲಿ ಬಳಸಲು ಅವರ ಮನೆಯವರಿಂದಲೂ ಒಪ್ಪಿಗೆಯನ್ನು ಪಡೆದಿಲ್ಲ. ಹೀಲಾ ಜೀವಕೋಶಗಳ ನೆರವಿನಿಂದ ರೂಪಿಸಿದ ಅನೇಕ ಲಸಿಕೆಗಳನ್ನು ಮಾರಿ ಔಷಧಿ ಹಾಗೂ ಬಯೋಟೆಕ್ ಕಂಪನಿಗಳು ದಂಡಿಯಾಗಿ ದುಡ್ಡು ಮಾಡಿದರೂ, ಅದರಲ್ಲೊಂದು ಪಾಲನ್ನೂ ಹೆನ್ರೀಟ್ಟಾಳ ಕುಟುಂಬಕ್ಕೆ ನೀಡಿಲ್ಲ.

1951ನೆಯ ಇಸವಿಯ ಚಳಿಗಾಲ. ಅಮೆರಿಕದ ಬಾಲ್ಟಿಮೋರ್‌ನಲ್ಲಿರುವ ಜಾನ್ ಹಾಪ್ಕಿನ್ಸ್ ಆಸ್ಪತ್ರೆ. 31 ವರ್ಷದ ಕಪ್ಪುಮಹಿಳೆ ಹೆನ್ರಿಟ್ಟಾ ಲ್ಯಾಕ್ಸ್, ಕೆಳಹೊಟ್ಟೆಯನ್ನು ಹಿಡಿದುಕೊಂಡು ಆಸ್ಪತ್ರೆಯೊಳಗೆ ಬಂದಳು. ಆಕೆಯು ವರ್ಜೀನಿಯ ಪ್ರಾಂತದಲ್ಲಿ ತಂಬಾಕನ್ನು ಬೆಳೆಯುವ ಕೃಷಿಕಳಾಗಿದ್ದಳು. ಆಕೆಗೆ ಮದುವೆಯಾಗಿ ಐದು ಮಕ್ಕಳಿದ್ದವು. ಕೆಲವು ವಾರಗಳಿಂದ ಆಕೆಯ ಕಿಬ್ಬೊಟ್ಟೆ ಪ್ರದೇಶದಲ್ಲಿ ವಿಪರೀತ ನೋವು ಕಂಡು ಬರುತ್ತಿತ್ತು. ಹೊಟ್ಟೆಯನ್ನು ಮುಟ್ಟಿನೋಡಿಕೊಂಡು, ತನ್ನ ಗಂಡನ ಬಳಿ "ನನ್ನ ಕೆಳಹೊಟ್ಟೆಯಲ್ಲಿ ಗಟ್ಟಿಯಾದ ಚೆಂಡಿನಂಥ ವಸ್ತುವೊಂದು ಕೈಗೆ ಸಿಗುತ್ತಿದೆ" ಎಂದು ಹೇಳಿಕೊಂಡಳು. ಆಗ ದಂಪತಿಗಳು ಜಾನ್ ಹಾಪ್ಕಿನ್ಸ್ ಆಸ್ಪತ್ರೆಯ ಕಪ್ಪುವರ್ಣದವರಿಗೆ ಮೀಸಲಿದ್ದ ವಿಭಾಗಕ್ಕೆ ಬಂದರು. ವೈದ್ಯರು ಆಕೆಯನ್ನು ಪರೀಕ್ಷಿಸಿದರು. ಆಗ ಅವರಿಗೆ ಆಕೆಯ ಗರ್ಭಕೊರಳಿನಿಂದ ಒಂದು ನೇರಳೆ ಬಣ್ಣದ ದುಂಡನೆಯ ಗಂಟು ಹೊರಚಾಚಿಕೊಂಡಿರುವುದು ಕಂಡಿತು. ಕೂಡಲೇ ಆ ಗಂಟಿನ ಹುಂಡಿಯನ್ನು (ಬಯಾಪ್ಸಿ) ತೆಗೆದುಕೊಂಡರು. ಅಂದಿನ ದಿನಗಳಲ್ಲಿ ಲಭ್ಯವಿದ್ದ ಚಿಕಿತ್ಸೆಯನ್ನು ನೀಡಿದರು. ಆಕೆಯನ್ನು ಮನೆಗೆ ಕಳುಹಿಸಿಕೊಟ್ಟರು. ಆಗ ಹೆನ್ರೀಟ್ಟಾಳಿಗೆ ತಾನು ವೈದ್ಯಕೀಯ ಜಗತ್ತಿನಲ್ಲಿ 'ಅಮರ'ಳಾಗುತ್ತಿದ್ದೇನೆ ಎನ್ನುವ ವಿಚಾರವು ತಿಳಿದಿರಲಿಲ್ಲ.

'ಹೀಲಾ' ಜನನ: ಹೆನ್ರೀಟ್ಟಾ ಗರ್ಭಕೊರಳಿನ ಗಂಟಿನಿಂದ ಹುಂಡಿ ಹಾಕಿ ತೆಗೆದ ಗಂಟಿನ ಚೂರು ಡಾ.ಜಾರ್ಜ್ ಓಟ್ಟೋ ಗೇ (1899–1970) ಅವರ ಮೇಜನ್ನು ಸೇರಿತು. ಇವರು ಕೋಶ ಕೃಷಿಕೆ (ಸೆಲ್ ಕಲ್ಚರ್) ಎಂಬ ಹೊಸ ತಂತ್ರಜ್ಞಾನದ ಅಧ್ವರ್ಯುವಾಗಿದ್ದರು. ಇದು ಮನುಷ್ಯನ ದೇಹದ ವಿವಿಧ ಜೀವಕೋಶಗಳನ್ನು ಪ್ರಯೋಗಾಲಯದ ಕೃತಕ ಪರಿಸರದಲ್ಲಿ ಬೆಳೆಸುವ ತಂತ್ರಜ್ಞಾನವಾಗಿತ್ತು. ಎಲ್ಲ ರೀತಿಯ ಪೋಷಕಾಂಶಗಳನ್ನು ಹಾಗೂ ಅಗತ್ಯ ಪರಿಸರವನ್ನು ಒದಗಿಸಿದರೂ, ಜೀವಕೋಶಗಳು ಒಂದು ನಿಗದಿತ ಪ್ರಮಾಣದವರೆಗೆ ಪುನರುತ್ಪಾದನೆಯಾಗಿ ಆನಂತರ ಸ್ಥಗಿತವಾಗುತ್ತಿದ್ದವು. ಅವು ಏಕೆ ಸ್ಥಗಿತವಾದವು ಎಂಬುದಕ್ಕೆ ಯಾವುದೇ ರೀತಿಯ ವೈಜ್ಞಾನಿಕ ವಿವರಣೆಯು ಅವರಿಗೆ ತಿಳಿದಿರಲಿಲ್ಲ. ಗೇ ಅವರ ಸಹಾಯಕಿಯು ಹೆನ್ರೀಟ್ಟಾಳ ಜೀವಕೋಶಗಳನ್ನು ಕೃಷಿಕೆಯ ಮಾಧ್ಯಮದಲ್ಲಿ ಬೆರೆಸಿದಳು. ಬೆಳೆಯಲು ಬಿಟ್ಟಳು. ಸ್ವಲ್ಪ ದಿನಗಳಾದ ಮೇಲೆ ನೋಡಿದಳು. ಈ ಕ್ಯಾನ್ಸರ್ ಜೀವಕೋಶಗಳು ತಮ್ಮ ಪುನರುತ್ಪಾದನೆಯನ್ನು ನಿಲ್ಲಿಸದೆ, ನಿರಂತರವಾಗಿ ಮತ್ತೆ ಮತ್ತೆ ವಿಭಜನೆಗೊಳ್ಳುತ್ತಿದ್ದವು. ಇಡೀ ಗಾಜಿನ ತಟ್ಟೆಯನ್ನು ತುಂಬಿ ಹೊರಗೆ ಜಿನುಗಲಾರಂಭಿಸಿದವು. ಅದು ಅಂದಿನ ವೈದ್ಯ ವಿಜ್ಞಾನಕ್ಕೆ ಒಂದು ಹೊಸ ಸುದ್ದಿಯಾಗಿತ್ತು. ಗೇ ಈ ಕ್ಯಾನ್ಸರ್ ಜೀವಕೋಶಗಳು ಹೆನ್ರೀಟ್ಟಾ ಲ್ಯಾಕ್ಸ್ ಅವರ ಒಡಲಿನಿಂದ ಬಂದಿದ್ದ ಕಾರಣ, ಆಕೆಯ ಹೆಸರಿನ ಮೊದಲ ಎರಡು ಅಕ್ಷರಗಳನ್ನು ತೆಗೆದುಕೊಂಡು 'ಹೀಲಾ' ಜೀವಕೋಶಗಳು ಎಂದು ನಾಮಕರಣ ಮಾಡಿದರು. ಹೀಲಾ ಜೀವಕೋಶಗಳು ಜಗತ್ತಿನ ಮೊತ್ತಮೊದಲ 'ಮಾನವ ಅಮರ ಜೀವಕೋಶ'ಗಳ ಸರಣಿ (ಇಮ್ಮಾರ್ಟಲ್ ಹ್ಯೂಮನ್ ಸೆಲ್ ಲೈನ್) ಎಂಬ ಅಭಿದಾನಕ್ಕೆ ಪಾತ್ರವಾಯಿತು. ಈ ಬಗ್ಗೆ ಹೆನ್ರೀಟ್ಟಾಳಿಗೆ ಲವಲೇಶವೂ ತಿಳಿವಿರಲಿಲ್ಲ.

ದುರಂತ: ಹೆನ್ರೀಟ್ಟಾಳ ಕ್ಯಾನ್ಸರ್ ಜೀವಕೋಶಗಳು ಪ್ರಯೋಗಾಲಯದ ವಿಶೇಷ ಫ್ಲಾಸ್ಕುಗಳಲ್ಲಿ ಅನಿಯಂತ್ರಿತವಾಗಿ ಹೇಗೆ ಬೆಳೆಯುತ್ತಿದ್ದವೋ, ಹಾಗೆಯೇ ಆಕೆಯ ಗರ್ಭಕೊರಳ ಕ್ಯಾನ್ಸರ್ ಸಹಾ ಬೆಳೆಯುತ್ತಿತ್ತು. ಆಕೆಗೆ 'ಹ್ಯೂಮನ್ ಪ್ಯಾಪಿಲ್ಲೋಮ ವೈರಸ್' ಎಂಬ ಆಕ್ರಮಣಶೀಲ ಕ್ಯಾನ್ಸರ್ ಬಂದಿತ್ತು. ಹಾಗಾಗಿ ಗರ್ಭಕೊರಳಿನಿಂದ ಗುಳೇ ಹೊರಟು ಇಡೀ ಉದರದೊಳಗೆ ವ್ಯಾಪಿಸಿತ್ತು. 1951ರಲ್ಲಿ ಇಂಥ ಕ್ಯಾನ್ಸರನ್ನು ನಿಗ್ರಹಿಸಲು 'ರೇಡಿಯಂ ಚಿಕಿತ್ಸೆ'ಯನ್ನು ನೀಡುತ್ತಿದ್ದರು. ಆ ರೇಡಿಯಂ ಹೆನ್ರೀಟ್ಟಾಳ ಚರ್ಮವನ್ನು ಸುಟ್ಟು ಕರಕಾಗಿಸಿ, ಆಕೆಯ ಶಕ್ತಿಯನ್ನು ಕುಂದಿಸಿ ದುರ್ಬಲಳನ್ನಾಗಿಸಿತು. ಅಕ್ಟೋಬರ್ 4, 1951. ಜಾನ್ ಹಾಪ್ಕಿನ್ಸ್ ಆಸ್ಪತ್ರೆಯಲ್ಲಿ ಹೆನ್ರೀಟ್ಟಾಳು ಉಗ್ರ ಸ್ವರೂಪದ ನೋವಿನಿಂದ ನರಳಿ ನರಳಿ ಜೀವವನ್ನು ಬಿಟ್ಟಳು. ಆಕೆಯನ್ನು ವರ್ಜೀನಿಯದಲ್ಲಿ ಕ್ಲೋವರ್ ಪ್ರದೇಶದಲ್ಲಿ ಸಮಾಧಿ ಮಾಡಿದರು. ಹೆನ್ರೀಟ್ಟಾ ಸತ್ತುಹೋಗಿದ್ದರೂ, ಆಕೆಯ ಗರ್ಭಕೊರಳ ಕ್ಯಾನ್ಸರಿನ ಜೀವಕೋಶಗಳು ಬೆಳೆಯುತ್ತಲೇ ಇದ್ದವು. ಬೆಳೆಯುತ್ತಾ ಬೆಳೆಯುತ್ತಾ ವೈದ್ಯಕೀಯ ಇತಿಹಾಸಕ್ಕೆ ಮಹಾತಿರುವುಗಳನ್ನು ನೀಡುತ್ತಾ ನಡೆದವು. ಇಂದಿಗೂ

ನೀಡುತ್ತಲಿವೆ.

ಅಮರಕೋಶಗಳ ಕಥೆ: ನಮ್ಮ ದೇಹದ ಎಲ್ಲ ಜೀವಕೋಶಗಳು ಒಂದು ನಿಗದಿತ ಪ್ರಮಾಣದವರೆಗೆ ಮಾತ್ರ ವರ್ಧಿಸಿ ನಂತರ ಸ್ಥಗಿತವಾಗುತ್ತಿದ್ದವು. ಆದರೆ ಹೆನ್ರೀಟ್ಟಾಳ ಜೀವಕೋಶಗಳು ಮಾತ್ರ ಸಾವೇ ಇಲ್ಲದೇ, 'ಅಮರತ್ವ'ವನ್ನು ಪಡೆದ ಜೀವಕೋಶಗಳಂತೆ ವಿಭಜನೆಯಾಗುತ್ತಲೇ ಇದ್ದವು. ಇಂದಿಗೂ ವಿಭಜನೆಯಾಗುತ್ತಲೇ ಇವೆ. ಇದು ಹೇಗೆ ಸಾಧ್ಯ ಎಂಬ ಪ್ರಶ್ನೆಯು ವಿಜ್ಞಾನಿಗಳನ್ನು ಕಾಡಿತು. ಆಗ ನಡೆಸಿದ ನಿರಂತರ ಸಂಶೋಧನೆಗಳ ಫಲವಾಗಿ 'ಅಮರತ್ವ'ದ ರಹಸ್ಯವು ಒಂದೊಂದಾಗಿ ಹೊರಬಂದವು. ಮನುಷ್ಯನ ದೇಹದ ಎಲ್ಲ ಜೀವಕೋಶಗಳು 40–60 ಸಲ ಮಾತ್ರ ಪುನರುತ್ಪಾದನೆಯಾಗುತ್ತವೆ. ಆನಂತರ ಅವು ತಮ್ಮ ಅಭಿವರ್ಧನೆಯನ್ನು ನಿಲ್ಲಿಸುತ್ತವೆ. ಇದನ್ನು 'ಹೇಫ್ಲಿಕ್ ಮಿತಿ' (ಹೇಫ್ಲಿಕ್ ಲಿಮಿಟ್; ಅಮೆರಿಕದ ಅಂಗರಚನಾ ವಿಜ್ಞಾನಿ ಲಿಯೋನಾರ್ಡ್ ಹೇಫ್ಲಿಕ್ (1928–2024) ಗೌರವಾರ್ಥ) ಎಂದು ಕರೆಯುತ್ತಾರೆ. ಕ್ರೋಮೋಸೋಮುಗಳನ್ನು ಒಂದು 'ಶೂ ಲೇಸ್' ಎಂದು ಭಾವಿಸೋಣ. ಈ ಲೇಸ್ ಬಿಚ್ಚಿಕೊಳ್ಳದಂತೆ ತಡೆಯುವ ಒಂದು ಪುಟ್ಟ ಪ್ಲಾಸ್ಟಿಕ್ಕನ್ನು ತುದಿಗೆ ಕಟ್ಟಿರುತ್ತಾರೆ. ಹಾಗೆಯೇ ಕ್ರೋಮೋಸೋಮುಗಳ ತುದಿಯಲ್ಲೂ ಒಂದು 'ತುದಿಬಿಗಿ' ಇರುತ್ತದೆ. ಇದರ ಹೆಸರು ಟೀಲೋಮಿಯರ್. ಟೀಲೋಮಿಯರಿನ ವಿಶೇಷವೆಂದರೆ, ಜೀವಕೋಶವು ಪ್ರತಿಸಲ ವಿಭಜನೆಯಾದಾಗ, ಈ ಟೀಲೋಮಿಯರಿನ ತುದಿಯು ಚಿಕ್ಕದಾಗುತ್ತಾ ಹೋಗುತ್ತದೆ. ಹಾಗಾಗಿ ಜೀವಕೋಶವು 40–60 ಸಲ ವಿಭಜನೆಯಾದಾಗ ಈ ತುದಿಬಿಗಿಯು ಪೂರ್ಣ ಖರ್ಚಾಗುತ್ತದೆ. ಪ್ಲಾಸ್ಟಿಕ್ ತುದಿಯಿರದ ಶೂ ಲೇಸ್ ಹೇಗೆ ಬಿಚ್ಚಿಕೊಳ್ಳುವುದೋ, ಹಾಗೆಯೇ ಟೀಲೋಮಿಯರ್ ಇಲ್ಲದ ಕ್ರೋಮೋಸೋಮ್ 'ಬಿಚ್ಚಿಕೊಳ್ಳುತ್ತದೆ'. ಜೀವಕೋಶವು ಸ್ಥಗಿತವಾಗುತ್ತದೆ. ಕ್ಯಾನ್ಸರ್ ಜೀವಕೋಶಗಳು ಒಂದು ಉಪಾಯವನ್ನು ಕಂಡುಕೊಂಡಿವೆ. ಅವು 'ಟೀಲೋಮಿರೇಸ್' ಎಂಬ ಕಿಣ್ವವನ್ನು ರೂಪಿಸುತ್ತವೆ. ಜೀವಕೋಶವು ವಿಭಜನೆಯಾದಾಗಲೆಲ್ಲ ತುಂಡಾಗುತ್ತಾ ಹೋಗುವ ಟೀಲೋಮಿಯರನ ನಷ್ಟಭಾಗವನ್ನು, ಟೀಲೋಮಿರೇಸ್ ಎಂಬ ಕಿಣ್ವದ ನೆರವಿನಿಂದ ಮರುರೂಪಿಸುತ್ತವೆ. ಹಾಗಾಗಿ 'ಶೂಲೇಸ್' ಎಂದೆಂದಿಗೂ ತುಂಡಾಗುವುದಿಲ್ಲ. ನಿರಂತರವಾಗಿ ರೂಪುಗೊಳ್ಳುತ್ತಲೇ ಇರುತ್ತದೆ. ಹಾಗಾಗಿ ಕ್ಯಾನ್ಸರ್ ಜೀವಕೋಶಗಳಿಗೆ ಸಹಜ ಸಾವು ಎಂಬುದಿಲ್ಲ. ಹೆನ್ರೀಟ್ಟಾಳ ಪ್ರಕರಣದಲ್ಲಿ ವೈರಸ್ಸು ತನ್ನ ತಳಿಯನ್ನು ಗರ್ಭಕೊರಳ ಜೀವಕೋಶಗಳ ತಳಿಯೊಳಗೆ ಸಮ್ಮಿಳಿತಗೊಳಿಸಿದೆ. ಇದು, ನಮ್ಮ ದೇಹದಲ್ಲಿ ಕ್ಯಾನ್ಸರ್ ಬೆಳೆಯದಂತೆ ತಡೆಗಟ್ಟುವ ವಂಶವಾಹಿಗಳನ್ನು ನಿಗ್ರಹಿಸಿ, ಕ್ಯಾನ್ಸರ್ ಬೆಳೆಯುವಂತೆ ಪ್ರಚೋದಿಸುವ ವಂಶವಾಹಿಗಳನ್ನು ಉದ್ದೀಪಿಸುವ ಕಾರಣ, ಗರ್ಭಕೊರಳ ಜೀವಕೋಶಗಳು ನಿರಂತರವಾಗಿ ಬೆಳೆಯುತ್ತಲೇ ಇವೆ. ಹೆನ್ರೀಟ್ಟಾಳ ಪಾಲಿಗೆ ಸಾವನ್ನು ತಂದ ಈ ಅನಿಯಂತ್ರಿತ ಜೀವಕೋಶಗಳು ವೈದ್ಯವಿಜ್ಞಾನದ ಭಾಗ್ಯದ ಬಾಗಿಲನ್ನು ತೆರೆದದ್ದು ಒಂದು ವಿಪರ್ಯಾಸವೇ ಆಗಿದೆ.

ಹಿಂದಿರುಗಿ ನೋಡಿದಾಗ

ಡಾ. ನಾ.ಸೋಮೇಶ್ವರ
naasomeswara@gmail.com

ಭಾಗ್ಯದ ಬಾಗಿಲು: ಡಾ. ಜಾರ್ಜ್ ಒಟ್ಟೋ ಗೇ, ಹೀಲಾ ಜೀವಕೋಶಗಳ ಬಗ್ಗೆ ತನ್ನ ಪ್ರಬಂಧವನ್ನು ಮಂಡಿಸಿದಾಗ ವೈದ್ಯಕೀಯ ಲೋಕವು ಹುಚ್ಚೆದ್ದು ಕುಣಿಯಿತು. ವೈಜ್ಞಾನಿಕ ಪ್ರಯೋಗಗಳನ್ನು ನಡೆಸಲು ಅಗತ್ಯವಾದ ಕಾಲಪೂರ್ಣ ಬದುಕುಳಿಯುವ ಜೀವಕೋಶಗಳು ದೊರೆತದ್ದು ಹಲವು ಅಧ್ಯಯನಗಳನ್ನು ಒಮ್ಮೆಲೆ ಹುಟ್ಟುಹಾಕಿತ್ತು. ಹೀಲಾ ಕೋಶಗಳ ಮತ್ತೊಂದು ವಿಶೇಷವೆಂದರೆ ಅವು ವೇಗವಾಗಿ ಬೆಳೆಯುತ್ತಿದ್ದವು, ಗಟ್ಟಿಮುಟ್ಟಾಗಿದ್ದವು. ಶೀತಲೀಕರಣವನ್ನು ತಡೆದುಕೊಂಡವು. ಖಂಡಾಂತರ ಪ್ರಯಾಣವನ್ನು ಸುಲಭವಾಗಿ ಪೂರೈಸಿದವು. ಆರೈಕೆಯಿಲ್ಲದಿದ್ದರೂ ಕಾಡುಗಿಡದ ಹಾಗೆ ಬೆಳೆಯುತ್ತಲೇ ಇದ್ದವು. ಬಹುಶಃ ಅವುಗಳನ್ನು ನಾಶಪಡಿಸುವುದು 'ಅಸಾಧ್ಯ'ವಾಗಿತ್ತು. ಹೀಲಾ ಜೀವಕೋಶಗಳು ಜಗತ್ತಿನ ಎಲ್ಲ ಪ್ರಮುಖ ಪ್ರಯೋಗಾಲಯವನ್ನು ತಲುಪಿದವು. ಹಾಗಾಗಿ ಹಲವು ಯಶಸ್ವಿ ಪ್ರಯೋಗಗಳು ನಡೆದವು. ಈಗಲೂ ನಡೆಯುತ್ತಿವೆ.

- **ಪೋಲಿಯೊ ಲಸಿಕೆ:** 1950ರ ದಶಕದಲ್ಲಿ ಜೊನಾಸ್ ಸಾಲ್ಕ್ ಪೋಲಿಯೋ ಲಸಿಕೆಯನ್ನು ರೂಪಿಸಿದ. ಪೋಲಿಯೋ, ಪ್ರತಿವರ್ಷವು ಸಾವಿರಾರು ಮಕ್ಕಳನ್ನು ಹೆಳವರನ್ನಾಗಿ ಮಾಡುತ್ತಿತ್ತು. ತನ್ನ ಲಸಿಕೆಯ ಪರಿಣಾಮವನ್ನರಿಯಲು ಜೊನಾಸ್ ಸಾಲ್‌ನಿಗೆ ನಂಬಿಕೆಗೆ ಅರ್ಹ ಹಾಗೂ ಸುದೀರ್ಘಕಾಲ ಬದುಕಬಲ್ಲ ಜೀವಕೋಶಗಳು ಬೇಕಾಗಿದ್ದವು. ಆ ಅಗತ್ಯವನ್ನು ಹೀಲಾ ಕೋಶಗಳು ಒದಗಿಸಿದವು. ಪ್ರಯೋಗವು ಯಶಸ್ವಿಯಾಯಿತು. ಭಾರತವು ಇಂದು ಪೋಲಿಯೋ ಮುಕ್ತವಾಗಿದೆ. ಜಗತ್ತೂ ಮುಂದಿನ ದಿನಗಳಲ್ಲಿ ಪೋಲಿಯೋಮುಕ್ತವಾಗಲಿದೆ. ಈ ಸಾಧನೆಯ ಹಿಂದೆ ಹೀಲಾ ಜೀವಕೋಶಗಳ ಬಹುದೊಡ್ಡ ಕಾಣಿಕೆಯಿದೆ.
- **ಕ್ಯಾನ್ಸರ್ ಸಂಶೋಧನೆ:** ಹೀಲಾ ಜೀವಕೋಶಗಳನ್ನು ಬಳಸಿಕೊಂಡು ವಿಜ್ಞಾನಿಗಳು ಕ್ಯಾನ್ಸರ್ ಜೀವಕೋಶಗಳ ಹುಟ್ಟು, ಬೆಳೆಯುವಿಕೆ, ಹರಡುವಿಕೆ, ಉತ್ಪರಿವರ್ತನೆಯಾಗುವಿಕೆ (ಮ್ಯುಟೇಶನ್) ಹಾಗೂ ಚಿಕಿತ್ಸೆಗೆ ನೀಡುವ ಪ್ರತಿಕ್ರಿಯೆಗೆ ಸಂಬಂಧಿಸಿದಂತೆ ಪ್ರಯೋಗಗಳನ್ನು ಮಾಡಿದ್ದಾರೆ. ಹಾಗೆಯೇ ಕ್ಯಾನ್ಸರನ್ನು ಪ್ರಚೋದಿಸುವ 'ಆಂಕೋಜೀನ್ಸ್' ಹಾಗೂ ಕ್ಯಾನ್ಸರನ್ನು ನಿಗ್ರಹಿಸುವ 'ಟ್ಯೂಮರ್ ಸಪ್ರೆಸ್ಸಾರ್ ಜೀನ್ಸ್' ಬಗ್ಗೆ ಅಪಾರ ಮಾಹಿತಿಯನ್ನು ಪಡೆದಿದ್ದಾರೆ. ಪಡೆಯುತ್ತಿದ್ದಾರೆ.
- **ಜೆನೆಟಿಕ್ ಮ್ಯಾಪಿಂಗ್ ಮತ್ತು ವೈರಾಲಜಿ:** ವೈರಸ್ಸುಗಳು ನಮ್ಮ ಜೀವಕೋಶದ ಎಲ್ಲ ರಕ್ಷಣೆಗಳನ್ನು ಭೇದಿಸಿ ಹೇಗೆ ಒಳಪ್ರವೇಶಿಸುತ್ತವೆ, ಹೇಗೆ ಜೀವಕೋಶದ ಸಹಜ ಕೆಲಸ ಕಾರ್ಯಗಳನ್ನು ಅಲ್ಲೋಲ ಕಲ್ಲೋಲಗೊಳಿಸಿ ತಮ್ಮ ಸಾಮ್ರಾಜ್ಯವನ್ನು ಸ್ಥಾಪಿಸುತ್ತವೆ, ಹೇಗೆ ಹರಡುತ್ತವೆ ಇತ್ಯಾದಿ ಮೂಲಭೂತ ವಿಚಾರಗಳ ಬಗ್ಗೆ ಸಮಗ್ರ ಅಧ್ಯಯನವನ್ನು ಮಾಡಲು ಸಾಧ್ಯವಾಗಿದೆ. ಈ ತಿಳಿವಿನಿಂದ ಇಂದು ದಡಾರ (ಮೀಸಲ್ಸ್), ಗದ್ದಕಟ್ಟು (ಮಂಪ್ಸ್) ಹಾಗೂ ಗರ್ಭಕೊರಳ ಕ್ಯಾನ್ಸರನ್ನು ಉಂಟುಮಾಡುವ ಹ್ಯೂಮನ್ ಪ್ಯಾಪಿಲೋಮ ವೈರಸ್ಸನ್ನು (ಎಚ್‌ಪಿವಿ) ನಿಗ್ರಹಿಸಬಲ್ಲ ಲಸಿಕೆಯನ್ನು ರೂಪಿಸಲು ಸಾಧ್ಯವಾಗಿದೆ. ಭಾರತ ಸರಕಾರವು 9–14 ವರ್ಷ ವಯಸ್ಸಿನ ಹೆಣ್ಣುಮಕ್ಕಳಿಗೆ ಈ ಲಸಿಕೆಯನ್ನು ಉಚಿತವಾಗಿ ನೀಡುತ್ತಿದೆ. ಇದರ ಲಾಭವನ್ನು ಮಕ್ಕಳಿಗೆ ಒದಗಿಸಲು ಪಾಲಕರು ಮನಸ್ಸು ಮಾಡಬೇಕಾಗಿದೆ.
- **ಅಂತರಿಕ್ಷ ಜೀವವಿಜ್ಞಾನ:** ಆರಂಭದ ದಿನಗಳಲ್ಲಿ ಹೀಲಾ ಜೀವಕೋಶಗಳನ್ನು ಬಾಹ್ಯಾಕಾಶಕ್ಕೆ ಕಳುಹಿಸಿ ಅಧ್ಯಯನವನ್ನು ಮಾಡಿದರು. ಮೊದಲ ಶೂನ್ಯ ಗುರುತ್ವಾಕರ್ಷಣೆಯಲ್ಲಿ ಹೀಲಾ ಕೋಶಗಳ ವರ್ತನೆಯನ್ನು ಅಧ್ಯಯನ ಮಾಡಿದರು. ಎರಡನೆಯದಾಗಿ ವಿಕಿರಣ ಪರಿಸರದಲ್ಲಿ ಅವು ಹೇಗೆ ಬದುಕುತ್ತವೆ ಎನ್ನುವುದರ ಅಧ್ಯಯನವನ್ನು ಮಾಡಿದರು.
- **ಇನ್-ವಿಟ್ರೊ ಫರ್ಟಿಲೈಜೇಶನ್ ಮತ್ತು ಜೀನ್ ಥೆರಪಿ:** ಪ್ರನಾಳ ಶಿಶು ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಲು ಹೀಲಾ ಕೋಶಗಳು ನೆರವಾದವು. ತದ್ರೂಪಿ ತಂತ್ರಜ್ಞಾನವನ್ನು (ಕ್ಲೋನಿಂಗ್) ಹಾಗೂ ಜೆನೆಟಿಕ್ ಎಂಜಿನಿಯರಿಂಗ್ ಸಂಬಂಧಿತ ಪ್ರಯೋಗಗಳನ್ನು ಈ ಕೋಶಗಳ ಮೇಲೆ ಯಶಸ್ವಿಯಾಗಿ ನಡೆಸಿದರು.

ಹಾಗೆಯೇ ಮಾನವ ತಳಿವಿನ್ಯಾಸ ಅಧ್ಯಯನದ (ಹ್ಯೂಮನ್ ಜೀನೋಮ್ ಪ್ರಾಜೆಕ್ಟ್) ಆರಂಭಿಕ ಪ್ರಯೋಗಗಳನ್ನೂ ಹೀಲಾ ಜೀವಕೋಶಗಳ ಮೇಲೆಯೇ ಮಾಡಿದರು.

- **ಹೊಸ ಪಿಡುಗುಗಳು:** 21ನೆಯ ಶತಮಾನದ ಪಿಡುಗುಗಳಾದ ಎಚ್‌ಐವಿ, ಎಬೋಲ ಹಾಗೂ ಕೋವಿಡ್-19ರ ಚಿಕಿತ್ಸೆ ಹಾಗೂ ಲಸಿಕೆಯನ್ನು ತಯಾರಿಸಲು ಈ ಹೀಲಾ ಕೋಶಗಳನ್ನೇ ಬಳಸಿಕೊಂಡರು. ಹಾಗಾಗಿ ಸುಮಾರು 70 ವರ್ಷಗಳಿಂದಲೂ ಹೀಲಾ ಜೀವಕೋಶಗಳು ನಮ್ಮ ಎಲ್ಲ ಮಹತ್ತರ ಸಾಧನೆಗಳ ಹಿಂದೆ ಬಹುದೊಡ್ಡ ಕಾಣಿಕೆಯನ್ನು ನೀಡುತ್ತಿವೆ.

ಕರಾಳ ಛಾಯೆ: ಹೀಲಾ ಜೀವಕೋಶಗಳು ಹಲವು ವೈಜ್ಞಾನಿಕ ಸಾಧನೆಗಳಿಗೆ ಕಾರಣವಾಗಿವೆ ಹಾಗೂ ಆಗುತ್ತಿವೆ ಎಂಬ ಮಾತು ನಿರ್ವಿವಾದ. ಆದರೆ ಈ ಜೀವಕೋಶಗಳನ್ನು ಬಳಸಿಕೊಳ್ಳಲು ಹೆನ್ರೀಟ್ಟಾ ಲ್ಯಾಕ್ಸ್ ಇಂದ ಯಾವುದೇ ಅನುಮತಿಯನ್ನು ಪಡೆದಿಲ್ಲ. ಆಕೆಯ ಮರಣಾನಂತರ ಪ್ರಯೋಗಗಳಲ್ಲಿ ಬಳಸಲು ಅವರ ಮನೆಯವರಿಂದಲೂ ಒಪ್ಪಿಗೆಯನ್ನು ಪಡೆದಿಲ್ಲ. ಹೀಲಾ ಜೀವಕೋಶಗಳ ನೆರವಿನಿಂದ ರೂಪಿಸಿದ ಅನೇಕ ಲಸಿಕೆಗಳನ್ನು ಮಾರಿ ಔಷಧ ಕಂಪನಿಗಳು ಹಾಗೂ ಬಯೋಟೆಕ್ ಕಂಪನಿಗಳು ಬಿಲಿಯನ್‌ಗಟ್ಟಲೆ ಡಾಲರ್ ಹಣವನ್ನು ಮಾಡಿದವು. ಅದರಲ್ಲಿ ಒಂದು ಪಾಲನ್ನೂ ಹೆನ್ರೀಟ್ಟಾಳ ಕುಟುಂಬಕ್ಕೆ ನೀಡಿಲ್ಲ.

1951ರ ದಿನಗಳಲ್ಲಿ ತಿಳಿಹೇಳಿದ ಒಪ್ಪಿಗೆ (ಇನ್‌ಫಾರ್ಮಡ್ ಕನ್ಸೆಂಟ್) ಎಂಬ ಪರಿಕಲ್ಪನೆಯು ಶೈಶವಾವಸ್ಥೆಯಲ್ಲಿತ್ತು. ಹಾಗಾಗಿ ವೈದ್ಯರು ಹೆನ್ರೀಟ್ಟಾಳನ್ನಾಗಲಿ ಅಥವಾ ಅವರ ಮನೆಯವರನ್ನಾಗಲಿ ಕೇಳದೆ, ಆಕೆಯ ಗರ್ಭಕೊರಳ ಭಾಗವನ್ನು ತಮ್ಮ ಪ್ರಯೋಗದಲ್ಲಿ ಬಳಸಿಕೊಂಡರು. ಇದು ಅನೈತಿಕ ಎಂದು ಅವರಿಗೆ ಅನಿಸಲಿಲ್ಲ. ಹೆನ್ರೀಟ್ಟಾ ಸತ್ತು ಎರಡು ದಶಕಗಳಾದರೂ ಆಕೆಯ ಜೀವಕೋಶಗಳನ್ನು ಪ್ರಯೋಗಾಲಯದಲ್ಲಿ ಬಳಸಿಕೊಳ್ಳುತ್ತಿರುವ ವಿಚಾರ ಆಕೆಯ ಕುಟುಂಬಕ್ಕೆ ತಿಳಿದಿರಲಿಲ್ಲ. 1970ರಲ್ಲಿ ವಿಜ್ಞಾನಿಗಳು ಹೆನ್ರೀಟ್ಟಾಳ ಕುಟುಂಬವನ್ನು ಸಂಪರ್ಕಿಸಿದರು. ಕ್ಷಮೆಯನ್ನು ಕೇಳಲು ಅಲ್ಲ; ತಮ್ಮ ಪ್ರಯೋಗಗಳಿಗೆ ಹೆನ್ರೀಟ್ಟಾಳ ಬಂಧುಗಳ ರಕ್ತ ಬೇಕಾಗಿದೆ; ಅದನ್ನು ಒದಗಿಸಿ ಎಂದು ಕೇಳಿದರು. ಆಗ ಹೆನ್ರೀಟ್ಟಾಳ ಕುಟುಂಬಕ್ಕೆ ಅನುಮಾನವು ಬಂದಿತು. ಏನೋ ನಡೆಯಬಾರದ್ದು ನಡೆಯುತ್ತಿದೆ ಎಂದು ಭಾವಿಸಿ, ಹೆನ್ರೀಟ್ಟಾಳ ಮಗಳು ಡೆಬೋರಾ ಲ್ಯಾಕ್ಸ್ ಪತ್ತೆದಾರಿಕೆಗೆ ಇಳಿದಳು. ಇದರ ಫಲವಾಗಿ 2010ರಲ್ಲಿ ರೆಬೆಕ್ಕ ಸ್ಕ್ಲೂಟ್ ಎಂಬಾಕೆಯು 'ದಿ ಇಮ್ಮಾರ್ಟಲ್ ಲೈಫ್ ಆಫ್ ಹೆನ್ರೀಟ್ಟಾ ಲ್ಯಾಕ್ಸ್' ಎಂಬ ಪುಸ್ತಕವನ್ನು ಬರೆದಳು. ಈ ಪುಸ್ತಕವು, ತಿಳಿಹೇಳಿದ ಒಪ್ಪಿಗೆ ಪತ್ರದ ಅಗತ್ಯತೆ, ಖಾಸಗಿತನ ಹಾಗೂ ವರ್ಣಭೇದ ನೀತಿ ಇತ್ಯಾದಿ ಹಲವು ಪ್ರಶ್ನೆಗಳನ್ನು ಮುನ್ನೆಲೆಗೆ ತಂದಿತು. 2013ರಲ್ಲಿ ಅಮೆರಿಕದ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಹೆಲ್ತ್, ಲ್ಯಾಕ್ಸ್ ಕುಟುಂಬದೊಡನೆ ಒಪ್ಪಂದಕ್ಕೆ ಬಂದಿತು. ಮುಂದಿನ ಪ್ರಯೋಗಗಳಲ್ಲಿ ಹೀಲಾ ಜೀವಕೋಶಗಳನ್ನು ಪ್ರಯೋಗದಲ್ಲಿ ಬಳಸುವ ಮೊದಲು ಕುಟುಂಬದ ಒಪ್ಪಿಗೆಯನ್ನು ಪಡೆಯಬೇಕು ಹಾಗೂ ಪ್ರಬಂಧ ಪ್ರಕಟಣೆಯಲ್ಲಿ ಆಕೆಯನ್ನು ಸ್ಮರಿಸಬೇಕು ಎನ್ನುವುದು ಒಪ್ಪಂದದ ತಿರುಳಾಗಿತ್ತು. ಹೆನ್ರೀಟ್ಟಾ ವೈದ್ಯಕೀಯ ವಿಜ್ಞಾನಕ್ಕೆ ನೀಡಿದ ಅಪಾರ ಕೊಡುಗೆಯನ್ನು 2021ರಲ್ಲಿ ವಿಶ್ವ ಆರೋಗ್ಯ ಸಂಸ್ಥೆಯು ಮರಣೋತ್ತರವಾಗಿ ಸ್ಮರಿಸಿತು. ಥರ್ಮೋ ಫಿಶರ್ ಸೈಂಟಿಫಿಕ್ ಸಂಸ್ಥೆಯು ಹೆನ್ರೀಟ್ಟಾ ಕುಟುಂಬದ ಜತೆಯಲ್ಲಿ ಅಂತಿಮ 'ಒಪ್ಪಂದ'ವನ್ನು ಮಾಡಿಕೊಂಡಿತು.

ಇಂದು ಹೆನ್ರೀಟ್ಟಾ ಅನಾಮಧೇಯಳಾಗಿ ಉಳಿದಿಲ್ಲ. ಮೇರಿಲ್ಯಾಂಡ್ ಮತ್ತು ವರ್ಜೀನಿಯಗಳಲ್ಲಿ ಆಕೆಯ ಪುತ್ಥಳಿಯನ್ನು ಸ್ಥಾಪಿಸಿದ್ದಾರೆ. ಶಾಲಾ ಕಾಲೇಜುಗಳಲ್ಲಿ ಹಾಗೂ ಪ್ರಯೋಗಾಲಯದಲ್ಲಿ ಆಕೆಯನ್ನು ಒಂದಲ್ಲ ಒಂದು ರೀತಿಯಲ್ಲಿ ಸ್ಮರಿಸಿಕೊಳ್ಳುತ್ತಿದ್ದಾರೆ. ಹೆನ್ರೀಟ್ಟಾ ಓರ್ವ ಸರ್ವೇಸಾಮಾನ್ಯ ಕಪ್ಪು ಮಹಿಳೆ. ಆದರೆ ಆಕೆ, ತನಗೇ ತಿಳಿಯದ ಹಾಗೆ ಮನುಕುಲದ ಸೇವೆಯಲ್ಲಿ ತೊಡಗಿದ್ದಾಳೆ. ಆಧುನಿಕ ವೈದ್ಯಕೀಯ ವಿಜ್ಞಾನಕ್ಕೆ ಮಹತ್ತರ ತಿರುವನ್ನು ನೀಡಿದ, ನೀಡುತ್ತಿರುವ ಹೀಲಾ ಕೋಶಗಳು ಸದಾಕಾಲಕ್ಕೆ ಅಮರತ್ವವನ್ನು ಪಡೆದಿವೆ.

ನಮ್ಮೊಳಗೆ ನಾವಿಳಿದಾಗ

• ಮಾಯಾ ಬಾಲಚಂದ್ರ

ಕೆಲವು ದಶಕಗಳ ಹಿಂದೆ, ವಿಶ್ರಾಂತಿ ತೆಗೆದುಕೊಳ್ಳುವುದು ಸಹ ಅರ್ಥಪೂರ್ಣವಾಗಿತ್ತು. ಜನರು ಹಲವಾರು ಮೈಲು ನಡೆದೋ, ಹೊಲವನ್ನು ಉತ್ತೋ, ಶರೀರ ಬಳಲಿ, ಕೊಂಚ ಕುಳಿತು ಸುಧಾರಿಸಿಕೊಳ್ಳಬೇಕೆನಿಸಿದಾಗಷ್ಟೇ ಕುಳಿತು ದಣಿವಾರಿಸಿಕೊಂಡು, ಮತ್ತೆ ತಮ್ಮ ಹಾದಿ ಹಿಡಿದು ಕಾರ್ಯಪ್ರವೃತ್ತರಾಗುತ್ತಿದ್ದರು. ದುಡಿಮೆಯ ಭಾಗವಾಗಿ ದೈಹಿಕ ಪರಿಶ್ರಮದಿಂದ ಬೆವರು ಸುರಿಸುವುದು, ದೇಹದ ಒಳಗಿನ ಜೀವಕೋಶಗಳಿಗೆ ಹಾನಿಕರವಾದ ವಿಷಕಾರಿ ವಸ್ತುಗಳನ್ನು ಹೊರಹಾಕುವ ಮಾರ್ಗವೂ ಆಗಿತ್ತು. ಅಂದಿನ ಆಹಾರ ಪದ್ಧತಿ ಮತ್ತು ಜೀವನಶೈಲಿಯಲ್ಲಿ, ದೇಹದೊಳಗೆ ಟಾಕ್ಸಿನ್‌ಗಳು ಸೇರುತ್ತಿದ್ದುದೂ ಕಡಿಮೆಯೇ. ಉತ್ಪತ್ತಿಯಾಗುತ್ತಿದ್ದ ಅಲ್ಪ ಪ್ರಮಾಣದ, ಬೇಡದ ಅಂಶಗಳನ್ನು ನೈಸರ್ಗಿಕವಾಗಿ ಹೊರಹಾಕಲು ಸಹಜ ಕ್ರಮವೇ ರೂಢಿಯಲ್ಲಿತ್ತು. ಇಂದು ದೇಹಕ್ಕೆ ಸೇರುವ ಟಾಕ್ಸಿನ್‌ಗಳ ಪ್ರಮಾಣ ಅಧಿಕವಾಗಿದೆ. ಅವನ್ನು ಹೊರಗೆ ಕಳಿಸಲು ಬೇಕಾದ ಪ್ರಕೃತಿದತ್ತವಾದ ಪ್ರಕ್ರಿಯೆ ನಡೆಯುತ್ತಿಲ್ಲ.

ವಿಶ್ರಾಂತಿಯ ಮೂಲ ಉದ್ದೇಶವೂ ಕಳೆದುಹೋಗಿದೆ. ಶರೀರ, ಮನಸ್ಸುಗಳೆರಡೂ ಕೆಲಕಾಲ ಸ್ಥಿರವಾಗಿ, ಸುಖವಾಗಿ, ಶ್ರಮದಿಂದ ವಿಮುಖವಾಗಿ, ನಿರಾಳತೆಯನ್ನು ಅನುಭವಿಸಿ, ಅದರಿಂದಲೇ ಚೈತನ್ಯವನ್ನು ಉದ್ದೀಪಿಸಿಕೊಂಡು, ಮುಂದಿನ ಕೆಲಸ ಕಾರ್ಯಗಳಿಗೆ ಅಣಿಯಾಗುವುದು ವಿಶ್ರಾಂತಿಯ ಉದ್ದೇಶ. ಅದು ನಮ್ಮೊಳಗೇ ನಾವು ಶಾಂತಿಯನ್ನು ಕಂಡುಕೊಳ್ಳುವ ರೀತಿ. ಅದಕ್ಕೆ ವಿರುದ್ಧವಾಗಿ, ಇಂದಿನ ದಿನಗಳಲ್ಲಿ, ಬಹುತೇಕರಿಗೆ ಯಾವುದೇ ಗ್ಯಾಜೆಟ್‌ಗಳಿಲ್ಲದೆ ಒಂದೆಡೆ ಕುಳಿತುಕೊಳ್ಳಲು ಸಾಧ್ಯವಾಗುತ್ತಿಲ್ಲ. ಇದು ನಾವು ನಮ್ಮಿಂದ ಬಹುದೂರ ಸಾಗಿ ಬಂದದ್ದರ ದ್ಯೋತಕ. ಎಷ್ಟು ದೂರವನ್ನಾದರೂ ನಡೆದು ಕ್ರಮಿಸುವ ಸಾಮರ್ಥ್ಯವಿದ್ದಾಗ, ಎಷ್ಟು ಹೊತ್ತು ಬೇಕಾದರೂ ಕುಳಿತು ನಮ್ಮೊಡನೆ ನಾವಿರಲು ಸಮರ್ಥರಾಗಿದ್ದೆವು. ಇದು ದೈಹಿಕ ದಾರ್ಢ್ಯತೆ ಮತ್ತು ಮಾನಸಿಕ ಸ್ಥಿರತೆಯಿಂದ ಒಂದಾದ, ಒಟ್ಟಾರೆ ಸಾಮರ್ಥ್ಯ. ಇವೆರಡು ಪರಸ್ಪರ ಪೂರಕವಾಗಿಯೇ ಇರುತ್ತವೆ. ಇಂದು ನಡಿಗೆಯೂ ವರ್ಜ್ಯ, ಕುಳಿತುಕೊಳ್ಳುವುದೂ ಅಸಹನೀಯ ಅನ್ನುವ ಪರಿಸ್ಥಿತಿಯಲ್ಲಿ ನಾವಿದ್ದೇವೆ. ನಡಿಗೆಗೆ

ಪರ್ಯಾಯವಾಗಿ ವಾಹನ, ಕುಳಿತುಕೊಳ್ಳಬೇಕಾದರೆ ಯಂತ್ರೋಪಕರಣ– ಹೀಗೆ, ಬಾಹ್ಯದ ವಸ್ತುಗಳ ಮೇಲೆ ಅವಲಂಬಿತರಾಗುತ್ತಾ, ನಮ್ಮ ಸ್ವಾಭಾವಿಕ ಸಾಮರ್ಥ್ಯವನ್ನು ಕಳೆದುಕೊಂಡು ಬಿಟ್ಟಿದ್ದೇವೆ. ಎಲ್ಲದಕ್ಕೂ ಯಂತ್ರಗಳನ್ನಾಧರಿಸಿದರೂ, ಹೆಚ್ಚು ಹೊತ್ತು ಅದನ್ನು ಬಳಸಲಾಗದೆ, ವಿಶ್ರಾಂತಿ ಬೇಡುತ್ತದೆ ಮನಸ್ಸು. ವಿಶ್ರಾಂತಿಗಾಗಿ ಬಿಡುವು ಮಾಡಿಕೊಂಡರೆ, ಅದನ್ನು ಆಳವಾಗಿ, ದೀರ್ಘವಾಗಿ, ಆರಾಮವಾಗಿ, ವಿರ ಮಿಸಲಾಗದ ಸ್ಥಿತಿಯನ್ನು ತಲುಪಿರುವುದು ವಿಪ ರ್ಯಾಸ. ನಮ್ಮೊಳಗೆ ಇಳಿದು, ನಮ್ಮನ್ನು ನಾವು ಅರ್ಥ ಮಾಡಿಕೊಳ್ಳುವ ಪ್ರಯತ್ನ ಇಂದಿನ ಅವಶ್ಯಕತೆ. ಇದ ರಿಂದಲೇ, ಶಾರೀರಿಕ ಮತ್ತು ಮಾನಸಿಕ ಆರೋಗ್ಯವನ್ನು ಸಾಧಿಸಲು ಸಾಧ್ಯ.

ನೆಮ್ಮದಿ ನಮ್ಮಲ್ಲೇ ಇದೆ

• ವಾಣಿ, ಮೈಸೂರು

ಕೆಲವರ ಜಾಯಮಾನವೇ ಹಾಗೆ. ಬಯಸಿದ್ದನ್ನು ಅದೆಷ್ಟೇ ಪಡೆದರೂ, ಇನ್ನಷ್ಟು ಮತ್ತಷ್ಟು ಪಡೆಯಲೆಂದು ಇರುವ ನೆಮ್ಮದಿಯನ್ನೂ ಕಳೆದುಕೊಳ್ಳುತ್ತಾರೆ. ಆಸೆಗಳ ರಾಶಿ ಹೆಚ್ಚಾಗುತ್ತಾ ಹೋದಂತೆ ಅವುಗಳ ಬೆನ್ನೇರತೊಡಗುತ್ತಾರೆ. ಈ ಬದುಕಿಗೆ ಮಾನಸಿಕ ಆರೋಗ್ಯ ಬಹಳ ಮುಖ್ಯ, ಆದರೆ ಆಸೆಯ ಬೆನ್ನೇರಿದ ವರು ಮಾನಸಿಕ ಆರೋಗ್ಯವನ್ನು ಕಳೆದುಕೊಳ್ಳುತ್ತಾರೆ. ಮಾನಸಿಕ ಆರೋಗ್ಯ ಕುಸಿದಾಗ ವ್ಯಕ್ತಿಯು ಜುಗುಪ್ಸೆಗೆ ಒಳಗಾಗುತ್ತಾನೆ, ಬದುಕಿನ ಬಗ್ಗೆ ಅವನಲ್ಲಿ ನಿರಾಶಾಭಾವ ಮೂಡುತ್ತದೆ.

ಮನಸ್ಸು ಸರಿಯಿಲ್ಲದಾಗ ಮಾಡುವ ಯಾವ ಕೆಲಸವೂ ಪರಿಪೂರ್ಣವಾಗಿರುವುದಿಲ್ಲ. ಜೀವನವೆಂದರೇನೇ ಅಸಮಾಧಾನದ ಮೂಟೆಯಾಗಿಬಿಡುತ್ತದೆ. ಸಣ್ಣ ಪುಟ್ಟ ವಿಷಯಕ್ಕೂ ಸಿಡಿಮಿಡಿಗೊಳ್ಳುವ, ಬೇರೆಯವರ ಮೇಲೆ ಕೂಗಾಡಿ ಕೋಪ ತೀರಿಸಿಕೊಳ್ಳುವ ಪ್ರವೃತ್ತಿ ಕಾಣಬರುತ್ತದೆ. ಯಾವುದೇ ಕೆಲಸವನ್ನು ಮಾಡುವ ಉಲ್ಲಾಸ–ಉತ್ಸಾಹಗಳಿಲ್ಲದೆ ಅದನ್ನು ಅರ್ಧಕ್ಕೇ ಬಿಡುವ, 'ನಾಳೆ ಮಾಡೋಣ' ಎಂದು ಮುಂದೂಡುವ ಸ್ವಭಾವ ರೂಪುಗೊಳ್ಳುತ್ತದೆ. ಇಂಥ ವೇಳೆ ತಳೆಯುವ ನಿರ್ಧಾರಗಳೂ ಅಸಮರ್ಪಕವಾಗಿರುತ್ತವೆ ಎಂಬುದನ್ನು ಬಿಡಿಸಿ ಹೇಳಬೇಕಿಲ್ಲ.

ಆದರೆ ಒಂದಂತೂ ನಿಜ. ಸುಡುವ ಸೂರ್ಯನೂ ಸಂಜೆಯ ವೇಳೆಗೆ ತಂಪಾಗುವ ರೀತಿಯಲ್ಲಿ, ನೋವಲ್ಲಿ ಬೆಂದ ಜೀವಕ್ಕೂ ಆಸರೆ ದೊರಕುತ್ತದೆ. ಹೀಗೆ ನೊಂದು–ಬೆಂದು ಗಟ್ಟಿಯಾಗುವುದಕ್ಕೆ ಹಾಗೂ ಬದುಕನ್ನು ಮುಂದುವರಿಸುವುದಕ್ಕೆ ಅನುವುಮಾಡಿಕೊಡುವುದು ಆತ್ಮವಿಶ್ವಾಸದ ಬೆಳಕು. ಇದು ಸ್ಫುರಿಸಲು ಕೆಲವೊಮ್ಮೆ ಹೆಚ್ಚು ಸಮಯ ಬೇಕಾಗಬಹುದು, ಆದರೆ ಅಲ್ಲಿಯವರೆಗೂ ಕಾಯುವ ತಾಳ್ಮೆ ನಮ್ಮದಾಗಬೇಕು. ಕೈಯಲ್ಲಿ ಇರುವುದನ್ನು ಬಿಟ್ಟು, ಮತ್ತಷ್ಟು ಬೇಕು ಎಂದು ಓಡುವ ಪರಿಪಾಠಕ್ಕೆ ತಿಲಾಂಜಲಿಯಿತ್ತರೆ, ನೆಮ್ಮದಿಯ ಬದುಕು ನಮ್ಮದಾಗುತ್ತದೆ.

ಕಾದು ನೋಡಿ

• ಮಹಾಂತೇಶ ಮಾಗನೂರ

ಮುಂದಿನ ಮುಖ್ಯಮಂತ್ರಿ
ಯಾರೆಂದು ತೇಲಿಬಿಡುತ್ತಿದ್ದಾರೆ
ಅವರಿವರ ಹೆಸರನ್ನ,
ಕಾದು ನೋಡಬೇಕು
ಯಾರಿಗೆ ಬಿರಿಯಾನಿ
ಯಾರಿಗೆ ಮೊಸರನ್ನ..!

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

1. ಹಳೆಯ ಸಂಪ್ರದಾಯಕ್ಕೆ ಮತ್ತೊಂದು ಹೆಸರು (4)
2. ಒಟ್ಟಿಗೆ ವಾಸ ಮಾಡಿದ್ದಕ್ಕೆ ಸಿಕ್ಕಿದ ಸಂಗ (4)
4. ಚುರುಕಾದ ದ್ರವರೂಪದ ಲೋಹ (4)
6. ಸಮಯ ತಿಳಿಯಲು ಬೇಕಾಗುವ ಸಾಧನ (4)
7. ಚಿನ್ನ ಸಿಗಲು ಅರಣ್ಯಕ್ಕೆ ಹೋಗಬೇಕೇ? (3)
10. ಹೆಂಗಸು, ಮಹಿಳೆ (3)
13. ಬರದ ನಡುವೆ ಸಿಲುಕಿದ ಒಣಜಂಬ (4)
14. ಒಟ್ಟುಗೂಡಿಸು ಅಥವಾ ಒಂದೆಡೆ ಸೇರಿಸು (4)
15. ಆದ ತಪ್ಪನ್ನು ಸರಿಪಡಿಸುವಿಕೆ (4)
16. ಶ್ರೀರಾಮನ ಜನ್ಮ ನಕ್ಷತ್ರ (4)

ಮೇಲಿಂದ ಕೆಳಕ್ಕೆ

1. ಬಾಯಿಪಾಠ ಮಾಡು (4)
3. ಸರಿಯಾಗಿ ಬೆರೆತು ಉಂಟಾದ ಹೊಂದಾಣಿಕೆ (4)
5. ಸರಿಯಾಗಿ ಹಾಕಿದ ರುಜು (2)
6. ಪ್ರಮುಖವಾದ (2)
8. ನಿಜ ಹೇಳುತ್ತಾ ಬಂದ ಇರುಳು (3)
9. ಕೆಳಗಿನ ದರ್ಜೆಗೆ ವರ್ಗಾಯಿಸುವುದು (4)
10. ಮನ್ಮಥನಿಗೆ ಮತ್ತೊಂದು ಹೆಸರು (2)
11. ಸತ್ಯ ಎರಡಕ್ಷರದಲ್ಲಿ (2)
12. ಎಳೆಯ ಕಂದನಿಗೆ ಮತ್ತೊಂದು ಹೆಸರು (4)

ಸರಿಯುತ್ತರಗಳು

ಕಾರ್ತಿಕ ಮಾಸದಲ್ಲಿ ದೀಪ ಬೆಳಗಿಸುವುದರ ಪುಣ್ಯಫಲ

ಹಿಂದೆ ಧರ್ಮದತ್ತನೆಂಬ ಸಾತ್ವಿಕ ಬ್ರಾಹ್ಮಣನಿದ್ದನು. ಕಾರ್ತಿಕ ಮಾಸ ಬಂದಿತು. ಏಕಾದಶಿಯ ವ್ರತಾಚರಣೆಯ ಮರುದಿನ ದ್ವಾದಶಿಯಂದು ಸೂರ್ಯೋದಯಕ್ಕೂ ಮೊದಲೇ ಸ್ನಾನಾದಿಗಳನ್ನು ಮುಗಿಸಿ ಆತ ವಿಷ್ಣು ದೇವಾಲಯಕ್ಕೆ ಹೊರಟನು. ಆಗ ಭೀಕರ ರೂಪದ ರಾಕ್ಷಸಿ ಎದುರಾಗಿ ಬಂದು ಗರ್ಜಿಸಿದಳು. ಬ್ರಾಹ್ಮಣನಿಗೆ ಒಂದು ಕ್ಷಣ ಹೆದರಿಕೆಯಾದರೂ ಧೈರ್ಯ ತಂದುಕೊಂಡು ತಾನಿಟ್ಟುಕೊಂಡಿದ್ದ ಕಲಶದಲ್ಲಿದ್ದ ತುಳಸಿ ತೀರ್ಥವನ್ನು ರಾಕ್ಷಸಿಯ ಮೇಲೆ ಎರಚಿದನು. ತೀರ್ಥದ ನೀರು ತಾಕಿದೊಡನೆ ರಾಕ್ಷಸಿಯ ಭಯಂಕರ ರೂಪ ನಾಶವಾಗಿ, ಬ್ರಾಹ್ಮಣನಿಗೆ ನಮಸ್ಕರಿಸಿ, ತನ್ನ ಪೂರ್ವಜನ್ಮದ ವೃತ್ತಾಂತವನ್ನು ಹೇಳತೊಡಗಿದಳು:

"ನಾನು ಹಿಂದಿನ ಜನ್ಮದಲ್ಲಿ 'ಕಲಹಾ' ಎಂಬ ಹೆಸರಿನಿಂದ ಸೌರಾಷ್ಟ್ರ ದೇಶದ ಬ್ರಾಹ್ಮಣ ಪತ್ನಿಯಾಗಿದ್ದೆ. ಕಠೋರವಾದ ನಡೆ–ನುಡಿಗಳಿಂದಲೇ ಸದಾ ದುರ್ಮಾರ್ಗದಲ್ಲಿ ನಡೆದೆ. ಪತಿಯು ನನ್ನ ಕಾಟವನ್ನು ಸಹಿಸಲಾಗದೆ ಇನ್ನೊಂದು ಮದುವೆಯಾಗಲು ನಿರ್ಧರಿಸಿದನು. ಈ ವಿಷಯ ತಿಳಿದು ನಾನು ಆತ್ಮಹತ್ಯೆ ಮಾಡಿಕೊಂಡೆ. ಯಮದೂತರು ಕರೆದೊಯ್ದು ಯಮನ ಮುಂದೆ ನಿಲ್ಲಿಸಿದರು. ಯಮನ ಆಣತಿಯಂತೆ ಚಿತ್ರಗುಪ್ತನು ನನ್ನ ಕರ್ಮದ ಲೆಕ್ಕಾಚಾರವನ್ನು ನೋಡಿ, 'ಪ್ರಭು, ಇವಳು ಬದುಕಿದ್ದಾಗ ಒಂದೂ ಒಳ್ಳೆಯ ಕೆಲಸವನ್ನು ಮಾಡಿಲ್ಲ. ಈಕೆ ಆತ್ಮಹತ್ಯೆಯನ್ನು ಮಾಡಿಕೊಂಡ ಕಾರಣ, ಮೇಕೆ, ಹಂದಿ, ಬೆಕ್ಕಿನಂತೆ ವಿವಿಧ ಪ್ರಾಣಿಗಳ ರೂಪದಲ್ಲಿ ಜನ್ಮತಾಳಿ, ಕೆಲವು ಕಾಲ ನೀರಿಲ್ಲದೆ ಕಳೆದು, ಆನಂತರ ನೂರು ಜನ್ಮ ತಾಳಬೇಕು' ಎಂದನು. ಆ ಪ್ರಕಾರವಾಗಿ, ಇಷ್ಟೂ ಜನ್ಮಗಳನ್ನು ಕಳೆದು ಈಗ ರಾಕ್ಷಸಿ ಜನ್ಮವನ್ನು ತಾಳಿದ್ದೆ. ಬ್ರಾಹ್ಮಣೋತ್ತಮರೇ, ನೀವು ಹಾಕಿದ ತುಳಸಿ ಜಲದಿಂದ ನನಗೆ ಪೂರ್ವಜನ್ಮದ ಸ್ಮರಣೆ ಬಂದಿದ್ದು, ನಿಮ್ಮ ದರ್ಶನ ಭಾಗ್ಯ ಒದಗಿದೆ. ಕೃಪೆ ಮಾಡಿ ನನ್ನ ಈ ಯಾತನಾಮಯವಾದ ಶರೀರದಿಂದ ಬಿಡುಗಡೆ ಮಾಡಿಸಿ" ಎಂದು ಪ್ರಾರ್ಥಿಸಿದಳು.

ಬ್ರಾಹ್ಮಣನು ಆ ರಾಕ್ಷಸಿಯ ವೃತ್ತಾಂತವನ್ನು ಸಂಪೂರ್ಣ ಆಲಿಸಿದ. ಧರ್ಮಾಧರ್ಮಗಳ ಸೂಕ್ಷ್ಮವನ್ನು ಅರಿತಿದ್ದ ಅವನು, "ಹೇ ಸ್ತ್ರೀಯೇ, ಈಗಿನ ಜನ್ಮದಿಂದ ನಿನ್ನ ಮುಕ್ತಿಯಾಗಲು ತೀರ್ಥಸ್ನಾನ–ದಾನ–ವ್ರತ–ಪೂಜಾದಿಗಳನ್ನು ನೀನು ಮಾಡಬೇಕು. ಆದರೆ ಈ ಪ್ರೇತ ಶರೀರದಿಂದ ಇವುಗಳನ್ನು ಮಾಡಲು ಸಾಧ್ಯವಿಲ್ಲ. ಅದಕ್ಕಾಗಿ, ನಾನು ಇಷ್ಟು ವರ್ಷಗಳು ಮಾಡಿದ ಶಿವ ಮತ್ತು ವಿಷ್ಣುವಿನ ಪೂಜೆ, ಕಾರ್ತಿಕ ಸ್ನಾನದ ದೀಪಾರಾಧನೆಯಿಂದ ದಕ್ಕಿದ ಪುಣ್ಯಸಂಗ್ರಹವನ್ನೆಲ್ಲ ನಿನಗೆ ಧಾರೆ ಎರೆಯುವೆ. ಅದರಿಂದ ನಿನ್ನ ಮೂರು ಜನ್ಮಗಳ ಕರ್ಮ ಪರಿಹಾರ ಆಗುತ್ತದೆ ಮತ್ತು ಮೋಕ್ಷ ದೊರಕುತ್ತದೆ" ಎಂದನು.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು
Vishwavani TV Special
ಯೂಟ್ಯೂಬ್ ಚಾನೆಲ್‌ನಲ್ಲಿ

ನಂತರ ಬ್ರಾಹ್ಮಣನು ಪ್ರೇತಕ್ಕೆ ಮಂತ್ರಜಲವನ್ನು ಪ್ರೋಕ್ಷಿಸಿ, ಕಾರ್ತಿಕ ಮಾಸದ ಪುಣ್ಯವನ್ನು ಅದಕ್ಕೆ ಧಾರೆ ಎರೆದನು. ಇದರಿಂದಾಗಿ ಪ್ರೇತಾತ್ಮ ಜನ್ಮವು ನಾಶವಾಗಿ ತೇಜೋಮಯವಾದ ದಿವ್ಯ ರೂಪ ಬಂದಿತು. ಆಕೆ ಕೃತಜ್ಞತೆಯಿಂದ ಬ್ರಾಹ್ಮಣನಿಗೆ ಅನೇಕ ಬಾರಿ ನಮಸ್ಕರಿಸಿದಳು. ಆಕೆಯನ್ನು ಕರೆದೊಯ್ಯಲು ಆಕಾಶಮಾರ್ಗದಲ್ಲಿ ವಿಮಾನ ಸಹಿತರಾಗಿ ಇಬ್ಬರು ದೂತರು ಬಂದರು. ಒಬ್ಬ ದೂತನು ಆಕೆಯನ್ನು ವಿಮಾನದಲ್ಲಿ ಕೂರಿಸಿದನು, ಅಪ್ಸರೆಯರು ಮತ್ತು ದೇವತಾ ಸ್ತ್ರೀಯರು ಆದರೋಪಚಾರಗಳಿಂದ ಬರಮಾಡಿಕೊಂಡರು. ಬಂದ ದೂತರಿಬ್ಬರೂ ಧರ್ಮದತ್ತನಿಗೆ ಕೈ ಮುಗಿದು, "ಹೇ ಬ್ರಾಹ್ಮಣೋತ್ತಮ, ದೀನರಿಗೆ ದಯೆ ತೋರಿಸುವವನೂ, ದೈವಭಕ್ತನೂ ಆದ ನೀನು ಇಂಥ ಕೆಟ್ಟ ಹೆಂಗಸಿಗೂ ನಿನ್ನ ಕಾರ್ತಿಕ ಮಾಸದ ಮಹಿಮಾನ್ವಿತ ಪುಣ್ಯವನ್ನು ಧಾರೆಯೆರೆದು, ಇವಳನ್ನು ಪಾಪಗಳಿಂದ ಮುಕ್ತಿಗೊಳಿಸಿದೆ. ಈ ಪುಣ್ಯಫಲದಿಂದ ನಿನಗೆ ವೈಕುಂಠ ಪ್ರಾಪ್ತಿಯಾಗುವುದರಲ್ಲಿ ಸಂಶಯವಿಲ್ಲ. ಹಾಗೆ ವೈಕುಂಠ ಲೋಕದಲ್ಲಿ ನಿನ್ನ ಪುಣ್ಯ ಮುಗಿದಬಳಿಕ, ತ್ರೇತಾಯುಗದಲ್ಲಿ ಸೂರ್ಯವಂಶದಲ್ಲಿ 'ದಶರಥ' ಚಕ್ರವರ್ತಿಯಾಗಿ ಜನಿಸಿ, ಶ್ರೀಮನ್ನಾರಾಯಣನನ್ನು ಮಗನನ್ನಾಗಿ ಪಡೆಯುವೆ. ನಿನ್ನಿಂದ ಮೋಕ್ಷ ಪಡೆದ ಈ 'ಕಲಹಾ' ಸ್ತ್ರೀಯು ಆಗ ಕೈಕೇಯಿಯಾಗಿ ಜನ್ಮತಾಳಿ, ದೇವಕಾರ್ಯಾರ್ಥವಾಗಿ ರಾವಣ ಸಂಹಾರಕ್ಕೆ ಕಾರಣಳಾಗುತ್ತಾಳೆ. ನಿನ್ನ ಕಾರ್ತಿಕ ಮಾಸದ ವ್ರತದ ಅರ್ಧಪುಣ್ಯದಿಂದಲೇ ಇಷ್ಟೊಂದು ಫಲ ಪಡೆದ ನೀನು, ಪೂರ್ತಿ ಕಾರ್ತಿಕ ಮಾಸದ ಪುಣ್ಯದ ಮಹಿಮೆಯಿಂದ ಎಷ್ಟು ಫಲಗಳಿಸುವೆ ಎಂದು ಊಹಿಸಲು ಸಾಧ್ಯವಿಲ್ಲ" ಎಂದು ಶ್ಲಾಘಿಸಿದರು. ಇದನ್ನು ಕೇಳಿದ ಬ್ರಾಹ್ಮಣನು ತುಂಬಾ ಆಶ್ಚರ್ಯಚಕಿತನಾಗಿ ಅವರಿಗೆ ಸಾಷ್ಟಾಂಗ ನಮಸ್ಕಾರ ಮಾಡಿದನು. ಎಂಥದೇ ಸಂದರ್ಭದಲ್ಲೂ ಮತ್ತೊಬ್ಬರ ಮೇಲೆ ನಾವು ತೋರುವ ದಯೆ, ಕರುಣೆ ಇವುಗಳಿ ಗಿಂತ ಮಿಗಿಲಾದ ಪುಣ್ಯ ಇನ್ಯಾವುದೂ ಇಲ್ಲ. ಜತೆಗೆ ಕಾರ್ತಿಕ ಮಾಸದಲ್ಲಿ ದಿನವೂ ಸಂಜೆ ಮುಂಬಾಗಿಲಲ್ಲಿ, ತುಳಸಿಯ ಮುಂದೆ, ದೇವರ ಮುಂದೆ ದೀಪ ಹಚ್ಚಿ ಭಗವಂತನ ಕೃಪೆಗೆ ಪಾತ್ರರಾಗೋಣ.

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಸಮಾಚಾರ ಸಣ್ಣದಲ್ಲ

ಪ್ರೊ ಕಬಡ್ಡಿ ಟೂರ್ನಿ ಬೆಂಗಳೂರು ಹೊರಕ್ಕೆ

ದೆಹಲಿ: 2ನೇ ಆವೃತ್ತಿಯ ಪ್ರೊ ಕಬಡ್ಡಿ ಲೀಗ್‌ನಿಂದ ಬೆಂಗಳೂರು ಬುಲ್ಸ್ ತಂಡ ಹೊರಬಿದ್ದಿದೆ. ಸೋಮವಾರ ದೆಹಲಿಯ ತ್ಯಾಗರಾಜ್ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಎಲಿಮಿನೇಟರ್ 2ನೇ ಪಂದ್ಯದಲ್ಲಿ ಪಾಟ್ನಾ ಪೈರೇಟ್ಸ್ ಮತ್ತು ಬೆಂಗಳೂರು ಬುಲ್ಸ್ ಮುಖಾಮುಖಿಯಾಗಿದ್ದವು. ಈ ಪಂದ್ಯದಲ್ಲಿ ಪಾಟ್ನಾ ಪೈರೇಟ್ಸ್ ವಿರುದ್ಧ ಬುಲ್ಸ್ ಪಡೆ 37-46 ಅಂತರದಿಂದ ಸೋಲನ್ನು ಕಂಡು ಟೂರ್ನಿಯಿಂದ ಹೊರಬಿತ್ತು. ಆರಂಭದಿಂದಲೂ ಅದ್ಭುತ ಆಟವಾಡಿದ ಪಾಟ್ನಾ ತಂಡ ಸತತವಾಗಿ ಅಂಕಗಳನ್ನು ಗಳಿಸಿದರೆ, ಬೆಂಗಳೂರು ತಂಡ ಅಂಕಗಳನ್ನು ಕಲೆಹಾಕಲು ಹೆಣಗಾಡಿತ್ತು. ಮೊದಲಾರ್ಧದ ಅಂತ್ಯದಲ್ಲಿ ಪಾಟ್ನಾ ಪೈರೇಟ್ಸ್ 16 ರೈಡ್ ಪಾಯಿಂಟ್‌ಗಳು, 6 ಟ್ಯಾಕಲ್ ಪಾಯಿಂಟ್‌ಗಳು, 4 ಆಲ್‌ಔಟ್ ಮತ್ತು ಒಂದು ಹೆಚ್ಚುವರಿ ಪಾಯಿಂಟ್‌ನೊಂದಿಗೆ 27 ಅಂಕಗಳನ್ನು ಕಲೆಹಾಕಿತು. ಬೆಂಗಳೂರು ತಂಡಕ್ಕೆ 7 ರೈಡ್ ಪಾಯಿಂಟ್, 4 ಟ್ಯಾಕಲ್ ಪಾಯಿಂಟ್ ಮತ್ತು 2 ಹೆಚ್ಚುವರಿ ಪಾಯಿಂಟ್‌ನೊಂದಿಗೆ 13 ಅಂಕಗಳನ್ನು ಗಳಿಸಿತು. ಆದರೆ ಪಾಟ್ನಾ ತಂಡವು ಮೊದಲಾರ್ಧದ ಅಂತ್ಯದಲ್ಲಿ 14 ಅಂಕಗಳ ಮುನ್ನಡೆ ಪಡೆದು ಗೆಲುವಿಗೆ ಅಡಿಪಾಯ ಹಾಕಿತು.

ಫಿಡೆ ಚೆಸ್ ಕೂಟ: ಗಂಗೊಳ್ಳಿಗೆ ಚಿನ್ನ

ಬೆಂಗಳೂರು: ಕನ್ನಡಿಗ ಕಿಶನ್ ಗಂಗೊಳ್ಳಿ ಅವರು ಕಜಾಕಸ್ತಾನದ ಅಸ್ತಾನಾದಲ್ಲಿ ನಡೆದ ವಿಶೇಷ ಚೇತನರಿಗಾಗಿ ನಡೆದ ಎರಡನೇ ಫಿಡೆ ಚೆಸ್ ಒಲಿಂಪಿಯಾಡ್‌ನಲ್ಲಿ ಉತ್ತಮ ಪ್ರದರ್ಶನ ನೀಡಿ ಚಿನ್ನದ ಪದಕ ಗೆದ್ದುಕೊಂಡಿದ್ದಾರೆ.

ಮೂರನೇ ಬೋರ್ಡ್‌ನಲ್ಲಿ ನೀಡಿದ ಉತ್ತಮ ಆಟಕ್ಕೆ ಅವರಿಗೆ ಚಿನ್ನದ ಪದಕ ಒಲಿದಿದೆ. ಟೂರ್ನಿಯಲ್ಲಿ ಅಜೇಯರಾಗುಳಿದ ಅವರು ಆರು ಸುತ್ತುಗಳಿಂದ ಐದು ಪಾಯಿಂಟ್ (4 ಗೆಲುವು, 2 ಡ್ರಾ) ಕಲೆಹಾಕಿದರು. ಆದರೆ ಭಾರತ ತಂಡ 12ನೇ ಸ್ಥಾನ ಗಳಿಸಲಷ್ಟೇ ಶಕ್ತವಾಯಿತು. 2023ರಲ್ಲಿ ನಡೆದ ಈ ಹಿಂದಿನ ಒಲಿಂಪಿಯಾಡ್‌ನಲ್ಲಿ ಭಾರತ ನಾಲ್ಕನೇ ಸ್ಥಾನ ಪಡೆದಿತ್ತು. ಈ ಬಾರಿ 34 ತಂಡ ಗಳು ಕಣದಲ್ಲಿದ್ದವು. ರಷ್ಯಾ, ಫಿಡೆ (1) ಪ್ರಶಸ್ತಿಯ ಮೊದಲ ಸ್ಥಾನ ಪಡೆದರೆ, ಪೋಲೆಂಡ್ ಎರಡನೇ ಸ್ಥಾನ ಗಳಿಸಿತು.

5 ಪಂದ್ಯಗಳ ಟಿ20 ಸರಣಿ | ಸೂರ್ಯಕುಮಾರ್ ಯಾದವ್ ನಾಯಕತ್ವದ ಟೀಮ್ ಇಂಡಿಯಾಕ್ಕೆ ಗೆಲುವಿನ ನಿರೀಕ್ಷೆ

ಇಂದು ಭಾರತ-ಆಸೀಸ್ ಚುಟುಕು ಕದನ

ಕ್ಯಾನ್‌ಬೆರಾ: ತೀವ್ರ ಕುತೂಹಲ ಕೆರಳಿಸಿರುವ ಭಾರತ ಮತ್ತು ಆಸ್ಟ್ರೇಲಿಯಾ ತಂಡಗಳ ನಡುವಿನ ಟಿ20 ಸರಣಿ ಬುಧವಾರ ಇಲ್ಲಿ ಪ್ರಾರಂಭವಾಗಲಿದ್ದು ಮೊದಲ ಪಂದ್ಯ ಇಲ್ಲಿ ನಡೆಯಲಿದೆ. ಏಕದಿನ ಸರಣಿಯಲ್ಲಿ ವಿಶ್ವಚಾಂಪಿಯನ್ ಆಸೀಸ್ ವಿರುದ್ಧ ಟೀಮ್ ಇಂಡಿಯಾ ಸೋಲು ಅನುಭವಿಸಿದ್ದರೂ, ಟಿ20 ಮಾದರಿಯಲ್ಲಿ ಭಾರತವೇ ವಿಶ್ವಚಾಂಪಿಯನ್ ಆಗಿರುವುದಷ್ಟೇ ಅಲ್ಲದೆ ಅತ್ಯುತ್ತಮ ಫಾರ್ಮ್‌ನಲ್ಲಿ ಸಹ ಇರುವುದರಿಂದ ತೀವ್ರ ಕುತೂಹಲಕ್ಕೆ ಕೆರಳಿಸಿದೆ.

ಇತ್ತೀಚೆಗಷ್ಟೇ ಟಿ20 ಮಾದರಿಯಲ್ಲಿ ನಡೆದಿರುವ ಏಷ್ಯಾಕಪ್ ಗೆದ್ದಿರುವ ಭಾರತ ತಂಡ, ಆಸ್ಟ್ರೇಲಿಯಾ ವಿರುದ್ಧದ ಟಿ20 ಸರಣಿಯಲ್ಲೂ ಗೆಲ್ಲುವ ವಿಶ್ವಾಸದಲ್ಲಿದೆ. ಅಂಕಿ ಅಂಶಗಳನ್ನು ತಾಳೆ ನೋಡಿದರೆ ಆಸೀಸ್ ತಂಡ ಜನವರಿ 2024ರಿಂದ ಇಲ್ಲಿಯವರೆಗೆ ಆಡಿರುವ 32 ಟಿ20 ಪಂದ್ಯಗಳಲ್ಲಿ 26 ಪಂದ್ಯಗಳನ್ನು ಗೆದ್ದಿದೆ. ಇಂಗ್ಲೆಂಡ್, ನ್ಯೂಜಿಲೆಂಡ್, ದಕ್ಷಿಣ ಆಫ್ರಿಕಾ, ಪಾಕಿಸ್ತಾನ ಮತ್ತು ವೆಸ್ಟ್ ಇಂಡೀಸ್ ತಂಡಗಳ ವಿರುದ್ಧ ಸರಣಿ ಗೆಲುವು ಸಾಧಿಸಿದೆ. ಕಳೆದ ಎಂಟು ಟಿ20 ಸರಣಿಗಳಲ್ಲಿ ಆಸ್ಟ್ರೇಲಿಯಾ ಸೋತಿಲ್ಲ, ಏಳು ಸರಣಿಗಳನ್ನು ಗೆದ್ದು ಒಂದು ಡ್ರಾ ಮಾಡಿಕೊಂಡಿದೆ. 2023ರಲ್ಲಿ ಭಾರತದ ವಿರುದ್ಧ ನಡೆದ ಕೊನೆಯ ಸರಣಿ ಸೋಲು ಅನುಭವಿಸಿತ್ತು.

ಭಾರತದ ಟಿ20 ಸೋಲು ಗೆಲುವಿನ ಅಂಕಿಅಂಶಗಳನ್ನು ತಾಳೆ ಹಾಕಿದರೆ. ಜನವರಿ 2024ರಿಂದ ಆಡಿರುವ 38 ಟಿ20 ಪಂದ್ಯಗಳಲ್ಲಿ 32 ಪಂದ್ಯಗಳನ್ನು ಗೆದ್ದಿದೆ, ಮೂರು ಪಂದ್ಯಗಳು ಮಳೆಯಿಂದ ರದ್ದಾಗಿವೆ. ಹೀಗಾಗಿ ಈ ವಿಚಾರದಲ್ಲಿ ಭಾರತವೂ ಆಸ್ಟ್ರೇಲಿಯಾಗಿಂತ ಏನೂ ಕಮ್ಮಿಯಿಲ್ಲ. ಆದರೆ ಏಷ್ಯಾ ಕಪ್‌ನಲ್ಲಿ ಗಾಯಕ್ಕೀಡಾಗಿರುವ ಹಾರ್ದಿಕ್ ಪಾಂಡ್ಯ ಅವರು ಟಿ20 ಸರಣಿಗೂ ಲಭ್ಯವಿಲ್ಲದ್ದರಿಂದ ಭಾರತ ತಂಡಕ್ಕೆ ದೊಡ್ಡ ಹೊಡೆತವಾಗಿದೆ. ಮೊದಲ ಎರಡು ಏಕದಿನ ಪಂದ್ಯಗಳಲ್ಲಿ ತಂಡದ ಸಮತೋಲನಕ್ಕಾಗಿ ಆಡದ ಕುಲ್ದೀಪ್ ಯಾದವ್ ಅವರು ಟಿ20 ಪಂದ್ಯಗಳಲ್ಲಿ ಆಡುವ ಸಾಧ್ಯತೆ ಇದ್ದೇ ಇದೆ. ಅವರೊಂದಿಗೆ ಅಕ್ಷರ್ ಪಟೇಲ್ ಮತ್ತು ವರುಣ್ ಚಕ್ರವರ್ತಿ ಸ್ಪಿನ್ ವಿಭಾಗದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಅಡಿಲೇಡ್ ಏಕದಿನ ಪಂದ್ಯದಲ್ಲಿ ಗಾಯಗೊಂಡಿದ್ದ ನಿತೀಶ್ ರೆಡ್ಡಿ ಸಂಪೂರ್ಣವಾಗಿ ಫಿಟ್ ಆಗಿಲ್ಲದ ಕಾರಣ ಈ ಪಂದ್ಯದಿಂದ ಹೊರಗುಳಿಯುವ ಸಾಧ್ಯತೆಯಿದೆ. ಯುಎಇಯಲ್ಲಿ ಉತ್ತಮ ಪ್ರದರ್ಶನ ನೀಡಿದ್ದ ಶಿವಂ ದುಬೆ, ಜಸ್ಪ್ರೀತ್ ಬುಮ್ರಾ ಮತ್ತು ಹರ್ಷಿತ್ ರಾಣಾ ವೇಗದ ಬೌಲರ್‌ಗಳಾಗಿ ತಂಡದಲ್ಲಿ ಸ್ಥಾನ ಪಡೆಯಬಹುದು.

ಎಡಗೈ ವೇಗಿ ಮಿಚೆಲ್ ಸ್ಟಾರ್ಕ್ ಅವರು ಟಿ20 ಮಾದರಿಗೆ ನಿವೃತ್ತಿ ಸಾರಿರುವ ಹಿನ್ನೆಲೆಯಲ್ಲಿ, ಕ್ಸೇವಿಯರ್ ಬಾರ್ಟ್ಲೆಟ್ ಅವರು ಆಸೀಸ್ ತಂಡ ಸೇರುವ ಸಾಧ್ಯತೆ ಇದೆ. ಅವರು ಬ್ಯಾಟಿಂಗ್‌ನಲ್ಲೂ ಕೊಡುಗೆ ನೀಡಬಲ್ಲರು. ಆಸ್ಟ್ರೇಲಿಯಾದ ಪ್ರಮುಖ ಬೌಲರ್‌ಗಳಾದ ನಾಥನ್ ಎಲ್ಲಿಸ್, ಆ್ಯಡಮ್ ಜಂಪಾ ಮತ್ತು ಜೋಶ್ ಹೇಜಲ್‌ವುಡ್ ತಂಡದಲ್ಲಿ ಸ್ಥಾನ ಪಡೆಯುವ ನಿರೀಕ್ಷೆಯಿದೆ. ಆಸೀಸ್ ಆಲ್‌ರೌಂಡರ್‌ಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತಿದ್ದು, ಇದು ಬೌಲಿಂಗ್‌ನಲ್ಲಿ ಅವರಿಗೆ ಹೆಚ್ಚಿನ ಆಯ್ಕೆಗಳನ್ನು ಆಸೀಸ್‌ಗೆ ನೀಡುತ್ತದೆ.

ಹೇಗಿದೆ ಕ್ಯಾನ್‌ಬೆರಾ ಪಿಚ್?

ಕ್ಯಾನ್ ಬೆರಾದ ಮನುಕಾ ಓವಲ್ ಪಿಚ್ ಸ್ವಲ್ಪ ನಿಧಾನಗತಿಯದ್ದಾಗಿದ್ದರೂ ಬ್ಯಾಟಿಂಗ್‌ಗೆ ಸಹಕಾರಿಯಾಗಿದೆ. ಇಲ್ಲಿ ನಡೆದ ಟಿ20 ಪಂದ್ಯಗಳಲ್ಲಿ ಮೊದಲು ಬ್ಯಾಟಿಂಗ್‌ನಲ್ಲಿ ಬಂದಿರುವುದು ಸರಾಸರಿ ಸ್ಕೋರ್ 150 ಆಗಿದ್ದರೆ, ಅಂತಾರಾಷ್ಟ್ರೀಯ ಟಿ20 ಪಂದ್ಯಗಳಲ್ಲಿ 144 ಆಗಿದೆ. 2020ರಲ್ಲಿ ಈ ಮೈದಾನದಲ್ಲಿ ನಡೆದಿದ್ದ ಭಾರತ ಮತ್ತು ಆಸ್ಟ್ರೇಲಿಯಾ ನಡುವಿನ ಏಕೈಕ ಪಂದ್ಯದಲ್ಲಿ, ಭಾರತ 161 ರನ್ ಗಳಿಸಿ 11 ರನ್‌ಗಳ ಅಂತರದಿಂದ ಗೆಲುವು ಸಾಧಿಸಿತ್ತು. ಈ ಕ್ರೀಡಾಂಗಣದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ತಂಡವು ಶೇ 30ರಷ್ಟು ಗೆಲುವಿನ ಇತಿಹಾಸ ಹೊಂದಿದ್ದರೆ, ಚೇಸಿಂಗ್ ಮಾಡಿದ ತಂಡ ಶೇಕಡಾ 70 ಬಾರಿ ಗೆದ್ದಿದೆ. ಹೀಗಾಗಿ ಟಾಸ್ ಗೆದ್ದ ತಂಡ ಮೊದಲು ಫೀಲ್ಡಿಂಗ್ ಆಯ್ದುಕೊಳ್ಳುವ ಸಾಧ್ಯತೆ ಹೆಚ್ಚು.

ಆಸೀಸ್ ಸಂಭಾವ್ಯ ತಂಡ
ಮಿಚೆಲ್ ಮಾರ್ಷ್ (ನಾಯಕ), ಟ್ರಾವಿಸ್ ಹೆಡ್, ಜೋಶ್ ಇಂಗ್ಲಿಸ್ (ವಿಕೆಟ್ ಕೀಪರ್), ಮ್ಯಾಟ್ ಶಾರ್ಟ್, ಟಿಮ್ ಡೇವಿಡ್, ಮಿಚೆಲ್ ಓವನ್, ಮಾರ್ಕಸ್ ಸ್ಟೋನಿಸ್, ಕ್ಸೇವಿಯರ್ ಬಾರ್ಟ್ಲೆಟ್, ನಾಥನ್ ಎಲ್ಲಿಸ್, ತನ್ವೀರ್ ಸಂಘಾ, ಜೋಶ್ ಹೇಜಲ್‌ವುಡ್

ಭಾರತ ಸಂಭಾವ್ಯ ತಂಡ: ಸೂರ್ಯಕುಮಾರ್ ಯಾದವ್ (ನಾಯಕ), ಶುಭಮನ್ ಗಿಲ್, ಅಭಿಷೇಕ್ ಶರ್ಮಾ, ತಿಲಕ್ ವರ್ಮಾ, ಸಂಜು ಸ್ಯಾಮ್ಸನ್ (ವಿಕೆಟ್ ಕೀಪರ್), ಶಿವಂ ದುಬೆ, ಅಕ್ಷರ್ ಪಟೇಲ್, ಹರ್ಷಿತ್ ರಾಣಾ, ಕುಲದೀಪ್ ಯಾದವ್, ಜಸ್ಪ್ರೀತ್ ಬುಮ್ರಾ, ವರುಣ್ ಚಕ್ರವರ್ತಿ.

ರಣಜಿಯಲ್ಲಿ ರಾಜ್ಯ ತಂಡಕ್ಕೆ ಇನ್ನಿಂಗ್ಸ್ ಮುನ್ನಡೆ

ಕರ್ನಾಟಕ-ಗೋವಾ ಪಂದ್ಯ ಡ್ರಾ

ಶಿವಮೊಗ್ಗ: ಇಲ್ಲಿನ ನವುಲೆಯ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ನಡೆದ ಕರ್ನಾಟಕ ಮತ್ತು ಗೋವಾ ನಡುವಿನ ರಣಜಿ ಪಂದ್ಯವು ಡ್ರಾದಲ್ಲಿ ಅಂತ್ಯ ಕಂಡಿತು. ಮೊದಲ ಇನ್ನಿಂಗ್ಸ್ ಮುನ್ನಡೆ ಗಳಿಸಿದ ಮಯಂಕ್ ಅಗರ್ವಾಲ್ ಬಳಗಕ್ಕೆ ಮೂರು ಅಂಕ ಲಭಿಸಿದವು.

ಅತಿಥೇಯ ತಂಡದ ವೇಗಿಗಳು ಅಂತಿಮ ದಿನದಾಟದ ಮೊದಲ ಒಂದು ಗಂಟೆಯಲ್ಲೇ ನಾಲ್ಕು ವಿಕೆಟ್ ಉರುಳಿಸಿದ್ದರಿಂದ ಗೋವಾ ಫಾಲೋ ಆನ್‌ಗೆ ಸಿಲುಕಿತು. ಎರಡನೇ ಇನಿಂಗ್ಸ್‌ನ 6ನೇ ಓವರ್‌ನ ಎರಡನೇ ಎಸೆತದಲ್ಲಿ ವೈಶಾಖ್ ವಿಜಯಕುಮಾರ್ ಅವರು ಸುಯಶ್ ಪ್ರಭು ದೇಸಾಯಿ ವಿಕೆಟ್ ಉರುಳಿಸಿ ಕರ್ನಾಟಕದ ಪಾಳಯದಲ್ಲಿ ಗೆಲುವಿನ ಆಸೆ ಚಿಗುರಿಸಿದ್ದರು.

ಆದರೆ ಗೋವಾ ತಂಡದ ಆರಂಭಿಕ ಆಟಗಾರ ಮಂಥನ್ ಖುತ್ತರ್ (55 ಅಜೇಯ) ಹಾಗೂ ಅಭಿನವ್ ತೇಜ್‌ರಾಣಾ (73 ಅಜೇಯ) ಕರ್ನಾಟಕದ ಬೌಲರ್‌ಗಳನ್ನು ಕಾಡಿದರು. ಇಬ್ಬರೂ ಸೇರಿ ಮುರಿಯದ ಎರಡನೇ ವಿಕೆಟ್ ಜತೆಯಾಟದಲ್ಲಿ 244 ಎಸೆತಗಳಲ್ಲಿ 123 ರನ್ ಗಳಿಸಿದರು.

ಚಹಾ ವಿರಾಮದ ನಂತರವೂ ಒಂದೇ ಒಂದು ವಿಕೆಟ್ ಬೀಳದ ಕಾರಣ, ಉಭಯ ತಂಡಗಳ ನಾಯಕರು ಪಂದ್ಯವನ್ನು ಡ್ರಾ ಮಾಡಿಕೊಳ್ಳಲು ಸಮ್ಮತಿಸಿದರು.

ಸಂಕ್ಷಿಪ್ತ ಸ್ಕೋರ್

ಕರ್ನಾಟಕ: ಮೊದಲ ಇನ್ನಿಂಗ್ಸ್ 371
ಗೋವಾ: ಮೊದಲ ಇನ್ನಿಂಗ್ಸ್ 217
ಗೋವಾ: ಎರಡನೇ ಇನ್ನಿಂಗ್ಸ್ 1 ವಿಕೆಟ್‌ಗೆ 143
ಪಂದ್ಯಶ್ರೇಷ್ಠ: ಕರುಣ್ ನಾಯರ್

ಶ್ರೇಯಸ್ ಅಯ್ಯರ್ ಗಾಯದ ಬಗ್ಗೆ ಮಹತ್ವದ ಮಾಹಿತಿ ನೀಡಿದ ಭಾರತ ತಂಡದ ನಾಯಕ

ಅಯ್ಯರ್ ಆರೋಗ್ಯ ಸ್ಥಿರ: ಅಪಾಯದಿಂದ ಪಾರು

ಕ್ಯಾನ್‌ಬೆರಾ: ಸಿಡ್ನಿ ಕ್ರಿಕೆಟ್ ಮೈದಾನದಲ್ಲಿ ನಡೆದ ಭೀಕರ ಗಾಯದ ನಂತರ ಶ್ರೇಯಸ್ ಅಯ್ಯರ್ ಸ್ಥಿರವಾಗಿದ್ದು, ಅಪಾಯದಿಂದ ಪಾರಾಗಿದ್ದಾರೆ ಎಂದು ಭಾರತ ಮತ್ತು ಆಸ್ಟ್ರೇಲಿಯಾ ನಡುವಿನ ಮೊದಲ ಟಿ20ಐ ಪಂದ್ಯಕ್ಕೂ ಮುನ್ನಾ ದಿನ ಸೂರ್ಯಕುಮಾರ್ ಯಾದವ್ ಹೇಳಿದ್ದಾರೆ. ಬ್ಯಾಕ್‌ವರ್ಡ್ ಪಾಯಿಂಟ್‌ನಲ್ಲಿ ಅಲೆಕ್ಸ್ ಕ್ಯಾರಿ ಅವರ ಕ್ಯಾಚ್ ಹಿಡಿಯುವಾಗ ಶ್ರೇಯಸ್ ಅಯ್ಯರ್ ಪಕ್ಕೆಲುಬಿನ ಗಾಯಕ್ಕೆ ತುತ್ತಾಗಿದ್ದರು.

ಮಂಗಳವಾರ ನಡೆದ ಪಂದ್ಯಪೂರ್ವ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸೂರ್ಯಕುಮಾರ್ ಅವರು ಅಯ್ಯರ್ ಅವರ ಚೇತರಿಕೆಯ ಮಾಹಿತಿ ನೀಡಿದರು. 'ಅಯ್ಯರ್ ಇನ್ನೂ ಕೆಲವು ದಿನಗಳವರೆಗೆ ವೈದ್ಯರ ನಿಗಾದಲ್ಲಿ ಉಳಿಯುವ ನಿರೀಕ್ಷೆಯಿದೆ, ಆದರೆ ಪ್ರಸ್ತುತ ಅವರು ಅಪಾಯದಿಂದ ಪಾರಾಗಿದ್ದಾರೆ. ಫೋನ್ ಕರೆಗಳ ಮೂಲಕ ಮಾತನಾಡುತ್ತಿದ್ದಾರೆ' ಎಂದು ಸೂರ್ಯ ಹೇಳಿದರು.

'ಮೊದಲ ದಿನ ಅವರು ಗಾಯಗೊಂಡಿದ್ದಾರೆಂದು ತಿಳಿದಾಗ, ನಾನು ಅವರಿಗೆ ಕರೆ ಮಾಡಿದೆ. ಅವರ ಬಳಿ ಫೋನ್ ಇಲ್ಲ ಎಂದು ನನಗೆ ತಿಳಿಯಿತು. ಹಾಗಾಗಿ ನಾನು ಫಿಸಿಯೋಗೆ ಕರೆ ಮಾಡಿದೆ ಮತ್ತು ಅವರು ಸ್ಥಿರವಾಗಿದ್ದಾರೆ. ವೈದ್ಯರು ಮುಂದಿನ ಕೆಲವು ದಿನಗಳವರೆಗೆ ಮೇಲ್ವಿಚಾರಣೆಯಲ್ಲಿರುತ್ತಾರೆ. ಸರಣಿಯ ನಂತರ ನಾವು ಅವರನ್ನು ಭಾರತಕ್ಕೆ ಕರೆದೊಯ್ಯುತ್ತೇವೆ' ಎಂದು ಸೂರ್ಯಕುಮಾರ್ ಯಾದವ್ ಹೇಳಿದರು.

ಅಯ್ಯರ್ ಅಪಾಯದಿಂದ ಪಾರಾಗಿದ್ದಾರೆ ಮತ್ತು ಅವರನ್ನು ಐಸಿಯುನಿಂದ ಹೊರಗೆ ಕರೆದೊಯ್ಯಲಾಗಿದೆ ಎಂದು ಬಿಸಿಸಿಐ ಉಪಾಧ್ಯಕ್ಷ ರಾಜೀವ್ ಶುಕ್ಲಾ ಕೂಡಾ ಅಧಿಕೃತ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ರಣಜಿ: ಎರಡು ಇನ್ನಿಂಗ್ಸ್‌ನಲ್ಲಿ 8 ವಿಕೆಟ್

ಶಮಿ ಬೌಲಿಂಗ್‌ಗೆ ಗುಜರಾತ್ ತತ್ತರ

ಕೋಲ್ಕತ್ತಾ: ಟೀಮ್ ಇಂಡಿಯಾದಲ್ಲಿ ಮತ್ತೆ ಸ್ಥಾನ ಪಡೆಯಲು ಹಂಬಲಿಸುತ್ತಿರುವ ಹಿರಿಯ ವೇಗಿ ಮೊಹಮ್ಮದ್ ಶಮಿ, ರಣಜಿ ಟ್ರೋಫಿಯಲ್ಲಿ ಅದ್ಭುತ ಪ್ರದರ್ಶನ ನೀಡಿದ್ದಾರೆ. ಇಲ್ಲಿನ ಈಡನ್ ಗಾರ್ಡನ್ಸ್‌ನಲ್ಲಿ ನಡೆದ ಗುಜರಾತ್ ವಿರುದ್ಧದ ಪಂದ್ಯದಲ್ಲಿ ಶಮಿ, ಬಂಗಾಳ ಪರ ಎರಡು ಇನ್ನಿಂಗ್ಸ್‌ನಲ್ಲಿ 8 ವಿಕೆಟ್ ಉರುಳಿಸಿ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸಿದರು.

ಶಮಿ ಮೊದಲ ಇನ್ನಿಂಗ್ಸ್‌ನಲ್ಲಿ 3 ವಿಕೆಟ್, ಎರಡನೇ ಇನ್ನಿಂಗ್ಸ್‌ನಲ್ಲಿ ಐದು ವಿಕೆಟ್ ಕಬಳಿಸಿದರು. ಇದರಿಂದಾಗಿ ಬಂಗಾಳ ತಂಡ ಗುಜರಾತ್ ಅನ್ನು 141 ರನ್‌ಗಳಿಂದ ಸೋಲಿಸಿ ಸತತ ಎರಡನೇ ಗೆಲುವು ದಾಖಲಿಸಿತು. ಇದಕ್ಕೂ ಮೊದಲು ಉತ್ತರಾಖಂಡ್ ವಿರುದ್ಧದ ಪಂದ್ಯದಲ್ಲಿ ಶಮಿ ಏಳು ವಿಕೆಟ್ ಪಡೆದು ಪಂದ್ಯಶ್ರೇಷ್ಠ ಪ್ರಶಸ್ತಿಯನ್ನು ಪಡೆದಿದ್ದರು.

35 ವರ್ಷದ ಮೊಹಮ್ಮದ್ ಶಮಿ ಕೊನೆಯ ಬಾರಿಗೆ ಚಾಂಪಿಯನ್ಸ್ ಟ್ರೋಫಿಯಲ್ಲಿ ಭಾರತ ಪರ ಆಡಿದ್ದರು. ನಂತರ ಅವರಿಗೆ ಯಾವುದೇ ಸ್ವರೂಪದಲ್ಲಿ ರಾಷ್ಟ್ರೀಯ ತಂಡಕ್ಕೆ ಆಯ್ಕೆಯಾಗಲು ಸಾಧ್ಯವಾಗಲಿಲ್ಲ. ಫಿಟ್ನೆಸ್ ಸಮಸ್ಯೆಗಳಿಂದಾಗಿ ಅವರನ್ನು ಹೊರಗಿಡಲಾಗುತ್ತಿದೆ ಎಂಬ ಮಾತಿದೆ. ಆಸ್ಟ್ರೇಲಿಯಾ ವಿರುದ್ಧದ ಸೀಮಿತ ಓವರ್‌ಗಳ ಸರಣಿಯಲ್ಲಿ ಸ್ಥಾನ ಸಿಗದಿದ್ದಕ್ಕಾಗಿ ಶಮಿ ಇತ್ತೀಚೆಗೆ ಆಯ್ಕೆದಾರರು ಮತ್ತು ತಂಡದ ನಿರ್ವಹಣೆಯನ್ನು ಟೀಕಿಸಿದ್ದರು.

ಭಾರತದ ಮಾಜಿ ವೇಗಿ ವೆಂಕಟೇಶ್ ಪ್ರಸಾದ್ ಒತ್ತಾಯ

ಕೆಎಸ್‌ಸಿಎ ಚುನಾವಣೆ ಶೀಘ್ರ ನಡೆಸಿ

ಬೆಂಗಳೂರು: ಕೆಎಸ್‌ಸಿಎ ನೂತನ ಆಡಳಿತ ಮಂಡಳಿ ಚುನಾವಣೆಯಲ್ಲಿ ಸ್ಪರ್ಧಿಸಲು ಆಕಾಂಕ್ಷಿಯಾಗಿರುವ ಭಾರತದ ಮಾಜಿ ವೇಗಿ ವೆಂಕಟೇಶ್ ಪ್ರಸಾದ್ ನೇತೃತ್ವದ ತಂಡವು, ಹಾಲಿ ಆಡಳಿತಗಾರರು ಮತ್ತಷ್ಟು ವಿಳಂಬ ಮಾಡದೇ ಚುನಾವಣೆ ನಡೆಸಬೇಕು ಎಂದು ಒತ್ತಾಯಿಸಿದೆ.

ಸಂಸ್ಥೆಯ ಬೈಲಾ ಪ್ರಕಾರ ಸೆಪ್ಟೆಂಬರ್ 30ರ ಮೊದಲು ಚುನಾವಣೆ ನಡೆದು, ಈ ಹೊತ್ತಿಗೆ ಹೊಸ ಆಡಳಿತ ಮಂಡಳಿಯು ಅಧಿಕಾರ ವಹಿಸಿಕೊಳ್ಳಬೇಕಿತ್ತು ಎಂದು ಪ್ರಸಾದ್ ಹೇಳಿದ್ದಾರೆ.

ಬಿಸಿಸಿಐಯಲ್ಲಿ ಪ್ರಸ್ತುತ ಖಜಾಂಚಿಯಾಗಿರುವ ರಘುರಾಮ್ ಭಟ್ ನೇತೃತ್ವದ ಆಡಳಿತ ಮಂಡಳಿಯ ಅಧಿಕಾರಾವಧಿ ಸೆ.30ರಂದು ಕೊನೆಗೊಂಡಿದೆ. ಆದರೆ ಚುನಾವಣೆಗೆ ನಿರ್ದಿಷ್ಟ ದಿನಾಂಕವನ್ನು ಇನ್ನೂ ಘೋಷಿಸಲಾಗಿಲ್ಲ. ಜೂನ್‌ನಲ್ಲಿ ಐಪಿಎಲ್ ಟ್ರೋಫಿ ಗೆದ್ದ ಆರ್‌ಸಿಬಿ ತಂಡದ ವಿಜಯೋತ್ಸವದ ಸಂದರ್ಭದಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ ಕಾಲ್ತುಳಿತದ ನೈತಿಕ ಹೊಣೆ ಹೊತ್ತು ಎ.ಶಂಕರ್ ಮತ್ತು ಇ.ಎಸ್. ಜೈರಾಮ್ ರಾಜೀನಾಮೆ ನೀಡಿದ ನಂತರ ಕೆಎಸ್‌ಸಿಎಗೆ ಚುನಾಯಿತ ಕಾರ್ಯದರ್ಶಿ ಮತ್ತು ಖಜಾಂಚಿ ಇಲ್ಲದಂತಾಗಿದೆ.

ಸಂಸ್ಥೆಯ ಸುಗಮ ಕಾರ್ಯನಿರ್ವಹಣೆಗಾಗಿ ಚುನಾವಣಾ ಪ್ರಕ್ರಿಯೆಯನ್ನು ಆದಷ್ಟು ಬೇಗ ಪ್ರಾರಂಭಿಸಬೇಕು ಎಂದು ಕೆಎಸ್‌ಸಿಎ ಮಾಜಿ ಖಜಾಂಚಿ ವಿನಯ್ ಮೃತ್ಯುಂಜಯ ಮತ್ತು ಮಾಜಿ ಆಟಗಾರ್ತಿ ಶಾಂತಾ ರಂಗಸ್ವಾಮಿ ಸಮ್ಮುಖದಲ್ಲಿ ಪ್ರಸಾದ್ ಒತ್ತಾಯಿಸಿದರು. ವಾಸ್ತವವಾಗಿ 45 ದಿನಗಳಲ್ಲಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಬೇಕು ಎಂಬ ನಿಯಮವಿದೆ. ಆದರೆ ಸುಮಾರು ಎರಡು ತಿಂಗಳು ಕಳೆದರೂ ಇನ್ನೂ ಚುನಾವಣೆ ನಡೆದಿಲ್ಲ ಎಂದು ವಿನಯ್ ಮೃತ್ಯುಂಜಯ ಹೇಳಿದರು. 12 ವರ್ಷ ಬಳಿಕ ವೆಂಕಟೇಶ್ ಮತ್ತೆ ಕೆಎಸ್‌ಸಿಎ ಆಡಳಿತ ಮಂಡಳಿಗೆ ಮುಂದಿನ ಚುನಾವಣೆಗೆ ವೆಂಕಟೇಶ್ ಪ್ರಸಾದ್ ಸ್ಪರ್ಧಿಸುವ ನಿರೀಕ್ಷೆಯಲ್ಲಿದ್ದಾರೆ.

45 ಸಾಂಗ್ ಝಲಕ್

ಸ್ಯಾಂಡಲ್‌ವುಡ್‌ನ ಪ್ರಸಿದ್ಧ ಸಂಗೀತ ನಿರ್ದೇಶಕ ಅರ್ಜುನ್ ಜನ್ಯ 45 ಚಿತ್ರದ ಮೂಲಕ ನಿರ್ದೇಶಕರಾಗಿಯೂ ಗುರುತಿಸಿಕೊಳ್ಳುತ್ತಿದ್ದಾರೆ. ಬಲು ಅದ್ದೂರಿಯಾಗಿ ನಿರ್ಮಾಣವಾಗಿರುವ 45 ಸಿನಿಮಾ, ಕ್ರಿಸ್‌ಮಸ್ ಹಬ್ಬದಂದು ವಿಶ್ವಾದ್ಯಂತ ತೆರೆಗೆ ಬರಲಿದೆ. ಅದಕ್ಕೂ ಮೊದಲೇ ಚಿತ್ರತಂಡ ಪ್ರಮೋಷನಲ್ ಸಾಂಗ್ ರಿಲೀಸ್ ಮಾಡುತ್ತಿದೆ. ಸದ್ಯ ಈ ಹಾಡಿನ ಝಲಕ್ ರಿಲೀಸ್ ಆಗಿದೆ. ಆಫ್ರೋ ಟಪಾಂಗ್ ಸಾಂಗ್ ಸಾಂಗ್ ಇದಾಗಿದ್ದು, ಕಲರ್‌ಫುಲ್ ಆಗಿ ಮೂಡಿಬಂದಿದೆ. ಕಲರ್ ಫುಲ್ ಕಾಸ್ಟ್ಯೂಮ್ ಮೂಲಕವೂ ಗಮನಸೆಳೆಯುತ್ತಿದೆ. ಈ ಹಾಡಿನಲ್ಲಿ ಘೆಟ್ಟೋ ಕಿಡ್ಸ್ ಸಖತ್ತಾಗಿಯೇ ಹೆಜ್ಜೆ ಹಾಕಿದ್ದಾರೆ. ಎಂ.ಸಿ.ಬಿಜ್ಜು ಈ ಗೀತೆಗೆ ಸಾಹಿತ್ಯ ಬರೆದಿದ್ದು, ಹಾಡಿಗೂ ದನಿಯಾಗಿದ್ದಾರೆ. ಅರ್ಜುನ್ ಜನ್ಯ ಸಂಗೀತ ಸಂಯೋಜಿಸಿರುವ ಈ ಹಾಡಿನ ಝಲಕ್ ಸಂಗೀತ ಪ್ರಿಯರನ್ನು ಸೆಳೆದಿದೆ. ವಿಶೇಷ ಎಂದರೆ ಈ ಸಾಂಗ್‌ನಲ್ಲಿ ಹ್ಯಾಟ್ರಿಕ್ ಹೀರೊ ಶಿವರಾಜ್ ಕುಮಾರ್, ಉಪೇಂದ್ರ ಕಾಣಿಸಿಕೊಂಡಿದ್ದಾರೆ. ಸದ್ಯ ಉಪೇಂದ್ರ ಅವರ ಲುಕ್ ರಿವಿಲ್ ಆಗಿದ್ದು, ಉಪ್ಪಿ ವಿಭಿನ್ನ ಗೆಟಪ್‌ನಲ್ಲಿ ಮಿಂಚಿದ್ದಾರೆ. ನವೆಂಬರ್ 1ರ ಕನ್ನಡ ರಾಜ್ಯೋತ್ಸವದಂದು ಈ ಹಾಡು ಬಿಡುಗಡೆಯಾಗಲಿದೆ. ಸೂರಜ್ ಪ್ರೊಡಕ್ಷನ್‌ನಲ್ಲಿ ರಮೇಶ್ ರೆಡ್ಡಿ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ.

ಲ್ಯಾಂಡ್ ಲಾರ್ಡ್
ಇದು ಅಳಿದು ಉಳಿದವರ ಕಥೆ

ಪ್ರಶಾಂತ್.ಟಿ.ಆರ್

ನಮ್ಮ ಮಣ್ಣಿನ ಕಥೆಗಳನ್ನು ಹೆಣೆದು ಅದನ್ನು ನೈಜತೆಗೆ ಹತ್ತಿರವಾಗುವಂತೆ ಕಟ್ಟಿಕೊಡವಲ್ಲಿ ನಿರ್ದೇಶಕ ಜಡೇಶ್ ಕುಮಾರ್ ಹಂಪಿ ಕೂಡ ಒಬ್ಬರು. ಈ ಹಿಂದೆ ಕಾಟೇರ ಚಿತ್ರಕ್ಕೆ ಕಥೆ ಬರೆದು, ಅಂದಿನ ಸಮಾಜದಲ್ಲಿದ್ದ ಬಂಡವಾಳ ಶಾಹಿ ಹಿಡಿತ, ಜಾತಿ ವ್ಯವಸ್ಥೆ, ಭೂಮಿಗಾಗಿ ಹೋರಾಟವನ್ನು ತೆರೆಯಲ್ಲಿ ಎಲ್ಲರ ಮನಕ್ಕೆ ಮುಟ್ಟುವಂತೆ ಕಟ್ಟಿಕೊಟ್ಟಿದ್ದರು. ಜಡೇಶ್ ಕುಮಾರ್ ಈಗ ಲ್ಯಾಂಡ್ ಲಾರ್ಡ್ ಚಿತ್ರದ ಮೂಲಕ ಅಳಿದು ಉಳಿದವರ ಕಥೆಯನ್ನು ಹೊತ್ತುಬರುತ್ತಿದ್ದಾರೆ. ಕರುನಾಡಿನ ಮಣ್ಣಿನ ಕಥೆ ಇಲ್ಲಿದ್ದು, ಅದನ್ನು ನೈಜತೆ ಹತ್ತಿರವಾಗುವಂತೆ ಕಟ್ಟಿಕೊಟ್ಟಿದ್ದಾರೆ. ನಿರ್ದೇಶಕ ಜಡೇಶ್ ಕುಮಾರ್, ಲ್ಯಾಂಡ್ ಲಾರ್ಡ್ ಕುರಿತಂತೆ ವಿ.ಸಿನಿಮಾಸ್‌ನೊಂದಿಗೆ ಮಾತನಾಡಿದ್ದಾರೆ.

ಲ್ಯಾಂಡ್ ಲಾರ್ಡ್ ಇದು ಭೂಮಿಗಾಗಿ ನಡೆವ ಹೋರಾಟದ ಕಥೆಯೆ ?

ಜಡೇಶ್ ಕುಮಾರ್ : ಲ್ಯಾಂಡ್‌ಲಾರ್ಡ್‌ನಲ್ಲಿ ಹೋರಾಟದ ಕಥೆ ಇದೆ, ಅದಕ್ಕಾಗಿಯೇ ಇದು ಅಳಿದು ಉಳಿದವರ ಕಥೆ ಎಂದು ಅಡಿಬರದಲ್ಲಿ ಹೇಳಿದ್ದೇವೆ. ಇಲ್ಲಿ ಉಳುವ ಭೂಮಿಗಾಗಿ ನಡೆಯುವ ಹೋರಾಟವೇ ಪ್ರಮುಖವಾಗಿದ್ದು, ಅದು ಎಂಬತ್ತರ ಕಾಲ ಘಟ್ಟದಲ್ಲಿ ಸಾಗಲಿದೆ. ಮೇರು ಸಾಹಿತಿ ಶಿವರಾಮ ಕಾರಂತರ ಚೋಮನ ದುಡಿ ಕಾದಂಬರಿಯೇ ಈ ಸಿನಿಮಾ ಮಾಡಲು ಸ್ಫೂರ್ತಿ. ಚೋಮನಿಗಿದ್ದ ಆಸೆಯಂತೆಯೇ ಎಂಬತ್ತರ ದಶಕದಲ್ಲಿ ಹಲವರು ಭೂಮಿಗಾಗಿ ಹಪಹಪಿಸುತ್ತಿದ್ದರು. ಚಿಕ್ಕ ಭೂಮಿಯಾದರೂ ಅದರಲ್ಲಿ ವ್ಯವಸಾಯ ಮಾಡಬೇಕು ಎಂಬ ಹಂಬಲ ಅವರಿಗಿತ್ತು. ಆದರೆ ಭೂಮಿ ಪಡೆಯುವುದು ಅಷ್ಟು ಸುಲಭವಾಗಿರಲಿಲ್ಲ. ಅಂದಿನ ಕಾಲದಲ್ಲಿ ಬಲಿಷ್ಠಾಗಿದ್ದವರ ಜತೆಗೆ ಬಡವರ ಹೋರಾಟ ಹೇಗಿರುತ್ತಿತ್ತು, ಹೋರಾಟದಲ್ಲಿ ಪ್ರಾಣ ಉಳಿಸಿಕೊಳ್ಳುವುದೇ ಕಷ್ಟಕರವಾಗಿದ್ದ ಸಮಯದಲ್ಲಿ ಧೈರ್ಯದಿಂದ ಬದುಕುವುದು ಎಷ್ಟು ಸವಾಲಾಗಿತ್ತು ಎಂಬುದನ್ನು ಚಿತ್ರದಲ್ಲಿ ಹೇಳುವ ಪ್ರಯತ್ನ ಮಾಡಲಾಗಿದೆ. ಹಾಗಾಗಿಯೇ ಅಳಿದು ಉಳಿದವರ ಕಥೆ ಎಂಬ ಅಡಿಬರಹವನ್ನು ಈ ಚಿತ್ರಕ್ಕೆ ಆಯ್ದುಕೊಂಡಿದ್ದೇವೆ.

ಕಾಟೇರನ ಛಾಪು ಇದೆಯಲ್ಲ?

ಜಡೇಶ್ ಕುಮಾರ್ : ಕಾಟೇರ ಚಿತ್ರಕ್ಕಿಂದ ಭಿನ್ನವಾದ ಸ್ಟೋರಿ ಇದು. ಕಾಟೇರದಲ್ಲಿ ಜಾತಿ ವ್ಯವಸ್ಥೆಯ ಜತೆಗೆ ಹೋರಾಟದ ಕಥೆಯೂ ಇತ್ತು. ಇಲ್ಲಿ ಭೂಮಿಗಾಗಿ ನಡೆಸುವ ಹೋರಾಟದ ಕಥೆ ಪ್ರಮುಖವಾಗಿದ್ದು ಅದರ ಜತೆಗೆ ಕೌಟುಂಬಿಕ ಸ್ಟೋರಿಯೂ ಇದೆ. ಅದಕ್ಕೂ ಮಿಗಿಲಾಗಿ ತಂದೆ ಮಗಳ ಬಾಂಧವ್ಯದ ಹೂರಣ ಮನಸೂರೆಗೊಳ್ಳುತ್ತ ಚಿತ್ರದುದ್ದಕ್ಕೂ ಸಾಗಲಿದೆ. ಅದರ ಜತೆಗೆ ಅದ್ಭುತವಾದ ಪ್ರೇಮಕಥೆಯೂ ಇದ್ದು ಎರಡು ಕಾಲಘಟ್ಟದ ಪ್ರೀತಿ ಮನಸೆಳೆಯುತ್ತದೆ.

ಈ ಕಥೆ ಬರೆಯುವಾಗಲೇ ವಿಜಯ್ ಅವರ ಪಾತ್ರ ಮನದಲ್ಲಿತ್ತೆ?

ಜಡೇಶ್ ಕುಮಾರ್ : ಮೊದಲೇ ಹೇಳಿದಂತೆ ಈ ಚಿತ್ರಕ್ಕೆ ಚೋಮನ ದುಡಿ ಕಾದಂಬರಿಯೇ ಸ್ಫೂರ್ತಿ. ಹಾಗಾಗಿ ಕಥೆ ಬರೆಯಯವಾಗಲೇ ಚೋಮನ ಪಾತ್ರಧಾರಿ ಮನದಲ್ಲಿ ಉದಿಸಿದರು. ಅದಕ್ಕೆ ದುನಿಯಾ ವಿಜಯ್ ಹೊಂದಿಕೊಳ್ಳುತ್ತಿದ್ದರು. ಅಲ್ಲದೆ ಒಂದು ವ್ಯವಸ್ಥೆಯ ವಿರುದ್ಧ ಹೋರಾಡುವ ನಾಯಕನಾಗಿ ವಿಜಯ್ ಅವರು ಹೇಳಿ ಮಾಡಿಸಿದಂತೆ ಹೊಂದಿಕೊಳ್ಳುತ್ತಿದ್ದರು. ಹಾಗಾಗಿ ಅವರಿಗೆ ಕಥೆ ಹೇಳಿದೆ ಅವರು ಸಂತಸದಿಂದ ನಟಿಸಲು ಒಪ್ಪಿದರು. ವಿಜಯ್ ಅವರು ರಾಚಯ್ಯನಾಗಿ ಕಾಣಿಸಿಕೊಂಡಿದ್ದು, ಅದ್ಭುತವಾಗಿ ಅಭಿನಯಿಸಿದ್ದಾರೆ. ವಿಜಯ್ ಅವರ ಪುತ್ರಿ, ರಿತನ್ಯಾ, ಮಗಳ ಪಾತ್ರದಲ್ಲಿ ನಟಿಸಿರುವುದು ನಮ್ಮ ಸಿನಿಮಾದ ವಿಶೇಷ.

ರಚಿತಾ ರಾಮ್ ಅವರ ಪಾತ್ರ ವಿಭಿನ್ನವಾಗಿದೆಯಲ್ಲ?

ಜಡೇಶ್ ಕುಮಾರ್: ರಚಿತಾ ರಾಮ್ ಅವರ ಬಲು ವಿಭಿನ್ನವಾಗಿದೆ. ಈ ಪಾತ್ರ ಅವರ ಈ ಹಿಂದಿನ ಸಿನಿಮಾಗಳಿಗಿಂತಲೂ ಪವರ್ ಫುಲ್ ಆಗಿದೆ. ಮೊದಲು ಅವರಿಗೆ ಈ ಕಥೆ ಹೇಳಿದಾಗ ಕೇಳಿ ಅಚ್ಚರಿಪಟ್ಟರು. ಮೂರು ದಿನ ಸಮಯ ತೆಗೆದುಕೊಂಡು ಬಳಿಕ ನಟಿಸಲು ಸಮ್ಮತಿಸಿದರು. ಗ್ರಾಮೀಣ ಮಹಿಳೆಯಾಗಿ ಒಂದು ಮಗುವಿನ ತಾಯಿ ಪಾತ್ರ ಅವರದಾಗಿದೆ. ಹಾಗಾಗಿ ನಟಿಸಲು ಸ್ವಲ್ಪ ಸಮಯ ತೆಗೆದುಕೊಂಡರು. ನಾನು ಸಿನಿಮಾದ ಕಥೆ ಹೇಳುವಾಗಲೇ ಅವರಿಗೆ ಕೂಲಿ ಚಿತ್ರದಲ್ಲಿ ನಟಿಸಲು ಆಫರ್ ಬಂದಿತು.

ಹಾಗಾಗಿ ಕಲ್ಯಾಣಿ ಪಾತ್ರದ ಬಗ್ಗೆ ನನಗೂ ತಿಳಿದಿರಲಿಲ್ಲ. ಆದರೆ ಆ ಪಾತ್ರಕ್ಕಿಂತಲೂ ಲ್ಯಾಂಡ್‌ಲಾರ್ಡ್‌ನಲ್ಲಿ ಅವರ ಪಾತ್ರ ಸ್ಪೆಷಲ್ ಆಗಿದೆ. ಅದಕ್ಕೆ ಜೀವತುಂಬಿ ನಟಿಸಿದ್ದಾರೆ. ಈಗಾಗಲೇ ಬಿಡುಗಡೆಯಾಗಿರುವ ಟೀಸರ್‌ಗೆ ಮೆಚ್ಚುಗೆ ವ್ಯಕ್ತವಾಗಿದೆ.

ಲ್ಯಾಂಡ್ ಲಾರ್ಡ್ ಚಿತ್ರದಲ್ಲಿ ಅಂದಿನ ಕಾಲಘಟ್ಟದ ಬಡವರ ಬದುಕಿನ ಸ್ಥಿತಿಗತಿ ಮನಮುಟ್ಟುವಂತೆ ಮೂಡಿಬಂದಿದೆ. ಅಂದು ಕೂಲಿ ಮಾಡುತ್ತಿದ್ದ ಬಡವರು ಕಾಸಿಗಾಗಿ, ಭೂಮಿಗಾಗಿ ನಡೆಸಿದ ಹೋರಾಟ ರೋಚಕವಾಗಿ ಮೂಡಿಬಂದಿದೆ. ಇದು ನಮ್ಮ ಕರುನಾಡಿನ ಮಣ್ಣಿನ ಕಥೆ ಎಂಬ ಹೆಮ್ಮೆ ನಮಗಿದೆ.

ತೆರೆಗೆ ಸಿದ್ಧವಾದ ಕೈಟ್ ಬ್ರದರ್ಸ್

ವಿಭಿನ್ನ ಶೀರ್ಷಿಕೆಯ ಕೈಟ್ ಬ್ರದರ್ಸ್ ತೆರೆಗೆ ಸಿದ್ಧವಾಗಿದೆ. ಭಜರಂಗ ಸಿನಿಮಾ ಲಾಂಛನದಲ್ಲಿ ಮಂಜುನಾಥ್, ರಜನಿಕಾಂತ್ ರಾವ್ ಹಾಗೂ ಮಂಜುನಾಥ್ ಬಗಾಡೆ ನಿರ್ಮಿಸಿರುವ ಈ ಚಿತ್ರವನ್ನು ವೀರೇನ್ ಸಾಗರ್ ಬಗಾಡೆ ನಿರ್ದೇಶಿಸಿದ್ದಾರೆ. ಕೈಟ್ ಬ್ರದರ್ಸ್ ಮಕ್ಕಳ ಚಿತ್ರವಾದರೂ, ಎಲ್ಲರೂ ನೋಡಬೇಕಾದ ಉತ್ತಮ ಸಂದೇಶ ಚಿತ್ರದಲ್ಲಿ ಅಡಕವಾಗಿದೆ. ಸರಕಾರಿ ಶಾಲೆಗಳನ್ನು ಸರಕಾರವೇ ದುರಸ್ತಿ ಮಾಡಿಸಲಿ ಎಂದು ಸಮಾಜ ಕಾಯಬಾರದು. ಆ ಶಾಲೆಯಲ್ಲಿ ಕಲಿತವರು ಸಶಕ್ತರಾಗಿ ಬದುಕು ರೂಪಿಸಿಕೊಂಡಾಗ ಆ ಶಾಲೆಯ ಅಭಿವೃದ್ಧಿಯತ್ತ ಗಮನಹರಿಸಬೇಕು. ನಿಸ್ಸಹಾಯಕ ಉಪಾಧ್ಯಾಯರ ಬೆಂಬಲಕ್ಕೆ ನಿಂತು ಆ ಶಾಲೆಯನ್ನು ಸರಿಪಡಿಸಿ ಮುಂದಿನ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡಬೇಕು. ಇದೇ ವಿಷಯವನ್ನು ಪ್ರಮುಖವಾಗಿಟ್ಟುಕೊಂಡು ಚಿತ್ರದ ಕಥೆ ಹೆಣೆಯಲಾಗಿದೆ. ರೈಟ್ ಬ್ರದರ್ಸ್ ಫ್ಲೈ ಇಂಜಿನಿಯರಿಂಗ್‌ನಲ್ಲಿ ಆವಿಷ್ಕಾರ ಮಾಡಿದರೆ ಇಲ್ಲಿ ಇಬ್ಬರು ವಿದ್ಯಾರ್ಥಿಗಳು ದೂರದ ಅಹಮದಾಬಾದ್‌ನಲ್ಲಿ ನಡೆಯುವ ಗಾಳಿಪಟ ಸ್ಪರ್ಧೆಯಲ್ಲಿ ಭಾಗವಹಿಸಿ ಕೈಟ್‌ನಲ್ಲಿ ಮಾಡುವ ಎಂಜಿನಿಯರಿಂಗ್‌ನಿಂದಾಗಿ ಪಡೆಯುವ ರೋಚಕ ಗೆಲುವಿನ ಕಾರಣ ಕೈಟ್ ಬ್ರದರ್ಸ್ ಎನಿಸಿಕೊಂಡು ಅದರಿಂದ ಬಂದ ಹಣದಿಂದ ಶಾಲೆಯ ದುರಸ್ತಿ ಮಾಡಿಸುತ್ತಾರೆ. ಹಾಗಾಗಿ ಚಿತ್ರಕ್ಕೆ ಕೈಟ್ ಬ್ರದರ್ಸ್ ಎಂದು ಶೀರ್ಷಿಕೆ ಇಡಲಾಗಿದೆ ಎಂದು ನಿರ್ದೇಶಕ ವೀರೇನ್ ಸಾಗರ್ ಹೇಳಿದರು. ಪ್ರಣಿಲ್ ನಾಡಗೀರ್, ಸಮರ್ಥ ಆಶಿ, ವಿನೋದ್ ಬಗಾಡೆ, ಅನಂತ ದೇಶಪಾಂಡೆ, ಪ್ರಭು ಹಂಚಿನಾಳ, ಶ್ರೇಯಾ ಹರಿಹರ, ರಾಜೀವ್ ಸಿಂಗ್ ಹಲವಾಯಿ ಹೀಗೆ ಹಲವರು ತಾರಾಗಣದಲ್ಲಿದ್ದಾರೆ. ಅಶೋಕ್ ಕಶ್ಯಪ್ ಛಾಯಾಗ್ರಹಣ, ಅನೀಶ್ ಚೆರಿಯನ್ ಸಂಗೀತ ನಿರ್ದೇಶನ ಈ ಚಿತ್ರಕ್ಕಿದೆ.

ಶೂಟಿಂಗ್ ಆರಂಭಿಸಿದ ರಕ್ಕಿ

ರಕ್ಕಿ ಶೀರ್ಷಿಕೆಯಲ್ಲಿ ಸಿನಿಮಾ ಸೆಟ್ಟೇರಿದ್ದು, ಈ ಚಿತ್ರದ ಮುಹೂರ್ತ ಸಮಾರಂಭ ರೇಣುಕಾಂಬ ಥಿಯೇಟರ್‌ನಲ್ಲಿ ನೆರವೇರಿತು. ಅಶ್ವಿನಿ ಪುನೀತ್ ರಾಜಕುಮಾರ್ ಚಿತ್ರದ ಮೊದಲ ಸನ್ನಿವೇಶಕ್ಕೆ ಆರಂಭಫಲಕ ತೋರಿ ಚಿತ್ರತಂಡಕ್ಕೆ ಶುಭಕೋರಿದರು. ಜರ್ಮನ್‌ನಲ್ಲಿ ಹಲವು ವರ್ಷಗಳಿಂದ ನೆಲೆಸಿರುವ ಸಾಲಿಗ್ರಾಮ ಮೂಲದ ಸುರೇಶ್ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ. ಸುರೇಶ್ ಅವರ ಪುತ್ರ ರಕ್ಕಿ ಈ ಚಿತ್ರದ ನಾಯಕನಾಗಿ ನಟಿಸುತ್ತಿದ್ದಾರೆ. ವೆಂಕಟ್ ಭಾರದ್ವಾಜ್ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ.

ರಕ್ಕಿ ಎಂದರೆ ಹಚ್ಚಿರುವ ಪಟಾಕಿ ಇದ್ದ ಹಾಗೆ, ಅದು ಯಾವಾಗ ಸಿಡಿಯುತ್ತದೆ ಗೊತ್ತಿಲ್ಲ. ಚಿತ್ರದಲ್ಲಿ ನಾಯಕನ ಪಾತ್ರ ಕೂಡ ಹೀಗೆ ಇರುತ್ತದೆ. ಆ್ಯಕ್ಷನ್, ಥ್ರಿಲ್ಲರ್ ಬೆರೆತ ಈ ಚಿತ್ರದಲ್ಲಿ ಲವ್ ಸ್ಟೋರಿಯೂ ಮನಸೂರೆಗೊಳ್ಳುತ್ತದೆ. ಈ ಸಿನಿಮಾ ಎಲ್ಲರಿಗೂ ಹಿಡಿಸುವಂತೆ ತೆರೆಯಲ್ಲಿ ಕಟ್ಟಿಕೊಡಲಾಗುತ್ತದೆ ಎಂದು ನಿರ್ದೇಶಕ ವೆಂಕಟ್ ಭಾರಧ್ವಜ್ ತಿಳಿಸಿದರು.

ನಾನು ಜರ್ಮನ್‌ನಲ್ಲಿ ಎಂಜಿನಿಯರಿಂಗ್ ಮುಗಿಸಿ ಉದ್ಯೋಗ ಮಾಡುತ್ತಿದ್ದೇನೆ. ನಟನಾಗಬೇಕು ಎಂಬುದು ನನ್ನ ಆಸೆ. ಹಾಗಾಗಿ ನಟನೆಯ ಬಗ್ಗೆ ತರಬೇತಿ ಪಡೆದು ಈ ಚಿತ್ರದಲ್ಲಿ ನಟಿಸುತ್ತಿದ್ದೇನೆ ಎಂದು ನಟ ರಕ್ಕಿ ತಿಳಿಸಿದರು.

ನಾನು ಮೂಲತಃ ಸಾಲಿಗ್ರಾಮದವನು, ಐಟಿ ಉದ್ಯೋಗಿ. ಇಪ್ಪತ್ತು ವರ್ಷಗಳಿಂದ ಜರ್ಮನ್‌ನಲ್ಲೇ ವಾಸಿಸುತ್ತಿದ್ದೇನೆ. ನನ್ನ ತಂದೆ ಡಾ. ರಾಜಕುಮಾರ್ ಅಭಿನಯದ ಹೊಸಬೆಳಕು ಚಿತ್ರವನ್ನು ನಿರ್ಮಾಣ ಮಾಡಿದ್ದರು. ಈಗ ನಾನು ರಕ್ಕಿ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದೇನೆ ಅಂತ ನಿರ್ಮಾಪಕ ಸಾಲಿಗ್ರಾಮ ಸುರೇಶ್ ನುಡಿದರು.

ಆಶಿಕಾ ಸೋಮಶೇಖರ್, ಪಲ್ಲವಿ ಮಂಜುನಾಥ್ ನಾಯಕಿಯರಾಗಿ ನಟಿಸುತ್ತಿದ್ದಾರೆ. ಬಿ.ಸುರೇಶ್, ಹರಿಣಿ ಶ್ರೀಕಾಂತ್, ಸುಂದರರಾಜ್, ರಮೇಶ್ ಪಂಡಿತ್, ಸಂಪತ್ ಮೈತ್ರೇಯ ಮುಂತಾದವರು ತಾರಾಬಳಗದಲ್ಲಿದ್ದಾರೆ. ಲೋಕಿ ತವಸ್ಯ ಸಂಗೀತ ನಿರ್ದೇಶನ, ಐಸ್ಸಾಕ್ ಪ್ರಭಾಕರ್ ಛಾಯಾಗ್ರಹಣ, ದೀಪು ಎಸ್ ಕುಮಾರ್ ಸಂಕಲನ ರಕ್ಕಿ ಚಿತ್ರಕ್ಕಿದೆ. ಬೆಂಗಳೂರಿನಲ್ಲಿ ಅದ್ದೂರಿ ಸೆಟ್ ನಿರ್ಮಿಸಿ ಚಿತ್ರೀಕರಣ ನಡೆಸಲಾಗುತ್ತಿದೆ.